
ವಿನೋಬಾ ಕಂಡ

ಗಾಂಧೀ



ವಿನೋಬಾ ಕಂಡ ಗಾಂಧೀ

ಸಂಪಾದಕ :

ಕಾಂತಿಭಾಯಿ ಶಾಹ

ಅನುವಾದ :

ಖಾದ್ರಿ ಶಾಮಣ್ಣ

ಕರ್ನಾಟಕ ಸರ್ವೋದಯ ಸಾಹಿತ್ಯ ಸಮಿತಿ
ಕುಮಾರಾ ಪಾರ್ಕ್ (ಪೂರ್ವ), ಬೆಂಗಳೂರು-1

ಪ್ರಕಾಶಕರು : **ಕರ್ನಾಟಕ ಸರ್ವೋದಯ ಸಾಹಿತ್ಯ ಸಮಿತಿ**
ಕುಮಾರಾ ಪಾರ್ಕ್ (ಪೂರ್ವ), ಬೆಂಗಳೂರು-1

ಸಂಸ್ಕರಣ : **ಮೊದಲನೆಯದು**

ಪ್ರತಿಗಳು : **2,000**

ಮುದ್ರಣ : ಪ್ರಭಾ ಮುದ್ರಣಾಲಯ, ಬೆಂಗಳೂರು-4
ಮೇ, 1973

ಬೆಲೆ : **ನಾಲ್ಕೂವರೆ ರೂಪಾಯಿ**

Title : Vinoba Kanda Gandhi

Editor : Kanti Bhai Shah

Subject : Gandhiana

Publisher : Karnatak Sarvodaya Sahitya Samiti
Kumara Park (East), Bangalore–1

Price : **Rs. 4-50**
May, 1973

ಸಂಪಾದಕೀಯ

ಗಾಂಧೀಜೀ ತಮ್ಮ ನಿಕಟವರ್ತಿಗಳಿಗೆ ಆಗಾಗ ಹೇಳುತ್ತಿದ್ದರು, ನಾನಿರುವತನಕ ನೀವು ಮಿಂಚಲಾರಿರೇನೋ ; ಆದರೆ, ನಾನು ಹೋದ ಮೇಲೆ, ಜಗತ್ತು ನಿಮ್ಮ ತೇಜಸ್ಸನ್ನು ನೋಡೀತು—ಎಂದು ಗಾಂಧೀಜಿಯ ಈ ಭವಿಷ್ಯವಾಣಿ ವಿನೋಬಾ ವಿಷಯದಲ್ಲಿ ನೂರಕ್ಕೆ ನೂರರಷ್ಟು ನಿಜವಾಗಿದೆ.

1917ರಷ್ಟು ಹಿಂದೆಯೇ ದೀನಬಂಧು ಆಂಡ್ರೂಸ್ ಅವರೊಡನೆ ಮಾತ ನಾಡುತ್ತಾ ವಿನೋಬಾರನ್ನು ಕುರಿತು ಗಾಂಧೀಜೀ ಹೇಳಿದ್ದರು, "ಆಶ್ರಮದ ದುರ್ಲಭ ರತ್ನಗಳಲ್ಲಿ ಇದೊಂದು. ತನ್ನ ಪುಣ್ಯದಿಂದ ಆಶ್ರಮವನ್ನು ಪಾವನ ಗೊಳಿಸಲು ಬಂದಿದ್ದಾನೆ, ಪಡೆಯಲು ಬಂದಿಲ್ಲ, ನೀಡಲು ಬಂದಿದ್ದಾನೆ".

ಮತ್ತೊಂದು ಕಡೆ ವಿನೋಬಾ ಹೇಳುತ್ತಾರೆ: "ನನ್ನನ್ನು ಬಾಪೂವಿನ ಚರಣಗಳಲ್ಲಿ ಸ್ಥಿರಪಡಿಸಿದುದು ಭಗವಂತನ ಅಪಾರ ಕೃಪೆ.... ಬಾಪೂ ಆಶ್ರಮದಿಂದ ನನಗೆ ಏನೇನು ಸಿಕ್ಕಿದೆ ಅದನ್ನು ನನ್ನ ಮನಸ್ಸೇ ಬಲ್ಲದು . . . ಆಶ್ರಮಕ್ಕೆ ಬಂದಮೇಲೆ ನನಗೆ ಕಣ್ಣೇ ದೊರೆಯಿತು. ಬಾಪೂ ಆಶ್ರಮ ನನ್ನ ಪಾಲಿಗೆ ದೃಷ್ಟಿದಾಯೀ ಮಾತೃಸ್ಥಾನ".

ಒಂದೆರಡು ಬಾರಿ ವಿನೋಬಾ ಗಾಂಧೀಜಿಗೆ ಪತ್ರದಲ್ಲಿ ಬರೆದರು : "ಈಶ್ವರ ನನ್ನಿಂದ ಸೇವೆ ತೆಗೆದುಕೊಳ್ಳುವನೇ ?....ಈ ಜಗತ್ತಿನಲ್ಲಿ ನಿಮ್ಮ ಆಶೀರ್ವಾದದ ಹೊರತಾಗಿ ಎಲ್ಲವೂ ಶೂನ್ಯ....ನಿಮ್ಮ ಮಹಾಯಜ್ಞದಲ್ಲಿ ಆಹುತಿಯಾಗುವ ಯೋಗ್ಯತೆಯನ್ನು ಈಶ್ವರನಿಂದ ಈ ಸೇವಕನಿಗೆ ಕೊಡಿಸಿ".

ಅದಕ್ಕೆ ಉತ್ತರವಾಗಿ ಗಾಂಧೀಜೀ ಬರೆದರು : "ನಿನ್ನ ಪ್ರೇಮ ಮತ್ತು ಚಾರಿತ್ರ್ಯ ನನ್ನನ್ನು ಮೋಹದಲ್ಲಿ ಮುಳುಗಿಸಿಬಿಡುತ್ತದೆ....ನಿನ್ನ ಭಕ್ತಿ ಮತ್ತು ಶ್ರದ್ಧೆ ಕಣ್ಣಲ್ಲಿ ಆನಂದಾಶ್ರುಗಳನ್ನು ತರಿಸುತ್ತವೆ. ನಾನು ಅದಕ್ಕೆ ತಕ್ಕವ ನಾಗಿರಲಿ, ಬಿಡಲಿ, ನಿನಗೆ ಅದು ಫಲಿಸಿಯೇ ತೀರುತ್ತದೆ. ನೀನು ಭಾರಿ ಸೇವೆಯ ನಿಮಿತ್ತನಾಗುವೆ....ಭಗವಂತ ನಿನ್ನನ್ನು ದೀರ್ಘಾಯುವನ್ನಾಗಿ ಮಾಡಲಿ. ಭಾರತದ ಉನ್ನತಿಗಾಗಿ ನಿನ್ನ ಉಪಯೋಗವಾಗಲಿ!"

ಗಾಂಧೀಜಿಯ ಈ ಆಶೀರ್ವಾದ ಪೂರ್ಣರೂಪದಲ್ಲಿ ಸಾರ್ಥಕವಾಗಿರುವುದನ್ನು ಇಂದು ನೋಡುತ್ತೇವೆ. ವಿನೋಬಾ ದೇಶದ—ಜಗತ್ತಿನ ದೊಡ್ಡ ಸೇವಾಕಾರ್ಯದ ನಿಮಿತ್ತವಾಗಿದ್ದಾರೆ. ಗಾಂಧೀಜಿಯ ಮಹಾಯಜ್ಞವನ್ನು ಅವರು ಮುಂದುವರಿಸಿದ್ದಾರೆ. ಅವರು ಹೇಳುತ್ತಾರೆ: " ಗಾಂಧೀಜೀ ತೋರಿದ ಅಹಿಂಸಾ ಮಾರ್ಗದಲ್ಲಿ ನಡೆಯಲು ನಾನು ಪೂರಾ-ಪೂರಾ ಪ್ರಯತ್ನ ಮಾಡಿದ್ದೇನೆ ಎನ್ನಲು ನನ್ನ ಅಂತರಾತ್ಮವೇ ಸಾಕ್ಷಿ. ಅವರ ವಿಚಾರಗಳಲ್ಲಿ ನಾನು ತಿಳಿದಿರುವಷ್ಟನ್ನು ಮತ್ತು ರುಚಿಸಿರುವಷ್ಟನ್ನು ಜಾರಿಗೆ ತರಲು ಪ್ರತಿಕ್ಷಣವೂ ಎಚ್ಚರದಿಂದಿದ್ದು, ನನ್ನ ಪ್ರಯತ್ನ ಸಾಗಿದೆ ಎಂದು ಹೇಳಲು ನನಗೆ ಸಂಕೋಚವಿಲ್ಲ....ಬಾಪೂ ಹೋದ ಬಳಿಕ, ಬಾಪೂ ಕೆಲಸವನ್ನೇ ನಾನು ಮಾಡುತ್ತಿದ್ದೇನೆ ಎಂಬಲ್ಲಿ ರವೆಯಷ್ಟೂ ಸಂದೇಹವಿಲ್ಲ....ನನ್ನ ಚಿಂತನದಲ್ಲಿ ಬಾಪೂವಿನ ಸಾರರೂಪ ಅಂಶವಿದೆ ಎಂದು ನನ್ನ ಭಾವನೆ".

* * *

ಜಗತ್ತು ಇಂದು ಅನ್ಯಾಯದಿಂದ, ಉತ್ಪೀಡನೆಯಿಂದ ಮತ್ತು ಶೋಷಣದಿಂದ ಬಳಲಿದೆ. ಸತ್ತೆಯ ಹಿಡಿತದಲ್ಲಿ ಅದರ ಉಸಿರು ಬಿಗಿಯುತ್ತದೆ, ಶ್ವಾಸ ಕಟ್ಟುತ್ತಿದೆ, ಯುದ್ಧ ಮತ್ತು ಶಸ್ತ್ರಾಸ್ತ್ರಗಳ ಶಾಪದಿಂದ ಪೀಡಿತವಾಗಿದೆ. ವಿಜ್ಞಾನ ಸತ್ತೆ, ಸಂಪತ್ತು ಮತ್ತು ಸ್ವಾರ್ಥಗಳಿಗೆ ಮಾರಿಹೋಗಿದೆ. ನಮ್ಮ ಈ ಯುಗದ ಭೀಷಣತೆಗಳಿಂದ ಬಿಡುಗಡೆ ಪಡೆಯುವ ಮಾನವ ಕುಲದ ಪ್ರಯತ್ನದ ಪ್ರತೀಕ ಗಾಂಧೀ. ವ್ಯಕ್ತಿಯ ರೂಪದಿಂದ ಗಾಂಧೀ ಹೊರಟು ಹೋದರು, ಆದರೆ ವಿಚಾರ ರೂಪದಲ್ಲಿ ಅವರು ಅಮರರು. ವ್ಯಕ್ತಿ ವಿಚಾರವನ್ನು ವ್ಯಕ್ತಪಡಿಸಲು ನಿಮಿತ್ತವಾಗುತ್ತಾನೆ. ಈ ರೀತಿ ನಿಮಿತ್ತವಾಗಿ ಗಾಂಧಿಯಂತೂ ಹೊರಟು ಹೋದರು, ಆದರೆ ಅವರ ವಿಚಾರ ಇದೆ. ವಿಚಾರಗಳ ಪರೀಕ್ಷಣ ಸದಾ ಆಗುತ್ತಲೇ ಇರುತ್ತದೆ. ವಿಚಾರದ ಅಧ್ಯಯನ—ಚಿಂತನ ನಡೆಯುತ್ತಿರಬೇಕು, ಪರಿಶೀಲನೆ ನಡೆಯುತ್ತಿರಬೇಕು, ಹಾಗಾದರೆ, ಅದು ವಿಕಾಸಗೊಳ್ಳುತ್ತದೆ, ಅದು ಪುಟಕ್ಕೆ ಸಿಕ್ಕುತ್ತದೆ, ಹೊಸ ಹೊಸ ಸ್ಫೂರ್ತಿ ಬರುತ್ತದೆ. ಈ ದೃಷ್ಟಿಯಿಂದ ಗಾಂಧೀ ವಿಚಾರ ಸರಣಿಯನ್ನು ಮುಂದುವರಿಸುವುದರಲ್ಲಿ ವಿನೋಬಾ ಪಾತ್ರ ಅನುಪಮ.

* * *

ಈ ರೀತಿ ವ್ಯಕ್ತಿಗತ ಮತ್ತು ವೈಚಾರಿಕವಾಗಿ ಎರಡೂ ದೃಷ್ಟಿಗಳಿಂದ ಗಾಂಧೀಜಿಯ ಸಂಗಾತಿಗಳಲ್ಲಿ ವಿನೋಬಾರ ಸ್ಥಾನ ಅಸಮಾನ. ಆದುದರಿಂದ ಗಾಂಧೀಜಿಯನ್ನು ವಿನೋಬಾ ಕಂಡಂತೆ ತಿಳಿದಂತೆ ಅರಿಯುವುದು—ನೋಡುವುದಕ್ಕೆ ನಮಗೂ ಇಚ್ಛೆಯಾಗುತ್ತದೆ. ಆದರೆ ವಿನೋಬಾಜೀ ಅಂಥದೇನನ್ನೂ ಬರೆದುಕೊಡುವವರಲ್ಲ, ಈ ವಿಷಯವಾಗಿ ಕ್ರಮ ಪ್ರಕಾರವಾಗಿ ಅವರ ವಿಚಾರ ಸಿಗಬೇಕಾದರೂ ಎಲ್ಲಿ? ಆದರೆ ಚಿಕ್ಕಪುಟ್ಟದಾಗಿ ಅವರು ಹೇಳಿರುವುದು ಬಹಳ ಇದೆ. ಗಾಂಧೀ ವಿಚಾರದ ಪ್ರಾಣಕಾರ್ಯ ಸಮಾನವಾದ ಭೂದಾನ—ಗ್ರಾಮದಾನ ಆಂದೋಲನದ ನಿಮಿತ್ತವಾಗಿ ಅವರು ದೇಶಾದ್ಯಂತ ಸಂಚಾರ ಮಾಡಿದರು. ಆಗ ಮಾಡಿದ ಪ್ರವಚನಗಳಲ್ಲಿ—ಚರ್ಚೆಗಳಲ್ಲಿ ಗಾಂಧೀಜಿಯನ್ನು ಕುರಿತು, ಅವರ ವಿಚಾರ ಮತ್ತು ಕೆಲಸವನ್ನು ಕುರಿತು ಅನೇಕ ಬಾರಿ ಆಡಿದ್ದಾರೆ, ಗಾಂಧೀ ದರ್ಶನವನ್ನು ವಿನೋಬಾಜೀ ನೋಡಿದಂತೆ ಸಮಗ್ರ ರೂಪದಲ್ಲಿ ಪ್ರಸ್ತುತ ಪಡಿಸಬೇಕಾದರೆ ಈ ಹರಡಿದ ಸಾಮಗ್ರಿಯಿಂದಲೇ ಸ್ವಲ್ಪ ಸಿದ್ಧಪಡಿಸಬೇಕಾದೀತು. ಈ ಪುಸ್ತಕದ ಸಂಪಾದನೆ ಅಂಥ ಒಂದು ಪ್ರಯತ್ನ.

ಈ ವಿಷಯದ ಸಾಮಗ್ರಿಯನ್ನು ಸಂಗ್ರಹಿಸುತ್ತಾ ಸುಮಾರು ಮುನ್ನೂರು ಪ್ರವಚನಗಳು ಮತ್ತು ಲೇಖನಗಳು ದೊರೆತವು. ಅವುಗಳೆಲ್ಲದರಿಂದ ಆರಿಸಿ ಈ ಪುಸ್ತಕವನ್ನು ಸಿದ್ಧಪಡಿಸಲಾಗಿದೆ. ಆದರೂ ಈ ಪುಸ್ತಕ ಈ ಮುನ್ನೂರು ಪ್ರವಚನಗಳ ಮಾತ್ರದ ಸಂಕಲನ ಅಥವಾ ಸಮುಚ್ಚಯ ಅಲ್ಲ. ಈ ಸಾಮಗ್ರಿಯನ್ನು ಮೊದಲೇ ಇಪ್ಪತ್ತೊಂದು ಪ್ರಕರಣಗಳಾಗಿ ವಿಂಗಡಿಸಲಾಯಿತು. ಅನಂತರ ಪ್ರತಿ ಪ್ರಕರಣವನ್ನೂ ಈ ಸಾಮಗ್ರಿಯಿಂದ ತುಂಬಿ ಪರಿಪಾಕ ರೂಪಕ್ಕೆ ತರಲಾಯಿತು. ಅಂತಿಮವಾಗಿ ಸಿದ್ಧವಾದ ವಸ್ತು ಮಿಶ್ರಿತವಾಗಿರಬಾರದು, ರಾಸಾಯನಿಕ ಸಂಯೋಜಿತ ವಸ್ತುವಾದಂತಿರಬೇಕು ಎಂಬುದು ಸಂಪಾದನ ಕಾರ್ಯದ ಹಿಂಬದಿಯ ದೃಷ್ಟಿ. ಆಮ್ಲಜನಕ ಮತ್ತು ಜಲಜನಕ ಸೇರಿ ನೀರು ಆಗುವಂತೆ ಹಾಲು ಮತ್ತು ಅನ್ನ ಬೆರೆಸಿದಂತಲ್ಲ, ಎರಡೂ ಸೇರಿ ಬೆಂದು ಏಕರಸವಾದ ನೀರು ಆದಂತೆ.

ಇದರಲ್ಲಿ ಇರುವುದೆಲ್ಲಾ ವಿನೋಬಾರದೇ. ಅಲ್ಲೊಂದು-ಇಲ್ಲೊಂದು ಶಬ್ದ ಅಥವಾ ಒಂದೆರಡು ವಾಕ್ಯ ಸಂಕಲನಕ್ಕಾಗಿ ಮಾತ್ರ ಅಥವಾ ಕೊಂಡಿ

ಜೋಡಿಸಲು ಹೆಚ್ಚಿಸಲಾಗಿದೆ. ಉಳಿದುದೆಲ್ಲಾ ವಿನೋಬಾರ ಶಬ್ದಗಳಲ್ಲೇ ಪ್ರಸ್ತುತಪಡಿಸಲಾಗಿದೆ. ಆದರೆ ಸಂಪಾದಕರ ಚಿತ್ತದಲ್ಲಿ ತಯಾರಾದ ನಕ್ಷೆಗೆ ಅನುರೂಪವಾಗಿ ಈ ಪ್ರಸ್ತುತಗೊಳಿಸುವ ಕೆಲಸ ನಡೆದಿದೆ. ವಿನೋಬಾರ ಗಾಂಧೀದರ್ಶನ ಎಂಥದು ಎಂಬುದಕ್ಕೆ ಸಂಬಂಧಿಸಿದಂತೆ ಸಂಪಾದಕನ ಚಿತ್ತದಲ್ಲಿ ಬಿದ್ದಿರುವ ಅಚ್ಚಿಗೆ ಅನುಸಾರವಾಗಿ ಇಲ್ಲಿ ಪ್ರಸ್ತುತಗೊಳಿಸಲಾಗಿದೆ. ಆದುದರಿಂದ ಈ ಹೊಣೆಯೆಲ್ಲಾ ಸಂಪೂರ್ಣವಾಗಿ ಸಂಪಾದಕನದೇ. ಮೂಲ ಪ್ರವಚನ ಮತ್ತು ಲೇಖನ ಹೊಸದೇ ಆದ ಸಂದರ್ಭದಲ್ಲಿ ಹೊಸ ಪೂರ್ವಾಪರ ಸಂಬಂಧದೊಡನೆ ಇಲ್ಲಿ ಅಳವಡಿಸಲಾಗಿರುವುದರಿಂದ ಸಂಪಾದಕೀಯ ಕೊರತೆ ಅಥವಾ ಲೋಪ ಉಂಟಾಗಿರುಬಹುದು. ಹಾಗೇನಾದರೂ ಭಾಸವಾದರೆ ಬಲ್ಲವರು ಸಂಪಾದಕನ ಗಮನವನ್ನು ಸೆಳೆಯಬೇಕೆಂದು ಪ್ರಾರ್ಥನೆ.

ಎಷ್ಟು ಸಾಮಗ್ರಿ ಕೈಗೆ ದೊರಕಿತೋ ಅಷ್ಟನ್ನು ಮಾತ್ರ ಇಲ್ಲಿ ಸಂಪಾದಿಸಲಾಗಿದೆ. ಕೆಲವು ಸಾಮಗ್ರಿ ಕೈಬಿಟ್ಟಿರಬಹುದು. ಇದು ತಿಳಿದುಬಂದಲ್ಲಿ ಮತ್ತೊಂದು ಆವೃತ್ತಿಯಲ್ಲಿ ಅದನ್ನು ಸೇರಿಸಬಹುದು. ಗಾಂಧೀ ವಿಷಯವಾಗಿ ಸಮಗ್ರ ರೂಪದಲ್ಲಿ ವಿನೋಬಾ ಹೇಳಿರುವುದರ ಸ್ವಲ್ಪಮಾತ್ರ ಭಾಸ ಈ ಪುಸ್ತಕದಿಂದ ಆಗಲಿ ಮತ್ತು ಗಾಂಧೀ—ವಿನೋಬಾರನ್ನು ಹೆಚ್ಚು ಚೆನ್ನಾಗಿ ತಿಳಿಯಲು ಉಪಯುಕ್ತವಾಗಲಿ ಎಂಬುದೇ ಅಪೇಕ್ಷೆ.

ಈ ಪುಸ್ತಕದ ವಿಷಯಕ ಸಾಮಗ್ರಿಯನ್ನು ಸೋದರಿ ಕಾಂತಾಬಹನ್ ಶಾಹ್ ಮತ್ತು ಶ್ರೀ ಅಮೃತ ಮೋದಿ ಒಟ್ಟುಗೂಡಿಸಿದ್ದಾರೆ.

—ಕಾಂತಿ ಶಾಹ

ಪ್ರಕಾಶಕರ ಮಾತು

ಗಾಂಧೀ ಮತ್ತು ವಿನೋಬಾ ಇವರ ಪರಸ್ಪರ ಪರಿಚಯ ಬಹಳ ದೀರ್ಘ ಕಾಲದ್ದು, ಅಷ್ಟೇ ಆಳವಾದುದು. ಗಾಂಧೀಜಿಯ ಮರಣದ ನಂತರ ವಿನೋಬಾ ಅವರು ತಮ್ಮ ಆಶ್ರಮವನ್ನು ಬಿಟ್ಟು ಹೊರಬಿದ್ದರು. ಹತ್ತಾರು ವರ್ಷಗಳ ಕಾಲ ಪಾದಯಾತ್ರೆಯ ಮೂಲಕ ಭಾರತದರ್ಶನ ಮಾಡಿದರು. ಭಾರತದ ಸಮಸ್ಯೆಗಳಿಗೆ ಗಾಂಧೀಜೀ ತೋರಿದ ಮಾರ್ಗದ ಬಗೆಗೆ ವಿಚಾರ ಮಂಥನ ನಡೆಯಿತು. ಮಂಥನದ ಪರಿಣಾಮವಾಗಿ ಹೊರಟ ಭೂದಾನ ಯಜ್ಞ, ಸರ್ವೋದಯ ವಿಚಾರಧಾರೆಯನ್ನು ಜನರಲ್ಲಿ ಸಾರುತ್ತ ನಡೆದರು. ಗಾಂಧೀಜಿಯ ಬಗ್ಗೆ, ಗಾಂಧೀ ವಿಚಾರದ ಬಗ್ಗೆ ನೂರಾರು ಪ್ರವಚನಗಳಾದವು. ಇಂಥ ಪ್ರವಚನಗಳನ್ನೆಲ್ಲ ಸಂಪಾದಿಸಿ, ಅನುವಾಗಿ ಜೋಡಿಸಿ ಕೊಟ್ಟಿದ್ದಾರೆ ಗುಜರಾತಿನ ಶ್ರೀ ಕಾಂತಿಭಾಯಿ ಶಹಾ ಅವರು. ಇವರಿಗೆ ನಮ್ಮ ಮೊದಲಿನ ವಂದನೆ.

ಸರ್ವ ಸೇವಾ ಸಂಘವು ವಿನೋಬಾಸಾಹಿತ್ಯ ಭಾರತೀಯ ಭಾಷೆಗಳಲ್ಲಿ ಪ್ರಕಟವಾಗಲು ಹಲವಾರು ವರ್ಷಗಳಿಂದ ಪ್ರಯತ್ನ ನಡೆಸಿದೆ. **'ವಿನೋಬಾ ಕಂಡ ಗಾಂಧೀ'** ಪುಸ್ತಕ ಕನ್ನಡದಲ್ಲಿ ಬರಲೇಬೇಕು ಎಂದು ಹೇಳಿ, ಪ್ರಕಟಣೆಗಾಗಿ ನೆರವು ನೀಡಿದುದಕ್ಕಾಗಿ ಸರ್ವಸೇವಾ ಸಂಘಕ್ಕೆ ನಮ್ಮ ಹೃತ್ಪೂರ್ವಕವಾದ ಧನ್ಯವಾದಗಳು.

ಸರ್ವೋದಯ ಕಾರ್ಯಕರ್ತರೂ, 'ಪ್ರಜಾವಾಣಿ'ಯ ಸುದ್ದಿ ಸಂಪಾದಕರೂ ಆದ ಶ್ರೀ ಖಾದ್ರಿ ಶಾಮಣ್ಣನವರು 'ವಿನೋಬಾ ಕಂಡ ಗಾಂಧೀ' ಪುಸ್ತಕವನ್ನು ಕನ್ನಡಕ್ಕೆ ಅನುವಾದ ಮಾಡಿಕೊಟ್ಟರು. ಇವರಿಗೆ ನಮ್ಮ ವಂದನೆಗಳು.

ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟು ನೆರವಾದ ಪ್ರಭಾ ಮುದ್ರಣಾಲಯದವರಿಗೆ ನಮ್ಮ ಹಾರ್ದಿಕ ಧನ್ಯವಾದಗಳು.

—**ಪ್ರಕಾಶಕರು**

ಅನುಕ್ರಮಣಿಕೆ

ಮುನ್ನುಡಿ

ಗಾಂಧೀಜಿಯ ಜೀವನ ಚರಿತ್ರಕಾರರು ಅನೇಕರು. ಅವರ ಜೀವನ, ವಿಚಾರ ಮತ್ತು ಕಾರ್ಯದ ಭಾಷ್ಯಕಾರರು ಇನ್ನೂ ಅನೇಕರು. ಭಾರತದವರೂ ಮತ್ತು ಹೊರಗಿನವರೂ ಇನ್ನು ಮುಂದೆ ಈ ಸಾಲಿಗೆ ಇನ್ನೂ ಅನೇಕರು ಸೇರಿಯಾರು. ಅವರ ಆತ್ಮಕಥೆ 1919 ಅಲ್ಲಿಗೆ ನಿಂತು ಹೋಗಿದೆ. ಅನಂತರ ಅವರು ಬರೆದುದು, ಜೀವನದ ಕೊನೆಯವರೆಗೆ ಬರೆಯುತ್ತ ಹೋದುದು ಎಲ್ಲವೂ ಸಾರತಃ ಆತ್ಮವೃತ್ತದೋಪಾದಿಯಲ್ಲೇ ಇತ್ತು. ಗಾಂಧೀಯವರು ತೀರಿಕೊಂಡ ಕಾಲದಲ್ಲಿ (30-1-1948) ಭಾರತದಲ್ಲಿದ್ದ ಪ್ರಖ್ಯಾತ ಬ್ರಿಟಿಷ್ ಪತ್ರಕರ್ತ ಕಿಂಗ್‌ಸ್ಲೀ ಮಾರ್ಟಿನ್ ಆಗ ಬರೆದ "ಗಾಂಧೀ ತನ್ನೊಡನೆಯೇ ನಡೆಸುತ್ತಿದ್ದ ಸಾಪ್ತಾಹಿಕ ಸಂವಾದ ನಮಗಿನ್ನು ಇಲ್ಲವಾಗುತ್ತದೆ."

ಗಾಂಧಿಯವರ ಸಂಗ್ರಹೀ ಕೃತಿಗಳು ಈಗಾಗಲೇ 50 ಸಂಪುಟಗಳನ್ನೂ ಮಿಕ್ಕಿವೆ. ಇನ್ನು ಕನಿಷ್ಠ ಮೂವತ್ತಾದರೂ ಹೊರ ಬರುವ ಭರವಸೆ ಇದೆ. ಗಾಂಧಿಯನ್ನು ಕುರಿತು ವಿವರವಾದ ಗ್ರಂಥ-ಸೂಚಿಯನ್ನು ತರಲು ಪ್ರಯತ್ನಿಸುತ್ತಿರುವವರು ಗುರುತಿಸಿರುವಂತೆ ಇಂಗ್ಲಿಷ್‌ನಲ್ಲಿ ಒಂದು ಸಾವಿರಕ್ಕೂ ಹೆಚ್ಚು, ನಲವತ್ತು ವಿವಿಧ ಭಾಷೆಗಳಲ್ಲಿ ಕೆಲವು ನೂರುಗಳಿಗೂ ಹೆಚ್ಚು ಗ್ರಂಥಗಳಿವೆ. ಭಾರತದ ಹದಿನಾಲ್ಕು ಭಾಷೆಗಳೂ, ಸಂಸ್ಕೃತವೂ ಸೇರಿ, ಈ ವಿಸ್ತಾರವಾದ ಗಾಂಧೀ ಗ್ರಂಥ ಸಾಗರಕ್ಕೆ ತಮ್ಮ ಕಾಣಿಕೆಯನ್ನು ಸಲ್ಲಿಸಿವೆ.

ಅನೇಕ ಮಂದಿ ನಿಕಟ ಸಹಚರರು, ನಿಷ್ಠಾವಂತ ಅನುಯಾಯಿಗಳು ಗಾಂಧೀಜಿಯ ಬಹು ಭವ್ಯ, ಘಟನಾಪೂರ್ಣ ಜೀವನದಲ್ಲಿ ತಮ ತಮಗೆ ಅನಿಸಿದುದನ್ನು ಬರೆದಿದ್ದಾರೆ.

ಗಾಂಧಿಯನ್ನು ಕುರಿತು ಪ್ರಕಟವಾಗಿರುವ ಇಷ್ಟೆಲ್ಲ ಸಾಹಿತ್ಯದ ಬೆಲೆ ಕಟ್ಟುವುದು ಕಠಿಣ. ನೇರವಾಗಿ ವಿರುದ್ಧವಾದುದು ಬಹಳವಿಲ್ಲದಿದ್ದರೂ

ಟೀಕಾಪರವಾದುದು ಸಾಕಷ್ಟಿದೆ. ಆಧುನಿಕ ಭಾರತದ ರಾಜಕೀಯ ಚರಿತ್ರೆಯಲ್ಲಿ ಅವರ ಸ್ಥಾನ ನಿರ್ದೇಶನ ಮಾಡಿ, ಜಗತ್ತಿನ ರಾಜಕೀಯ, ಸಾಮಾಜಿಕ, ಅರ್ಥಿಕ ಹಾಗೂ ನೀತಿ ವಿಷಯಕ ಕ್ಷೇತ್ರಗಳಲ್ಲಿ ಅವರ ಪ್ರಭಾವವನ್ನು ಅಳೆಯಲು ಇತಿಹಾಸಕಾರರಿಗೆ ಇನ್ನೂ ಸ್ವಲ್ಪಕಾಲ ಬೇಕಾದೀತು. ಮಾನವೀಯ ಆಸಕ್ತಿಯ ಹಾಗೂ ಮಾನವ ಕುಲ ಉನ್ನತ ಘಟ್ಟಕ್ಕೆ ಸಾಗುವ ಮುಂದಿನ ವಿಕಾಸದ ಸಂಬಂಧಪಟ್ಟ ಪ್ರತಿಯೊಂದು ವಿಷಯವನ್ನೂ ಕುರಿತು ಅವರು ವಿಚಾರ ಮಾಡಿ, ಬರೆದು ಮತ್ತು ಕಾರ್ಯ ಕೈಗೊಂಡುದರಿಂದ ಅವರ ಹಾಗೂ ಅವರ ಅಭಿಪ್ರಾಯಗಳ ಬಗೆಗೆ ತಮ್ಮದೇ ವಿಚಾರವುಳ್ಳವರಿಗೆ ಕೊನೆಯೇ ಇಲ್ಲ.

ಜೀವನದ ವಿವಿಧ ಮುಖಗಳೂ ಹಾಗೂ ಸಮಸ್ಯೆಗಳ ಬಗೆಗೆ ಗಾಂಧೀಜಿಯ ಅಭಿಮತದ ಹೊರತಾಗಿ ಜೀವನಕ್ಕೆ, ಅದರ ಸವಾಲುಗಳಿಗೆ ಮತ್ತು ತನ್ನ ಇಂದಿನ ಕಾರ್ಯ ಭಾರವನ್ನು ಪೂರೈಸಲು ಹಾಗೂ ಮುಂದಿನ ವಿಧಿಯನ್ನು ಭದ್ರಪಡಿಸಿಕೊಳ್ಳಲು, ಎಂದರೆ ಪರಿಪೂರ್ಣ ಶಾಂತಿ, ಸೌಖ್ಯ ಹಾಗೂ ಸಾಮರಸ್ಯದ ಬಾಳನ್ನು ಬದುಕಲು ಅವರ ಮೂಲಭೂತ ನಿಲುವೆ ಮತ್ತು ಧೋರಣೆಗಳೇ ಹೆಚ್ಚು ಮುಖ್ಯ. ಇಲ್ಲೇ ವಿಚಾರ ಮತ್ತು ಆಚಾರದ ಭದ್ರ ನೆಲೆಗಟ್ಟಾಗಿ ಸತ್ಯ ಮತ್ತು ಅಹಿಂಸೆಯನ್ನು ಒತ್ತಿ ಹೇಳಿದುದನ್ನು ಕಾಣುತ್ತೇವೆ. ಹೌದು, ವಿಜ್ಞಾನಿಯ ಮನೋದೃಷ್ಟಿಯಲ್ಲಿನಂತೆ ಒಂದು ನಿಜ ಪ್ರಯೋಗವಾಗಿದ್ದ ಅವರ ಕ್ರಿಯಾಶೀಲ ಜೀವನದ ಉದ್ದಕ್ಕೂ ಅವರು ಕಾಲಕಾಲಕ್ಕೆ ಕಂಡ ಮತ್ತು ಅರಿತ ಸತ್ಯದೊಟ್ಟಿಗೆ ಸತ್ಯ ಮತ್ತು ಅಹಿಂಸೆಗಳನ್ನು ಹೆಚ್ಚು ಹೆಚ್ಚು ಮಹತ್ವಪೂರ್ಣಗೊಳಿಸಿದರು. ಅವಕ್ಕೆ ಹೊಸ ಮತ್ತು ಗಹನತರ ಅರ್ಥಗಳನ್ನು ಕಲ್ಪಿಸಿದರು. ಕೊನೆಗೆ 'ಸತ್ಯ'ವೇ ದೇವರು ಎಂದು ಸಾರಿದರು. ದೇವರನ್ನು ಇಲ್ಲವೆನ್ನಬಹುದು, ಅನೇಕರು ಇಲ್ಲವೆಂದೂ ಅನ್ನುತ್ತಾರೆ. ಆದರೆ ತಮ್ಮ ಅನುಭವದ ಸತ್ಯವನ್ನು ಇಲ್ಲವೆನ್ನಲಾಗುವುದಿಲ್ಲ. ಏಕೆಂದರೆ, ಹಾಗೆ ಮಾಡಿದರೆ ತಾನೇ ಇಲ್ಲವೆಂದು ಹೇಳಿದಂತೆ.

ಅಹಿಂಸೆಯ ವಿಷದಲ್ಲಿಯೂ ಹೀಗೆಯೇ. ಜೀವ ಜಂತು ಮಾತ್ರಕ್ಕೆ ಅ-ಹಿಂಸೆ ಅಹಿಂಸೆಯ ಪ್ರಾರಂಭ ಮಾತ್ರ. ಎಲ್ಲ ಹಿತಗಳ ಏಕತ್ರತೆಯಾದ ವಿಶ್ವ ಪ್ರೇಮವೇ ಅದರ ಕೊನೆ. ಆ ಬಗೆಯ ಪ್ರೇಮ, ನಿಸ್ವಾರ್ಥ ಸೇವೆ,

ಕಷ್ಟಸಹನೆ ಮತ್ತು ಅಗತ್ಯ ಬಿದ್ದರೆ ಪರಿಪೂರ್ಣ ಬಲಿದಾನದಲ್ಲಿ ಪ್ರಕಟವಾಯಿತು.

ದೇವರಲ್ಲಿ ಗಾಂಧೀಜಿಯ ನಂಬಿಕೆ ಅರ್ಥಾತ್ ಪರಾತ್ಪರ ಶಕ್ತಿಯಿಂದ ಕೂಡಿದ ಅಸ್ತಿತ್ವ ಅವರ ಬರಹಗಳಲ್ಲಿ ಪದೇಪದೇ ಉದ್ಭವವಾಗುವ ಇನ್ನೊಂದು ವಸ್ತು. ಅವರು ಪದೇ ಪದೇ ದೇವರನ್ನು ಆವಾಹಿಸಿದರು. ದೇವರನ್ನು ಸಾಕ್ಷಾತ್ ಕಾಣುವುದೇ ತಮ್ಮ ಬಯಕೆ ಎಂದರು. ಗಾಂಧೀಗೆ ದೇವರು ಒಂದು ವ್ಯಾಪಕ ಪರಾತ್ಪರ ಪ್ರಜ್ಞೆಯಾಗಿತ್ತು. ಒಂದು ನಿತ್ಯ ನಿರಂತರ ಆವಾಸವಾಗಿತ್ತು. ಸದಾ ಅದರ ಅರಿವು ಅವರಿಗಿತ್ತು. ಯಾವಾಗಲೂ ಪ್ರಾರ್ಥನೆಯ ಸಮಯದಲ್ಲಿ ಅದನ್ನು ಆವಾಹಿಸುತ್ತಿದ್ದರು. ಆಧ್ಯಾತ್ಮಿಕ ಮನೋವಿಜ್ಞಾನದ ಪ್ರಕಾರ ಅವರೊಬ್ಬ ಸಂಕೇತಗರ್ಭಿತ ವ್ಯಕ್ತಿ ಆಗಿದ್ದರು. ದೇವರನ್ನು ಕಾಣಬಹುದು 'ಮುಟ್ಟಬಹುದು' ಮತ್ತು ಆತನ ಇರವನ್ನು ಎಲ್ಲ ಕಾಲದಲ್ಲೂ ಅರಿಯಬಹುದು ಎಂದು ವಿನೋಬಾಜಿಯ ಬಳಿ ಅವರು ಒಪ್ಪಿಕೊಂಡರು.

ದೇವರಿಗೆ ಸಂಬಂಧಪಟ್ಟಂತೆ ಗಾಂಧೀಜಿ ಬೇರೆ ಬೇರೆ ಸಂದರ್ಭಗಳಲ್ಲಿ ದೇವರು ಸತ್ಯ, ದೇವರು ನಿಯಮ, ದೇವರು ಜೀವನ, ದೇವರು ಬೆಳಕು, ದೇವರು ಪ್ರೇಮ ಎಂದು ಹೇಳಿ ಕೊನೆಗೆ 'ಸತ್ಯವೇ ದೇವರು' ಎಂದರು. ತಮ್ಮನ್ನು ಶೂನ್ಯವಾಗಿಸಿಕೊಳ್ಳಲು ಹಂಬಲಿಸಿದರು. ಎಲ್ಲವನ್ನೂ ಆಗು ಮಾಡಿಸುವ, ವಿಶ್ವ ವ್ಯವಸ್ಥೆಯನ್ನು ಎಲ್ಲವನ್ನೂ ನಿಯಂತ್ರಿಸುವ ಮತ್ತು ಹಿಂದೆ ಇದ್ದ, ಈಗ ಇರುವ, ಹಾಗೂ ಮುಂದೆ ಇರುವ ಎಲ್ಲವನ್ನೂ ನಿಯಂತ್ರಿಸುವ ಪರಮ ಶಕ್ತಿಯ ಅಹಂಕಾರ ವಿರಹಿತ ಸಾಧನವಾಗುವುದೇ ಅವರ ಅಪೇಕ್ಷೆಯಾಗಿತ್ತು.

ಈ ಕೆಲ ಮಾತುಗಳನ್ನು ಹೇಳಿ ಈ ಸಣ್ಣ ಪುಸ್ತಕದ ಉದ್ದೇಶ ಕುರಿತು ಪ್ರಸ್ತಾಪಿಸುತ್ತೇನೆ. ಗಾಂಧೀಜಿಯನ್ನು ಕುರಿತು ಅಪಾರವಾದ ಹಾಗೂ ಬೆಳೆಯುತ್ತಿರುವ ಸಾಹಿತ್ಯವೇನೋ ಇದೆ. ಅವುಗಳಲ್ಲಿ ಬಹುಪಾಲು ಗಾಂಧೀ ನಿಕಟವರ್ತಿಗಳು ಬರೆದುದೇ. ಆದರೆ ವಿನೋಬಾ ಅವರು ಹೇಳಿಕೊಳ್ಳಬಹುದಾದಂತೆ ಗಾಂಧೀಜಿಗೆ ಆಧ್ಯಾತ್ಮಿಕವಾಗಿ ಇಷ್ಟು ಹತ್ತಿರವಾದವರು ಇಷ್ಟು ಪ್ರಜ್ಞಾಪೂರ್ಣ, ಬುದ್ಧಿವಂತ, ವಸ್ತು ನಿಷ್ಠ ನಿರೀಕ್ಷಕರೂ 1916 ರಿಂದ

ಕೊನೆತನಕ ಗಾಂಧೀಜಿಯನ್ನು ಅಭ್ಯಾಸಿಸಿದವರೂ ವಿನೋಬಾ ಅವರಿಗಿಂತ ಬೇರೇ ಯಾರಾದರೂ ಇದ್ದಾರೆಂದು ನನಗಂತೂ ಅನಿಸುವುದಿಲ್ಲ. ಗಾಂಧೀ ವಿಚಾರಕ್ಕೆ ಹಾಗೂ ಕ್ರಿಯೆಗೆ ವಿನೋಬಾಜಿಯಷ್ಟು ಪೂರ್ಣರಾಗಿ ಬದ್ಧರಾದವರು ಯಾರೂ ಇಲ್ಲ. ಗುರುವಿಗೆ ಶಿಷ್ಯನಂತೆ ಸಂಪೂರ್ಣವಾಗಿ ಶರಣಾಗತವಾದರೂ ತಮ್ಮ ವಿವೇಕ ಬುದ್ಧಿಯನ್ನು ಕುರುಡಾಗಿ ಗುರುವಿಗೆ ಅರ್ಪಿಸದೆ ಪರಿಪೂರ್ಣವಾಗಿ ಗಾಂಧೀಜಿಗೆ ಅರ್ಪಿತವಾಗಿದ್ದವರು ವಿನೋಬಾ ಬಿಟ್ಟು ಬೇರೆ ಯಾರೂ ಇಲ್ಲ. ವಿನೋಬಾಜಿ ತಮ್ಮ ಅತ್ಯುನ್ನತ ಮಟ್ಟದ ತನಕ ಶಕ್ತಿ ಸಂಪನ್ನರಾಗಿ, ತನ್ನ ಇರವಿನ ಸತ್ಯದ ಉತ್ಕಟ ಶೋಧನೆಯಲ್ಲಿ ಇದ್ದು ಮತ್ತು ದರಿದ್ರ ನಾರಾಯಣನ ಸೇವೆಯ ಮೂಲಕ ಆ ಸತ್ಯವನ್ನು ಕಂಡುಕೊಳ್ಳುವ ಸತತ ಸಾಧನೆಯಲ್ಲಿ ನಿರತರಾದವರು ಅವರೊಬ್ಬರೇ. ಶಬ್ದ ವಿದ್ಯಾ ಪ್ರವೀಣರು ಅವರು. ಮಗುವಿಗೂ ಸಹ ಅರಿವುಂಟುಮಾಡಿಕೊಡುವಂತಹ ನುಡಿಯಬಲ್ಲವರು. ವಿನೋಬಾ ತಮ್ಮ ಸರಳ, ಪ್ರಾಸಬದ್ಧ ಕೆಲವೇ ಅಕ್ಷರಗಳ ಮಾತುಗಳಲ್ಲಿ ಗಾಂಧೀಜಿಯನ್ನು ವಿಶ್ಲೇಷಿಸಿ ಹೇಳಿದ್ದಾರೆ. ಗಾಂಧೀಜಿಯವರ ಶಬ್ದಗಳಿಗೆ ಅವರೆಂದೂ ಅಂಟಿಕೊಳ್ಳುವವರಲ್ಲ. ಗಾಂಧೀ ಸದಾಕಾಲವೂ ಬೆಳೆಯುತ್ತಿದ್ದರು, ಚೈತನ್ಯಶೀಲರಾಗಿದ್ದರು, ನೂತನವಾಗಿರುತ್ತಿದ್ದರು ಎಂದು ಅವರ ನಿರ್ದಿಷ್ಟ ಅಭಿಪ್ರಾಯ. ಗಾಂಧೀಜಿಯ ಕಾಲವಾದ ಮೇಲೆ ಅವರ ವಿಚಾರ ಮತ್ತು ಮಾರ್ಗವನ್ನು ಸ್ವರಾಜ್ಯ ಭಾರತದ ಸ್ಥಿತಿಗತಿಗೆ ಜನತಂತ್ರ ವ್ಯವಸ್ಥೆಯಲ್ಲಿ ಹೇಗೆ ಅನ್ವಯಿಸುವುದು ಎಂಬುದಾಗಿ ಬಿರುಸಾಗಿ ಯೋಚನೆ ಮಾಡತೊಡಗಿದರು. ಅತ್ಯಂತ ನಯವಾಗಿ ಮತ್ತು ಉಚಿತವಾಗಿ ಗಾಂಧಿಯನ್ನು ವ್ಯಕ್ತಿ ಎಂದು ಪರಿಗಣಿಸುವುದಿಲ್ಲ ವಿನೋಬಾ. 'ಗಾಂಧೀ' ಒಂದು ವಿಚಾರ ಎನ್ನುತ್ತಾರೆ. ಗಾಂಧೀಯನ್ನು ಒಂದು ಪ್ರಮಾಣವೆಂದು ಅವರೆಂದೂ ಉದ್ಧರಿಸುವುದಿಲ್ಲ. ತಮ್ಮನ್ನು ತಿದ್ದಿ ತೀಡಿದವರು ಎಂದು ಯಾವಾಗ ಹೇಳಿದರೂ ಸಹ ವಿನೋಬಾ ಅವರೇ ಇಂದು ಗಾಂಧಿಯ ಅತ್ಯಂತ ನಿಕಟ ಹಾಗೂ ಅತಿ ನಿಜವಾದ ಅನುಯಾಯಿ ಎಂದು ಭಾರತದಲ್ಲಿ ಇಂದು ಪ್ರತಿಯೊಬ್ಬರೂ ಒಪ್ಪುತ್ತಾರೆ.

ಈ ಸಣ್ಣ ಹೊತ್ತಿಗೆಯಲ್ಲಿ ಇರುವುದನ್ನು ನಾನು ಪುನರುಚ್ಚರಿಸುವುದರಲ್ಲಿ ಅರ್ಥವಿಲ್ಲ. ವಿಚಾರದಲ್ಲಿ ಕೃತಿಯಲ್ಲಿ ವಿನೋಬಾಜೀ ಗಾಂಧೀಜಿಯ ಅತಿ

ಮುಖ್ಯ ಭಾಷ್ಯಕಾರರಲ್ಲಿ ಒಬ್ಬರು ಎಂದು ಮಾತ್ರ ಹೇಳಿದರೆ ಸಾಕು. 1916 ರಷ್ಟು ಹಿಂದೆಯೇ ವಿನೋಬಾ ತಮ್ಮ ಆಶ್ರಮಕ್ಕೆ ನೀಡಲು ಬಂದಿದ್ದಾರೆ, ಪಡೆಯಲಲ್ಲ—ಎಂದು ಗಾಂಧೀ ಹೇಳಿದ್ದರು. ಇಬ್ಬರ ಜೀವನ ಪರ್ಯಂತವೂ ಕಿರಿಯ ಅನುಯಾಯಿಗಳ ಬಗೆಗೆ ಈ ಭಾವನೆ ಮುಂದುವರಿಯಿತು. ಗಾಂಧೀಜಿಯರಂಥ ಮಹಾ ಗುರುವಿನ ಸಹವಾಸ ತಮಗೆ ಸಿಕ್ಕಿದ್ದು, ಅವರ ಅಪ್ಪಣೆಯಂತೆ, ಮಾನವ ಕುಲದ ಸೇವೆಗೆ ಅವಕಾಶ ಸಿಕ್ಕಿದ್ದು ದೇವರ ಕೃಪೆ ಎಂದು ವಿನೋಬಾಜೀ ಸಹ ಹೇಳಿದ್ದಾರೆ.

ವಿನೋಬಾಜೀಗೆ ಮಾರ್ಗದರ್ಶಕ ತಾರೆಗಳಾದ ಗಾಂಧೀಜಿಯ ಅತಿ ಸತ್ವಪೂರ್ಣ ನುಡಿಗಳನ್ನು ಹಾಗೂ ಅವುಗಳ ಮಾತೃರೂಪವಾದ ತಿರುಳು ಮಾತುಗಳನ್ನು ಇಲ್ಲಿ ಹೇಳಬಹುದು.

ಮಾನವ ಅಸ್ತಿತ್ವದ ಸಮಗ್ರ ಅರ್ಥ—ಅದರ ಆತ್ಮ ಪ್ರಜ್ಞೆಯೊಂದಿಗೆ ಹಾಗೂ ಅದು ಬೆಳೆಸಿಕೊಂಡಿರುವ ಪ್ರಜ್ಞೆಯ ಮೂಲಕ ಸತ್ಯವನ್ನು ಅರಿಯುವುದು, ಸತ್ಯವನ್ನು ಅನುಸರಿಸುವುದು, ಸತ್ಯಸಾಕ್ಷಾತ್ಕಾರ ಮಾಡಿ ಕೊಳ್ಳುವುದು ಹಾಗೂ ಅದರ ಬೆಳಕಿನಲ್ಲಿ ನಡೆದು ಸತ್ಯವನ್ನು ಸ್ಥಾಪಿಸುವುದು —ಎಂದೇ ಅರ್ಥ. ಈ ರೀತಿ ವಿಷಯ ಪ್ರತಿಪಾದನೆ ನಿರಾಕಾರ ಹಾಗೂ ದಾರ್ಶನಿಕ ಎನಿಸಬಹುದು. ಜೀವನದ ನಿಯಮವನ್ನು ಅರಿಯುವುದು, ಅನುದಿನವೂ ಕಂಡಂತೆ ಅದನ್ನು ನಿರ್ಭಯವಾಗಿ ಅನುಸರಿಸಲು ಯತ್ನಿಸು ವುದು ಸರಳತರವಾದ ರೀತಿ. ಜೀವನವನ್ನು ಉಳಿಸಿ, ಕಾಯ್ದುಕೊಂಡು ಬಂದು ಬೆಳೆಸುವ, ಸ್ವಸ್ಥಜೀವನಕ್ಕೆ ಸಹಾಯಕವಾದ ಮತ್ತು ಮನುಷ್ಯನ ಜೀವನದಾಯೀ ಸಾಮರ್ಥ್ಯಗಳನ್ನು ಅರಳಿಸುವ, ವ್ಯಕ್ತಿ ಹಾಗೂ ಸಮಷ್ಟಿಯ ಶಾಂತಿ, ಸೌಖ್ಯ, ಸಾಮರಸ್ಯಗಳತ್ತ ಒಯ್ಯುವುದೇ ಸತ್ಯ ಹಾಗೂ ಬದುಕಿನ ನಿಯಮ. ಸಾಕಾರವಾದ ಪ್ರೇಮದಿಂದ ಕೂಡಿದ ಅಹಿಂಸೆಯೇ ಮನುಕುಲದ ನಿಜವಾದ ನಿಯಮ ಎಂಬ ನಿರ್ಧಾರಕ್ಕೆ ಗಾಂಧೀ ಬಂದರು. ಈ ರೀತಿ ಗಾಂಧೀ ಪರಿಭಾಷೆಯಲ್ಲಿ ಸತ್ಯ ಮತ್ತು ಅಹಿಂಸೆ ಬಿಡಿಸಲಾಗದಂತೆ ಸಾಧನ ಹಾಗೂ ಸಾಧ್ಯ—ಸಾಧ್ಯ-ಸಾಧನಗಳಿಗಾಗಿ ತೆಕ್ಕೆಹಾಕಿಕೊಂಡಿವೆ.

ಮಾನವ ಬದುಕು ಹಾಗೂ ಸಾವು, ಒಲವು ಮತ್ತು ಹಗೆ, ಅಹಿಂಸೆ ಮತ್ತು ಹಿಂಸೆ, ಬೆಳಕು ಹಾಗೂ ಕತ್ತಲುಗಳ ಜೋಡಿಯನ್ನೆಲ್ಲ ಎದುರಿಸಿಯೂ

ಸ್ವಲ್ಪವೂ ಹಿಂದೆಗೆಯದೆ ಬದುಕು, ಒಲವು, ಅಹಿಂಸೆ ಮತ್ತು ಬೆಳಕುಗಳನ್ನು ಅರಿಸಿಕೊಳ್ಳಲೇಬೇಕು. ಇವೆಲ್ಲ ಬಾಳಿನ ವಿಧಾಯಕ ಶಕ್ತಿಗಳು. ಜೀವನದ ಪೂರ್ಣತೆಗೆ ಕೊಂಡೊಯ್ಯುವಂಥವು.

ಉಳಿದೆರಡು ಅತಿಮುಖ್ಯ ವಿಚಾರಗಳು: ಸತ್ಯಕ್ಕಾಗಿ ಆಗ್ರಹ, ಏನೇ ಆಪತ್ತು ಬಂದರೂ ಅಂಜಿಕೆ ಇಲ್ಲದೆ, ಭದ್ರವಾಗಿ ಸತ್ಯಕ್ಕೆ ಅಂಟಿಕೊಳ್ಳುವುದು. **ಸತ್ಯಾಗ್ರಹ**ವೇ ತಿರುಳು ಶಬ್ದ. ಅದು ಯಾವಾಗಲೂ ಹೋರಾಟಕ್ಕಾಗಿಯೇ ಹೋರಾಟವಲ್ಲ. ಸತ್ಯದ ಹಾದಿಯಲ್ಲಿ ಸತತವಾಗಿ ನಡೆಯುತ್ತಲೇ ಹೋಗುವುದು, ಎಲ್ಲ ಬಗೆಯಿಂದಲೂ ಅದನ್ನು ಬೆಳೆಸುವುದು, ಅಜೇಯ ಸಂಕಲ್ಪ ಶಕ್ತಿಯಿಂದ ಆದರೆ ಸದಾ ಶುದ್ಧ, ನಿಃಸ್ವಾರ್ಥ ನೀತಿಮಾರ್ಗದಿಂದ ಮತ್ತು ಅಹಿಂಸಕ ವಿಧಾನದಿಂದ ನಡೆಯುವುದು. ಕಡು ಹಗೆಯನ್ನೊಳಗೊಂಡು ಎಲ್ಲರಿಗೂ ಪೂರ್ಣ ಒಲವು ತುಂಬಿರದವ ನಿಜವಾದ ಸತ್ಯಾಗ್ರಹಿಯಾಗಲಾರ. ವಿನೋಬಾ ಹೇಳುತ್ತಾರೆ: ಗಾಂಧೀ ಸತ್ಯಾಗ್ರಹಿ ಮಾತ್ರ ಆಗಿರಲಿಲ್ಲ, ಸತ್ಯಗ್ರಾಹಿಯೂ ಆಗಿದ್ದರು; ಎಂದರೆ ಸತ್ಯವನ್ನು ಗ್ರಹಿಸಬಲ್ಲವರು, ಸರಿಯಾಗಿ ಮತ್ತು ಸಾರಭೂತವಾಗಿ.

ಎಲ್ಲರ ಒಳಿತು, ಸರ್ವೋದಯ ನಾಲ್ಕನೆಯ ವಿಚಾರ. ವಿಶ್ವದಲ್ಲಿ ಎಲ್ಲರ ಏಳಿಗೆ. ಯಾರೊಬ್ಬರ ವಿಸರ್ಜನೆ ಅಥವಾ ನಿರ್ನಾಮಕ್ಕೆ ಗಾಂಧೀ ವಿಚಾರದಲ್ಲಿ ಎಡೆಯಿಲ್ಲ. ಕೆಲವರ ಹಿತ ಬಲಿಕೊಟ್ಟು ಮತ್ತೆ ಕೆಲವರ ಹಿತ ಸಾಧಿಸಲು ಅವಕಾಶ ಇಲ್ಲ. **ಸರ್ವೋದಯ**—ಪ್ರತಿವ್ಯಕ್ತಿಯ ಪರಿಪೂರ್ಣ ವಿಕಾಸ ಅಂತೆಯೇ ಇಡೀ ಸಮುದಾಯದ ವಿಕಾಸ—ಸರ್ವೋದಯ ಇದು ತಿರುಳು ಶಬ್ದ. ಜೈ ಜಗತ್—ವಿನೋಬಾಜಿ ಹೇಳಿಕೊಟ್ಟ ಘೋಷವಾಕ್ಯ. ಜಗತ್ತಿಗೇ ಜಯ, ಯಾವೊಂದು ಬಿಡಿ ರಾಷ್ಟ್ರಕ್ಕೂ ಅಲ್ಲ, ರಾಷ್ಟ್ರಗಳ ಗುಂಪಿಗೂ ಅಲ್ಲ.

ವಿಜ್ಞಾನ ಮತ್ತು ಯಂತ್ರ ಜ್ಞಾನದ ಮುಷ್ಟಿಯಲ್ಲಿ ಜಗತ್ತು ಸಿಕ್ಕಿದೆ. ರಾಜಕೀಯ ಹಾಗೂ ಇತರ ಎಲ್ಲ ಪ್ರಕಾರದ ಅಧಿಕಾರ ಅದರಿಂದಾಗಿ ಹೆಪ್ಪುಗಟ್ಟಿದೆ. ಪರಿಣಾಮವಾಗಿ ಜನಪದ ಬಲಾತ್ಕಾರಕ್ಕೆ ಗುರಿ. ಬುದ್ಧಿಜೀವಿಗಳು ಮನೋದಾಸ್ಯಕ್ಕೆ ಈಡು. ಪ್ರೇಮ, ಕರುಣೆ, ಸೇವೆ ಮುಂತಾದ ಮಾನವನ ನೈಸರ್ಗಿಕ ಸುಸ್ವಭಾವ ಬದುಕಿನ ಪಾಶವೀ ಹೋರಾಟದಿಂದ ಹಾಗೂ ವ್ಯಕ್ತಿ

ಗಳು, ಗುಂಪುಗಳು ಹಾಗೂ ರಾಷ್ಟ್ರಗಳ ನಡುವಣ ಕ್ರೂರ ಸ್ಪರ್ಧೆಯಿಂದ ತೊಡೆದುಹಾಕಲ್ಪಟ್ಟಿದೆ. ಇದಕ್ಕಿಲ್ಲ ಪರಮ ಉಪಾಯ ಅಧಿಕಾರದ ವಿಕೇಂದ್ರೀಕರಣ. ಇದು ಬುಡದಲ್ಲಿ, ಹಳ್ಳಿಯ ಮಟ್ಟದಲ್ಲಿ ಆರಂಭವಾಗ ಬೇಕು. ಹಾಗೆಂದೇ ವಿನೋಬಾ ಗ್ರಾಮ ಸ್ವರಾಜ್ಯ ಆಂದೋಲನ ಆರಂಭಿಸಿದರು. ಜೀವನದ ಆವಶ್ಯಕತೆಗಳಲ್ಲಿ ಮತ್ತು ಸಮುದಾಯ ಜೀವನದಲ್ಲಿ ಸ್ವಾವಲಂಬಿಯಾದ ಗ್ರಾಮ ಗಣರಾಜ್ಯಗಳನ್ನು ಸ್ಥಾಪಿಸ ಬಯಸಿದರು. ಆಗ ಮಾತ್ರವೇ ಜನಾಂಗಗಳ ನಡುವೆ ಶಾಂತಿ. ಎಲ್ಲೋ ದೂರದಲ್ಲಿ, ಕಣ್ಮರೆಯಾಗಿ ಪರಿಣಾಮದಲ್ಲಿ ಅಮಾನವೀಯವಾಗುವ ಕೈಗಳಲ್ಲಿ ರಾಜಕೀಯ ಅಧಿಕಾರ ಹೆಪ್ಪುಗಟ್ಟುವ ರಾಜನೀತಿ ದುರ್ಬಲವಾಗಿ, ಕೊನೆಗೆ ಮಾಯವಾಗಿ ಸಕ್ರಿಯರಾಗಿ ಪಾತ್ರವಹಿಸುವ ಜನರ ಬಳಿಯೇ ಇರುವ, ಪ್ರತ್ಯಕ್ಷ, ಮಾನವೀಯ ಹಾಗೂ ಹಿತಕಾರಿ ಲೋಕನೀತಿಯಾಗಿ ಮಾರ್ಪಡುವುದು.

ಈ ಪುಸ್ತಕವನ್ನು ಮೊದಲು ಗುಜರಾತಿಯಲ್ಲಿ ಬರೆದ ಶ್ರೀ.ಕಾಂತಿಶಾಹ ತುಂಬ ಶ್ರಮವಹಿಸಿದ್ದಾರೆ; ವಿನೋಬಾಜಿಯ ಮುನ್ನೂರು ಲೇಖನ ಹಾಗೂ ಪ್ರವಚನಗಳಿಂದ ವಿಚಾರವನ್ನು ಹೆಕ್ಕುವ ಕೆಲಸವನ್ನು ಮಾಡಿದ್ದಾರೆ. ಹಾಗೆ ಆಯ್ದ ಭಾಗಗಳಿಂದ ಕೂಡಿದೆ ಈ ಗುಜರಾತಿ ಪುಸ್ತಕ. ಅಲ್ಲಿಂದ ಹಿಂದೀಗೆ ಭಾಷಾಂತರವಾಗಿ ಈಗ ಕನ್ನಡಿಸಲ್ಪಟ್ಟಿದೆ.

ಗಾಂಧೀ ವಿಚಾರ ಹಾಗೂ ಕಾರ್ಯಮಾರ್ಗದ ಮೂಲತತ್ವಗಳನ್ನು ಕುರಿತ ಈ ವ್ಯಾಖ್ಯಾನ ಅತ್ಯಮೂಲ್ಯವಾದದು. ಏಕೆಂದರೆ, ಇದನ್ನು ನೀಡಿರುವವರು ಒಬ್ಬ ಕುರುಡು ಹಿಂಬಾಲಕನಲ್ಲ. ಒಬ್ಬ ವಿಧೇಯ ಶಿಷ್ಯನೂ ಅಲ್ಲ ಅಥವಾ ಒಬ್ಬ ನಿಷ್ಠಾವಂತ ಅನುಕರಣ ಶೀಲನೂ ಅಲ್ಲ. ಕ್ರಿಯೆಯ ಸೋಂಕೇ ಇಲ್ಲದ ಒಬ್ಬ ಬುದ್ಧಿಜೀವಿ ಬರೆದ ಭಾಷ್ಯ ಇದಲ್ಲ. ವಿನೋಬಾ ಗಾಂಧಿಯಷ್ಟೇ ಮಾನವನಿಷ್ಠ. ಮಾನವತೆಯೊಂದಿಗೆ ಆಂತರಿಕ ಏಕತೆ ಮತ್ತು ಮಾನವನ ಆಕಾಂಕ್ಷೆ ಹಾಗೂ ವಿಧಿಯೊಂದಿಗೆ ತಾದಾತ್ಮ್ಯದ ಅನುಭವದ ಮೂಲಕ ಈ ನಿಲುವಿಗೆ ಬಂದರು. ಇಂದು ಮನುಷ್ಯ ಒಲವಿನ ಹಾದಿಯಿಂದ ಬೇರ್ಪಟ್ಟು, ಆತ್ಮಕ್ಕೆ ಬದಲಾಗಿ ಇಂದ್ರಿಯಗಳಿಗೆ ಜೋತುಬಿದ್ದು ದುರಂತಕಾರಿ ಇಕ್ಕಟ್ಟಿಗೆ ಸಿಕ್ಕಿಬಿಟ್ಟಿದ್ದಾನೆ. ಈ ಸ್ಥಿತಿಯಿಂದ ಅವನಿಗೆ ದಾರಿಗಾಣಿಸಲು ವಿನೋಬಾ ಅತ್ಯಾತುರರಾಗಿ ನಿಂತಿದ್ದಾರೆ. ತನ್ನ ವಿಜ್ಞಾನ ಮತ್ತು ಯಂತ್ರ

ಜ್ಞಾನದ ಸಕಲ ಕೌಶಲವನ್ನೂ ಬಳಸಿ ಇಂದ್ರಿಯಪೋಷಕನಾದ ತನ್ನನ್ನೂ ಆತ್ಮವಿನಾಶಕ್ಕೆ ಅಟ್ಟುತ್ತಿರುವ ದೈತ್ಯನಾಗರಿಕತೆ ಒಂದನ್ನು ಕಟ್ಟುತ್ತಿದ್ದಾನೆ. ಅಳತೆಗೆಟ್ಟ ಆಸ್ತಿಕ ವಿಸ್ತರಣ ಅನೀತಿಕರ, ಅವ್ಯವಹಾರ್ಯ ಎಂದು ಇತ್ತೀಚೆಗೆ ಟಾಯ್ನ ಬೀ ಹೇಳಿದ. ಎಲ್ಲ ಆಶೆಯೂ ಒಂದೇ ತೆರನಾದ ಅಥವಾ ಒಂದೇ ಅಗತ್ಯಗಳನ್ನು ಅತಿಕ್ರಮಿಸುವುದರಿಂದ ಅದು ಅನೀತಿಕರ; ಎಲ್ಲರಿಗೂ ಸಾಲುವಷ್ಟು ಭೌತಸಾಮಗ್ರಿ ಇಲ್ಲದಿರುವುದರಿಂದ ಅವ್ಯವಹಾರ್ಯ. ಈ ಸಂದರ್ಭದಲ್ಲೇ ಸ್ವತಃ ಗಾಂಧೀ ಮತ್ತು ವಿನೋಬಾ ವಿಶ್ಲೇಷಿಸಿದಂತೆ ಗಾಂಧೀ ಲಕ್ಷ್ಯಕ್ಕೆ ಅರ್ಹರು.

—ರಂಗನಾಥ ರಾಮಚಂದ್ರ ದಿವಾಕರ

೧

ಕ್ರಾಂತಿ-ಶಾಂತಿಗಳ ಅಪೂರ್ವ ಸಂಗಮ

ಚಿಕ್ಕವನಿದ್ದೆ, ಆಗಿನಿಂದಲೇ ಬಂಗಾಲ ಮತ್ತು ಹಿಮಾಲಯ ನನ್ನ ಲಕ್ಷ್ಯ ಸೆಳೆದಿದ್ದುವು. ಹಿಮಾಲಯ ಬಂಗಾಲಗಳಿಗೆ ಹೋಗುವ ಕನಸಿನಲ್ಲಿ ವಿಹರಿಸುತ್ತಿದ್ದೆ. ಬಂಗಾಲದ 'ವಂದೇ ಮಾತರಂ' ಕ್ರಾಂತಿಯ ಭಾವನೆ ನನ್ನನ್ನು ಎಳೆಯುತ್ತಿತ್ತು. ಮತ್ತೊಂದೆಡೆ ಹಿಮಾಲಯದ ಜ್ಞಾನಯೋಗ ನನ್ನನ್ನು ತುಯ್ಯುತ್ತಿತ್ತು. 1916ರಲ್ಲಿ ನಾನು ಮನೆ ಬಿಟ್ಟು ಹೊರಬಿದ್ದಾಗ ಹಿಮಾಲಯದತ್ತ ಸಾಗುವುದೊಂದು ಇಚ್ಛೆ ನನಗೆ, ಮತ್ತೊಂದು ಬಂಗಾಲಕ್ಕೆ ಹೋಗುವುದು. ಹಿಮಾಲಯ ಹಾಗೂ ಬಂಗಾಲಗಳೆರಡರ ಹಾದಿಯಲ್ಲೂ ಕಾಶಿ ಪಟ್ಟಣವಿತ್ತು. ಕರ್ಮಸಂಯೋಗದಿಂದ ನಾ ಅಲ್ಲಿಗೆ ಹೋದೆ.

ಕಾಶಿ ಹಿಂದೂ ವಿಶ್ವವಿದ್ಯಾಲಯದ ಉದ್ಘಾಟನ ಸಮಾರಂಭಕ್ಕೆ ಗಾಂಧೀಜೀ ಅಲ್ಲಿ ಬಂದಿದ್ದರು. ಆ ಸಮಾರಂಭಕ್ಕೆ ಬಂದಿದ್ದ ದೊಡ್ಡದೊಡ್ಡ ವಿದ್ವಾಂಸರ, ರಾಜಮಹಾರಾಜರ ಮತ್ತು ವೈಸರಾಯರ ಸಮ್ಮುಖದಲ್ಲಿ ಅವರು ಮಾಡಿದ ಓಜಸ್ವೀ ಭಾಷಣದ ವರದಿಯನ್ನು ಪತ್ರಿಕೆಯಲ್ಲಿ ಓದಿದೆ. ನನ್ನ ಮೇಲೆ ಅದರದು ಗಾಢ ಪ್ರಭಾವ ಬಿತ್ತು. ದೇಶದ ರಾಜಕೀಯ ಸ್ವಾತಂತ್ರ್ಯ ಮತ್ತು ಆಧ್ಯಾತ್ಮಿಕ ವಿಕಾಸ ಎರಡನ್ನೂ ಒಟ್ಟಿಗೇ ಸಾಧಿಸಬಯಸುವ ಪುರುಷ ಈತ ಎಂದನಿಸಿತು. ನನಗೆ ಅದೇ ಇಷ್ಟ ಆಗಿತ್ತು. ಪತ್ರ ಬರೆದು ಪ್ರಶ್ನೆ ಕೇಳಿದೆ. ಉತ್ತರ ದೊರೆತಮೇಲೆ ಮತ್ತೂ ಒಮ್ಮೆ ಕೇಳಿದೆ. ಉತ್ತರವಾಗಿ ಗಾಂಧೀಜೀ ಆಶ್ರಮಕ್ಕೆ ಸೇರುವ ವಿಷಯಕ ನಿಯಮಾವಲಿ ಕಳಿಸಿದರು. 'ಪತ್ರವ್ಯವಹಾರದಿಂದ ವಿಶೇಷವೇನೂ ಆಗದು, ನೀನು ಇಲ್ಲೇ ಬಂದುಬಿಡು' ಎಂದು ಬರೆದರು.

ನನ್ನ ಕಾಲು ಮಹಾತ್ಮಾ ಗಾಂಧೀ ಅವರತ್ತ ಹೊರಳಿದವು. ನಾನು ಹಿಮಾಲಯಕ್ಕೂ ಹೋಗಲಿಲ್ಲ, ಬಂಗಾಲವನ್ನೂ ಸೇರಲಿಲ್ಲ. ಆದರೆ ಮಾನಸಿಕವಾಗಿ ಎರಡೂ ಸ್ಥಳಕ್ಕೆ ಒಂದೇ ಬಾರಿಗೆ ಹೋಗಿ ತಲಪಿದ್ದೆ. ಗಾಂಧೀಜಿಯ ಬಳಿ ನನಗೆ ಹಿಮಾಲಯದ ಶಾಂತಿ ಸಿಕ್ಕಿತು, ಬಂಗಾಲದ ಕ್ರಾಂತಿಯೂ ದೊರೆಯಿತು. ಅಲ್ಲಿ ಕ್ರಾಂತಿ ಮತ್ತು ಶಾಂತಿಗಳ ಅಪೂರ್ವ ಸಂಗಮವನ್ನು ಕಂಡೆ.

ಬಾಪೂ ಚರಣಗಳಲ್ಲಿ

1916ರ ಜೂನ್ 7ರಂದು ಕೋಚರಬ್ ಆಶ್ರಮದಲ್ಲಿ ಗಾಂಧೀಜಿಯನ್ನು ಮೊದಲ ಬಾರಿಗೆ ಸಂಧಿಸಿದೆ. ದೇವರ ಅಪಾರ ಕೃಪೆ, ಅವರ ಚರಣಗಳಲ್ಲಿ ಆತ ನನ್ನನ್ನು ಸ್ಥಿರಗೊಳಿಸಿದ. ನನ್ನ ಹೃದಯ ಜೀವನಗಳೆರಡನ್ನೂ ನೋಡುವಾಗ ಅವೆರಡೂ ಅವರ ಚರಣಗಳಲ್ಲಿ ಅತ್ಯಂತ ಸ್ಥಿರವಾಗಿದೆಯೆನಿಸುತ್ತದೆ. ಅವರು ನನಗೆ ಇತ್ತ ವಿಚಾರ, ಶಿಕ್ಷಣಗಳಲ್ಲಿ ಎಷ್ಟನ್ನು ಪರಿಪಾಲಿಸಿದೇನೆಂಬುದು ತಿಳಿಯದು. `ಅದು ಅವರಿಗೂ ತಿಳಿದಿರಲಿಕ್ಕಿಲ್ಲ, ಬಹುಶಃ ನೀವೂ ತಿಳಿಯಲಾರಿರಿ, ಭಗವಂತ ಮಾತ್ರ ಅರಿತಾನು. ಅವರ ವಿಚಾರಗಳಲ್ಲಿ ನಾನು ಅರಿತಷ್ಟು, ನನಗೆ ರುಚಿಸಿದಷ್ಟನ್ನು ಅನುಷ್ಠಾನಕ್ಕೆ ತರಲು ಪ್ರತಿಕ್ಷಣವೂ ಎಚ್ಚರದಿಂದ ನನ್ನ ಪ್ರಯತ್ನ ಸಾಗಿದೆ; ಈ ಮಾತು ಹೇಳಲು ನನಗೆ ಏನೂ ಸಂಕೋಚವಿಲ್ಲ. ಅವರು ಬದುಕಿದ್ದಾಗ ನಾನು ಎಷ್ಟು ಎಚ್ಚರಿಕೆಯಿಂದ ಇದ್ದೆನೋ—ಈಶ್ವರಕೃಪೆಯಿಂದ ಬಹು ಎಚ್ಚರಿಕೆಯಿಂದಿದ್ದೆ — ಅದಕ್ಕಿಂತ ಇಂದು ಹೆಚ್ಚು ಎಚ್ಚರದಿಂದ ಇದ್ದೇನೆ, ನಿಸ್ಸಂದೇಹ. ಅವರು ನನ್ನ ಹಿಂದೆ, ಮುಂದೆ, ಮೇಲೆ ಇರುವರೆಂದೇ ನನ್ನ ನಿರಂತರ ಅನುಭವ.

ಶಂಕರಾಚಾರ್ಯರ ಮಾತು ನನಗೆ ಸದಾ ನೆನಪಿಗೆ ಬರುತ್ತದೆ. ಮನುಷ್ಯನ ಪರಮಭಾಗ್ಯ ಮೂರು ಎಂದಿದಾರೆ ಅವರು: (1) ಮಾನವ ದೇಹಪ್ರಾಪ್ತಿ, (2) ಮುಮುಕ್ಷುತ್ವ-ಮುಕ್ತಿಯ ಚಡಪಡಿಕೆ, (3) ಮಹಾಪುರುಷನ ಆಶ್ರಯಲಾಭ.

'ಮನುಷ್ಯತ್ವಂ ಮುಮುಕ್ಷುತ್ವಂ ಮಹಾಪುರುಷಸಂಶ್ರಯಃ'

ಶಂಕರಾಚಾರ್ಯರ ಈ ವಾಕ್ಯ ಕುರಿತು ವಿಚಾರಮಾಡುವಾಗ ನನ್ನ

ಹೃದಯ ಆನಂದದಿಂದ ಪುಟಿದೇಳುತ್ತದೆ. ನಾನು ಪರಮಧನ್ಯ, ನನಗೆ ಮಾನವದೇಹ ದೊರೆಯಿತು, ಮುಕ್ತಿಯ ಧುನ್ ತಟ್ಟಿತು ಮತ್ತು ಮಹಾ ಪುರುಷನ ಸತ್ಸಂಗವೂ ಸಿಕ್ಕಿತು. ಸಂತ-ಮಹಾತ್ಮರ ಮಾತನ್ನು ಪುಸ್ತಕಗಳಲ್ಲಿ ಓದುವುದು ಒಂದು ಸಂಗತಿ, ಅವರ ಪ್ರತ್ಯಕ್ಷ ಸತ್ಸಂಗ, ಅವರ ಮಾರ್ಗದರ್ಶನ ದಲ್ಲಿ ಕೆಲಸಮಾಡುವುದು, ಪ್ರತ್ಯಕ್ಷ ಅವರ ಜೀವನವನ್ನು ನೋಡುವುದು ಬೇರೆಯೇ ಮಾತು. ಆ ಭಾಗ್ಯ ನನಗೆ ಸಿಕ್ಕಿತು, ನಾ ಧನ್ಯನಾದೆ.

ಒಳಹೊರಗೆ ಏಕಸ್ಥಿತಿ

ಗಾಂಧೀಜೀ ನನ್ನ ಪರೀಕ್ಷೆ ನಡೆಸಿದರೋ ಇಲ್ಲವೋ ನಾನರಿಯೆ. ನಾನು ಮಾತ್ರ ನನ್ನ ಬುದ್ಧಿಯಿಂದ ಅವರನ್ನು ಬಹುವಾಗಿ ಪರೀಕ್ಷಿಸಿದೆ. ಈ ಪರೀಕ್ಷೆಯಲ್ಲಿ ಅವರು ಕಡಿಮೆ ಉತ್ತೀರ್ಣವಾಗಿದ್ದರೆ ನಾನು ಅವರ ಬಳಿ ಉಳಿಯುತ್ತಲೇ ಇರಲಿಲ್ಲ. ನನ್ನನ್ನು ಪರೀಕ್ಷಿಸಿ ನನ್ನಲ್ಲಿ ಎಷ್ಟೋ ಕೊರತೆ ಇರುವುದು ಕಂಡಿದ್ದರೂ ಅವರು ನನ್ನನ್ನು ತಮ್ಮ ಬಳಿ ಇಟ್ಟುಕೊಳ್ಳುತ್ತಿದ್ದರು. ಆದರೆ ಅವರ ಸತ್ಯನಿಷ್ಠೆಯಲ್ಲಿ ಸ್ವಲ್ಪವಾದರೂ ಕೊರತೆ, ನ್ಯೂನತೆ, ಅಭಾವ ಕಂಡುಬಂದಿದ್ದರೆ ನಾನು ಅವರ ಬಳಿ ಇರುತ್ತಿರಲಿಲ್ಲ.

ಬಾಪೂ ಸದಾ ಹೇಳುತ್ತಿದ್ದರು 'ನಾನು ಅಪೂರ್ಣ, ಅರೆವಾಸಿ' ಎಂದು. ಅವರ ಮಾತು ದಿಟವಿತ್ತು. ಸುಳ್ಳು ಆಡುವುದು ಅವರಿಗೆ ಗೊತ್ತೇ ಇರಲಿಲ್ಲ. ಅವರು ಸತ್ಯನಿಷ್ಠರಿದ್ದರು. ತಾವು ಮುಕ್ತಪುರುಷರು, ಪೂರ್ಣಪುರುಷರು ಎಂದು ತಿಳಿಯುವ ಎಷ್ಟೋ ಮಹಾಪುರುಷರನ್ನು ನಾ ಕಂಡಿದ್ದೇನೆ. ಅಂಥವರು ಯಾರೂ ನನ್ನ ಮನ ಸೆಳೆಯಲಿಲ್ಲ. ಯಾವಾಗಲೂ ತಮ್ಮನ್ನು ಅಪೂರ್ಣ ಎಂದೇ ತಿಳಿದ ಬಾಪೂವಿನದೇ ನನ್ನಮೇಲೆ ಅಪೂರ್ವ ಆಕರ್ಷಣೆ. ನನ್ನಮೇಲೆ ಬಾಪೂವಿನ ಪ್ರಭಾವ ಎಷ್ಟು ಬಿತ್ತೋ ಪೂರ್ಣರೆಂದು ತಿಳಿದುಕೊಂಡ ಇತರ ಮಹನೀಯರದು ಬೀಳಲಿಲ್ಲ.

ಬಾಪೂವನ್ನು ಸಂಧಿಸಿದೆ, ಮುಗ್ಧನಾಗಿಹೋದೆ, ಅವರ ಒಳಹೊರಗಿನ ಏಕಸ್ಥಿತಿಯ ದೆಸೆಯಿಂದ. ಕರ್ಮಯೋಗದ ದೀಕ್ಷೆ ನನಗೆ ಬಾಪೂವಿನಿಂದ ದೊರೆಯಿತು. ಗೀತೆಯಲ್ಲಂತೂ ಅದನ್ನು ಹೇಳಿಯೇ ಇದ್ದಾರೆ, ಆದರೆ ಅದರ ಸಾಕ್ಷಾತ್ಕಾರ ಬಾಪೂ ಬದುಕಿನಲ್ಲಿ ನನಗಾಯಿತು. ಕರ್ಮಯೋಗದ ಪ್ರತ್ಯಕ್ಷ

ಆಚರಣೆಯನ್ನು ಬಾಪೂವಿನಲ್ಲಿ ನಾ ಕಂಡೆ. ಗೀತೆಯಲ್ಲಿ ಸ್ಥಿತಪ್ರಜ್ಞನ ಲಕ್ಷಣ ಬರುತ್ತದೆ. ಆ ವರ್ಣನೆ ಅನ್ವಯವಾಗುವ ದೇಹಧಾರೀ ಸ್ಥಿತಪ್ರಜ್ಞನನ್ನು ಹುಡುಕಿದರೆ ದೊಡ್ಡ ಭಾಗ್ಯದಿಂದ ಮಾತ್ರ ಸಿಕ್ಕಾನು. ಈ ಲಕ್ಷಣಗಳಿಗೆ ಬಹಳ ಹತ್ತಿರ ಬಂದಿರುವ ಮಹಾಪುರುಷನನ್ನು ಸಾಕ್ಷಾತ್ ನೋಡಿದೆ.

ಆಕಳಿನಂತೆ ವತ್ಸಲ

ಅಂಥ ಒಬ್ಬ ಮಹಾಪುರುಷನೊಡನೆ ಕೆಲಸ ಮಾಡುವ, ಆತನ ಆಶ್ರಯದಲ್ಲಿ ಬಾಳುವ ಪರಮ ಸೌಭಾಗ್ಯ ನನಗೆ ಸಿಕ್ಕಿತು. ದೊಡ್ಡವರ ನೆರಳಿನಲ್ಲಿರುವವರ ಪೂರ್ಣ ವಿಕಾಸ ಆಗದು ಎಂಬುದು ಬಹುಮಂದಿಯ ಭಾವನೆ. ದೊಡ್ಡ ಮರದ ನೆರಳಿನಲ್ಲಿರುವ ಸಣ್ಣ ಸಣ್ಣ ಗಿಡಗಳು ಬೆಳೆಯವು, ದೊಡ್ಡವಾಗವು ಎಂಬ ದೃಷ್ಟಾಂತ ಕೊಡುತ್ತಾರೆ. ದೊಡ್ಡ ಮರ ಸಣ್ಣ ಗಿಡಗಳಿಗೆ ಬೇಕಾದ ಪೋಷಕ ದ್ರವ್ಯಗಳನ್ನೆಲ್ಲ ತಾನೇ ಹೀರಿಬಿಡುತ್ತದೆ.

ಈ ದೃಷ್ಟಾಂತ ಮಹಾಪುರುಷರಿಗೆ ಅನ್ವಯವಾಗುವುದಿಲ್ಲ. ಮಹಾಪುರುಷರ ಮಟ್ಟಿಗೆ ಬೇರೆಯೇ ಉದಾಹರಣೆ ಇದೆ. ಮಹಾಪುರುಷರ ಆಶ್ರಯದಲ್ಲಿರುವವರು ಆಕಳಿನೊಡನಿರುವ ಕರುಗಳಂತೆ. ಆಕಳು ತನ್ನ ಹಾಲನ್ನು ಕರುವಿಗೆ ಕೊಡುತ್ತದೆ. ದೊಡ್ಡ ಮರ ಸಣ್ಣ ಗಿಡದ ಆಹಾರವನ್ನು ತಾನೇ ಹೀರಿಕೊಳ್ಳುತ್ತದೆ. ಮಹಾಪುರುಷರು ಆಕಳಿನಂತೆ ವತ್ಸಲರು. ತಾನು ಹುಲ್ಲು ಮುಂತಾದುವನ್ನು ತಿಂದು ಮಕ್ಕಳಿಗೆ ಮಧುರ ಕ್ಷೀರ ಕುಡಿಸುತ್ತದೆ. ಅದರ ಆಸರೆಯಲ್ಲಿ ಮಕ್ಕಳು ಬೆಳೆಯುತ್ತವೆ, ದೊಡ್ಡವಾಗುತ್ತವೆ. ಮಹಾತ್ಮಾ ಗಾಂಧೀ ಅವರ ಆಶ್ರಯವನ್ನು ಪಡೆದವರಿಗೆಲ್ಲ ಈ ಅನುಭವ ಬಂದಿದೆ. ಅವರ ಆಸರೆ ಅರಸಿ ಬಂದವರು ಕೆಟ್ಟವರಿದ್ದರೂ ಒಳ್ಳೆಯವರಾಗಿಬಿಟ್ಟಿದ್ದಾರೆ. ಸಣ್ಣವರಾಗಿದ್ದವರು ದೊಡ್ಡವರಾದರು. ಹೇಡಿಗಳು ನಿರ್ಭಯರಾದರು. ಸಾವಿರಾರು ಜನರ ಮಹತ್ವ ಬೆಳಸಿದರು. ಆದರೂ ತಮ್ಮನ್ನು ಎಲ್ಲರಿಗಿಂತ ಕಿರಿಯರೆಂದೇ ತಿಳಿದರು. ಅವರ ಆಸರೆ ಸಿಕ್ಕಿತು, ನನ್ನ ಬಾಳು ಧನ್ಯ.

1916ರಲ್ಲಿ ನಾ ಅವರ ಬಳಿ ಸೇರಿದಾಗ ಇಪ್ಪತ್ತೊಂದು ವರ್ಷದ ಹುಡುಗನಾಗಿದ್ದೆ. ಒಬ್ಬ ಜಿಜ್ಞಾಸು ಬಾಲಕನ ವೃತ್ತಿ ತಳೆದು ಅವರ ಬಳಿ ಹೋದೆ. 'ಸಭ್ಯತೆ', 'ಶಿಷ್ಟತೆ' ಎನ್ನುವಂಥದು ನನ್ನಲ್ಲಿ ಬಹು ಕಡಿಮೆ

ಇತ್ತು ಎಂಬುದು ನನ್ನ ಗೆಳೆಯರೆಲ್ಲರಿಗೂ ಗೊತ್ತು. ನಾನಂತೂ ಸ್ವಭಾವದಿಂದ ಕಾಡುಪ್ರಾಣಿಯಂತಿದ್ದೆ. ನನ್ನೊಳಗಿನ ಕ್ರೋಧದ ಜ್ವಾಲಾಮುಖಿ ಹಾಗೂ ಇನ್ನೂ ಅನೇಕ ವಾಸನೆಗಳ ಬಡಬಾನಲವನ್ನು ಶಮನಗೊಳಿಸುವವರು ಬಾಪೂವೇ ಆಗಿದ್ದರು. ನನ್ನಮೇಲೆ ಅವರ ಆಶೀರ್ವಾದ ನಿರಂತರ ಮಳೆಗರೆದಿದ್ದಾರೆ. ನಾನು ಅವರು ಸಾಕಿದ ಒಂದು ಕಾಡುಪ್ರಾಣಿ. ನಾನು ಇಂದು ಆಗಿರುವುದೆಲ್ಲ ಬಾಪೂವಿನ ಆಶೀಷದ ಚಮತ್ಕಾರ. ನನ್ನಂಥ ಅಸಭ್ಯ ಮನುಷ್ಯನನ್ನು ಅವರು ಸೇವಕನನ್ನಾಗಿ ಮಾರ್ಪಡಿಸಿದರು.

ದೃಷ್ಟಿದಾಯಕ ಮಾತೃಸ್ಥಾನ

ಬಾಪೂ ಆಶ್ರಮಕ್ಕೆ ಬಂದೆ. ಆಶ್ರಮದ ಜೀವನಕ್ರಮವನ್ನು ನನ್ನ ದೃಷ್ಟಿಯಿಂದ ನೋಡಿದೆ. ಅದರಿಂದ ನನಗೆ ಬಹಳಷ್ಟು ಸಿಕ್ಕಿತು. ಅದರ ಪರಿಣಾಮವಾಗಿ ಜೀವನ ಏಕರಸ, ಅಖಂಡ ಎಂಬ ಅನುಭವ ನನಗಾಯಿತು. ಬಾಪೂ ಎಂದೂ ತಮ್ಮನ್ನು ಗುರುವೆಂದು ಭಾವಿಸಿಕೊಂಡಿರಲಿಲ್ಲ, ಯಾರೊಬ್ಬರ ಶಿಷ್ಯ ತಾನೆಂದೂ ತಿಳಿದಿರಲಿಲ್ಲ. ಅದೇ ರೀತಿ ನಾನೂ ಯಾರಿಗೂ ಗುರುವು ಅಲ್ಲ, ಯಾರ ಶಿಷ್ಯನೂ ಅಲ್ಲ—ಗುರುವಿನ ಮಹತ್ವವನ್ನು ಬಹುಪಾಲು ಮನ್ನಿಸುವವನಾದರೂ ಸಹ. ಕೇವಲ ಸ್ಪರ್ಶದಿಂದ, ದರ್ಶನದಿಂದ ಅಥವಾ ವಾಣೀ ಮಾತ್ರದಿಂದ ಶಿಷ್ಯನ ಉದ್ಧಾರ ಮಾಡಬಲ್ಲ ಗುರುಗಳು ಇರಬಹುದು. ಅಷ್ಟೇ ಅಲ್ಲ, ಸಂಕಲ್ಪ ಮಾತ್ರದಿಂದಲೇ ಶಿಷ್ಯನನ್ನು ಉದ್ಧರಿಸಬಲ್ಲ ಪೂರ್ಣಾತ್ಮರಾದ ಗುರುಗಳಿದ್ದಾರೆಂದೂ ನಾ ಒಪ್ಪುತ್ತೇನೆ. ಇದನ್ನೆಲ್ಲ ನಾನು ಕಲ್ಪನೆಯಲ್ಲಿ ಮಾತ್ರ ಅಂಗೀಕರಿಸುತ್ತೇನೆ. ವಾಸ್ತವಿಕವಾಗಿ ಅಂಥ ಗುರುವನ್ನು ನಾ ಅರಿಯೆ. ಗುರುತ್ವದ ಈ ಭಾಷೆಯನ್ನು ಬಿಟ್ಟು, ಬಾಪೂನ ಆಸರೆಯಲ್ಲಿ ನನಗೆ ಏನೇನು ದೊರೆಯಿತು, ಅದು ಇಂದಿಗೂ ನನ್ನ ಕೆಲಸಕ್ಕೆ ಬರುತ್ತಿದೆ ಎಂಬುದನ್ನು ಹೇಳುತ್ತೇನೆ. ನನ್ನ ಭೂದಾನ, ಗ್ರಾಮದಾನ ಯಾತ್ರೆ ಎಲ್ಲವೂ ಅಲ್ಲಿನ ಸಾಧನೆಯ ಫಲ. ಅದಕ್ಕೆ ಮುಂಚೆ ನಾನು ನಡೆಸಿದ್ದ ಸಾಧನೆ ಕೇವಲ ಭಾವನಾರೂಪದ್ದು. ಅನಂತರ ಬಾಪೂ ಆಶ್ರಮದಲ್ಲಿ ಸಾಧನೆ ನಡೆಯಿತು. ಆಶ್ರಮಕ್ಕೆ ಬಂದ ಬಳಿಕ ನನಗೆ ಕಣ್ಣು ದೊರೆಯಿತು. ಇದೆಲ್ಲ ಬಾಪೂ ಉಪಕಾರ. ಬಾಪೂ ಆಸರೆ ನನ್ನ ಪಾಲಿಗೆ ದೃಷ್ಟಿದಾಯಕ ಮಾತೃಸ್ಥಾನ.

ಅಹಿಂಸೆಯ ಆಳವಾದ ಮಾರ್ಗ

ಬಾಪೂ ಬಳಿ ಬಂದಮೇಲೆ 32 ವರ್ಷ ವ್ಯಕ್ತಿಗತ ಸಾಧನೆಯಲ್ಲಿ ಕಳೆದವು. ಆಗ ನಡೆದ ನನ್ನ ಚಿಂತನ-ಮನನವೆಲ್ಲ ಆಧ್ಯಾತ್ಮಿಕ ಆಗಿತ್ತು. ಆದರೂ ಅದು ಪ್ರವೃತ್ತಿ ಮುಕ್ತ ಆಗಿರಲಿಲ್ಲ. ಸಾಗುತ್ತಿದ್ದ ರಾಜನೀತಿಯನ್ನು ನಾ ನೋಡುತ್ತಿರುತ್ತಿದ್ದೆ. ಸಮಾಜ ನಿರೀಕ್ಷಣದಲ್ಲಿ ಪೂರಾ ಆಧುನಿಕ ಇದ್ದೆ. ಬಾಪೂ ಬರೆಯುತ್ತಿದ್ದುದು, ಹೇಳುತ್ತಿದ್ದುದು ನನಗೆ ಮಾರ್ಗದರ್ಶಕ ಆಗಿತ್ತು. ಅವರ ವಿಚಾರಗಳನ್ನು ಬಹು ಸೂಕ್ಷ್ಮವಾಗಿ ನಾನು ಅಭ್ಯಸಿಸುತ್ತಿದ್ದೆ. ಅದರಿಂದ ದೊರೆತುದನ್ನು ಯಥಾಶಕ್ತಿ ಆಚರಣೆಗೆ ತರಲು ಪ್ರಯತ್ನಿಸುತ್ತಿದ್ದೆ. ಹೀಗೆ ಮಾಡುತ್ತ ಮಾಡುತ್ತ ಬಾಪೂ ತೋರಿಸಿದ ಅಹಿಂಸೆಯ ಆಳವಾದ ಮಾರ್ಗ ನನ್ನ ಕೈಗೆ ಹತ್ತಿತು.

ಭಾಗವತಧರ್ಮ ಕುರಿತ ಒಂದು ಸುಂದರ ಶ್ಲೋಕವಿದೆ. ಬಾಪೂ ಶೋಧಿಸಿದ ಅಹಿಂಸೆಯ ಹಾದಿಗೆ ಅದು ಪೂರಾ ಅನ್ವಯಿಸುತ್ತದೆ. ಶ್ಲೋಕ ಹೀಗಿದೆ :

ಯಮಾಸ್ಥಾಯ ನರೋ ರಾಜನ್, ನ ಪ್ರಮಾದ್ಯೇತ ಕರ್ಹಿಚಿತ್ ।
ಧಾವನ್ನಿಮೀಲ್ಯ ವಾ ನೇತ್ರೇ ನ ಸ್ಖಲೇನ್ನ ಪತೇದಿಹ ॥

ಭಾಗವತಧರ್ಮದಲ್ಲಿ ಆಸ್ಥೆ ಇಟ್ಟು ಮನುಷ್ಯ ನಡೆದರೆ ಎಂದೂ ಆತನಿಂದ ಪ್ರಮಾದ ಸಂಭವಿಸದು, ಎಂದರೆ ತಪ್ಪು, ದೋಷ, ಕೇಡು ಆಗದು. ಆ ನಿಟ್ಟಿನಲ್ಲಿ ಕಣ್ಣುಮುಚ್ಚಿ ನಡೆಯಲಿ, ಓಡಲಿ, ಯಾವ ರೀತಿಯಿಂದಲೂ ಆತನ ಪತನವಾಗದು.

ಬಾಪೂವಿನಿಂದ ಇಷ್ಟು ಸುಂದರ, ಸರಲ ಮಾರ್ಗ ನಮಗೆ ಸಿಕ್ಕಿದೆ. ಸರ್ವೋದಯ ಸಮಾಜ ನಿರ್ಮಿಸುವ ಆಸೆ ರಚಿಸಿಕೊಂಡಿದ್ದರೆ ಈ ಹಾದಿಯಲ್ಲಿ ನಡೆಯಬೇಕು.

೨

ವಿರಳ ಮಹಾಪುರುಷ

ಭಾರತದಮೇಲೆ ಭಗವಂತನ ಕೃಪೆ ಬಹಳ. ಅನಾದಿಕಾಲದಿಂದ ಈವರೆಗೆ ಅನೇಕ ಮಹಾಪುರುಷರು ಇಲ್ಲಿ ಅವತರಿಸಿದರು. ಇಲ್ಲಿನ ಜೀವನ ವನ್ನು ಹೆಚ್ಚು ಕಮ್ಮಿ ಸಮೃದ್ಧಗೊಳಿಸುತ್ತ ಬಂದರು. ಈ ಮಹಾಪುರುಷ ಸರಪಳಿಯ ಕೊನೆಯ ಕೊಂಡಿಯಂತೆ ಹಾಗೂ ಭವಿಷ್ಯದಲ್ಲಿ ಬರಲಿರುವ ಮಹಾಪುರುಷರಲ್ಲಿ ಮೊದಲಿಗರೆಂದು ಎಣಿಸಲ್ಪಡುವವರಾಗಿ ಗಾಂಧೀಜೀ ಇದ್ದರು. ಭೂತಕಾಲದ ಮಹಾಪುರುಷರು ನಮಗಿತ್ತುದರ ಸಾರವನ್ನು ಗಾಂಧೀಜಿಯಲ್ಲಿ ಪಡೆದೆವು. ಪರಮೇಶ್ವರ ಭವಿಷ್ಯದಲ್ಲಿ ಕಳುಹಿಸಲಿರುವ ಅಸಂಖ್ಯ ಮಹಾಪುರುಷರ ಬೀಜವೂ ಗಾಂಧೀಜಿಯಲ್ಲಿ ದೊರೆಯಿತು. ಹೀಗೆ ಅವರು ಒಂದು ಸಂಧಿಕಾಲದಲ್ಲಿ ಬಂದರು. ಭೂತಭವಿಷ್ಯತ್ತುಗಳ ಕೊಂಡಿ ಕೂಡಿತು. ಪ್ರತಿಯೊಬ್ಬ ಮಹಾಪುರುಷನ ಬಗೆಗೂ ಈ ಮಾತನ್ನು ಹೇಳು ವಂತಿಲ್ಲ. ಪ್ರತಿಯೊಬ್ಬರಿಗೂ ಅವರವರ ವೈಶಿಷ್ಟ್ಯ ಇದ್ದೇ ಇರುತ್ತದೆ. ಆದರೆ ಪುರಾತನ ಪರಂಪರೆಯ ಫಲ ಮತ್ತು ನೂತನ ಪರಂಪರೆಯ ಬೀಜ ಒಬ್ಬರ ಜೀವನದಲ್ಲೇ ಏಕತ್ರ ಆಗಿರುವ ಮಹಾಪುರುಷರು ಅತಿವಿರಳ. ಅಂಥ ವಿರಳ ಮಹಾಪುರುಷರಲ್ಲಿ ಗಾಂಧೀಜೀ ಒಬ್ಬರು.

ವಿಚಾರಪ್ರವರ್ತಕ ಯುಗಪುರುಷ

ಗಾಂಧೀಜೀ ಒಬ್ಬ ಸತ್ಪುರುಷರಾಗಿದ್ದರು. ಇದನ್ನು ಎಲ್ಲರೂ ಒಪ್ಪು ತ್ತಾರೆ. ಸತ್ಪುರುಷರಾಗಿದ್ದುದಲ್ಲದೆ ಒಂದು ಹೊಸ ವಿಚಾರದ ಪ್ರವರ್ತಕರೂ ಆಗಿದ್ದರು. ಅವರು ಹೊಸದೊಂದು ಜೀವನ ವಿಚಾರ ನೀಡಿದರು. ಅಂಥ ಹೊಸ ವಿಚಾರ ಎಲ್ಲ ಸತ್ಪುರುಷರಿಂದಲೂ ಪ್ರಕಟವಾಗುವುದಿಲ್ಲ. ವಿಶಿಷ್ಟ ಪರಿಸ್ಥಿತಿಯೊಂದರಲ್ಲಿ ಮೂಡಿಬರುವ ಸತ್ಪುರುಷನ ಮನದಲ್ಲಿ ಹೊಸ ವಿಚಾರ ಹುಟ್ಟುತ್ತದೆ. ಎಲ್ಲ ಸತ್ಪುರುಷರ ಹೃದಯವೂ ಒಂದೇ ರೀತಿ ಇರುತ್ತದೆ; ಆದರೆ ಒಬ್ಬೊಬ್ಬರ ಬುದ್ಧಿ, ಪ್ರತಿಭೆ ಬೇರೆ ಬೇರೆ ಇರುತ್ತದೆ. ಯಾರ ಪ್ರತಿಭೆ

ಯಾವ ಕಾಲಕ್ಕೆ ಅಧಿಕವಾಗಿ ಅಗತ್ಯವಿರುವುದೋ, ಆ ಸತ್ಪುರುಷ ಆ ಕಾಲದ ಯುಗಪ್ರವರ್ತಕ ಆಗುತ್ತಾನೆ. ಗಾಂಧೀಜೀ ಇಂಥ ಯುಗಪ್ರವರ್ತಕ ಸತ್ಪುರುಷ ಆಗಿದ್ದರು.

ಸಾಮಾನ್ಯ ಧರ್ಮಪ್ರಚಾರ ಹಾಗೂ ಕ್ರಾಂತಿ ಬೇರೆಬೇರೆ ಸಂಗತಿಗಳು. ಸಾಮಾನ್ಯ ಧರ್ಮಬೋಧೆಯನ್ನು ಋಷಿಗಳೂ ಸಂತರೂ ಸದಾ ಮಾಡುತ್ತಿರುತ್ತಾರೆ. ಆದರೆ ಯುಗದ ಬೇಡಿಕೆ ಮತ್ತು ಸಂತನ ಉಪದೇಶಗಳ ಸಂಯೋಗವಾದಾಗ 'ಕ್ರಾಂತಿ' ಆಗುತ್ತದೆ. ಸರ್ವಸಾಮಾನ್ಯ ಧರ್ಮದ ಪ್ರಚಾರವೇ ಒಂದು ಮಾತು. ಆಯಾ ಕಾಲದ ಅಗತ್ಯವನ್ನು ಗುರುತಿಸಿ ಅದರೊಡನೆ ಧರ್ಮವಿಚಾರವನ್ನು ಜೋಡಿಸುವುದು ಬೇರೆಯ ವಿಷಯ. ಅಂತರಂಗದ ಧರ್ಮವಿಚಾರದ ಬಲ ಮತ್ತು ಪರಿಸ್ಥಿತಿಯ ಬಲಗಳೆರಡರ ಜೋಡಣೆ ತೋರಿಸುವವ ಕೇವಲ 'ಧರ್ಮಪುರುಷ' ಅಥವಾ 'ಸತ್ಪುರುಷ' ಆಗಿ ಉಳಿಯುವುದಿಲ್ಲ, ಯುಗಪುರುಷನಾಗಿಬಿಡುತ್ತಾನೆ. ಗಾಂಧೀಜೀ ಅಂಥದೇ ಯುಗಪುರುಷ ಆಗಿದ್ದರು.

ಸ್ಮೃತಿಕಾರನಂಥ ಸಮಾಜಶಾಸ್ತ್ರಜ್ಞ

ಸರಿಸುಮಾರು ಸ್ಮೃತಿಕಾರರ ಗುಂಪಿನಲ್ಲಿ ಬರುವ ವ್ಯಾಪಕವಿಚಾರಕರಾಗಿದ್ದರು ಗಾಂಧೀಜೀ. ಇವರನ್ನು ಕೆಲವರು ಏಸುವಿಗೆ ಹೋಲಿಸುತ್ತಾರೆ, ಕೆಲವರು ತಿಲಕರಿಗೆ. ನನ್ನ ಅಭಿಪ್ರಾಯದಲ್ಲಿ ಸ್ಮೃತಿಕಾರರಿಗೆ ಇವರನ್ನು ಹೋಲಿಸಬಹುದು. ಜೀವನದ ಎಲ್ಲ ಮುಖಗಳನ್ನೂ ಮುಟ್ಟುವ ವ್ಯಾಪಕ ವಿಚಾರದ ಮನು ಮತ್ತು ಯಾಜ್ಞವಲ್ಕ್ಯರೊಂದಿಗೆ ಅವರನ್ನು ಇಡಬಹುದು. ಅವರೊಬ್ಬ ಸಮಾಜಶಾಸ್ತ್ರಜ್ಞ ಆಗಿದ್ದರು.

ಆದರೂ ಮನುವಿಗೂ ಗಾಂಧೀಜಿಗೂ ಅಂತರವಿದೆ. ಮನು ಚಿಂತನಪ್ರಧಾನ ಆಗಿದ್ದರು, ಗಾಂಧೀಜೀ ಸೇವಾಪ್ರಧಾನರು. ಗಾಂಧೀಜೀ ಕರ್ಮಪ್ರಧಾನ(ಆ್ಯಕ್ಟಿವಿಸ್ಟ್) ಆಗಿದ್ದರು. ಗಾಂಧೀಜೀ ಬೀರಿದ ಪ್ರಭಾವ ಪ್ರತ್ಯಕ್ಷವೂ ಹೌದು ಪರೋಕ್ಷವೂ ಸಹ. ಅವರು ತಮ್ಮ ಗ್ರಂಥಗಳಿಗೂ ಬಹಳ ಮೀರಿ ನಿಂತವರಾಗಿದ್ದರು. ಜೀವನದೃಷ್ಟಿಯಲ್ಲಿ ಶೇಕ್ಸ್‌ಪಿಯರ್ ಮಿಲ್ಟನರು ತಮ್ಮ ಗ್ರಂಥಗಳಿಗಿಂತ ಸಣ್ಣವರಾಗಿದ್ದರು. ಗಾಂಧೀಜಿಯ ಜೀವನ ತುಂಬ ಎತ್ತರ, ಒಳ್ಳೆಯದು, ಉನ್ನತವಾದುದು ಆಗಿತ್ತು. ವಿಚಾರ ಪ್ರಕಟಮಾಡುವುದರಲ್ಲಿ

ಅವರು ದುರ್ಬಲರಿದ್ದರು. ಈ ಕಾರಣದಿಂದಾಗಿ ಅವರ ಗ್ರಂಥಗಳಿಗಿಂತ ಅವರ ಜೀವನದಲ್ಲಿ ಹೆಚ್ಚು ಪ್ರತಿಭೆ ಇತ್ತು.

ಮಹಾಪುರುಷರ ಅಗ್ರಗಾಮೀ ಪ್ರತಿಭೆ

ಶಂಕರಾಚಾರ್ಯರು ಮಹಾಪುರುಷ, ರಾಮಕೃಷ್ಣ ಪರಮಹಂಸರು ಮಹಾನ್ ಆಗಿದ್ದರು. ಇವರೆಲ್ಲ ಜೀವನದ ಅನೇಕ ಕ್ಷೇತ್ರಗಳಲ್ಲಿ ಏನಾದರೂ ಕಲಿಸಿದರು, ಜನರ ಜೀವನದಲ್ಲಿ ಪರಿವರ್ತನೆ ತಂದರು. ಆದರೆ ಅವರು ಸೂರ್ಯನಾರಾಯಣನಂತೆ ದೂರದಿಂದ ಪ್ರಕಾಶವಿತ್ತರು. ಸೂರ್ಯನ ಕಿರಣಗಳಿಂದ ನಮಗೆ ಸ್ವಾಸ್ಥ್ಯ ಸಿಗುತ್ತದೆ. ಶರೀರದ ಯಾವುದೇ ಭಾಗ ಊದಿಕೊಂಡು ಶಾಖ ಕೊಡಬೇಕಾದರೆ ಅದರಿಂದ ಪ್ರಯೋಜನವಿರದು. ಅದಕ್ಕೆ ಬೆಂಕಿ ಬೇಕು. ಹತ್ತಿರ ಬಂದು ದಾಸನಾಗಿ ನಮ್ಮ ಸೇವೆ ಮಾಡುತ್ತದೆ ಅಗ್ನಿ. ಸೂರ್ಯನಾರಾಯಣ ನಿಮ್ಮ ಗುರುವಾಗಬಲ್ಲ, ದಾಸನಲ್ಲ. ಆತ ಬೆಳಕು ನೀಡುತ್ತಾನೆ. ಆ ಬೆಳಕಿನಲ್ಲಿ ನೀವು ನಿಮ್ಮ ಬುದ್ಧಿಯಂತೆ ಕೆಲಸ ಮಾಡಿಕೊಳ್ಳಬೇಕು. ಆತ ನಿಮಗೆ ಮಾರ್ಗದರ್ಶಕ, ಸೇವಕನಲ್ಲ. ಆದರೂ ಸೂರ್ಯನಾರಾಯಣನಿಲ್ಲದಿದ್ದರೆ ಅಗ್ನಿಯಲ್ಲಿರುವ ಶಕ್ತಿ ಅದಕ್ಕಿರದು, ಇದೂ ನಿಜ.

ಆಧ್ಯಾತ್ಮಿಕ ಪ್ರತಿಭೆ ಒಳಗಿಂದ ಉದಿಸುತ್ತದೆ. ಅಂತಲೇ ಒಬ್ಬರು ಮಹಾಪುರುಷನನ್ನು ಇನ್ನೊಬ್ಬನೊಡನೆ ಹೋಲಿಸುವುದು ಸಾಧ್ಯವಿಲ್ಲ. ಯಾರು ಮೇಲು, ಯಾರು ಕೀಳು ಎಂದು ಯೋಚಿಸುವುದರಲ್ಲಿ ಅರ್ಥವಿಲ್ಲ. ಪ್ರತಿಯೊಬ್ಬರಿಗೂ ತಮ್ಮದೇ ಆದ ಪ್ರತಿಭೆ ಇರುತ್ತದೆ. ಮಹಾಪುರುಷರ ಭಿನ್ನ ಭಿನ್ನ ಪ್ರಕಾರಗಳನ್ನು ಕುರಿತು ಮಾತ್ರ ಮಾತಾಡಬಲ್ಲೆವು.

ಕರುಣಾ, ವಾತ್ಸಲ್ಯಪ್ರೇರಿತ

ಎಷ್ಟೋ ಮಹಾಪುರುಷರು ಕರುಣಾವಂತರೂ ವತ್ಸಲರೂ ಆಗಿರುತ್ತಾರೆ. ಅವರಲ್ಲಿ ಜ್ಞಾನ ಅಡಗಿರುತ್ತದೆ, ಕರುಣೆ ಪ್ರಕಟ ಆಗಿರುತ್ತದೆ. ಗಾಂಧೀಜೀ ಇದೇ ಬಗೆಯ ಮಹಾಪುರುಷ ಆಗಿದ್ದರು. ಕರುಣೆ ವಾತ್ಸಲ್ಯಗಳಿಂದ ಪ್ರೇರಿತರಾಗಿ ಕಡೆತನಕ ಅವರು ಜನರ ಕೆಲಸ ಮಾಡುತ್ತಿದ್ದರು. ಪ್ರತಿಯೊಬ್ಬರೂ ಅವರನ್ನು ತಮ್ಮ ಮನುಷ್ಯ ಎಂದು ಭಾವಿಸಿದ್ದರು. ಏಕೆಂದರೆ, ಅವರು ಸಾಮಾನ್ಯ ಮನುಷ್ಯನೊಡನೆ ಆತನ ನಿಲುಮೆಯಲ್ಲೇ ನಿಂತು ಮಾತಾಡುತ್ತಿದ್ದರು. ಯಾರಿಗಾದರೂ ಹೊಟ್ಟೆನೋವು ಬಂದರೆ ಗಾಂಧೀಜೀ

ಚಿಕಿತ್ಸೆ ತಿಳಿಸುತ್ತಿದ್ದರು. ಗಂಡ ಹೆಂಡತಿಯ ನಡುವೆ ವಿರಸ ಬಂದರೆ ಸಲಹೆ ಕೇಳಲು ಅವರು ಗಾಂಧೀಜೀ ಬಳಿ ಹೋಗುತ್ತಿದ್ದರು. ತಮ್ಮ ಎಲ್ಲ ಮಹತ್ವದ ಕೆಲಸಗಳ ನಡುವೆಯೂ ಸಮಯವಿತ್ತು. ಆ ಎಲ್ಲ ವಿಷಯಗಳಲ್ಲೂ ಆಸಕ್ತಿ ತಳೆದು ಸಮಂಜಸ ಸಲಹೆ ಕೊಡುತ್ತಿದ್ದರು. ತಾಯಿಯಂತೆ ಅವರ ಮಾತು ಕತೆ ವಿಚಾರ ಮಾಡುತ್ತಿದ್ದರು, ಅಂತಲೇ ಜನ ಅವರ ಬಳಿ ನಿಸ್ಸಂಕೋಚ ವಾಗಿ ಓಡುತ್ತಿದ್ದರು. ಹೀಗೆ ಅವರ ಕರುಣೆ ಪ್ರಕಟರೂಪದಲ್ಲಿ ವಿಲಸಿಸುತ್ತಿತ್ತು.

ಬಾಲಕರಿಗೆ ತಮ್ಮಂತೆಯೇ ಬಾಲಕರೆಂದು ಅವರು ಅನಿಸುತ್ತಿದ್ದರು. ಭಗಿನಿಯರಿಗೆ ತಮ್ಮ ಹಾಗೆಯೇ ಭಗಿನಿಯ ತೆರ. ಸೋದರಿಯರು ಬಿಚ್ಚು ಮನದಿಂದ ಅವರೊಂದಿಗೆ ಮಾತಾಡುತ್ತಿದ್ದರು. ಅವರು ತಮ್ಮ ಕುಟುಂಬ ದವರೇ ಎಂದು ಎಲ್ಲರಿಗೂ ಅನಿಸುತ್ತಿತ್ತು.

ಹತ್ತಿರದವರಾದ ನಾವೆಲ್ಲ ಅವರನ್ನು 'ಬಾಪೂ' ಎಂದು ಕರೆಯುತ್ತಿದ್ದೆವು. ಅನಂತರ ಇಡೀ ದೇಶವೇ ಅವರನ್ನು 'ಬಾಪೂ' ಎಂದು ಕರೆಯತೊಡಗಿತು. ಕೊನೆಗೆ ಅವರನ್ನು 'ರಾಷ್ಟ್ರಪಿತ' ಎಂದೆವು. ಬಾಪೂ ಬಗೆಗೆ ಯೋಚಿಸಿ ದಾಗಲೆಲ್ಲ ನನಗೆ ಅವರು ತಂದೆಗಿಂತ ಹೆಚ್ಚಾಗಿ ತಾಯಿಯಂತೆ ವಿಶೇಷ ವಾಗಿದ್ದರು ಎನಿಸುತ್ತದೆ. ನಮ್ಮಲ್ಲಿ ಹೇಳುವೆವಲ್ಲ: **'ಸಹಸ್ರಂ ತು ಪಿತೄನ್ ಮಾತಾ ಗೌರವೇಣಾತಿರಿಚ್ಯತೇ'**—ಗೌರವದಲ್ಲಿ ಸಾವಿರ ತಂದೆಯರಿಗಿಂತ ಒಬ್ಬ ತಾಯಿ ಶ್ರೇಷ್ಠ. ಬಾಪೂವಿನಲ್ಲಿ ಪಿತೃತ್ವದಂತೆಯೇ ಮಾತೃತ್ವವೂ ಪ್ರಕಟ ಆಗುತ್ತಿತ್ತು. ಅವರನ್ನು ಸ್ಮರಿಸಿಕೊಂಡಾಗಲೆಲ್ಲ ಅವರ ಇನ್ನಿತರ ಗುಣಗಳಿಗಿಂತ ಅವರ ವಾತ್ಸಲ್ಯವೇ ಅತಿ ಹೆಚ್ಚು ನೆನಪಾಗುತ್ತದೆ. ಅವರ ವಾತ್ಸಲ್ಯದ ಅನುಭವ ಅವರ ಹತ್ತಿರದಲ್ಲಿದ್ದವರಿಗೂ ಆಯಿತು, ದೂರದಲ್ಲಿದ್ದ ವರಿಗೂ ಸಹ. ಅವರ ಎಲ್ಲ ಗುಣಗಳಲ್ಲೂ ಅವರ ವಾತ್ಸಲ್ಯ, ಕರುಣೆ ಮುಖ್ಯ ಆಗಿದ್ದವು.

ಈ ರೀತಿ ಪುರಾತನ ಪರಂಪರೆಗೆ ಅನುರೂಪವಾದ ಮತ್ತು ನೂತನ ಪರಂಪರೆಯ ಬೀಜರೂಪವಾದ ಮಹಾಪುರುಷನನ್ನು, ಒಬ್ಬ ವಿಚಾರ ಪ್ರವರ್ತಕ ಯುಗಪುರುಷನನ್ನು, ಒಬ್ಬ ಸ್ಮೃತಿಕಾರನಂಥ ಸಮಾಜ ಶಾಸ್ತ್ರಜ್ಞ ನನ್ನು, ಒಬ್ಬ ಕರುಣಾವಂತ, ವತ್ಸಲ ಮಾತೃಸಮಾನ ಮಹಾಪುರುಷನನ್ನು ಬಾಪೂವಿನಲ್ಲಿ ಕಂಡೆವು. ಅಂಥ ಮಹಾಪುರುಷನ ಸನ್ನಿಧಿಯಲ್ಲಿ ಇರಲು ಸಿಕ್ಕಿದುದು ನಮ್ಮ ಪರಮ ಸೌಭಾಗ್ಯ.

●

೩

ರೂಪಕ್ಕಿಂತ ನಾಮ ದೊಡ್ಡದು

ನಮ್ಮ ದೇಶದಲ್ಲಿ ವಿಭೂತಿ ಪೂಜೆ ಹೆಚ್ಚು. ಮಾತು ಮಾತಿಗೂ ಮಹಾಪುರುಷರನ್ನು ದಿವ್ಯಸ್ವರೂಪದಲ್ಲಿ ನೋಡುವುದು ನಮ್ಮ ರೂಢಿಯೇ ಆಗಿಬಿಟ್ಟಿದೆ. ಇದೇ ರೀತಿ ಗಾಂಧೀಜಿಯ ದೈವೀಕರಣದ ಪ್ರಯತ್ನವೂ ನಡೆದಿವೆ. ಅವರು ದೇವರೇ ಆಗಿದ್ದರು ಎಂಬಂತೆ ಬಹುಮಂದಿ ಅವರ ಗುಣಗಾನ ಮಾಡುತ್ತಾರೆ. ಅವರನ್ನು ರಾಮ ಕೃಷ್ಣರ ಸಾಲಿಗೆ ಸೇರಿಸಿಬಿಡುತ್ತಾರೆ. ಇದು ಸರಿಯಲ್ಲ.

ದೇವರ ಗುಣಗಳ ಸಾಕ್ಷಾತ್ಕಾರ ಈ ಶರೀರದಲ್ಲಿ ಆಗಲಿ ಎಂಬುದು ಮಾನವ ದೇಹದ ಒಂದು ಆಕಾಂಕ್ಷೆ. ಹಾಗೆಂದೇ ಯಾರಾದರೊಬ್ಬ ಮಹಾ ಪುರುಷನನ್ನು ಅವತಾರ ಸ್ವರೂಪ, ಪೂರ್ಣಬ್ರಹ್ಮ ಹಾಗೂ ಸಾಕ್ಷಾತ್ ಬ್ರಹ್ಮ ಮಾನವರೂಪ ಧರಿಸಿ ಬಂದವನೆಂದು ಭಾವಿಸುವುದು ನಮಗೆ ಉಪಾಸನೆಯ ಒಂದು ಆಧಾರವೇ ಆಗಿಬಿಡುತ್ತದೆ. ಈ ದೃಷ್ಟಿಯಿಂದ ಅದಕ್ಕೆ ಬೆಲೆಯೂ ಇದೆ. ಅಂಥ ಆಧಾರ ರಾಮ ಕೃಷ್ಣರಲ್ಲಿ ನಮಗೆ ಸಾಕಷ್ಟು ಸಿಕ್ಕೇ ಇದೆ. ಇನ್ನು ಮೂರನೆಯವರ ಅಗತ್ಯವೇನು?

ಈಗ ಉಳಿದವರನ್ನು ರಾಮ ಕೃಷ್ಣರ ಸಾಲಿನಲ್ಲಿ ಸೇರಿಸುವುದರಿಂದ ಏನೂ ಲಾಭವಿಲ್ಲ. ಹಾನಿಯೇ ಆದೀತು. ಹೊಸ ಹೊಸ ಮನುಷ್ಯರನ್ನು ಅತಿಮಾನವರನ್ನಾಗಿಸುವ ಹೊಸ ಹೊಸ ಪ್ರಯತ್ನ ಆದಾವು. ಹಾಗಾದರೆ ಪುರಾಣಕಾಲದಿಂದ ಅನೇಕ ಕವಿಕಲ್ಪನೆಗಳಿಂದ ಸಮೃದ್ಧರಾದ ರಾಮ ಕೃಷ್ಣರ ಚರಿತ್ರೆಗಳ ಪಂಕ್ತಿಯಲ್ಲಿ ನಿಲ್ಲುವ ಯೋಗ್ಯತೆ ಪಡೆಯಲಾರರು. ಅವರ ಹೋಲಿಕೆಯಲ್ಲಿ ಇವರು ಸಪ್ಪೆಯಾದಾರು. ಅಷ್ಟೇ ಅಲ್ಲ, ವಿಜ್ಞಾನದ ಯುಗದಲ್ಲಿ ಅಂಥ ಪ್ರಯತ್ನ ಹಾಸ್ಯಾಸ್ಪದವೂ ಹೌದು. 'ಭಾರತವನ್ನು ಸ್ವತಂತ್ರಗೊಳಿಸಲು ಭಗವಂತ ಹುಟ್ಟಿಬಂದ' ಎಂದು ನಾವು ಗಾಂಧೀಜಿಯ

ಚರಿತ್ರೆ ಬರೆಯಲೆಳಸಿದರೆ ಅದು ಭಾಗವತದ ಹಾಸ್ಯಾಸ್ಪದ ನಕಲು ಆದೀತು. ಭಾಗವತವನ್ನು ನಿರಂತರವಾಗಿ ಓದುವಂತೆ ಇದನ್ನು ನಿರಂತರವಾಗಿ ಓದರು. ಬದಲಾಗಿ ಅದು ಹಾಸ್ಯರಸವನ್ನು ಮಾತ್ರ ಹುಟ್ಟಿಸೀತು. ಹುಚ್ಚಾಟ ಮಾತ್ರ ಆದೀತು.

ಮಾನವ ಆಗಿಯೇ ಇರಲಿ

ಗಾಂಧೀಜಿಯ ವಿಷಯದಲ್ಲಿ ನಾವು ಅಂಥ ಮೂಢಭಕ್ತಿ ಇಡಬಾರದು. ಅವರೊಬ್ಬ ಮನುಷ್ಯ ಆಗಿದ್ದರು, ಮನುಷ್ಯರಾಗಿಯೇ ಉಳಿಯಬೇಕು. ಅವರನ್ನು ಹಾಗೆಯೇ ಇಡುವುದರಿಂದ ನಮಗೇ ಲಾಭ. ಹಾಗೆ ಮಾಡಿದರೆ ಒಬ್ಬ ಸಜ್ಜನರ ಚಿತ್ರ ನಮ್ಮ ಮುಂದೆ ಉಳಿದೀತು. ಇಂದು ತುಂಬ ಅಗತ್ಯ ಅದು. ಅಂಥ ನೈತಿಕ ಆದರ್ಶ ಜಗತ್ತಿಗೆ ಸಿಕ್ಕೀತು. ಅದಕ್ಕೆ ಬದಲಾಗಿ ಅವರನ್ನು ದೇವರನ್ನಾಗಿಸಿಬಿಟ್ಟರೆ ದೇವರುಗಳಿಗಂತೂ ಅದರಿಂದ ಏನೂ ಲಾಭವಿಲ್ಲ; ನಾವಂತೂ ಮಾನವತೆಯ ಆದರ್ಶವೊಂದನ್ನು ನೀಗಿಕೊಂಡೇವು. ಭಕ್ತಿಭಾವಕ್ಕೆ ನಮ್ಮಲ್ಲಿ ಎಷ್ಟೊಂದು ಸಾಮಗ್ರಿ ಬಿದ್ದಿದೆ. ಅದಕ್ಕೆ ಹೊಸ ದೇವರ ಅಗತ್ಯವಿಲ್ಲ, ಜೀವನ ಶುದ್ಧಿಯ ಪವಿತ್ರ ದೃಷ್ಟಾಂತ ಬೇಕಿದೆ. ನೀತಿಯ ಪುರಾತನ ದೃಷ್ಟಾಂತಗಳು ಅಷ್ಟು ಕೆಲಸಕ್ಕೆ ಬಾರವು. ಬಾಪೂ ರೂಪದಲ್ಲಿ ನಮಗೆ ಅಂಥ ಹೊಸ ದೃಷ್ಟಾಂತ ಸಿಕ್ಕಿದೆ. ಅವರನ್ನು ದೇವರನ್ನಾಗಿಸಿದರೆ ನಮಗೆ ನಷ್ಟ, ಏನೂ ಲಾಭವಿಲ್ಲ. ಎಷ್ಟೋ ಸಂಪ್ರದಾಯಗಳ ಜತೆಗೆ ಮತ್ತೊಂದು ಸಂಪ್ರದಾಯ ಹುಟ್ಟಿಹಾಕಿದಂತಾದೀತು. ಅದರಿಂದ ನಮಗೇನು ಬಂದೀತು? ಗಾಂಧೀಜಿಯನ್ನು ಭಗವಂತನ ಸಾಲಿನಲ್ಲಿ ಕುಳ್ಳಿರಿಸದಿರುವುದು ಲೇಸು. ದೇವರನ್ನಾಗಿಸುವ ಬದಲು ಆದರ್ಶ ಮಾನವನನ್ನಾಗಿಯೇ ಇಟ್ಟರೋಣ.

ಗಾಂಧೀಜಿಯಷ್ಟು ದೊಡ್ಡ ಮಹಾಪುರುಷ ನಮಗಾಗಿ ಇದ್ದರೆಂಬುದು ಬಹಳ ಸಂತಸದ ಸಂಗತಿ. ಅವರು ಅಲೌಕಿಕ ಪುರುಷರಾಗಿ ಹುಟ್ಟದಿದ್ದುದು ಮತ್ತೂ ಭಗವಂತನ ಕೃಪೆ. ಶುಕದೇವರು ಹುಟ್ಟು ಜ್ಞಾನಿ. ಕಪಿಲಮಹಾಮುನಿ ಹುಟ್ಟುವಾಗಲೇ ತಾಯಿಗೆ ಉಪದೇಶ ನೀಡಹತ್ತಿದರು. ಶಂಕರಾಚಾರ್ಯರು ಎಂಟು ವರ್ಷ ವಯಸ್ಸಿಗೇ ವೇದಾಭ್ಯಾಸ ಮುಗಿಸಿ ಭಾಷ್ಯ

ಬರೆಯತೊಡಗಿದರು. ಆದರೆ ಗಾಂಧೀಜೀ ಈ ಸಾಲಿನಲ್ಲಿ ಹುಟ್ಟಲಿಲ್ಲ. ಅವರು ಸಾಮಾನ್ಯ ಮನುಷ್ಯರಾಗಿದ್ದರು. ಈ ಜನ್ಮದಲ್ಲಿ ಅವರು ಪಡೆದುದೆಲ್ಲ ಪ್ರತ್ಯಕ್ಷ ಸಾಧನೆಯಿಂದ, ಸತ್ಯನಿಷ್ಠೆಯಿಂದ. ಅದಕ್ಕಾಗಿಯೇ ಅವರ ಜೀವನ ನಮಗೆ ಹೆಚ್ಚು ಅನುಕೂಲಕ್ಕೆ ಬಂದೀತು, ಅನುಸರಿಸಲು ಯೋಗ್ಯವೆನಿಸೀತು.

ಒಮ್ಮೆ ಒಬ್ಬ ಸೋದರ ನನ್ನನ್ನು ಕೇಳಿದ: ಅವರನ್ನು 'ಗಾಂಧೀ' ಎನ್ನುವುದೋ, 'ಗಾಂಧೀಜೀ' ಎನ್ನುವುದೋ ಎಂದು. ವ್ಯಕ್ತಿ ಎಂದು ತಿಳಿಯುವುದಾದರೆ 'ಗಾಂಧೀಜೀ' ಎನ್ನಿ. ವಿಚಾರ ಎಂದು ಭಾವಿಸುವುದಾದರೆ 'ಗಾಂಧೀ' ಎನ್ನಬೇಕು—ಎಂದು ಹೇಳಿದೆ. ಆಗ 'ಗಾಂಧೀ ಇದ್ದರು' ಎನ್ನಬೇಕಾದೀತು. ನನ್ನ ಮಟ್ಟಿಗೆ ಗಾಂಧೀಜೀ ಇಂದು ಒಬ್ಬ ವ್ಯಕ್ತಿಯಲ್ಲ, ವಿಚಾರ.

ಕ್ಷಣ ಕ್ಷಣವೂ ವಿಕಸಿತ

ನಾವು ಚೆನ್ನಾಗಿ ತಿಳಿಯಬೇಕಾದ ಮಾತು ಇದು. ಇದನ್ನು ತಿಳಿಯದಿದ್ದರೆ ಗಾಂಧೀಜಿಯನ್ನು ನಾವು ಎಳ್ಳಷ್ಟೂ ತಿಳಿಯಲಾರೆವು. ಅವರು ದಿನದಿನವೂ ಬದಲಾಗುತ್ತಿದ್ದರು, ಕ್ಷಣ ಕ್ಷಣವೂ ವಿಕಸಿತರಾಗುತ್ತಲಿದ್ದರು. ಹಳೆಯ ಪುಸ್ತಕದ ಆವೃತ್ತಿಗಳನ್ನೇ ತಿರುವಿ ತಿರುವಿ ಹಾಕುವಂಥವರಾಗಿರಲಿಲ್ಲ ಈ ಮನುಷ್ಯ. ಅವರು ಇಂಥ ಸಮಯದಲ್ಲಿ ಈ ಮಾತು ಹೇಳಿದ್ದರು, ಆದುದರಿಂದ ಇಂದೂ ಅಂಥ ಕೆಲಸಕ್ಕೆ ಆಶೀರ್ವಾದವನ್ನೇ ನೀಡಿಯಾರು ಎಂದು ಊಹಿಸುವುದು ನಮ್ಮ ತಿಳುವಳಿಕೆಯ ಮಾತಾದೀತು. ಆ ರೀತಿ ಊಹಿಸಲು ಯಾರಿಗೂ ಹಕ್ಕಿಲ್ಲ. **'ಲೋಕೋತ್ತರಾಣಾಂ ಚೇತಾಂಸಿ ಕೋ ಹಿ ವಿಜ್ಞಾತುಮರ್ಹತಿ'** ಲೋಕೋತ್ತರ ವ್ಯಕ್ತಿಗಳ ಚಿತ್ತವನ್ನು ಯಾರು ಅರಿಯಬಲ್ಲರು? ಆದುದರಿಂದ ಗಾಂಧೀಜೀ ಇಂದು ಇದ್ದಿದ್ದರೆ ಏನು ಮಾಡುತ್ತಿದ್ದರು, ಏನು ಮಾಡುತ್ತಿರಲಿಲ್ಲ ಎಂದು ಯೋಚಿಸತಕ್ಕದ್ದಲ್ಲ.

ಇದನ್ನು ನಾವು ಅರಿಯದೆ ಹೋದರೆ ಗಾಂಧೀಜಿಗೆ ಬಹಳ ಅನ್ಯಾಯವೆಸಗಿಯೇವು. ಅವರಿಂದ ನಮಗೆ ಒಂದು ವಿಚಾರ ಸಿಕ್ಕಿತೆಂದು ತಿಳಿದು ನಾವು ಈಗ ಸ್ವತಂತ್ರ ಚಿಂತನ ಮಾಡಬೇಕು. ಅವರ ವಿಚಾರವನ್ನು ಅವರ ಶಬ್ದಗಳಿಗೆ ಹಾಗೂ ಅವರ ಕೆಲಸಗಳಿಗೇ ಕಟ್ಟಿಹಾಕಿಬಿಟ್ಟೆವಾದರೆ ಅವರಿಗೆ

ಅನ್ಯಾಯವೆಸಗಿ ಕುಳಿತೇವು. ಗುಜರಾತಿನಲ್ಲಿ ಹೇಳುವಂತೆ 'ವೇದಿಯಾ' ಗಳಂತೆ ಎಂದರೆ, ಶಬ್ದವನ್ನು ಹಿಡಿದುಕೊಂಡವರು ನಾವಾದೇವು, ಗಾಂಧೀಜಿಗೆ ಅನ್ಯಾಯ ಮಾಡಿಯೇವು.

ಸ್ಥೂಲ ಬಿಟ್ಟು ಸೂಕ್ಷ್ಮ ಹಿಡಿಯಿರಿ

ನಾವು ಮಹಾಪುರುಷರ ವಿಚಾರವನ್ನಷ್ಟೆ ಗ್ರಹಿಸಬೇಕು, ಅವರ ಸ್ಥೂಲ ಜೀವನಕ್ಕೆ ಅಂಟಿಕೊಳ್ಳಬಾರದು. ಹಾಗೆ ಒಂದು ಶಾಸ್ತ್ರವಾಕ್ಯವೂ ಇದೆ. ಮಹಾಪುರುಷರ ಮಾತುಗಳ ಚಿಂತನ ಮಾಡಬೇಕು, ಅವರ ಸ್ಥೂಲ ಚರಿತ್ರ ವನ್ನಲ್ಲ ಎಂದು ಅದರಲ್ಲಿ ಹೇಳಿದೆ. ಮಾತುಗಳಲ್ಲೂ ಉತ್ತಮೋತ್ತಮ ಅರ್ಥ ವುಳ್ಳವನ್ನೇ ಗ್ರಹಿಸಬೇಕು. ಅಷ್ಟೇ ಅಲ್ಲ, ಮಾತುಗಳಲ್ಲಿ ಸೂಕ್ಷ್ಮಾತಿಸೂಕ್ಷ್ಮ ವಾದ, ಶುದ್ಧಾತಿಶುದ್ಧ ಅರ್ಥ ಕೊಡುವುವನ್ನೇ ಗ್ರಹಿಸತಕ್ಕದ್ದು. ಇಂದಿನ ವಿಜ್ಞಾನಕಾಲದಲ್ಲಿ ಪುರಾಣಕಾಲದ ಮನು, ಹಾಗೂ ಈ ಹಿಂದಿನ ಕಾಲದ ಮಾರ್ಕ್ಸ್ ಇಬ್ಬರೂ ನಡೆಯರು. ಗಾಂಧಿಯದೂ ಇದ್ದಕ್ಕಿದ್ದಂತೆಯೇ ನಡೆಯ ದೆಂದು ನಮ್ರತೆಯಿಂದ ಹೇಳಬಯಸುತ್ತೇನೆ.

ಈಗ ಪ್ರಶ್ನೆ : ನೀವೇನು ಗಾಂಧೀಜಿಗಿಂತ ಮುಂದೆ ಸಾಗಿಬಿಟ್ಟರೇನು ? 'ನಾವು ಗಾಂಧೀಜಿಯ ಕಾಲಕ್ಕಿಂತ ಮುಂದೆ ಇದ್ದೇವೆ' ಎಂದು ವಿನಮ್ರವಾಗಿ ಹೇಳುವ ಸಾಹಸ ನಮ್ಮಲ್ಲಿ ಇರಬೇಕು. ಇದರಲ್ಲಿ ಗಾಂಧೀಜಿಗಿಂತ ಮುಂದೆ ಸಾಗಿಹೋಗುವ ಪ್ರಶ್ನೆಯೇ ಇರದು, ಹಾಗೆ ಮಾಡಬೇಕಾದ ಅಗತ್ಯವೂ ಇಲ್ಲ. ಮುಂಬರಿದೆವೋ ಹಿಂದೆ ಸರಿದೆವೋ ಅಳೆಯುವವನು ಭಗವಂತ. ಅದು ನಮ್ಮ ಕೈಯ ಕೆಲಸವಲ್ಲ. ಅವರಿಗಿಂತ ಮುಂದೆ ಸಾಗುವ ಅಗತ್ಯವೂ ಇಲ್ಲ. ಆದರೆ ನಮ್ಮ ಕಾಲ ಅವರ ಕಾಲಕ್ಕಿಂತ ಮುಂದಕ್ಕೆ ಹೋಗಿದೆ. ನಮ್ಮೆದುರು ಹೊಸ ಕ್ಷಿತಿಜ ನಿಂತಿದೆ. ಇದನ್ನು ನಾವು ಅರಿಯಲೇಬೇಕು. ಅರಿಯದಿದ್ದರೆ ಗಾಂಧೀ ವಿಚಾರವನ್ನು ಒಪ್ಪುವವರಮೇಲೆ ಬಿದ್ದಿರುವ ಕಾರ್ಯ ಭಾರವನ್ನು ನಾವು ನಿರ್ವಹಿಸಲಾರದಾದೇವು.

'ಏಕ್‌ದಂ ದಗಾಬಾಜ್ !'

ನಿತ್ಯ ನಿರಂತರವೂ ಪರಿಸ್ಥಿತಿಗೆ ತಕ್ಕಂತೆ ಥಟ್ಟನೆ ಬದಲಾಗುವಷ್ಟು ಸಂವೇದನಶೀಲರಾಗಿದ್ದರು ಗಾಂಧೀಜಿ. ಅವರನ್ನು ಕುರಿತು ಒಮ್ಮೆ ಒಂದು ಶಬ್ದ

ಬಳಸಿದೆ–ಕೆಲವರನ್ನು ಅದು ಬೇಸರಗೊಳಿಸಿತು–'ದಗಾಬಾಜ್'. ಏಕನಾಥನ ಒಂದು ಪದ್ಯವುಂಟು. ಅದರಲ್ಲಿ ಅವರು ಸಂತರನ್ನು 'ದಗಾಬಾಜ್' ಎಂದಿದ್ದಾರೆ. ಅದೇ ರೀತಿ ಗಾಂಧೀಜಿಯ ಬಗೆಗೂ ಇದನ್ನೇ ಹೇಳಬೇಕಾದೀತು: ಈ ಮನುಷ್ಯ 'ಬಿಲ್‌ಕುಲ್ ದಗಾಬಾಜ್' ಆಗಿದ್ದರು! ಎಂದು. ಎಂದೂ ಒಂದು ಶಬ್ದದ ಹಿಡಿತಕ್ಕೆ ಸಿಕ್ಕುತ್ತಿರಲಿಲ್ಲ. ಗಾಂಧೀಜೀ ಇಂದು ಒಂದು ಹಾದಿ ಹಿಡಿದಿದ್ದಾರೆಂದರೆ ನಾಳೆ ಯಾವುದನ್ನು ಹಿಡಿದಾರು ಎಂಬ ಭರವಸೆ ಯಾರಿಗೂ ಇರುತ್ತಿರಲಿಲ್ಲ. ಏಕೆಂದರೆ, ಅವರು ವಿಕಾಸಶೀಲಪುರುಷರಾಗಿದ್ದರು. ಅವರ ಮನಸ್ಸು ಸದಾ ಸತ್ಯಶೋಧನೆಯ ವಿಚಾರದಲ್ಲೇ ಇರುತ್ತಿತ್ತು. ತನ್ನ ಮಾತನ್ನು ಹೇಗೆ ಹಿಡಿದಿಟ್ಟುಕೊಂಡಿರಬೇಕೆಂಬುದರಲ್ಲಿ ಮಗ್ನರಾಗಿರುತ್ತಿರಲಿಲ್ಲ. ಗಾಂಧೀಜೀ ಸತತ ಪರಿವರ್ತನಶೀಲರಾಗಿದ್ದರು ಎಂಬುದಷ್ಟನ್ನೇ ನಾ ಹೇಳಬೇಕಾಗಿರುವುದು. ಆದುದರಿಂದ ಇಂದಿನ ಪರಿಸ್ಥಿತಿಗೆ ತಕ್ಕಂತೆ ಸ್ವತಂತ್ರ ಚಿಂತನಶೀಲರಾಗಿರಬೇಕು.

ಈಶ್ವರಲೀಲೆ ನೋಡಿ! ಗಾಂಧೀಜಿಯ ಆವಶ್ಯಕತೆ ಅತ್ಯಂತ ಹೆಚ್ಚಾಗಿದ್ದರೆ, ಅಧಿಕಾಧಿಕವಾಗಿ ಅನಿವಾರ್ಯವಿದ್ದಾಗಲೇ ಅವರನ್ನು ನಮ್ಮಿಂದ ತೆಗೆದುಕೊಂಡುಹೋಗಿಬಿಟ್ಟ. ಇದರ ಅರ್ಥವೇನು? 'ನೀವು ಸ್ವಲ್ಪ ನಿರಪೇಕ್ಷವಾಗಿ ವಿಚಾರ ಮಾಡಿ'—ಎಂಬುದೇ.

ಪೈಗಂಬರ್ ಹೋದ, ಅಲ್ಲಾಹ್ ಸ್ಥಿರ

ಮಹಮ್ಮದ್ ಪೈಗಂಬರನ ಸಾವಿನ ನೆನಪಾಗುತ್ತದೆ ನನಗೆ. ಆತ ಸತ್ತುಹೋದ. ಜನ ಮಾತ್ರ ಅದನ್ನು ಒಪ್ಪಲು ತಯಾರಿರಲಿಲ್ಲ. ಪೈಗಂಬರ ಎಲ್ಲಾದರೂ ಸತ್ತಾನೆಯೇ? ಯಾರು ಒಪ್ಪಿಯಾರು? ಆಶ್ಚರ್ಯವೆಂದರೆ, ಪೈಗಂಬರ ಸತ್ತಮೇಲೂ ನಮ್ಮದು ಕೆಲ ಕರ್ತವ್ಯ ಇರುತ್ತದೆ. ಜನ ಅದಕ್ಕೆ ಸಿದ್ಧವಾಗಬೇಕು. ಅವರು ಅದನ್ನು ಒಪ್ಪಲು ಸಿದ್ಧವೇ ಇರಲಿಲ್ಲ. ಯಾರೇನು ಮಾಡಿಯಾರು? ಕೊನೆಗೆ ಅಬುಬಕರ್ ಮಸೀದಿಯ ಮೇಲೆ ಏರಿ ನಿಂತ. ಅಲ್ಲಿಂದ ಜನರಿಗೆ ಹೇಳಿದ: 'ಪೈಗಂಬರ್ ಹೋದ. ಅಲ್ಲಾಹ್ ಇದ್ದೇ ಇದ್ದಾನೆ'—ಎಂದು. ಅಬುಬಕರ್ ಹೀಗೆ ಹೇಳಿದ ಮೇಲೆ ಎಲ್ಲರೂ ಪೈಗಂಬರ್ ನಿಜವಾಗಿ ಹೊರಟುಹೋದ ಎಂಬುದನ್ನು ನಂಬಿದರು.

ಹೆಚ್ಚು ಕಡಿಮೆ ಎಲ್ಲ ಮಹಾಪುರುಷರ ಅನುಯಾಯಿಗಳಿಗೂ ಹೀಗೆಯೇ ಆಗುತ್ತದೆ. ಮಹಾಪುರುಷರ ಸ್ಥೂಲ ಚರಿತ್ರದೊಂದಿಗೆ ಅವರು ಅತಿಹೆಚ್ಚಾಗಿ ಸಿಕ್ಕಿಕೊಂಡು ನಿರಪೇಕ್ಷವಾಗಿ ತತ್ಕಾಲದಲ್ಲಿ ಯೋಚಿಸಲಾರದವರಾಗಿ ಹೋಗಿರುತ್ತಾರೆ. ಆದರೆ ಕಡೆಗೆ ವ್ಯಕ್ತಿ ನಿರಪೇಕ್ಷಚಿಂತನವೇ ನಡೆಯ ಬೇಕಲ್ಲವೇ? ರೂಪಕ್ಕಿಂತ ನಾಮ ದೊಡ್ಡದು, ಎತ್ತರ. ರೂಪ ಕೆಲದಿನದ್ದು, ನಾಮ ಸನಾತನ. ರೂಪವೆಂದರೆ ವ್ಯಕ್ತಿ, ನಾಮವೆಂದರೆ ವಿಚಾರ. ವ್ಯಕ್ತಿಯೂ ಉನ್ನತವಾಗಿರುತ್ತಾನೆ, ಅದರಲ್ಲಿರುವ ಯಾವುದೋ ವಿಚಾರದ ಕಾರಣದಿಂದ. ಅರ್ಥಾತ್ ಆ ವ್ಯಕ್ತಿ ಆ ವಿಚಾರವನ್ನು ವ್ಯಕ್ತಪಡಿಸುವ ನಿಮಿತ್ತ. ಆದರೆ ಶಕ್ತಿ ಇರುವುದು ವಿಚಾರದಲ್ಲೇ. ನಮಗೆ ಇದರ ಅರಿವೂ ಆಗುತ್ತದೆ. ವ್ಯಕ್ತಿಯ ಅಸ್ತಿತ್ವ ಕೆಲವು ಅಂಶ ವಿಚಾರಕ್ಕೆ ಸಹಾಯಕ ಆಗುವಂತೆಯೇ ಅದರಿಂದ ವಿಚಾರಕ್ಕೆ ಹಾನಿಯೂ ಆಗಬಲ್ಲದು. ವ್ಯಕ್ತಿ ಹೋಗಿಬಿಟ್ಟ ಬಳಿಕ ಶುದ್ಧ ವಿಚಾರವಷ್ಟೇ ಉಳಿಯುತ್ತದೆ.

ಅದಕ್ಕಾಗಿಯೇ ತುಲಸೀದಾಸಜೀ ಎಂದರು: 'ರಾಮನಿಗಿಂತ ನಾಮ ದೊಡ್ಡದು.' ರಾಮಚಂದ್ರನಂಥ ಒಬ್ಬ ವ್ಯಕ್ತಿ ಎಷ್ಟು ಮಾಡಬಲ್ಲನೋ ಅದಕ್ಕಿಂತ ಎಷ್ಟೋ ಹೆಚ್ಚು ಮಾಡುವ ಶಕ್ತಿ ಆತನ ಹೆಸರಿನಲ್ಲಿದೆ. ರಾಮ ಉದ್ಧರಿಸಿದ ಪತಿತರ ಸಂಖ್ಯೆಯನ್ನು ಎಣಿಸಬಹುದು. ಆದರೆ ಆತನ ಹೆಸರು ಎಷ್ಟು ಮಂದಿಯನ್ನು ಉದ್ಧರಿಸಿದೆ, ಮುಂದೆಯೂ ಉದ್ಧರಿಸುವುದೋ ಆ ಸಂಖ್ಯೆಯನ್ನು ಎಂದೂ ಎಣಿಸಲು ಸಾಧ್ಯವಿಲ್ಲ. ಶ್ರೀರಾಮ ಅಯೋಧ್ಯಾ ನಗರವನ್ನು ಸ್ವರ್ಗವನ್ನಾಗಿಸಿದ, ಆದರೆ ರಾಮನಾಮ ಪ್ರತಿಯೊಂದು ಹಳ್ಳಿಯನ್ನೂ ಅಯೋಧ್ಯೆಯನ್ನಾಗಿಸಿತು. ಹಳ್ಳಿಹಳ್ಳಿಯಲ್ಲೂ ರಾಮಕಥೆ ನಡೆಯುತ್ತದೆ: **'ಗಾಂವ್ ಗಾಂವ್ ಅಸ ಹೋಯಿ ಅನಂದಾ'** ರಾಮರಾಜ್ಯದ ಚಿತ್ರವನ್ನು ತುಲಸೀದಾಸ್‌ಜೀ ರಚಿಸಿದ್ದಾರೆ:

ಬಯರು ನ ಕರ್ ಕಾಹೂ ಸನ ಕೋಯಿ ।
ರಾಮಪ್ರತಾಪ ವಿಷಮತಾ ಖೋಯೀ ॥

ದೇಹಧಾರೀ ರಾಮ ಎಷ್ಟು ದೂರ ಹಬ್ಬಬಲ್ಲವನಾಗಿದ್ದ, ಅವನ ಹೆಸರಾದರೋ ಸರ್ವತ್ರ ವ್ಯಾಪಿಸಿತು.

ಶಬ್ದ ಅವಿನಾಶಿ

ಸಂತರು ತಮ್ಮ ಜೀವನಕಾಲದಲ್ಲಿ ಎಷ್ಟು ಸಮರ್ಥರಾಗಿರುವರೋ ಅದಕ್ಕಿಂತ ತಮ್ಮ ಜೀವನ ಪೂರ್ಣಗೊಂಡಮೇಲೆ ಎಷ್ಟೋ ಪಟ್ಟು ಹೆಚ್ಚು ಸಮರ್ಥರಾಗಿರುತ್ತಾರೆ. ಅವರ ಸ್ಥೂಲರೂಪ ನಷ್ಟವಾಗುವುದರೊಟ್ಟಿಗೇ ಅವರ ಕೊರತೆಗಳೆಲ್ಲ ನಷ್ಟವಾಗಿ ಹೋಗುತ್ತವೆ. ಸಂಪೂರ್ಣ ಶುದ್ಧ, ದಿವ್ಯ ಅಂಶ ಮಾತ್ರ ಉಳಿಯುತ್ತದೆ. ಒಬ್ಬ ವ್ಯಕ್ತಿ ವ್ಯಕ್ತಪಡಿಸಿದ ವಿಚಾರ ಆತ ನಾಶವಾಗಿಹೋದಮೇಲೆ ಅಳಿಸಿಹೋಗುವುದಿಲ್ಲ. ಬದಲಾಗಿ ಆ ವಿಚಾರಗಳ ಪ್ರಕಾಶ ಹೆಚ್ಚು ಉಜ್ವಲ ಆಗಿ ಏಳುತ್ತದೆ.

ದೇಹ ಬಿಟ್ಟಮೇಲೆ ಮಹಾಪುರುಷರು ತಮ್ಮ ಜೀವಿತ ಕಾಲಕ್ಕಿಂತ ಹೆಚ್ಚು ಕೆಲಸ ಮಾಡುತ್ತಾರೆ. ಮಹಾಪುರುಷರು ದೇಹಮುಕ್ತರಾಗುತ್ತಾರೆ. ಅವರ ವಿಚಾರ ವಾತಾವರಣದಲ್ಲಿ ಹರಡಿಹೋಗಿ ಎಲ್ಲರಿಗೂ ಪ್ರೇರಣೆ ನೀಡುತ್ತಿರುತ್ತದೆ. ಈ ಮಹಾತ್ಮರ ವಾಣಿಯನ್ನು ಕೇಳಲು ಯಾರ ಯಾರ ಹೃದಯದಲ್ಲಿ ರೇಡಿಯೋ ಸೆಟ್ ಇರುವುದೋ ಅವರು ವಾತಾವರಣದಲ್ಲಿ ಅವರ ವಾಣಿಯನ್ನು ಕೇಳಬಲ್ಲರು. ಹವಾದಲ್ಲಿ ಶಬ್ದ ಇರುತ್ತದೆ. **ಶಬ್ದೋ ನಿತ್ಯಃ**—ಶಾಸ್ತ್ರಕಾರರು ಹೇಳಿದ್ದಾರೆ—ಶಬ್ದ ಅವಿನಾಶಿ, ನಿತ್ಯ. ಅದು ವಾತಾವರಣದಲ್ಲಿ ಪ್ರಸಾರಗೊಳ್ಳುತ್ತದೆ. ನಮ್ಮ ಬಳಿ ರೇಡಿಯೋ ಇದ್ದರೆ ಸುಲಭವಾಗಿ ಕೇಳಬಹುದು. ಯಾರ ಅಂತರಂಗದಲ್ಲಿ ಆ ವಿಚಾರ ತರಂಗಗಳನ್ನು ಹಿಡಿಯುವ ಸಾಧನವಿದೆಯೋ ಅವರು ಹಿಡಿದಿಟ್ಟುಕೊಳ್ಳುತ್ತಾರೆ. ಮನುಷ್ಯನಿಗೆ ಇದೇ ರೀತಿ ಪ್ರೇರಣೆ ಒದಗುತ್ತಿರುತ್ತದೆ. ನಮ್ಮ ನಿಮ್ಮ ಎಲ್ಲರ ಶರೀರಗಳಲ್ಲಿಯೂ ಪ್ರವೇಶಿಸುವ ಅವಕಾಶ ಸಿಗಲೆಂದೇ ಬಾಪೂ ಸತ್ತುಹೋದರು. ಅವರ ಶಬ್ದ, ವಿಚಾರ ನಮಗೆಲ್ಲರಿಗೂ ಸತತವಾಗಿ ಪ್ರೇರಣೆ ನೀಡುತ್ತಲಿರುತ್ತದೆ. ●

೬

ನಿಜವಾದ ಸ್ಮಾರಕ

ಬಾಪೂ ತೀರಿಹೋದರು, ಕೂಡಲೇ ಅವರ ಸ್ಮಾರಕದ ಮಾತು ಆರಂಭ ವಾಯಿತು. ಬಗೆಬಗೆಯ ಸ್ಮಾರಕ ರಚಿಸುವ ಮಾತಾಡತೊಡಗಿದರು ಜನ. ನನ್ನನ್ನೊಬ್ಬ ಸೋದರ ಕೇಳಿದ: "ಗಾಂಧೀಜಿಯ ಸಾರ್ಮಕವಾಗಿ ಅಶೋಕ ಸ್ತಂಭದಂಥ ಸ್ತಂಭಗಳನ್ನು ನಿರ್ಮಿಸಿದರೆ ಹೇಗಿದ್ದೀತು?" ನಾನೆಂದೆ: "ಸಾಮಾನ್ಯ ಜನತೆಯ ಬಳಿ ಹೋಗಿ ಕೇಳಿ ಅವರಿಗೆ ಅಶೋಕಸ್ತಂಭದ ತಿಳಿವಳಿಕೆ ಎಷ್ಟಿದೆ ಎಂದು. ಸಾಮಾನ್ಯ ಮನುಷ್ಯನಿಗೆ ಅಶೋಕನ ಹೆಸರೂ ತಿಳಿದಿರಲಿಕ್ಕಿಲ್ಲ. ಇತಿಹಾಸದಲ್ಲಿ ಎಷ್ಟೋ ರಾಜರು ಆಗಿಹೋದರು. ಅವರಲ್ಲಿ ಒಬ್ಬ ಅಶೋಕನು. ಆತ ಒಬ್ಬ ಮಹಾನ್, ದಯಾಳು ರಾಜನಾಗಿದ್ದಿರ ಬಹುದು. ಆದರೆ ಜನತೆ ಅದನ್ನೇನು ಬಲ್ಲದು? ಕಬೀರ್, ನಾನಕ್, ತುಲಸೀದಾಸ, ಮೀರಾ ಗೊತ್ತು ಜನತೆಗೆ. ಜನತೆಯ ಹೃದಯದಲ್ಲಿ ಗಾಂಧೀಜಿಗೂ ಅಂಥದೇ ಸ್ಥಾನವಿದೆ. ಅವರಿಗೆ ಸ್ಮಾರಕವಾಗಿ ಸ್ತಂಭಗಳ ಅಗತ್ಯವೇನಿದೆ? ಅವರ ವಿಚಾರವನ್ನು ತೆಗೆದುಕೊಂಡು ನಾವು ಜನತೆಯ ಬಳಿ ಹೋಗಬೇಕು."

ಗಾಂಧೀಜಿಯ ಜೀವನ ಬಹಳ ವ್ಯಾಪಕವಾಗಿತ್ತು. ಬಾಳಿನ ಅನೇಕ ಶಾಖೆಗಳೊಡನೆ ಅವರ ನಂಟು ಇತ್ತು. ಆದುದರಿಂದ ತರಹೆ ತರಹೆಯ ಸ್ಮಾರಕ ನಿರ್ಮಿಸುವ, ರಾಷ್ಟ್ರದ ಪರವಾಗಿ ಒಂದು ವಿಶಿಷ್ಟ ಸ್ಮಾರಕ ರಚಿಸುವ ಇಚ್ಛೆ ಉಂಟಾದೀತು. ಆದರೆ ಈ ಎಲ್ಲ ಸ್ಥೂಲ ಸ್ಮಾರಕಗಳಿಂದ ನಿಜವಾಗಿ ನೆನಪುಳಿವ ಕೆಲಸ ಆದಂತಾಗುವುದಿಲ್ಲ. ತದ್ವಿರುದ್ಧವಾಗಿ ಈ ಸ್ಮಾರಕಗಳ ಬೆಸೆಯಿಂದಾಗಿ ಮುಖ್ಯ ಸಂಗತಿ ಕಣ್ಣಿಂದ ಮರೆಯಾಗಿಹೋಗುವ ಭಯವಿದೆ.

ಭಾವನೆಗಳ ಉಬ್ಬರ

ಎಷ್ಟೋ ವೇಳೆ ಕೆಲವು ವಿಶಿಷ್ಟ ಸಂದರ್ಭದಲ್ಲಿ ಭಾವನೆಗಳ ಉಬ್ಬರ ವೇಳುತ್ತದೆ. ಆ ಭಾವನೆಗಳನ್ನು ಶಾಂತಗೊಳಿಸಲು ಮನುಷ್ಯ ಕೆಲವು ಕೆಲಸ

ಮಾಡಿಹಾಕುತ್ತಾನೆ. ಆ ಉಬ್ಬರ ಮೆಲ್ಲಮೆಲ್ಲನೆ ಇಳಿದುಹೋಗುತ್ತದೆ. ಆದರೆ ಗಂಭೀರ ಮನುಷ್ಯ ದುಃಖದ ಆವೇಗವನ್ನು ಒಳಗೇ ಒತ್ತಿಟ್ಟು ಅದರಿಂದ ಬಲ ಪಡೆಯುತ್ತಾನೆ. ಎಲ್ಲಿ ಈ ಗಂಭೀರತೆ ಇರುವುದಿಲ್ಲವೋ ಅಲ್ಲಿ ಈ ಆವೇಗ ಅತ್ತು ಕರೆಯುವ ಅಥವಾ ಕಣ್ಣೀರಿನ ರೂಪದಿಂದ ಹೊರಗೆ ಹರಿಯುತ್ತದೆ. ಈ ರೀತಿ ಚಿತ್ತ ಶಾಂತವಾಗಿಹೋಗುತ್ತದೆ.

ಅದೇ ರೀತಿ ಪೂಜ್ಯಬುದ್ಧಿಯ ಕಾರಣದಿಂದಲೂ ಕೆಲ ಸಮಯದ ಮಟ್ಟಿಗೆ ಮನುಷ್ಯ ಭಾವನೆ ತುಂಬಿದವನಾಗುತ್ತಾನೆ. ಅದನ್ನು ಹೊರಗೆ ಪ್ರಕಟಪಡಿಸಿ ಶಾಂತಿ ಪಡೆಯುತ್ತಾನೆ. ಅಂಥ ಪ್ರಸಂಗಗಳಲ್ಲಿ ಇಡೀ ರಾತ್ರಿ ಭಜನೆ ನಡೆಸುವ ಅನೇಕ ಮನುಷ್ಯರನ್ನು ನಾ ನೋಡಿದ್ದೇನೆ. ಭಜನೆಯದೂ ಒಂದು ಉಬ್ಬರ. ಆದರೆ ಜೀವನದಮೇಲೆ ಅದರ ವಿಶೇಷ ಪ್ರಭಾವ ಬೀಳುವುದು ತೋರಿಬರುವುದಿಲ್ಲ. ಅದರಲ್ಲಿ ಸದ್ಭಾವದ ಅಂಶವೂ ಇದ್ದೀತು, ಆದರೆ ಅದು ಕೇವಲ ಉಬ್ಬರ ತುಂಬಿದ್ದು, ಭಜನೆ ಅದನ್ನು ಹೊರತರುವ ಒಂದು ಸಾಧನ. ಈ ಮಾತು ಸ್ಮಾರಕಕ್ಕೂ ಅನ್ವಯಿಸುತ್ತದೆ.

ಆ ದಿನಗಳಲ್ಲಿ ನಾವು ಪ್ರಾಯಶ್ಚಿತ್ತ ಕೈಗೊಳ್ಳಬೇಕೆಂದು ಅನೇಕರಿಗೆ ಅನಿಸಿತ್ತು. ನಾನೆಂದೆ: “ಈ ಪ್ರಾಯಶ್ಚಿತ್ತ ಎಂಥದು? ನಮ್ಮ ಮನಸ್ಸಿನ ಯಾವುದೋ ಮೂಲೆಯಲ್ಲಾದರೂ ಹಿಂಸೆಯಿಂದ ಲಾಭವಾದೀತು ಎಂಬ ಶಂಕೆ ಉಳಿದಿದ್ದರೆ, ಆ ಕಸರನ್ನು ಮನಸ್ಸಿನಿಂದ ಕಿತ್ತೆಸೆಯುವುದೇ ಉತ್ತಮ ಪ್ರಾಯಶ್ಚಿತ್ತ. ಇದು ಆಡಿ ತೋರಿಸುವ ಮಾತಲ್ಲ. ಆಡುವುದರಿಂದ ಮಾತ್ರವೇ ಆಗುವಂಥದೂ ಅಲ್ಲ. ಸಂಕ್ಷೇಪದಲ್ಲಿ, ನಾವು ಅಹಿಂಸಕ ಜೀವನ ನಡೆಸಿ ತೋರಿಸಲಾರೆವಾದರೆ ನಾವು ರಚಿಸುವ ಯಾವುದೇ ಸ್ಥೂಲಸ್ಮಾರಕ ನೋಡಿ ಜನ ನಕ್ಕಾರು. ಅಂತಲೇ ನಾವು ಆತ್ಮಮಂಥನ ಮಾಡಿಕೊಳ್ಳೋಣ. ನಮ್ಮ ಜೀವನದಲ್ಲಿ ಪರಿವರ್ತನೆ ಆಗಬೇಕಾದುದೇ ಮೂಲ ಸಂಗತಿ.”

ಹಳ್ಳಿಹಳ್ಳಿಯಲ್ಲೂ ಗಾಂಧೀ-ಘರ್ ನಿರ್ಮಿಸಿ

ಗಾಂಧೀ ನಿಧಿ ಕೆಲ ಹಳ್ಳಿಗಳಲ್ಲಿ ‘ಗಾಂಧೀ-ಘರ್’ ನಿರ್ಮಿಸಿದೆ. ಹಳ್ಳಿ ಹಳ್ಳಿಯಲ್ಲೂ ಗಾಂಧೀ-ಘರ್ ಆಗಬೇಕೆನ್ನುತ್ತೇನೆ ನಾನು. ಈ ಗಾಂಧೀ-ಘರ್ ಕಲ್ಲು ಇಟ್ಟಿಗೆಯದಲ್ಲ, ಸತ್ಯ-ಪ್ರೇಮ-ಕರುಣೆಗಳದಾಗಬೇಕು. ಕಲ್ಲು ಇಟ್ಟಿಗೆ

ಸುಣ್ಣಗಳಿಂದ ಮಾಮೂಲಿ ಮನೆ ಆದೀತು, 'ಗಾಂಧೀ-ಘರ್' ಆಗದು. ಜನರಾದರೋ ಗಾರೆ ಇಟ್ಟಿಗೆಗಳಿಂದ ಮನೆ ಕಟ್ಟಿ ಅದರ ಮೇಲೆ 'ಗಾಂಧೀ-ಘರ್' ಎಂದು ಬರೆದುಬಿಡುತ್ತಾರೆ. ನಾಮಮಹಿಮೆ ಅಪಾರ, ಸಂದೇಹವಿಲ್ಲ. ಅದರಿಂದ ಪ್ರೇರಣೆ ಸಿಗುತ್ತದೆ, ಅದೂ ಸರಿಯೇ. ಆದರೆ ನಿಜವಾದ 'ಗಾಂಧೀ-ಘರ್' ಈ ರೀತಿ ಆಗದು. ಸತ್ಯ-ಪ್ರೇಮ-ಕರುಣೆಗಳಿಂದಲೇ ಅದರ ನಿರ್ಮಾಣ, ಈಗ ಅದರಿಂದಲೇ ಕೆಲಸ.

ಇಲ್ಲೇ ನೋಡಿ, ಇಂದಿನ ಹೊಸ ಪೀಳಿಗೆಗೆ ಗಾಂಧೀಜಿಯ ಬಗೆಗೆ ಪ್ರತ್ಯಕ್ಷ ತಿಳಿವಳಿಕೆ ಇಲ್ಲ. ಗಾಂಧೀಜಿಯನ್ನು ನೋಡಿದವರು, ಅವರೊಡನೆ ಕೆಲಸ ಮಾಡಿದವರೆಲ್ಲರೂ 15-20 ವರ್ಷಗಳಲ್ಲಿ ಜಗತ್ತನ್ನು ಬಿಟ್ಟುಹೋಗುತ್ತಾರೆ. ಅಂದಮೇಲೆ ಈ ಹೊಸ ಪೀಳಿಗೆಗೆ ಗಾಂಧೀಜಿಯ ದರ್ಶನ ಅವರ ವಿಚಾರಗಳ ಮೂಲಕವೇ ಸಾಧ್ಯವಲ್ಲವೇ? ಇಂದಿನ ಯುಗಕ್ಕೆ ಅನುಗುಣವಾಗಿ ಈ ವಿಚಾರಗಳನ್ನು ಕೃತಿಗಿಳಿಸಿ ತೋರಿಸಬೇಕಾದೀತು.

ಹೊಸ ಯುಗಕ್ಕೆ ತಕ್ಕಂತೆ ಹೊಸ ಮಿಶನ್

ಬಾಪೂ ಕ್ರಾಂತದರ್ಶಿ ಆಗಿದ್ದರು. ಬಹು ದೂರ ನೋಡಬಲ್ಲವರಾಗಿದ್ದರು. ಬಹು ಮುಂದಿನ ವಿಚಾರ ಇಟ್ಟುಕೊಂಡಿದ್ದರು. ಹೊಸ ಯುಗಕ್ಕೆ ತಕ್ಕಂತೆ ಹೊಸ ಮಿಶನ್ (ದೀಕ್ಷೆ) ಮೊದಲೇ ಯೋಚಿಸಿಟ್ಟಿದ್ದರು. ಒಮ್ಮೆ ಸ್ವರಾಜ್ಯ ಸಿಕ್ಕಿಬಿಟ್ಟಿತೆಂದರೆ ಸ್ವರಾಜ್ಯ ಶಬ್ದದಿಂದ ಅಷ್ಟು ಪ್ರೇರಣೆ ಸಿಗದು, ಉತ್ಸಾಹಿತಗೊಳಿಸದು ಎಂದು ಅವರು ಕಂಡುಕೊಂಡಿದ್ದರು. ಸ್ವರಾಜ್ಯದ ಧ್ಯೇಯ ಕಣ್ಣುಮುಂದೆ ಇತ್ತು, ಅದರಿಂದಾಗಿ ಸಂಕಲ್ಪಶಕ್ತಿ ಹುಟ್ಟಿತು. ಆ ಧ್ಯೇಯಸಾಧನೆಗಾಗಿ ಪರಾಕ್ರಮದ ಪ್ರಯತ್ನಕ್ಕೆ ಟೊಂಕ ಕಟ್ಟಿದರು. ಹೀಗೆಯೇ ಸ್ವರಾಜ್ಯ ಸಿಕ್ಕಮೇಲೆ ಜನರೆದುರು ಯಾವುದಾದರೂ ವ್ಯಾಪಕ ಸಂಕಲ್ಪವಿದ್ದರೆ ಮಾತ್ರವೇ ಅವರ ಶಕ್ತಿ ಹೆಚ್ಚೀತು. ಅದಿಲ್ಲದೆಹೋದರೆ ಜನ ಸೋಮಾರಿಗಳಾಗಿಹೋದಾರು, ಅವರ ಶಕ್ತಿ ಕ್ಷೀಣಿಸಿಹೋದೀತು.

ಸ್ವರಾಜ್ಯದ ತರುವಾಯ ಜನರೆದುರು ಯಾವುದಾದರೂ ಹೊಸ ಶಬ್ದ, ಹೊಸ ಧ್ಯೇಯ, ಹೊಸ ವಿಚಾರ ಇರಬೇಕಾದೀತೆಂದು ಗಾಂಧೀಜಿಗೆ ಗೊತ್ತಿತ್ತು. ಹಳೆಯ ಗುರಿ ಈಡೇರುವ ಮುನ್ನವೇ ಹೊಸ ಧ್ಯೇಯವೊಂದನ್ನು

ಜನರೆದುರು ಇಟ್ಟರು. ಹಳೆಯ ಶಬ್ದ ಸಾರ್ಥಕವಾಗುವ ಮುಂಚೆಯೇ ಹೊಸ ಶಬ್ದ ಕೊಟ್ಟುಬಿಡಬೇಕೆಂದು ತಿಳಿದು 'ಸರ್ವೋದಯ' ಶಬ್ದವನ್ನೂ ಕೊಟ್ಟರು. ಸ್ವರಾಜ್ಯದ ಸಂಕಲ್ಪಸಿದ್ಧಿಯ ಬಳಿಕ ನಮ್ಮ ಹೊಸ ಸಂಕಲ್ಪ 'ಸರ್ವೋದಯ' ಎಂದು ಹೇಳಿದರು.

ಸರ್ವೋದಯ ಎಂದರೆ ಎಲ್ಲರ ಏಳಿಗೆ—ನನ್ನೊಬ್ಬನದಲ್ಲ, ಎಲ್ಲರದೂ. ಎಲ್ಲರ ಏಳಿಗೆ ಆಗದ ಹೊರತು ಶೋಷಣೆ ಸ್ಥಿರ, ಶಾಸನದ ಹಿಡಿತ ಭದ್ರ. ಆದುದರಿಂದ ನಿಜವಾದ ಸ್ವರಾಜ್ಯ ತರುವುದಕ್ಕಾಗಿ ಸರ್ವೋದಯದ ಆವಶ್ಯಕತೆ ಇದೆ. ಇಂದಿನ ಯುಗಕ್ಕೆ ತಕ್ಕಂತೆ ಈ ಸರ್ವೋದಯ-ಮಿಶನ್ ಅನ್ನು ಗಾಂಧೀಜೀ ನಮ್ಮ ಮುಂದೆ ಇಟ್ಟಿದ್ದಾರೆ. ಈ ದೀಕ್ಷೆಯನ್ನು ಪೂರ್ಣಗೊಳಿಸಿದರೆ ಮಾತ್ರವೇ ನಾವು ಹೊಸ ಪೀಳಿಗೆಗೆ ಗಾಂಧೀಜಿಯ ನಿಜವಾದ ದರ್ಶನ ಮಾಡಿಸುವುದು ಸಾಧ್ಯ.

ಸರ್ವೋದಯದ ಈ ಸಂಕಲ್ಪ ದೇಶದಲ್ಲಿ ಮೆಲ್ಲಮೆಲ್ಲನೆ ಜಾಗೃತ ಆಗುತ್ತಿದೆ. ಈ ಬಗೆಯ ಸಂಕಲ್ಪ ಇದ್ದಕ್ಕಿದ್ದಂತೆ ಏಳುವುದಿಲ್ಲ. ಅದರಲ್ಲಿಯೂ ತ್ಯಾಗ ಮಾಡುವ ಸಂಕಲ್ಪವನ್ನು ಜಾಗೃತಗೊಳಿಸಬೇಕಾದರೆ ಸ್ವಲ್ಪ ಸಮಯ ಹಿಡಿಸುತ್ತದೆ. ಚಿರಕಾಲೀನ ಮಹತ್ವದ ವಿಚಾರ ಮೆಲ್ಲಮೆಲ್ಲನೆ ಅಂಕುರಿಸುತ್ತದೆ. ಚಿರಕಾಲೀನವಲ್ಲದ್ದು ಹುಲ್ಲಿನಂತೆ ಹುಟ್ಟುತ್ತದೆ. ಅಷ್ಟೇ ಬೇಗ ಬೇಗ ಕ್ಷಯಿಸುತ್ತದೆ. ಬಾಪೂ ಬಿತ್ತಿದ ವಿಚಾರಬೀಜ ಇಂದು ಅಂಕುರಿಸುತ್ತಿದೆ. ಸತತವಾಗಿ ಕೆಲಸ ಮಾಡಿ ಅದನ್ನು ಪೋಷಿಸಬೇಕಾಗಿದೆ. ಈ ಸರ್ವೋದಯದ ಸಂಕಲ್ಪ ದೇಶವ್ಯಾಪಿ ಆದಾಗ ಜನರಿಗೆ ಅದರ ಚಮತ್ಕಾರ ಕಂಡೀತು. ಬಾಪೂಗೆ ನಿಜವಾದ ಸ್ಮಾರಕ ನಿರ್ಮಿಸಿದೆವು ಎಂದು ಆಗ ಮಾತ್ರ ಹೇಳಿಕೊಳ್ಳಬಹುದು. ●

೨೫

ಇಂದಿನ ಯುಗದ ಬ್ರಹ್ಮ

ಸರ್ವೋದಯ ವಿಚಾರ ಎಷ್ಟು ವ್ಯಾಪಕವೆಂದರೆ, ನಾವು ಅದನ್ನು ಅನುಷ್ಠಾನಕ್ಕೆ ತರುವ ಪ್ರಯತ್ನವನ್ನಷ್ಟೆ ಮಾಡಬಲ್ಲೆವು. ಪೂರ್ಣ ಅನುಷ್ಠಾನ ಸಾಧ್ಯವೇ ಇಲ್ಲ. ಸರ್ವೋದಯದ ಪೂರ್ಣ ಅನುಷ್ಠಾನಕ್ಕೆ ಪರಮೇಶ್ವರನ ದರ್ಶನದ ಅಗತ್ಯವಿದೆ.

ತನ್ನ ಪೂರಾ ಜೀವನ, ಸಾಧನೆ, ಸತ್ಯಾಗ್ರಹ, ಇತ್ಯಾದಿಗಳೆಲ್ಲ ಪರಮೇಶ್ವರನ ಶೋಧನೆಗಾಗಿ ಎಂದು ಬಾಪೂ ಸ್ವತಃ ಹೇಳುತ್ತಿದ್ದರು. ಸಾಧಾರಣವಾಗಿ ಪರಮೇಶ್ವರನನ್ನು ಹುಡುಕುವವರು ಏಕಾಂತಕ್ಕೆ ಹೋಗಿ ಬಿಡುತ್ತಾರೆ. ಬಾಪೂ ಏಕಾಂತಕ್ಕೆ ಹೋಗಲಿಲ್ಲ. ಜನರ ನಡುವೆ ಇದ್ದೇ ಅವರು ಕೆಲಸ ಮಾಡಿದರು. ಹೌದು, ಧ್ಯಾನ ಪ್ರಾರ್ಥನೆಗಳಿಗಾಗಿ 15-20 ನಿಮಿಷ ಇರಿಸುತ್ತಿದ್ದರು. ಆದರೆ ಅವರೆನ್ನುತ್ತಿದ್ದರು: "ನಮ್ಮ ಕೆಲಸದಲ್ಲಿ ಪ್ರತಿ ಕ್ಷಣವೂ ಧ್ಯಾನ ಮಾಡಬೇಕು. ಜನತೆಯ ಮಧ್ಯೆ ಕೆಲಸ ಮಾಡುತ್ತ ಮಾಡುತ್ತಲೇ ಪ್ರತಿ ಕ್ಷಣವೂ ಏಕಾಂತ ಸಿಗಬೇಕು."

ಏಕಾಂತಕ್ಕೆ ಹೋದರೆ ನಮ್ಮ ಮನಸ್ಸು ಅಲೆದಾಡುತ್ತದೆ. ಇದೆಂಥ ಏಕಾಂತ? ಮನಸ್ಸಿನಿಂದ ಬೇರ್ಪಡುವುದೇ ನಿಜವಾದ ಏಕಾಂತ. ಆದುದರಿಂದ ಮನಸ್ಸಿನಿಂದ ಬೇರ್ಪಟ್ಟು ಬಾಪೂ ಜನಸೇವೆಯಲ್ಲಿ ಸದಾ ಏಕಾಂತ ಅನುಭವಿಸುತ್ತಿದ್ದರು. ಅವರೆನ್ನುತ್ತಿದ್ದರು: "ಈಶ್ವರನ ಶೋಧನೆಗಾಗಿ, ದರ್ಶನಕ್ಕಾಗಿ ನನ್ನ ಜೀವನ"—ಎಂದು.

'ಸಂಸಾರದಲ್ಲಿದ್ದರೂ ಮನ ನನ್ನ ಬಳಿ'

ಈಶ್ವರ ದರ್ಶನ ಎಂದರೇನು? ಈಶ್ವರನ ಶೋಧನೆ ಎಂತು? ಈಶ್ವರ ಗುಣಮಯ. ಸತ್ಯ, ಪ್ರೇಮ, ಕರುಣಾ, ಆದಿ ಮಂಗಲಗುಣಗಳ ಪರಿಪೂರ್ಣತೆಯೇ ಈಶ್ವರ. ಈಶ್ವರನ ಒಂದೊಂದು ಅಂಶ ಮತ್ತು

ಒಂದೊಂದು ರೂಪ ಮನುಷ್ಯನಲ್ಲಿ ಪ್ರಕಟವಾಗಿದೆ. ಹಾಗೆಂದೇ ಸರ್ವತ್ರ ಗುಣದರ್ಶನ ಮಾಡಬೇಕು. ಈ ರೀತಿ ಗುಣಗ್ರಹಣ ಮಾಡುತ್ತ ಮಾಡುತ್ತ ಹೃದಯಗುಣ ಭಂಡಾರವೇ ಆಗಬೇಕು. ಆಗ ಈಶ್ವರನ ಪರಿಪೂರ್ಣ ದರ್ಶನವಾದೀತು.

ನಮ್ಮ ಈ ದಾನ, ಸೇವೆ, ತ್ಯಾಗ, ಸತ್ಯಾಗ್ರಹವೇ ಮುಂತಾದ ಎಲ್ಲ ಕಾರ್ಯಕ್ರಮಗಳೂ ಭಗವಂತನ ಅವ್ಯಕ್ತಶಕ್ತಿಯ ದರ್ಶನಕ್ಕಾಗಿ. ಸತ್ಯಾಗ್ರಹ ದಲ್ಲಿ ನಾವೇನು ಮಾಡುತ್ತೇವೆ? ಸುಖ ದುಃಖ ಸಹಿಸುತ್ತ ಎದುರಾಳಿಯಲ್ಲಿ ರುವ ಒಳಿತನ್ನು ಹೊರತರುತ್ತೇವೆ. ಎದುರಿನವನಲ್ಲಿ ಸದಂಶ ಇದೆ ಎಂಬ ನಂಬಿಕೆ ಸತ್ಯಾಗ್ರಹದಲ್ಲಿರುತ್ತದೆ. ಇದೇ ಗುಣದರ್ಶನ. ಈ ಗುಣದರ್ಶನದ ಆಧಾರದ ಮೇಲೆಯೇ ಸತ್ಯಾಗ್ರಹ. ಈ ಗುಣದರ್ಶನದ ಶ್ರದ್ಧೆಯಿಂದಲೇ ದಾನದ ಕಾರ್ಯಕ್ರಮ ಸಾಗಿದೆ. ಸರ್ವೋದಯದ ಕಾರ್ಯಕ್ರಮವೆಲ್ಲವೂ ಗುಣದರ್ಶನದ ಆಧಾರದ ಮೇಲೆಯೇ ನಿಂತಿದೆ. ಈ ಗುಣದರ್ಶನವಾದರೆ ಈಶ್ವರನ ದರ್ಶನವಾದಂತೆ. ಪೂರ್ಣ ಅಂಶದ ದರ್ಶನವಂತೂ ಒಂದೇ ಬಾರಿಗೆ ಆಗದು. ಇಂದು ಒಂದು ಅಂಶ ಕಂಡರೆ ನಾಳೆ ಮತ್ತೊಂದು. ಈ ದೇಹ ಇರುವವರೆಗೂ ಪ್ರಯತ್ನ ನಡೆದೇ ಇದ್ದೀತು. ಅಂತಲೇ ಬಾಪೂ ಹೇಳು ತ್ತಿದ್ದರು: “ನನ್ನ ಶೋಧ ನಡೆದಿದೆ. ಈ ಶೋಧನೆಗಾಗಿಯೇ ಜೀವನ.” ಹೀಗೆ ಬಾಪೂವಿನ ಎಲ್ಲ ಕೆಲಸಗಳ ಹಿಂದೆ ಆಧ್ಯಾತ್ಮಿಕ ಭೂಮಿಕೆ ಇತ್ತು.

ಅವರ ಸತ್ತೆ ಇಡೀ ಹಿಂದೂಸ್ಥಾನದಾದ್ಯಂತ ನಡೆಯುತ್ತಿತ್ತು. ಆದರೆ ಈ ಸತ್ತೆ ನೈತಿಕ, ಮತ್ತಾವುದೂ ಅಲ್ಲ. ಪ್ರತಿಯೊಂದು ದೇಶಕ್ಕೆ ತನ್ನದೇ ಆದೊಂದು ವೈಶಿಷ್ಟ್ಯ ಉಂಟು. ಮಹಾಪುರುಷರ ಸತ್ತೆಯನ್ನು ಮನ್ನಿಸು ವುದೇ ನಮ್ಮ ದೇಶದ ವೈಶಿಷ್ಟ್ಯ. ದೊಡ್ಡ ದೊಡ್ಡ ರಾಜಮಹಾರಾಜರು, ಸೇನಾಪತಿಗಳು ಹಾಗೂ ಸೇಠ ಸಾಹುಕಾರರನ್ನು ಕಂಡರೆ ಜನ ಒಮ್ಮೊಮ್ಮೆ ಹೆದರುತ್ತಾರೆ. ಇಷ್ಟಾದರೂ ಅವರ ಪ್ರಕಾರವಾಗಿ ಈ ದೇಶ ಎಂದೂ ನಡೆಯಲಿಲ್ಲ. ಅವರ ಹೆಸರನ್ನು ಜನ ನೆನಪಿಡಲಿಲ್ಲ. ಜನತೆಯ ಹೃದಯದ ಮೇಲೆ ಅವರ ಸತ್ತೆ ಸಾಗಲಿಲ್ಲ. ಭಾರತೀಯ ಲೋಕಹೃದಯದ ಮೇಲೆ ಯಾರದಾದರೂ ಪ್ರಭಾವ ಬೀಳುವುದಿದ್ದರೆ ಅದು ಮಹಾಪುರುಷರದು ಮಾತ್ರ. ಇಲ್ಲಿನ ಜನ ಶಂಕರ, ಬುದ್ಧ, ಮಹಾವೀರ, ನಾನಕ್, ಕಬೀರರನ್ನು

ಸ್ಮರಿಸುತ್ತಾರೆ; ಅಕ್ಬರ್ ಅಶೋಕರನ್ನು ಮರೆತುಬಿಡುತ್ತಾರೆ. ಗಾಂಧೀಜೀ ಬಂದರು, ಜನ ಅವರ ಮಾತು ಕೇಳಿದರು. ಕಾರಣ, ಗಾಂಧೀಜೀಯ ಚಾರಿತ್ರ್ಯ ಮಹಾಪುರುಷರ ಚಾರಿತ್ರ್ಯದಂತೆ ಇದ್ದುದನ್ನು ಅವರು ಕಂಡರು. ಅವರ ಕೆಲಸದ ತಳಹದಿಯೇ ಅಧ್ಯಾತ್ಮ.

ಸ್ಥೂಲ ಜಂಜಡದಲ್ಲಿ ಬಿದ್ದು ನಿಜಸ್ವರೂಪ ಮರೆಯುತ್ತಿರಲಿಲ್ಲ

ಗಾಂಧೀಜಿಯನ್ನು ಅರಿಯಲು ಈ ಮಾತನ್ನು ಲಕ್ಷ್ಯದಲ್ಲಿಟ್ಟುಕೊಳ್ಳುವುದು ಬಹಳ ಅಗತ್ಯ. ಇಲ್ಲವಾದರೆ ಸ್ಥೂಲ ಪ್ರವೃತ್ತಿಯ ಜಂಜಡದಲ್ಲಿ ಗಾಂಧೀಜಿಯ ನಿಜಸ್ವರೂಪ ದೃಷ್ಟಿಗೆ ಸಿಕ್ಕಲಾರದು. ಯಾವುದೇ ಕೆಲಸವನ್ನು ಮಾಡಿದರೂ ಅದರಲ್ಲಿ ಹೃದಯಶುದ್ಧಿ ಇರಬೇಕೆಂಬ ವಿಷಯವನ್ನು ಗಾಂಧೀಜಿ ಸದಾ ಒತ್ತಿ ಹೇಳುತ್ತಿದ್ದರು. ಈ ಕೆಲಸ ಮಾಡುತ್ತ ಮಾಡುತ್ತ ಮುಖ್ಯವಾಗಿ ಹೃದಯಶುದ್ಧಿ ಹಾಗೂ ಚಿತ್ತಶುದ್ಧಿಗೊಳಿಸುತ್ತ ಇರಬೇಕು. ಹೃದಯಶುದ್ಧಿ ಆಗದಿದ್ದರೆ ಆಕಳು ಉಳಿದೀತು ಹೇಗೆ? ರೈತನ ಹೃದಯವನ್ನು ಪ್ರವೇಶಿಸುವುದು ಹೇಗೆ? ಖಾದಿ ಯಾರು ತೊಟ್ಟಾರು? ಆದುದರಿಂದ ಒಂದೊಂದು ಕೆಲಸದೊಂದಿಗೂ ಹೃದಯಶುದ್ಧಿಯ ಮಾತು ಸೇರಿಹೋಗಬೇಕು ಎಂದು ಬಾರಿ ಬಾರಿಗೂ ಗಾಂಧೀಜೀ ಒತ್ತಾಯದಿಂದ ಹೇಳುತ್ತಿದ್ದರು. ನಮ್ಮ ದೇಶದಲ್ಲಿ ರಾಮಕೃಷ್ಣ ಮಿಶನ್ ಮೊಟ್ಟಮೊದಲಾಗಿ ಅದ್ವೈತದಿಂದ ಪ್ರೇರಿತರಾಗಿ ಪೂರ್ಣ ಪ್ರೇಮಮಯವಾದ ಸೇವಾಕಾರ್ಯದ ಆರಂಭ ಮಾಡಿತು. ಇದೇ ರೀತಿ ಗಾಂಧೀಜೀ ಮೊಟ್ಟಮೊದಲಾಗಿ ಭಕ್ತಿಮಾರ್ಗದ ರೂಪದಲ್ಲಿ ಸಮಾಜ ಸೇವೆಯನ್ನು ಆರಂಭಿಸಿದರು. ರಾಮಕೃಷ್ಣರ ಶಿಷ್ಯರು ಸೇವೆಯಲ್ಲಿ ಅದ್ವೈತ ಮಾರ್ಗದ ಪ್ರೇಮ ಪ್ರಕರ್ಷವನ್ನು ಪ್ರಕಟಪಡಿಸಿದರೆ ಗಾಂಧೀಜೀ ಪರಮೇಶ್ವರನ ಭಕ್ತಿಯ ಸಕಲ ಸಾರವನ್ನು ಮಾನವ ಸೇವೆಯಲ್ಲೇ ಕಲಿಸಿದರು.

ಹೀಗೆ ಬಾಪೂ ಪ್ರಕಾರ ಕರ್ಮ ಒಂದು ಉಪಾಸನೆ ಆಗಿತ್ತು. ಅವರ ಬಳಿ ಸ್ಥೂಲಕ್ರಿಯೆಗೆ ಹೆಚ್ಚು ಮಹತ್ವವಿರಲಿಲ್ಲ, ಅದರ ಹಿಂಬದಿಯ ಭಾವನೆಗೆ ಇರುತ್ತಿತ್ತು. ಹೊರಗಿನಿಂದ ನೋಡಿದರೆ ಅವರು ಯಾವಾಗಲೂ ಸ್ಥೂಲ ಕ್ರಿಯೆಯಲ್ಲಿ ಮುಳುಗಿದವರಂತೆ ಕಾಣುತ್ತಿದ್ದರು. ಆದರೆ ಆ ಎಲ್ಲ ಜಂಜಡದಲ್ಲೂ ತಾವರೆ ಎಲೆಯ ಮೇಲಿನ ಹನಿಯಂತೆ ಅಲಿಪ್ತರಿದ್ದರು. ಒಮ್ಮೆ

ಗಾಂಧೀಜಿ ಯಾವುದೋ ಕೆಲಸ ಕುರಿತು ನನ್ನನ್ನು ಕೇಳಿದರು. ನಾ ಹೇಳಿದೆ: "ಇದರದೇನೂ ಬಹಳ ಹೆಚ್ಚು ಪರಿಣಾಮ ಉಂಟಾದೀತೆಂದು ನನಗೆ ಅನಿಸದು" ಎಂದು. ನಕ್ಕು ಅವರು ಹೇಳಿದರು: "ನೋಡು ವಿನೋಬಾ, ಇದು ಯೋಗ್ಯವೋ ಅಯೋಗ್ಯವೋ ಅಷ್ಟನ್ನು ಮಾತ್ರ ನಾವು ನೋಡಬೇಕು. ಉಳಿದಂತೆ ನಮ್ಮ ಎಲ್ಲ ಕೆಲಸದ ಒಟ್ಟು ಪರಿಣಾಮವೂ ಶೂನ್ಯ ಎಂದು ನಾನೂ ಒಪ್ಪುತ್ತೇನೆ"—ಎಂದು ಹೇಳಿ ತಮ್ಮ ಬೆರಳಿನಿಂದ ಗಾಳಿಯಲ್ಲಿ 'ಸೊನ್ನೆ' ಬರೆದು ತೋರಿಸಿದರು. ಈ ಜಗತ್ತಿನಲ್ಲಿ ಈಶ್ವರನ ಹೊರತಾಗಿ ಬೇರಾವುದೂ ಗಣನೆಯೇ ಅಲ್ಲ. ನಾವಾದರೋ ನಮ್ಮ ಸಂತೋಷಕ್ಕಾಗಿ ಕೆಲಸ ಮಾಡುತ್ತೇವೆ. ಬಾಕಿ ಪರಿಣಾಮದ ದೃಷ್ಟಿಯಿಂದ ನೋಡಿದರೆ ನಮ್ಮ ಎಲ್ಲ ಕ್ರಿಯೆಗಳ ಪರಿಣಾಮ ಶೂನ್ಯ. ಈ ಶೂನ್ಯದಲ್ಲೇ ಬಾಪೂವಿನ ಆಧ್ಯಾತ್ಮಿಕ ಬೈಠಕ್ ಇರುತ್ತಿತ್ತು.

ಬಾಪೂ ನಮ್ಮೆದುರು ಕೇವಲ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಮಾತ್ರ ಇರುವ, ಬೇರೆ ಕ್ಷೇತ್ರಗಳಲ್ಲಿಲ್ಲದ ಎಷ್ಟೋ ಸಂಗತಿಗಳನ್ನು ಇಟ್ಟರು. ಅಹಿಂಸೆ, ಸತ್ಯ, ಅಸ್ತೇಯವೇ ಮುಂತಾದ ಪಂಚಧರ್ಮಗಳೊಂದಿಗೆ ಬೇರೆ ಹಲವು ಅಂಶಗಳನ್ನು ಸೇರಿಸಿ ಏಕಾದಶ ವ್ರತಗಳನ್ನು ನಮ್ಮೆದುರು ಇಟ್ಟರು. ಇದೇನೂ ಯಾವ ಹೊಸ ಕಲ್ಪನೆಯೂ ಅಲ್ಲ, ಹಳೆಯವೇ. ಸತ್ಯ, ಅಹಿಂಸೆ, ಇತ್ಯಾದಿ ಕೋರಾ ಶಬ್ದಗಳಲ್ಲ, ಸರ್ವಧರ್ಮಗಳ ಸಾರ. ಮನುಷ್ಯಜೀವನದ ಪ್ರತಿಷ್ಠೆಗಾಗಿ ನಡೆದಿರುವ ಎಲ್ಲ ಆಧ್ಯಾತ್ಮಿಕ ಚಿಂತನೆಯ ಸಾರವನ್ನು ಮೂಲಭೂತವಾದ ಪಂಚ ವ್ರತಗಳಲ್ಲಿ ನಮ್ಮ ಪೂರ್ವಜರು ಪ್ರತಿಪಾದಿಸಿದರು. ಅವನ್ನು ನಾವು 'ಪಂಚ ಮಹಾವ್ರತ' ಎಂದೆವು. ಪತಂಜಲಿಯ ಶಾಸ್ತ್ರದಲ್ಲಿ ಅದು 'ಯಮ-ನಿಯಮ' ಎಂಬ ಹೆಸರಿನಿಂದ ಉಲ್ಲೇಖಿಸಲ್ಪಟ್ಟವೆ. ಬುದ್ಧ, ಮಹಾವೀರ, ಹಿಂದೂ ವೈದಿಕರೆಲ್ಲರೂ ಅವನ್ನು ಮನ್ನಿಸಿದ್ದಾರೆ.

ವ್ಯವಹಾರ-ಸಾಧನೆಗಳ ಸಮನ್ವಯ

ಈ ರೀತಿಯ ವ್ರತಪಾಲನೆಯ ಕಲ್ಪನೆ ಹೊಸದೇನೂ ಅಲ್ಲ. ಸಮಾಜ ಸೇವೆಗೆ ವ್ರತಪಾಲನೆ ಅಗತ್ಯ ಎಂಬ ಮಾತನ್ನು ಎಲ್ಲರಿಗಿಂತ ಮೊದಲು ಬಾಪೂ ಹೇಳಿದರು. ಆಧ್ಯಾತ್ಮಿಕ ಉನ್ನತಿಗೆ ಯಮ-ನಿಯಮ ಅಗತ್ಯವೆಂದು

ಮೊದಲು ತಿಳಿಯಲ್ಪಟ್ಟಿತ್ತು. ಯೋಗಿಗಳು, ಸಾಧಕರು ಮುಂತಾದ ಆಧ್ಯಾತ್ಮಿಕ ವಿಕಾಸಕ್ಕಾಗಿ ಹೆಣಗುವವರು ಅವುಗಳನ್ನು ಪಾಲಿಸುತ್ತಿದ್ದರು. ಈ ಯಮ-ನಿಯಮಗಳು ಸಮಾಜ ಸೇವೆಗೆ ಅತ್ಯಗತ್ಯ. ಅವುಗಳ ಹೊರತಾಗಿ ಸಮಾಜ ಸೇವೆ ಸಾಧ್ಯವೇ ಇಲ್ಲ, ತದ್ವಿರುದ್ಧ ಅಸೇವೆ ಆದೀತು—ಈ ದೃಷ್ಟಿಯನ್ನು ಮೊಟ್ಟಮೊದಲು ಕೊಟ್ಟವರು ಬಾಪೂ. ಸತ್ಯ ಮತ್ತು ಸ್ವರಾಜ್ಯಗಳಲ್ಲಿ ಒಂದನ್ನು ಆರಿಸಿಕೊಳ್ಳಬೇಕಾದರೆ ನಾನು ಸ್ವರಾಜ್ಯವನ್ನು ಬಿಟ್ಟು ಸತ್ಯವನ್ನೇ ಆರಿಸಿಕೊಂಡೇನು—ಎಂಬಷ್ಟು ದೂರ ಅವರು ಹೇಳಿಬಿಟ್ಟರು. ಸ್ವರಾಜ್ಯದ ಹಸಿವು ತೀವ್ರತಮವಾಗಿದ್ದ ಸಮಯದಲ್ಲಿ ಈ ಮಾತನ್ನು ಅವರು ಹೇಳಿದರು. ಸತ್ಯದ ಮೂಲಕವೇ ಸ್ವರಾಜ್ಯ ಸಿಕ್ಕೀತು ಎಂದು ಹೇಳಿದರು. ಇದರಲ್ಲಿ ಅವರ ಪ್ರತಿಭೆಯ ದರ್ಶನ ಆಗುತ್ತದೆ.

ಇಂದಿನವರೆಗೆ ಸೇವೆ ಮಾಡುವ ಬೇರೆ ಬೇರೆ ಸಂಸ್ಥೆಗಳು ಬಗೆ ಬಗೆಯಾಗಿ ಸಮಾಜದ ಸೇವೆ ನಡೆಸುತ್ತಿದ್ದುವು. ಸೇವೆಗೆ ಕೆಲವು ಗುಣಗಳಿರಬೇಕೆಂದು ಜನ ತಿಳಿಯುತ್ತ ಬಂದಿದ್ದಾರೆ. ಆದರೆ ದೇಶಸೇವೆಗೆ ಸತ್ಯ, ಅಹಿಂಸೆ, ಬ್ರಹ್ಮಚರ್ಯ, ಇತ್ಯಾದಿ ಗುಣಗಳಿರಬೇಕೆಂದು ಇದುವರೆಗೆ ಯಾರೂ ಅಂಗೀಕರಿಸಿರಲಿಲ್ಲ. ಅದಕ್ಕೆ ವಿರುದ್ಧವಾಗಿ, ವ್ಯಕ್ತಿಗತ ಕ್ಷೇತ್ರದಲ್ಲಿ ಈ ವ್ರತಗಳು ಅಗತ್ಯವೆಂದು ಹೇಳಿದವರು—ಧ್ಯಾನಯೋಗದ ಕ್ಷೇತ್ರದಲ್ಲಿ, ವ್ಯಕ್ತಿಗತ ಕ್ಷೇತ್ರದಲ್ಲಿ ಇದ್ದಂತೆ—ಸೇವೆಯ ಹೆಸರನ್ನು ಸಹ ಉಚ್ಚರಿಸಲಿಲ್ಲ. ಈ ಸಿದ್ಧಾಂತಗಳ ಆಧಾರದ ಮೇಲೆ ಸಮಾಜದ ನವರಚನೆಯ ಪ್ರಸ್ತಾಪವನ್ನು ಅವರೆಂದೂ ಮಾಡಲೇ ಇಲ್ಲ. ಇಲ್ಲವೆ ಈ ತಳಹದಿಯ ಮೇಲೆ ಸಾಮಾಜಿಕ ಕ್ರಾಂತಿಯ ಆರಂಭ ಆದೀತೆಂದು ಎಂದೂ ಹೇಳಿಕೊಳ್ಳಲೂ ಇಲ್ಲ. ಬ್ರಹ್ಮಚರ್ಯ ಅಗತ್ಯವೆಂದು ತಿಳಿದರು. ಅದರ ಪ್ರಯೋಗ ನಡೆಸಿದರು, ಪಾಲಿಸಿದರು. ಆದರೆ ಸಾಮಾಜಿಕ ಕ್ಷೇತ್ರದಲ್ಲಿ ಅದನ್ನು ವಿನಿಯೋಗಿಸಬೇಕು ಎಂದು ಯಾರಾದರೂ ಹೇಳಿದರೂ ಯಾರೂ ಒಪ್ಪಲಿಲ್ಲ. ಹೀಗಿದ್ದೂ ಬೋಧವಾದಿಗಳು, ಧರ್ಮವಾದಿಗಳು, ಭಕ್ತಿಮಾರ್ಗಿಗಳು, ಜ್ಞಾನಮಾರ್ಗಿಗಳೇ ಮುಂತಾಗಿ ಎಲ್ಲರೂ ಯಮ-ನಿಯಮಗಳ ಮಹತ್ವವನ್ನು ತಮ್ಮ ತಮ್ಮ ಸೌಕರ್ಯಕ್ಕೆ ಅನುಸಾರವಾಗಿ ಅಂಗೀಕರಿಸಿದರು. ಯಮ-ನಿಯಮಗಳಿಗೆ

ಅನೇಕ ಅಪವಾದಗಳನ್ನು ಸೃಷ್ಟಿಸಿ ಯಾವುದಾದರೂ ವಸ್ತುವಿಗೆ ನೀರು ಸೇರಿಸಿ ಅಳ್ಳಕಗೊಳಿಸುವಂತೆ ಮಾಡಿಬಿಟ್ಟರು.

ಇಂತು ಸಮಾಜಸೇವಕರಂತೂ ಈ ವ್ರತಗಳ ಸೊಲ್ಲನ್ನೇ ಎತ್ತಲಿಲ್ಲ. ಯಾರು ಅವುಗಳ ಮಹಿಮೆಯನ್ನು ಕೊಂಡಾಡಿದರು ಅವರು ಲೋಕಕ್ರಾಂತಿ ಅಥವಾ ಸಮಾಜಕ್ಕೆ ಹೊಸ ರೂಪ ಕೊಡುವ ಮಾತನ್ನೇ ಎಂದೂ ಆಡಲಿಲ್ಲ. ಇದರಿಂದಾಗಿ ಒಂದು 'ವಿಚ್ಛಿನ್ನ ವ್ಯಕ್ತಿತ್ವ' ತಲೆದೋರಿತು. ವ್ಯಕ್ತಿಗತ ಶುದ್ಧಿಗೊಂದು ವಿಚಾರ, ಸಾಮಾಜಿಕ ಶುದ್ಧಿಗೆ ಮತ್ತೊಂದು ವಿಚಾರ. ಇವೆರಡರ ಸಮನ್ವಯ ಮಾಡಿ ತೋರಿಸಿದರು ಗಾಂಧೀಜಿ. ಸಮಾಜಸೇವೆ, ರಾಜನೀತಿ, ರಚನಾತ್ಮಕ ಕಾರ್ಯಕ್ರಮ, ಲೋಕ ಸಂಘಟನೆ, ಲೋಕಶಿಕ್ಷಣವೇ ಮುಂತಾದ ಅನೇಕ ಬಾಹ್ಯಕಾರ್ಯಗಳೊಂದಿಗೆ ಸತ್ಯ, ಅಹಿಂಸೆ, ಇತ್ಯಾದಿ ಅತ್ಯಗತ್ಯ ಎಂದು ಹೇಳುವ ಸಾಹಸವನ್ನು ಗಾಂಧೀಜೀ ಮೊಟ್ಟಮೊದಲಾಗಿ ಮಾಡಿದರು. "ಸತ್ಯ, ಅಹಿಂಸೆ ಮುಂತಾದವು ಮೂಲ ಅಂಶಗಳು, ಅವುಗಳ ಅಡಿಗಲ್ಲ ಮೇಲೆಯೇ ಸಮಾಜದ ಉತ್ಥಾನ ಮಾಡಬಲ್ಲೆವು. ಸಮಾಜಸೇವೆಗೆ ಇವು ಅನಿವಾರ್ಯ, ಜನಸೇವೆಗೆ ಇವು ಒರೆಗಲ್ಲುಗಳೂ ಹೌದು" ಎಂದು ಅವರು ಹೇಳಿದರು. ಸಾಮಾಜಿಕ, ರಾಜಕೀಯ ಸಮಸ್ಯೆಗಳ ಪರಿಹಾರಕ್ಕೆ ಅವರು ಆತ್ಮಶಕ್ತಿಯ ಪ್ರಯೋಗಮಾಡಿ ತೋರಿಸಿದ್ದು ಗಾಂಧೀಜಿಯ ವೈಶಿಷ್ಟ್ಯ ಎಂದು ತಿಳಿಯಲ್ಪಟ್ಟಿತು. ವ್ಯಕ್ತಿಜೀವನದಲ್ಲಿ ಆತ್ಮಬಲ ಸಫಲ ಆಗುತ್ತದೆ ಎಂಬುದನ್ನು ಸಮಾಜ ನೋಡಿಬಿಟ್ಟಿದೆ. ಆದರೆ ಸಾಮಾಜಿಕ ಕ್ಷೇತ್ರದ ವ್ಯಾಪಕ ಪ್ರಮಾಣದಲ್ಲೂ ಈ ಶಕ್ತಿಯನ್ನು ಉಪಯೋಗಿಸಬಹುದೆಂಬುದನ್ನು ಗಾಂಧೀಜೀ ತೋರಿಸಿದರು.

ಸಾಮೂಹಿಕ ಸಾಧನೆಯ ದೀಕ್ಷೆ

ಸತ್ಯ ಅಥವಾ ಯಾವುದೇ ಗುಣ ಮೊದಲು ವ್ಯಕ್ತಿಯಲ್ಲಿ ಪ್ರಕಟವಾಗುತ್ತದೆ—ವಿಜ್ಞಾನದ ಪ್ರಯೋಗ ಮೊದಲು ಪ್ರಯೋಗಶಾಲೆಯಲ್ಲಿ ಆಗುವಂತೆ. ವ್ಯಕ್ತಿಯ ಜೀವನ ಒಂದು ಪ್ರಯೋಗಶಾಲೆ. ಅದರಲ್ಲಿ ಪ್ರಯೋಗ ಯಶಸ್ವಿ ಆದರೆ ಅದನ್ನು ಸಮಾಜದಲ್ಲಿ ವ್ಯಾಪಕ ಪ್ರಮಾಣದಲ್ಲಿ ಅನ್ವಯಿಸಬಹುದು. ವ್ಯಕ್ತಿಜೀವನದಲ್ಲಿ ಸಫಲವಾದ ಗುಣವಿಕಾಸದ ಪ್ರಯೋಗವನ್ನು ಸಮಾಜ

ವ್ಯಾಪಿಗೊಳಿಸಬೇಕು. ವ್ಯಾಪಕ ಸತ್ಯ, ವ್ಯಾಪಕ ಪ್ರೇಮ, ವ್ಯಾಪಕ ಕರುಣೆಯ ಕೆಲಸದಲ್ಲಿ ಗಾಂಧೀಜೀ ತೊಡಗಿಸಿಕೊಂಡಿದ್ದರು. ಅಂತಲೇ ಅವರು: "ನಾನು ಅಪೂರ್ಣ. ಕೇವಲ ವ್ಯಕ್ತಿಗತ ಪ್ರಯೋಗದಲ್ಲಿ ತೃಪ್ತಿಪಡೆಯಬೇಕಾಗಿದ್ದರೆ ಅದು ಎಂದೋ ಪೂರೈಸಿಹೋಗುತ್ತಿತ್ತು. ಆದರೆ ಸಾಮಾಜಿಕ ಪ್ರಯೋಗ ಮಾಡಬೇಕಾಗಿರುವ ನಮ್ಮ ಭಾಗ್ಯಕ್ಕೆ ಅಪೂರ್ಣತೆಯೇ ಉಳಿಯುವುದು. ನಮ್ಮ ಬಳಿಕ ಬರುವವರು ಹೆಚ್ಚು ಪೂರ್ಣತೆ ತಂದಾರು. ಹೀಗೆ ಎಂದಾದರೊಮ್ಮೆ ಪೂರ್ಣದರ್ಶನ ಆದೀತು" ಎಂದರು. ಸಾಮೂಹಿಕ ಸಾಧನೆಯ ಈ ವಿಚಾರವನ್ನು ಗಾಂಧೀಜೀ ನಮ್ಮ ಎದುರು ಇಟ್ಟರು. ಸ್ವತಃ ಜೀವನ ಪರ್ಯಂತ ಅದರ ಪ್ರಯೋಗ ನಡೆಸಿದರು. ಅವರು ನಮ್ಮ ಮುಂದೆ ಇಟ್ಟ ಸರ್ವೋದಯದ ನೂತನ ದೀಕ್ಷೆ ಅಂಥದೇ ಸಾಮೂಹಿಕ ಸಾಧನೆಯ ದೀಕ್ಷೆ.

ಯಾವ ಯಾವ ಕಾಲದಲ್ಲಿ ಯಾವ ಭಾವನೆ ಅರಳುವುದೋ ಅದು ಆ ಕಾಲದ ಬ್ರಹ್ಮ. ಯುಗಯುಗಕ್ಕೂ ಬ್ರಹ್ಮ ಬದಲಾಗುತ್ತ ಹೋಗುತ್ತದೆ. ಒಂದು ಕಾಲದಲ್ಲಿ ನಮ್ಮೆದುರು 'ಸ್ವರಾಜ್ಯ'ದ ಬ್ರಹ್ಮ ಇತ್ತು, ಇಂದು 'ಸರ್ವೋದಯ'ದ ಬ್ರಹ್ಮ ಇದೆ. ಹೀಗೆ ಯುಗಕ್ಕೆ ತಕ್ಕಂತೆ ಭಿನ್ನ ಭಿನ್ನ ಬ್ರಹ್ಮ ನಮ್ಮ ಮುಂದೆ ಬಂದಿದೆ. ವೇದದಲ್ಲಿ ಹೇಳಿದೆ: **ಅಚಿತ್ತಂ ಬ್ರಹ್ಮ ಜುಜುಷುಃ ಯುವಾನಃ**—ಕಾಣದುದನ್ನು ಕಾಣುವುದರಲ್ಲಿ, ಭಾಸವಾಗದುದನ್ನು ಭಾಸಗೊಳಿಸಿಕೊಳ್ಳುವುದರಲ್ಲಿ ಮೋಜು ಉಂಟಾಗುತ್ತದೆ. ಇದುವರೆಗೆ ಯಾರೂ ಚಿಂತನ ಮಾಡದಂಥ ಬ್ರಹ್ಮನೇ ತರುಣರಿಗೆ ಇಷ್ಟ. ಅವರಿಗೆ ಹೊಸ ಬ್ರಹ್ಮ ಬೇಕು, ಹಳೆಯ ಬ್ರಹ್ಮ ಅವರಿಗೆ ಇಷ್ಟವಿಲ್ಲ. ಹೊಸ ಬ್ರಹ್ಮ ಹುಟ್ಟಿದರೆ ಅದಕ್ಕಾಗಿ ಜನ ಹೊಸ ತಪಸ್ಸು ಮಾಡಿಯಾರು. ಇಂದಿನ ಕಾಲಕ್ಕೆ ಅಂಥ ಹೊಸ ಬ್ರಹ್ಮನನ್ನು ಗಾಂಧೀಜಿ ನಮಗೆ ಸೂಚಿಸಿದ್ದಾರೆ, ಅದು 'ಸರ್ವೋದಯ'. ●

೬

ನ ತ್ವಹಂ ಕಾಮಯೇ ರಾಜ್ಯಂ

ಭಾರತೀಯ ಸಂಸ್ಕೃತಿಯ ಅಂತಸ್ಸತ್ವವನ್ನು ವ್ಯವಹಾರ ಕ್ಷೇತ್ರದಲ್ಲಿ ಪ್ರಕಟಪಡಿಸುವ ಅವಕಾಶ ಗಾಂಧೀಜೀಗೆ ಸಿಕ್ಕಿತು. ಸ್ವರಾಜ್ಯ ಸಾಧನೆಯ ಕೆಲಸಕ್ಕೂ ಮಾನವಸೇವೆಯ ರೂಪವನ್ನು ಕೊಟ್ಟರವರು. ರಾಜನೀತಿಗೂ ಧರ್ಮ ಹಾಗೂ ಅಧ್ಯಾತ್ಮದ ಬಣ್ಣ ಏರಿಸಿದರು. ಅದರಿಂದಾಗಿ ಅದು ಕೇವಲ ರಾಜಕೀಯ ಆಂದೋಲನವಾಗಿ ಉಳಿಯಲಿಲ್ಲ. ಸ್ವತಃ ಬಾಪೂ ಎಂದೂ ರಾಜಕೀಯ ಜೀವಿ ಆಗಿರಲಿಲ್ಲ. ಸಾಯುವ ಗಳಿಗೆಯವರೆಗೆ ರಾಜಕೀಯ ವಿಷಯಗಳಲ್ಲಿ ಭಾಗಿಯಾಗಿರಬೇಕಾಗಿ ಬಂದರೂ ಅವೆಲ್ಲ ಅವರ ವ್ಯಾಪಕ ಸಾಧನೆಯ, ಸತ್ಯಶೋಧನೆಯ ಅಂಗವೇ ಆಗಿತ್ತು.

ರಾಜಕೀಯದಲ್ಲಿಯೂ ಸತ್ಯಬಲ ನಡೆಯುವುದೇ ಇಲ್ಲ. ಈ ರೂಢ ಮೂಲವಾದ ನಂಬಿಕೆ ಏನಿತ್ತು—ಇಂದೂ ಬಹುಶಃ ಇದ್ದೇ ಇದೆ—ಅದನ್ನು ಗಾಂಧೀಜೀ ತೀವ್ರವಾಗಿ ವಿರೋಧಿಸಿದರು. ಧರ್ಮ ಅಥವಾ ಪಾರಮಾರ್ಥಿಕ ಸಾಧನೆಗೆ ಸತ್ಯನಿಷ್ಠೆ ಎಷ್ಟು ಅಗತ್ಯವೋ ಅಷ್ಟೇ ಅದು ಪ್ರಾಪಂಚಿಕ ವ್ಯವಹಾರಕ್ಕೂ ಅತ್ಯಗತ್ಯ. ಜೀವನ ಎರಡು ತುಣುಕು ಆಗಲಾರದು. ಅಂತಲೇ ಅವರು ಸತ್ಯದ ಆಧಾರದಮೇಲೆ ಸೇವೆ ಮಾಡುತ್ತ ಮಾಡುತ್ತ ಮುಂದೆ ಸಾಗಿದರು. ಅಸತ್ಯವಾದ, ವಿಚಾರಪೂರ್ವಕ ನುಡಿಯದ, ಸತ್ಯದ ಒರೆಗಲ್ಲಮೇಲೆ ಉತ್ತೀರ್ಣವಾಗದ ಯಾವೊಂದು ಶಬ್ದವೂ ತಮ್ಮ ಬಾಯಿಂದ ಹೊರಡಬಾರದೆಂದು ಅವರು ಸದಾ ಎಚ್ಚರವಾಗಿದ್ದರು. ರಾಜಕೀಯ ವ್ಯವಹಾರವನ್ನು ಸತತವಾಗಿ ನಡೆಸಿದರು; ಅದರಲ್ಲಿ ಅವರು ಮುಂದಿಟ್ಟು ಕೊಂಡಿದ್ದ ವಾಙ್ಮಯ ತಪಸ್ಸು ಅನುಪಮವೇ.

ಸತ್ಯನಿಷ್ಠೆಯ ಅನುಪಮ ಆದರ್ಶ

ಗಾಂಧೀಜಿಯ ರಾಜನೀತಿ ಸತ್ಯದ ಆಧಾರದಮೇಲೆ ನಿಂತಿತ್ತು,

ಎದುರಾಳಿಗಳದು ಅಸತ್ಯದ ಮೇಲೆ ನಿಂತಿತ್ತು. ಈ ಕಾರಣದಿಂದಲೇ ರಾಜನೀತಿಯಲ್ಲಿ ಗಾಂಧೀಜಿಗೆ ಸಫಲತೆ ಸಿಕ್ಕಿತು. ಸತ್ಯದ ಎದುರು ಅಸತ್ಯ ನಿಲ್ಲಲಾರದು. ಬೇರೆಯವರಿಗಿಂತ ಗಾಂಧೀಜೀ ಹೆಚ್ಚು ಕುಶಲರಿದ್ದರೆಂದೇನೂ ಅಲ್ಲ. ಆದರೆ ಅವರ ಬಳಿ ಸತ್ಯವಿತ್ತು, ಸತ್ಯವೇ ಎಲ್ಲಕ್ಕಿಂತ ಹೆಚ್ಚು ಕುಶಲ. ತಮ್ಮ ಕುಶಲತೆಯ ಹಮ್ಮಿನಲ್ಲಿ ಅಸತ್ಯಾಚರಣೆ ಮಾಡುವವರು ಕೊನೆಯಲ್ಲಿ ಕುಶಲರೆಂದು ಸಿದ್ಧರಾಗುವುದಿಲ್ಲ. ನಿಜವೆಂದರೆ ಸತ್ಯವಾಗಿ ನಡೆಯುವುದೇ ಕುಶಲತೆ. ಹಾಗೆ ಮಾಡಿದರೆ ನಾವು ಎಲ್ಲ ಬಗೆಯಿಂದ ಸುರಕ್ಷಿತರಿರುತ್ತೇವೆ. ಎಲ್ಲ ಅಪಾಯಗಳಿಂದ ಪಾರಾಗುತ್ತೇವೆ.

ಸತ್ಯವಾದೀ ಮನುಷ್ಯನ ಮಾತಿನಲ್ಲಿ ಜಗತ್ತಿಗೂ ಮತ್ತು ಶತ್ರುವಿಗೂ ನಂಬಿಕೆ ಇರುತ್ತದೆ. ಗಾಂಧೀಜೀಯ ಕಾಲದಲ್ಲಿ, ಗಾಂಧೀಜೀಯ ವಿಚಾರವನ್ನು ಸ್ವೀಕಾರಯೋಗ್ಯವೆನ್ನಲಿ ಬಿಡಲಿ ಅವರು ಹೇಳುವುದನ್ನು ಹಾರ್ದಿಕವಾಗಿ ಹೇಳುವರೆಂಬ ವಿಶ್ವಾಸ ಗಾಂಧೀಜೀಯ ಮಾತುಗಳಲ್ಲಿ ಜನರಿಗೆ ಕುಳಿತು ಬಿಟ್ಟಿತ್ತು. ಅವರ ಮಾತಿನಲ್ಲಿ ದ್ವಂದ್ವಾರ್ಥ ಇರುತ್ತಿರಲಿಲ್ಲ. ಯಾವುದು ಪ್ರಕಟವಾಗುತ್ತಿತ್ತೋ ಅವರ ಮನಸ್ಸಿನಲ್ಲೂ ಅದೇ ಇರುತ್ತಿತ್ತು. ಅಂಥ ಶ್ರದ್ಧೆ ಭಾರತದ ಜನತೆಗೆ ಗಾಂಧೀಜಿಯ ವಿಷಯದಲ್ಲಿ ಹುಟ್ಟಿತ್ತು, ಆ ಶ್ರದ್ಧೆಯಿಂದಲೇ ಭಾರತ ಮುಂದೆ ಸಾಗಿತು.

ನುಡಿಯಲ್ಲಿ ಜನತೆಯ ನಂಬಿಕೆ

ಗಾಂಧೀಜೀ ಬರುವ ಮುನ್ನ ಭಾರತದಲ್ಲಿ ಒಳ್ಳೊಳ್ಳೆ ನಾಯಕರು ಇದ್ದರು. ಸ್ವಾತಂತ್ರ್ಯದತ್ತ ಜನರ ಗಮನವನ್ನು ಅವರು ಸೆಳದಿದ್ದರು. ಆದರೆ ಅವರೆಲ್ಲ ಮನಸ್ಸಿನಲ್ಲಿದ್ದುದನ್ನೇ ಆಡುವರೆಂಬ ಪಕ್ಕಾ ನಂಬಿಕೆ ಆ ನಾಯಕರ ವಿಷಯದಲ್ಲಿ ಜನತೆಗೆ ಇರಲಿಲ್ಲ. ರಾಜಕೀಯದಲ್ಲಿ ನಾಯಕರು ಸದಾ ದ್ವಂದ್ವಾರ್ಥದ ಮಾತನ್ನೇ ಆಡುತ್ತಾರೆಂಬ ನಂಬಿಕೆ ಜನರಲ್ಲಿತ್ತು. ಗಾಂಧೀಜೀ ಬರುತ್ತಲೇ ಹೊಸ ಪದ್ಧತಿ ಆರಂಭವಾಗಿಬಿಟ್ಟಿತು. ಮನಸ್ಸಿನಲ್ಲಿದ್ದುದನ್ನೇ ಆಡಲು ಅವರು ತೊಡಗಿದರು. ಈ ಮನುಷ್ಯ ಹೃದಯದಲ್ಲಿರುವುದನ್ನೇ ನುಡಿಯುತ್ತಾನೆ ಎಂಬ ವಿಶ್ವಾಸ ಮೆಲ್ಲಮೆಲ್ಲನೆ ಜನರಲ್ಲಿ ಗಾಂಧೀಜಿಯ ವಿಷಯದಲ್ಲಿ ಹುಟ್ಟಹತ್ತಿತು. ಈ ಕಾರಣದಿಂದ ಗಾಂಧೀಜಿಯ ಮಾತು

ಬಲಶಾಲಿ ಆಯಿತು. ಮಾತಿನ ಪರಾಕ್ರಮದಿಂದಲೇ ಅವರ ಉಳಿದೆಲ್ಲ ಪರಾಕ್ರಮಗಳೂ ಮೆರೆದುವು.

ನನಗೆ ನೆನಪಿದೆ. ರೌಲಟ್ ಶಾಸನದ ವಿರುದ್ಧ ಆಂದೋಲನ ನಡೆದಿತ್ತು. ಪಂಜಾಬಿಗೆ ಹೋಗುವಾಗಲೇ ಗಾಂಧೀಜಿಯನ್ನು ತಡೆದರು. ಆಗ ಪಂಜಾಬಿನಲ್ಲಿ ಗಲಭೆಗಳಾದುವು. ಇಡೀ ದೇಶದ ಜನತೆಯಲ್ಲಿ ಕ್ರೋಧಾಗ್ನಿ ಸಿಡಿಯಿತು. ಅಹಮದಾಬಾದಿನಲ್ಲಿ ಹೊಡೆದಾಟ, ವಿಧ್ವಂಸನ ಆರಂಭವಾಯಿತು. ಎಷ್ಟೋ ಮನೆಗಳು ಉರಿದುವು. ಇದನ್ನೆಲ್ಲ ನೋಡಿ ಗಾಂಧೀಜಿಗೆ ತುಂಬ ದುಃಖವಾಯಿತು. ಇವೆಲ್ಲ ಅಹಿಂಸಾಮಾರ್ಗಕ್ಕೆ ತೀರಾ ವಿರುದ್ಧವಾಗಿತ್ತು.

ಆಗ ನಾನು ಸಾಬರಮತಿ ಆಶ್ರಮದಲ್ಲಿದ್ದೆ. ನನಗಾಗ ಸುಮಾರು ಇಪ್ಪತ್ತೈದು ವರ್ಷ ವಯಸ್ಸು. ನಾವು ಕೆಲವರು ಗೆಳೆಯರು ಅಹಮದಾಬಾದ್ ಪಟ್ಟಣಕ್ಕೂ ಹಳ್ಳಿಗಳಿಗೂ ಹೋಗಿ ಜನರಿಗೆ ತಿಳಿಸಹೇಳತೊಡಗಿದೆವು: "ಅಯ್ಯಾ, ನೀವೇನು ಮಾಡಿದೀರಲ್ಲಾ ಇದೆಲ್ಲ ಗಾಂಧೀಜೀಗೆ ಇಷ್ಟವಾದುದಲ್ಲ. ಇದರಿಂದ ಅವರಿಗೆ ದುಃಖವೇ ಆದೀತು. ಇಂಥ ಕೆಲಸ ಮಾಡಲು ಗಾಂಧೀಜೀ ನಿಮಗೆ ಹೇಳಲಿಲ್ಲ. ಮನೆಮಾರು ಸುಡುವುದು, ಅವರ ಹೆಸರಿನಲ್ಲಿ ಹಿಂಸೆ ನಡೆಸುವುದು, ಗಾಂಧೀಜಿಯ ಇಚ್ಛೆ ಎಂದೂ ಅಲ್ಲ. ಇದನ್ನೆಲ್ಲ ಮಾಡಲು ಅವರೆಂದಾದರೂ ಹೇಳಿರುವರೇ?"

ಆಗ ಅವರು ನಮಗೆ ಉತ್ತರ ಕೊಡುತ್ತಿದ್ದರು: "ಎಲಾ, ನೀವೆಲ್ಲಾ ಇನ್ನೂ ಪೋರರು! ಏನು ತಿಳಿದಿರಿ? ಗಾಂಧೀಜೀ ಏನು ಹೇಳುತ್ತಾರೆಂದು ತಿಳಿಸಲು ಬಂದಿರಾ? ಧರ್ಮರಾಯ ಹೇಳುವುದು ಏನೆಂದು ಭೀಮನಿಗೇ ಗೊತ್ತು. ಯುಧಿಷ್ಠಿರಾ ಸೀದಾ ಮಾತಾಡಿಯಾನು. ಅವನ ಮಾತಿನ ಅರ್ಥ ಏನೆಂಬುದು ಭೀಮನಿಗೇ ಗೊತ್ತು."

ಅಲ್ಲಿಯವರೆಗೆ ರಾಜಕೀಯ ನಾಯಕರ ನುಡಿಯ ಅರ್ಥಕ್ಕೆ ಭಿನ್ನವಾಗಿಯೇ ನಡೆ ಎಂಬುದೇ ಗ್ರಹಿಕೆ ಆಗಿತ್ತು. ಯಾರ ಮಾತಿಗೆ ಅನೇಕ ವಿಧದ ಅರ್ಥವಿರುವುದೋ ಅವರೇ ಉತ್ತಮ ರಾಜಕೀಯ ನಾಯಕ. ಮನಸ್ಸಿನಲ್ಲೊಂದು ಅರ್ಥ, ಮಾತಿನಲ್ಲಿ ಮತ್ತೊಂದು. ಹಾಗೆ ಮಾಡಬಲ್ಲ ನಾಯಕನೇ ವಾಸ್ತವವಾಗಿ ಬುದ್ಧಿಶಾಲಿ ಎಂದು ಜನತೆಯ ನಂಬಿಕೆಯಾಗಿತ್ತು,

ಅವರ ಅಹಿಂಸೆಯ ಮಾತೂ ಮೇಲುಮೇಲಿನದಾಗಿರಬಹುದು, ದೇಶ ಹಿಂಸೆಗೆ ತಯಾರಿಲ್ಲ, ಅದಕ್ಕಾಗಿ ಅವರು ಅಹಿಂಸೆಯ ಭಾಷೆ ಆಡಬೇಕಾಗಿದೆ. ಏಕೆಂದರೆ, ಕಾನೂನಿನ ಪಂಜದೊಳಗೆ ಸಿಕ್ಕಿಬೀಳಬಾರದಲ್ಲ, ವಸ್ತುತಃ ಹಿಂಸೆಯೇ ಸರಿ—ಎಂದು ಗಾಂಧೀಜಿಯ ವಿಷಯದಲ್ಲೂ ಜನ ತಿಳಿದಿದ್ದರು.

ಶಬ್ದಶಕ್ತಿ ಕುಂಠಿತಗೊಂಡರೆ ಶಸ್ತ್ರಶಕ್ತಿಯೇ ಹಾದಿ

ಆದರೆ ಹಿಂಸಾತ್ಮಕ ಘಟನೆಗಳಿಗೆ ಪ್ರಾಯಶ್ಚಿತ್ತರೂಪವಾಗಿ ಗಾಂಧೀಜೀ ಉಪವಾಸ ಮಾಡಿ, ಸ್ವತಃ ತಾವೇ ಕಷ್ಟ ಸಹಿಸಲು ತೊಡಗಿದಾಗ ಈ ನಾಯಕ ಅಪೂರ್ವ ವ್ಯಕ್ತಿಯೆಂದು ಜನ ತಿಳಿದರು. ಈ ಮನುಷ್ಯ ಆಡುವುದನ್ನೇ ಮನಸ್ಸಿನಲ್ಲೂ ಇಟ್ಟುಕೊಂಡಿರುತ್ತಾನೆಂಬ ವಿಶ್ವಾಸ ಬಾಪೂ ಬಗೆಗೆ ಹುಟ್ಟಿತು. ಎಂದರೆ ಶಬ್ದಶಕ್ತಿ ಕೆಲಸ ಮಾಡತೊಡಗಿತು. ಅಲ್ಲಿವರೆಗೆ ಶಬ್ದಶಕ್ತಿ ಹಾಗೆ ಕೆಲಸಮಾಡುತ್ತಿರಲಿಲ್ಲ. ಗಾಂಧೀಜೀ ತಪಗೈದು ಶಬ್ದಶಕ್ತಿಯ ಪ್ರತಿಷ್ಠೆ ಹೆಚ್ಚಿಸಿದರು. ಈ ಶಬ್ದಶಕ್ತಿಯ ಅನುಷ್ಠಾನ ಜನತಂತ್ರಕ್ಕೆ ಅತ್ಯಗತ್ಯ. ಏಕೆಂದರೆ ಒಮ್ಮೆ ಶಬ್ದಶಕ್ತಿ ಕುಂಠಿತವಾಗಿಬಿಟ್ಟರೆ ನಂಬಿಕೆ ಹಾರಿಹೋಗುತ್ತದೆ, ಮತ್ತೆ ಶಸ್ತ್ರಶಕ್ತಿಯ ಹೊರತಾಗಿ ಬೇರೆ ದಾರಿಯೇ ಉಳಿಯದು.

ಆದರೆ ದುಃಖದಿಂದ ಹೇಳಬೇಕಾಗಿದೆ, ಗಾಂಧೀಜಿಯಲ್ಲಿ ಇದ್ದಷ್ಟು ಸತ್ಯನಿಷ್ಠೆ ನಮ್ಮೆಲ್ಲರಲ್ಲೂ ಇಲ್ಲ. ಇದರಿಂದಾಗಿ ಕೊನೆ ಕೊನೆಯಲ್ಲಿ ಗಾಂಧೀಜಿಯ ಮಾತಿನಲ್ಲಿ ಎಲ್ಲರ ವಿಶ್ವಾಸ ಉಳಿಯಲಿಲ್ಲ. ಅವರ ಮಾತುಗಳ ಬಗೆಗೆ ಜನರ ಮನಸ್ಸಿನಲ್ಲಿ, ವಿರೋಧಿಗಳ ಮನದಲ್ಲಿ, ಸರಕಾರದ ಮನಸ್ಸಿನಲ್ಲಿ ಶಂಕೆ ಎದ್ದು ನಿಲ್ಲತೊಡಗಿತು—ಗಾಂಧೀಜೀ ಹೇಳುವುದೇನೋ ಹಾಗೆ ಹೇಳುತ್ತಾರೆ, ಅವರ ಮನಸ್ಸಿನಲ್ಲಿ ಬೇರೆಯೇ ಇದ್ದೀತು—ಎಂದು. ಜಿನ್ನಾರ ಮಾತಿನಲ್ಲಿ ಹಿಂದೂಗಳಿಗೆ ಹೇಗೆ ವಿಶ್ವಾಸವಿರಲಿಲ್ಲವೋ ಹಾಗೆಯೇ ಬಹು ಮಂದಿ ಮುಸಲ್ಮಾನರು ಗಾಂಧೀಜಿಯ ಮಾತಿನಲ್ಲಿ ನಂಬಿಕೆ ಕಳೆದುಕೊಂಡುಬಿಟ್ಟಿದ್ದರು. ಅರ್ಥಾತ್ ಶಬ್ದಶಕ್ತಿ ಮುರಿಯಿತು. ಅದರ ಪರಿಣಾಮವನ್ನು ಭಾರತದಲ್ಲಿ ನಾವು ನೋಡಿಯೇ ಇದ್ದೇವೆ. ಸ್ವರಾಜ್ಯ ಪ್ರಾಪ್ತಿಯ ಸಮಯದಲ್ಲಿ ಕೊನೆ ಕೊನೆಗೆ ನಡೆದುದೆಲ್ಲ ಅದರ ಪರಿಣಾಮವೇ.

ಗಾಂಧೀಜೀ ಆ ಕಾಲವನ್ನು ಬಹು ದುಃಖದಲ್ಲಿ ಕಳೆಯಬೇಕಾಯಿತು.

ಅವರ ಮಾತನ್ನು ಜನ ಕೇಳುತ್ತಿರಲಿಲ್ಲ, ಇದು ಕೊನೆಕೊನೆಗೆ. ಆದರೆ ಬಾಹ್ಯ ವ್ಯವಹಾರದ ಕ್ಷೇತ್ರದಲ್ಲಿ ಗಾಂಧೀಜೀ ಅಪೂರ್ವ ಸತ್ಯನಿಷ್ಠೆ ತೋರಿದರು. ಶಬ್ದಶಕ್ತಿಯ ಪ್ರತಿಷ್ಠೆ ಹೆಚ್ಚಿಸಿದರು. ರಾಜನೀತಿಯ ಶುದ್ಧೀಕರಣಕ್ಕಾಗಿ ಬಾಪೂ ಕೈಗೊಂಡ ಪ್ರಯತ್ನವನ್ನು ಬೇರಾರೂ ಮಾಡಿರುವುದನ್ನು ನಾನರಿಯೆ. ಅವರು ರಾಜಕೀಯದಲ್ಲಿ ತೊಡಗಿದ್ದರೂ ಸದಾ ಸತ್ಯದಮೇಲೆ ಕಣ್ಣಿಟ್ಟು ಕೆಲಸ ಮಾಡುತ್ತಿದ್ದರು.

ರಾಜಕೀಯವನ್ನೇ ನಡೆಸಲಿಲ್ಲ

ನಿಜ ಹೇಳುವುದಾದರೆ ಗಾಂಧೀಜೀ ರಾಜಕೀಯವನ್ನೇ ನಡೆಸಲಿಲ್ಲ ಎನ್ನುತ್ತೇನೆ. ಅವರು ನಡೆಸಿದ್ದೆಲ್ಲ ಲೋಕನೀತಿ. ಜನತೆಯನ್ನು ಎಬ್ಬಿಸಲು ಅವರ ಮಂಥನ ನಡೆದಿತ್ತು. ಸ್ವರಾಜ್ಯಪ್ರಾಪ್ತಿಗೆ ಮುನ್ನ ನಡೆದ ಕೆಲಸವೆಲ್ಲ ಲೋಕನೀತಿಯೇ, ರಾಜನೀತಿಯಲ್ಲ. ಆಗ ಸ್ವಾತಂತ್ರ್ಯ ಪಡೆಯುವುದೇ ಮುಖ್ಯಕಾರ್ಯ ಆಗಿತ್ತು, ಹಾಗೆಂದೇ ಗಾಂಧೀಜೀ ರಾಜಕೀಯದಲ್ಲಿ ಭಾಗವಹಿಸಿದರು. ಶಾಸ್ತ್ರದಲ್ಲಿ ಹೇಳಿದೆ: **ಸ್ವತಂತ್ರಃ ಕರ್ತಾ**—ಸ್ವತಂತ್ರನಲ್ಲದವನು 'ಕರ್ತಾ' ಆಗಲಾರ ಎಂದರೆ, ಸ್ವತಂತ್ರನಲ್ಲದವನಿಗೆ ಯಾವುದೇ ಅಧಿಕಾರವೂ ಇಲ್ಲ. ಇದೇ ಕಾರಣದಿಂದ ಸ್ವರಾಜ್ಯ ತರಲು ಗಾಂಧೀಜೀ ರಾಜಕೀಯದಲ್ಲಿ ಬಿದ್ದರು.

ಬಾಪೂ ಜೀವನ ಹಾಗೂ ಸಮಾಜಗಳ ನಿಷ್ಠೆಗಳನ್ನು ನಿರೂಪಿಸಿದರು. ಅದರಲ್ಲಿ ಸ್ವಾಭಾವಿಕವಾಗಿಯೇ ರಾಜನೀತಿಗೆ ಸ್ಥಾನ ಸಿಕ್ಕಿತು. ಅವರ ಜೀವನದಲ್ಲಿ ರಾಜನೀತಿಗೆ ಪ್ರಾಧಾನ್ಯವಿರಲಿಲ್ಲ. ಜೀವನ ನಿಷ್ಠೆಯಲ್ಲಿ ರಾಜನೀತಿಗೆ ಸ್ಥಾನವಿದ್ದಷ್ಟೇ ಜೀವನ ನಿಷ್ಠೆಯನ್ನು ಧ್ಯಾನದಲ್ಲಿರಿಸಿ ಅವರು ರಾಜಕೀಯ ಪ್ರಶ್ನೆಗಳನ್ನು ಪರಿಹರಿಸುತ್ತಿದ್ದರು. ಹಾಗೆಂದೇ ಅವರ ಜೀವನದಲ್ಲಿ ರಚನಾತ್ಮಕ ಆಂದೋಲನದ ಮೂಲಕ ಸ್ವಾತಂತ್ರ್ಯ ಚಳವಳಿ ಸಾಗಿತು.

ರಾಜಕೀಯವನ್ನು ನೀತಿಯುತಗೊಳಿಸುವ ಕಲ್ಪನೆ

ಗೋಖಲೆಯವರು ರಾಜಕೀಯವನ್ನು ಆಧ್ಯಾತ್ಮೀಕರಣಗೊಳಿಸುವ, ನೀತಿಯುತಗೊಳಿಸುವ ಮಾತನ್ನು ಆಡಿದ್ದರು. ಅವರೊಂದು ಉದಾತ್ತ

ಕಲ್ಪನೆಯನ್ನೇ ಕೊಟ್ಟರು. ಇತಿಹಾಸದಲ್ಲಿ ಅಂಥದೇ ಪ್ರಯತ್ನವನ್ನು ಮಹಮ್ಮದ್ ಪೈಗಂಬರನೂ ಸಹ ಮಾಡಿದ್ದ; ಆದರೆ ಅವನಿಗೆ ಯಶಸ್ಸು ಸಿಗಲಿಲ್ಲ. ಗೋಖಲೆಯವರು "ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ" ಯನ್ನು ಸ್ಥಾಪಿಸಿ ಅದರ ಉದ್ದೇಶದಲ್ಲಿ 'ರಾಜಕೀಯವನ್ನು ಉದಾತ್ತಗೊಳಿಸಿ ಅದಕ್ಕೆ ಅಧ್ಯಾತ್ಮದ ಯೋಗ್ಯತೆಯವರೆಗೆ ಮುಟ್ಟಿಸುವುದು' ಎಂದು ಹೇಳಿದ್ದರು. ಅವರು ರಾಜನೀತಿಯನ್ನು ಧರ್ಮಮಯ (Spiritualise), ನೀತಿಮಯ ಗೊಳಿಸುವ ಕಲ್ಪನೆಯನ್ನು ಇತ್ತರು.

ಗಾಂಧೀಜೀ ಈ ಮಾತನ್ನೆತ್ತಿಕೊಂಡು ಅದನ್ನು ವಿಕಾಸಗೊಳಿಸಿದರು. ರಾಜನೀತಿಗೆ ಆಧ್ಯಾತ್ಮಿಕ ರೂಪವನ್ನು ಕೊಡುವ ವಿಚಾರವನ್ನು ಗಾಂಧೀಜೀ ಹೆಚ್ಚು ಸ್ಪಷ್ಟಗೊಳಿಸಿದರು. ನಾವು ಮಾಡುವ ಕೆಲಸದಲ್ಲೆಲ್ಲಾ ರಾಜಕೀಯವೂ ಬಂದೇ ಬರುತ್ತದೆ. ರಾಜಕೀಯದಲ್ಲಿ ಸತ್ಯ ಮತ್ತು ಅಹಿಂಸೆಯ ಆಧಾರದ ಮೇಲೆ ನಡೆದುಕೊಳ್ಳಬೇಕೆಂದು ಗಾಂಧೀಜೀ ಹೇಳಿದರು. ಬರೀ ಆಧ್ಯಾತ್ಮಿಕ ಎಂದು ಹೇಳುವುದರಿಂದ ಯಾವುದೂ ಸ್ಪಷ್ಟವಾಗುವುದಿಲ್ಲ, ಅಂತಲೇ ಗಾಂಧೀಜೀ ಅದರ ವ್ಯಾಖ್ಯೆಯನ್ನೂ ನೀಡಿದರು ಮತ್ತು ಸ್ವತಃ ರಾಜನೀತಿಗೆ ಆಧ್ಯಾತ್ಮಿಕ ಸ್ವರೂಪ ಕೊಡುವ ಸತತ ಪ್ರಯತ್ನ ಮಾಡಿದರು. ಇದು ಕೆಲವು ಅಂಶಗಳಲ್ಲಿ ಸಫಲವೂ ಆಯಿತು. ಏಕೆಂದರೆ, ಇದು ಅಧಿಕಾರಪ್ರಾಪ್ತಿಗೆ ಮುನ್ನ ನಡೆದ ಪ್ರಯತ್ನವಾಗಿತ್ತು.

ಆಗ ಸ್ವರಾಜ್ಯ ತರಬೇಕಿತ್ತು

ಬಾಪೂ ಭಾಗವಹಿಸಿದ ರಾಜನೀತಿ ಎಂಥದಾಗಿತ್ತು? ಆಗ ಕಾಂಗ್ರೆಸ್ ಸದಸ್ಯನಾಗುವುದು ದಬ್ಬಾಳಿಕೆಯ ಸರ್ಕಾರದ ಕೋಪಕ್ಕೆ ಪಾತ್ರವಾಗುವುದು ಎಂದಿತ್ತು. ಇಂದು ಕಾಂಗ್ರೆಸ್ ಸದಸ್ಯನಾಗಿ ಕಳೆದುಕೊಳ್ಳುವುದೇನಿದೆ? ಬಹುಶಃ ಪಡೆಯುವುದೇ ಇದೆ. ಆ ಸಮಯದಲ್ಲಿ ತ್ಯಾಗ ಇತ್ತು, ಕಷ್ಟ ಇತ್ತು. ಯಾವುದೇ ದೇಶ ಸ್ವಾತಂತ್ರ್ಯ ಪಡೆಯುವ ಪ್ರಯತ್ನ ಮಾಡುವಾಗ ಅದರಲ್ಲಿ ಸ್ವಾಭಾವಿಕವಾಗಿಯೇ ಆಧ್ಯಾತ್ಮಿಕತೆ ಬರುತ್ತದೆ. ಕಾರಣ, ಅದರ ಪಕ್ಷದಲ್ಲಿ ಒಂದು ದೊಡ್ಡ ಸತ್ಯ ಅಡಕವಾಗಿರುತ್ತದೆ. ಹಾಗೆಂದೇ ಅದರಲ್ಲಿ ಸತ್ಪುರುಷರು, ಸಜ್ಜನರು ಸೇರಿರುತ್ತಾರೆ. ಆ ಕಾಲದಲ್ಲಿ ಅಹಿಂಸೆಯ ಮಾತು ನಡೆಯು

ತ್ತಿತ್ತು, ಸತ್ಯದ ಹೆಸರನ್ನೆತ್ತಿಕೊಳ್ಳುತ್ತಿದ್ದರು, ಇಡೀ ದೇಶಾದ್ಯಂತ ಉಪವಾಸ ನಡೆಸಲು ಕರೆಕೊಡುತ್ತಿದ್ದರು ಮತ್ತು ಜನರು ಒಂದೆರಡು ದಿನ ಉಪವಾಸವೂ ಮಾಡುತ್ತಿದ್ದರು. ನೂಲು ತೆಗೆಯಲು ಹೇಳಿದರೆ, ಜನ ನೂಲುತ್ತಿದ್ದರು ಮತ್ತು ಪ್ರಾರ್ಥನೆಗೂ ಕುಳಿತುಕೊಳ್ಳುತ್ತಿದ್ದರು. ಏಕೆಂದರೆ, ಅದು ರಾಜನೀತಿಯಾಗಿರಲಿಲ್ಲ, ಲೋಕನೀತಿ ಆಗಿತ್ತು. ಗುಲಾಮ ದೇಶವನ್ನು ಸ್ವತಂತ್ರಗೊಳಿಸುವ ಕೆಲಸ ರಾಜನೀತಿಯಲ್ಲಿ ಸೇರಿರುವುದಿಲ್ಲ, ಲೋಕನೀತಿಯೆಂದೇ ಎಣಿಸಲ್ಪಡುತ್ತದೆ. ಈ ಕಾರಣದಿಂದಲೇ ಅದರಲ್ಲಿ ಆಧ್ಯಾತ್ಮಿಕತೆಯ ಅಂಶ ಬಂದುಬಿಡುತ್ತದೆ, ನಿಷ್ಕಾಮ ಸೇವೆಯ ಇಣುಕು ಸಿಗುತ್ತದೆ.

ಸ್ವರಾಜ್ಯ ಸಿಗುತ್ತಲೇ ರಸ್ತೆ ಬದಲು

ಆದರೆ ಅಧಿಕಾರ ಪ್ರಾಪ್ತಿಯ ಸುಳಿವು ದೂರದಿಂದಲೇ ಕಂಡುಬಂದ ಕೂಡಲೇ ರಾಜನೀತಿಯಲ್ಲಿ ಆಧ್ಯಾತ್ಮೀಕರಣದ ಕಂಡ ಕಿರುನೋಟ ಹಾರಿ ಹೋಯಿತು. ಆಧ್ಯಾತ್ಮೀಕರಣದ ಬಲ ದುರ್ಬಲವಾಯಿತು. ಅಧಿಕಾರ ಕೈಗೆ ಇನ್ನೇನು ಬಂತು ಎಂದಾದೊಡನೆ ಆ ರಾಜಕೀಯ ಅಧ್ಯಾತ್ಮವನ್ನು ಹೆಚ್ಚು ಕಡಿಮೆ ತೊರೆದೇಬಿಟ್ಟಿತು. ಇನ್ನು ನಮ್ಮ ರಸ್ತೆ ಬೇರೆ ಬೇರೆ ಎಂದು ಗಾಂಧೀಜಿಗೂ ಹೇಳಿಬಿಟ್ಟರು. "ಕವಲು ಹಾದಿ" (Parting of ways) ಎಂದು ಆಗಿಬಿಟ್ಟಿತು. ಕಾಂಗ್ರೆಸ್ ಕಾರ್ಯಸಮಿತಿ ಗಾಂಧೀಜೀಗೆ ಸ್ಪಷ್ಟವಾಗಿ ಹೇಳಿತು. "ಇಂಗ್ಲೀಷರು ನಮ್ಮ ಇಂಥಿಂಥ ಶರತ್ತನ್ನು ಒಪ್ಪುತ್ತಾರೆ. ಆಗ ನಾವು ಅವರಿಗೆ ಯುದ್ಧದಲ್ಲಿ ಮತ್ತು ಇತರ ಎಲ್ಲ ವಿಧವಾದ ನೆರವನ್ನೂ ಕೊಡುತ್ತೇವೆ. ಅಹಿಂಸೆಯ ವಿಚಾರವೇನಿತ್ತು, ಅದನ್ನು ಬಿಡುತ್ತೇವೆ"— ಹೀಗೆ ಹೇಳಿ ಅವರು ಗಾಂಧೀಜಿಯನ್ನು ಬೇರೆ ಮಾಡಿಬಿಟ್ಟರು.

ಆಗ ನನಗೆ ಮಹಾಭಾರತದ ಒಂದು ಮಾತು ನೆನಪಾಯಿತು. ಯುದ್ಧ ಹತ್ತಿರ ಬಂದಿತ್ತು, ಕೃಷ್ಣ ಪರಮಾತ್ಮನ ಬೆಂಬಲ ಪಡೆಯಲು ಅರ್ಜುನ ಮತ್ತು ದುರ್ಯೋಧನರಿಬ್ಬರೂ ಆತನ ಬಳಿ ಹೋದರು. ಭಗವಂತ ನಿದ್ರಿಸಿದ್ದ. ಅರ್ಜುನ ಅವನ ಕಾಲುಗಳ ಬಳಿ ಕುಳಿತಿದ್ದ, ದುರ್ಯೋಧನ ತಲೆಯ ಬಳಿ. ಭಗವಂತ ಕಣ್ಣು ತೆರೆದ, ಎದುರಿಗೆ ಅರ್ಜುನ ಕುಳಿತಿದ್ದನ್ನು ಕಂಡ. ಕೇಳಿದ: "ಏಕೆ ಬಂದೆ?" ಇವನು ಹೇಳಿದ: "ಯುದ್ಧ ಆಗುವುದಿದೆ, ನಿಮ್ಮ

ಸಹಾಯ ಪಡೆಯಲು ಬಂದೆ." ದುರ್ಯೋಧನ ಹೇಳಿದ : " ನಾನೂ ಇಲ್ಲಿ ಕುಳಿತಿದ್ದೇನೆ." ಆಗ ಕೃಷ್ಣ ಹೇಳಿದ : " ಎರಡು ರೀತಿಯ ಸಹಾಯ ಕೊಡ ಬಲ್ಲೆ. ಒಂದು ಯಾದವ ಸೇನೆಯದು, ಮತ್ತೊಂದು ನಿಶ್ಶಸ್ತ್ರನಾದ ನನ್ನದು ; ಇದರಲ್ಲಿ ಆರಿಸಿಕೊ." ಅರ್ಜುನ ಹೇಳಿದ : "ಆಯುಧವಿಲ್ಲದೆ ಇರುವ ನೀನೇ ನನಗೆ ಬೇಕು." ದುರ್ಯೋಧನ ಭಗವಂತನನ್ನು ಬಿಟ್ಟು ಸೇನೆಯನ್ನು ಪಡೆದು ಸಂತೃಪ್ತನಾದ, ಸೇನೆಯ ಬಲದಿಂದಲೇ ಯುದ್ಧ ಗೆಲ್ಲುವೆನೆಂದು ಕೊಂಡ. ಈ ರೀತಿ ಈ ಜನ ಗಾಂಧೀಜಿಯನ್ನು ಬಿಟ್ಟು ಸೇನೆ ಮುಂತಾದ ವನ್ನು ತೆಗೆದುಕೊಳ್ಳುವುದು ಸರಿ ಎಂದು ತಿಳಿದಾಗ ನನಗೆ ಮಹಾಭಾರತದ ಈ ಪ್ರಸಂಗ ನೆನಪಿಗೆ ಬಂತು.

ಅಧಿಕಾರ ಪ್ರಾಪ್ತಿಯ ಅವಕಾಶ ಹತ್ತಿರ ಬಂದಂತೆಲ್ಲಾ ಕಾಂಗ್ರೆಸ್ ಗಾಂಧೀಜಿಯಿಂದ ದೂರ ಸರಿಯುತ್ತಾ ಹೋಯಿತು. ಇಬ್ಬರ ದೃಷ್ಟಿಕೋಣ ದಲ್ಲೂ ಅಂತರವುಂಟಾಯಿತು. ಗಾಂಧೀಜಿಯ ಅಂತಿಮ ದಿನಗಳ ಚಿತ್ರವನ್ನು ಪ್ಯಾರೇಲಾಲರು ತಮ್ಮ ಅಪ್ರತಿಮ ಗ್ರಂಥ " ದಿ ಲಾಸ್ಟ್ ಫೇಜ್" ಎಂಬುದ ರಲ್ಲಿ ಕೊಟ್ಟಿದಾರೆ. ಅದರಲ್ಲಿ ಎಲ್ಲ ವರ್ಣನೆಯೂ ಇದೆ. ಅಂತಿಮ ದಿನಗಳಲ್ಲಿ ಗಾಂಧೀಜಿ ಹೇಳುತ್ತಿದ್ದರು. ಯಾವ ಯಾವ ಮೂಲ್ಯಗಳಿಗಾಗಿ ನಾನು ಮಂಥನ ನಡೆಸಿದ್ದೇನೊ ಅವೆಲ್ಲಾ ಮುಗಿದುಹೋಗುತ್ತಿವೆ." ದಿಲ್ಲಿಯಲ್ಲಿ ಸ್ವಾತಂತ್ರ್ಯ ಪ್ರಾಪ್ತಿಯ ಸಮಾರಂಭ ನಡೆಯುತ್ತಿದ್ದಾಗ ಗಾಂಧೀಜಿ ದೂರ-ದೂರ ಸಾಗಿ ತಮ್ಮ ತಪಸ್ಸನ್ನು ಅತ್ಯಂತ ಕಠೋರಗೊಳಿಸುತ್ತಿದ್ದರು. ಯಾವ ಗಾಂಧಿಯ ಹೆಸರನ್ನೆತ್ತಿಕೊಂಡು ಲಕ್ಷಾಂತರ ಮಂದಿ ತ್ಯಾಗಮಾಡಿದ್ದರೋ ಅವರನ್ನು ಕುರಿತು ಅಂತಿಮ ದಿನಗಳಲ್ಲಿ ವ್ಯಾಸಮುನಿಯಂತೆ ಅವರು ಹೇಳ ಬೇಕಾಗಿ ಬಂತು :

ಊರ್ಧ್ವಬಾಹುರ್ ವಿರೋಮ್ಯೇಷೋ ನ ಚ ಕಶ್ಚಿತ್
ಶೃಣೋತಿ ಮೇ

'ಕೈಬೀಸಿ ಕೂಗುತ್ತಿದ್ದೇನೆ, ಯಾರೂ ನನ್ನ ಮಾತು ಕೇಳುತ್ತಿಲ್ಲ.'

ಭಗವಾನ್ ವ್ಯಾಸರಂತೆಯೇ ಈ ಯುಗದಲ್ಲಿ ಗಾಂಧೀಜೀ ಅರಣ್ಯ ರೋದನ ಮಾಡಬೇಕಾಗಿ ಬಂತು.

ಹಾಗೆಂದೇ ರಾಜನೀತಿಗೆ ಆಧ್ಯಾತ್ಮಿಕ ರೂಪ ಕೊಡುವ ಭಾಸ ಅಧಿಕಾರ ಪ್ರಾಪ್ತಿಗೆ ಮುಂಚಿನದಾಗಿತ್ತು ಎಂದು ಹೇಳಿದೆ. ಆದರೆ ಅಧಿಕಾರ ಪ್ರಾಪ್ತಿಯ ಅಲ್ಪ ಸೂಚನೆ ಕಂಡುಬಂದೊಡನೆ ಆಧ್ಯಾತ್ಮೀಕರಣದ ಸುಳಿವು ಇದ್ದಕ್ಕಿದ್ದಂತೆ ಹಾರಿಹೋಯಿತು.

ರಾಜನೀತಿಯನ್ನೇ ಮುಗಿಸಬೇಕಾಗಿದೆ

ಬಾಪೂ ರಾಜನೀತಿಯ ಆಧ್ಯಾತ್ಮೀಕರಣಕ್ಕಾಗಿ ಪ್ರಯತ್ನಪಡುತ್ತಿದ್ದಂತೆ ನೀವೂ ಮಾಡಬೇಕು ಎಂದು ಕೆಲವರು ನನಗೆ ಈಗ ತಿಳಿಸುತ್ತಿದಾರೆ. ಈ ರಾಜನೀತಿಯನ್ನೇ ಮುಗಿಸಬೇಕಾಗಿದೆ ನಾನು ಎಂದು ಅವರಿಗೆ ಹೇಳುತ್ತೇನೆ. ಕಲ್ಲನ್ನು ಮಹಾದೇವನನ್ನಾಗಿಸಿ ಅದನ್ನು ಪೂಜಿಸುವುದು ನನಗೆ ಬೇಕಾಗಿಲ್ಲ. ಅದನ್ನು ಕಿಸೆಯಲ್ಲಿಟ್ಟುಕೊಂಡು ಅಂತರ್ಯಾಮಿ ಪ್ರಭುವನ್ನು ಪೂಜಿಸು ಎಂದು ಹೇಳುತ್ತೇನೆ. ಕಲ್ಲಿನ ಆಧ್ಯಾತ್ಮೀಕರಣದ ಕಾಲವೂ ಒಂದಿತ್ತು. ಆ ಕಾಲದ ಬಗೆಗೆ ಮೆಚ್ಚಿಗೆ ಇದೆ, ಆದರೆ ಗಂಧವನ್ನು ತೇದು-ತೇದು ಕಲ್ಲನ್ನು ಪೂಜಿಸುತ್ತಾ ಎದುರಿಗಿರುವ ಹಸಿದ ಜನರನ್ನು ಉಪೇಕ್ಷಿಸುವುದು, ಅವರತ್ತ ನೋಡದೆಯೂ ಇರುವುದು ಇನ್ನು ನಡೆಯುವುದಿಲ್ಲ. ಕಲ್ಲಿನ ಪೂಜೆ ಕಳೆದುಹೋದ ಮಾತು. ಭಾಗವತದಲ್ಲಿ ಸರಿಯಾಗಿಯೇ ಹೇಳಿದೆ: **ಕಲೌ ಜನಾ ಭವಿಷ್ಯಂತಿ ನಾರಾಯಣಪರಾಯಣಾಃ** ಕಲಿಯುಗದಲ್ಲಿ ಜನರು ನಾರಾಯಣಪರಾಯಣರಾಗುತ್ತಾರೆ. ಭಕ್ತಿ ಇರುವುದಿಲ್ಲ ಎಂದು ಇದರರ್ಥವಲ್ಲ. ಕೇವಲ ಭಕ್ತಿಯ ಸ್ಥಾನ ಬದಲಾಗಿಬಿಟ್ಟಿದೆ.

ರಾಜನೀತಿಯ ಆಧ್ಯಾತ್ಮೀಕರಣದ ಪ್ರಕ್ರಿಯೆಯಲ್ಲಿ ರಾಜನೀತಿ ನಿಲ್ಲುವುದಿಲ್ಲ, ಕುಸಿದು ಬೀಳುತ್ತದೆ ಮತ್ತು ಅದರ ಬದಲು ಲೋಕನೀತಿ ಬರುತ್ತದೆ ಎಂದು ನನ್ನ ಗಮನಕ್ಕೆ ಬಂತು. ಸ್ವಾತಂತ್ರ್ಯದೊಂದಿಗೆ ಜನತಂತ್ರ ಹಾಗೂ ಅಣುಯುಗ ಈ ಮೂರೂ ಅಂಶಗಳು ಒಟ್ಟಿಗೆ ಬರುತ್ತವೆ. ಅಲ್ಲಿ ರಾಜಕೀಯದ ಆಧ್ಯಾತ್ಮೀಕರಣ ಮಾಡುವಾಗ ರಾಜನೀತಿ ಮುರಿದುಬೀಳುತ್ತದೆ. ಕಟ್ಟಿಗೆಯನ್ನು ಉರಿಸುವ ಪ್ರಯತ್ನ ಮಾಡುವಾಗ ಆ ಕೆಲಸ ನಡೆಯುತ್ತಿರುವಂತೆ ಕಟ್ಟಿಗೆ ಉರಿದುಹೋಗುತ್ತದೆ. ಕಟ್ಟಿಗೆಯ ಕಟ್ಟಿಗೆ ಸ್ವರೂಪವನ್ನು ಹಾಗೆಯೇ ಇರಿಸಿ ಅಗ್ನಿಯ ಪ್ರವೇಶ ಮಾಡಿಸುವುದು—ಕಟ್ಟಿಗೆಯೂ ಇದೆ, ಬೆಂಕಿಯೂ

ಇದೆ ಎಂದು ತೋರಿಸುವುದು ಸಾಧ್ಯವಿಲ್ಲ. ಬೆಂಕಿ ಎಷ್ಟು ಹೆಚ್ಚುವುದೋ ಅಷ್ಟು ಕಟ್ಟಿಗೆ ನಾಶವಾಗುವುದು. ಅದರ ನಾಶದೊಂದಿಗೆಯೇ ಅದರ ಪ್ರಕಾಶ.

ಅರ್ಥಾತ್ ಅಲ್ಪಮತ ಮತ್ತು ಬಹುಮತದ ಭೇದದ ಕಾರುಬಾರು ನಡೆಯುವಲ್ಲಿ ರಾಜನೀತಿಯನ್ನು ಸ್ಥಿರಗೊಳಿಸಿ ಅದನ್ನು ಆಧ್ಯಾತ್ಮೀಕರಣ ಗೊಳಿಸು ಎನ್ನುವುದು ನಡೆಯದು. 'ರಾಜನೀತಿಯ ಆಧ್ಯಾತ್ಮೀಕರಣ' ಎಂಬ ವಾಕ್ಯವನ್ನು ಪ್ರಯೋಗಿಸುವುದಾದರೆ ಮೊದಲನೆಯ ಶಬ್ದ ಎರಡನೆಯ ಶಬ್ದವನ್ನು ಹೊಡೆದುಹಾಕುತ್ತದೆ, ಎರಡನೆಯದು ಮೊದಲನೆಯದನ್ನು. ಎರಡೂ ಪರಸ್ಪರ ವಿರೋಧೀ ಶಬ್ದಗಳಾಗಿಬಿಟ್ಟಿವೆ. ಅಣುಯುಗ, ಜನತಂತ್ರ ಮತ್ತು ಸ್ವಾತಂತ್ರ್ಯ—ಇವು ಮೂರೂ ಒಟ್ಟಿಗೆ ಬಂದಿರುವ ಕಾರಣದಿಂದ. ಆದುದರಿಂದ ರಾಜನೀತಿಯ ದಿನ ಮುಗಿದುಹೋಗಿದೆ ಎಂದು ಹೇಳುವುದೇ ಸರಿ ಎಂದು ನನ್ನ ಧ್ಯಾನಕ್ಕೆ ಬಂದಿದೆ. ಇನ್ನು ಅದು ಹೋಗಿಬಿಡಬೇಕು.

'ರಾಜ' ಮತ್ತು 'ನೀತಿ'—ಈ ಎರಡು ಶಬ್ದಗಳೂ ಒಂದನ್ನೊಂದು ಹೊಡೆದುಹಾಕುತ್ತವೆ. 'ನೀತಿ' ಶಬ್ದ 'ರಾಜ'ನನ್ನು ಹೊಡೆಯುತ್ತದೆ, 'ರಾಜ' ಶಬ್ದ ನೀತಿಯನ್ನು. ನೀತಿ ಬಂದರೆ ರಾಜ್ಯವ್ಯವಸ್ಥೆ ತಾನಾಗಿಯೇ ಮುಕ್ಕಾಗುತ್ತದೆ. ರಾಜ್ಯವ್ಯವಸ್ಥೆ ಬಂದರೆ ನೀತಿ ಮುಗಿದುಹೋಗುತ್ತದೆ. ನಮಗೀಗ ಬೇಕಾದುದು ರಾಜ್ಯವಲ್ಲ, ಪ್ರಾಜ್ಯ. ಇದು ಎಷ್ಟು ದಿನದಲ್ಲಿ ಆದೀತು ನನಗೆ ತಿಳಿಯದು. ಆದರೆ ಮಾಡತಕ್ಕ ಕೆಲಸವೇನಾದರೂ ಇದ್ದರೆ ಇದು. **ಮೇರೇ ತೋ ಮುಖ ರಾಮನಾಮ ದೂಸರಾ ನ ಕೋಈ** ನನ್ನ ಬಾಯಿಂದ ರಾಮನಾಮದ ಹೊರತಾಗಿ ಮತ್ತಾವುದೂ ಹೊರಡದು ಎಂಬ ನಿರ್ಣಯವನ್ನು ಸರ್ವೋದಯ ಸಮಾಜ ಮಾಡಬೇಕು.

ಮೂಲದಲ್ಲಿ ಸತ್ತಾ-ಮೋಹ !

ಜಗತ್ತಿನಲ್ಲಿ ಇಂದು ದೊಡ್ಡದೊಂದು ಮೋಹ ಕೆಲಸ ಮಾಡುತ್ತಿದೆ—ಸತ್ತೆಯ ಮೋಹ ಅದು. ಸತ್ತೆ ಇಲ್ಲದೆ ಕೆಲಸ ಮಾಡಲಾರೆವು, ಸತ್ತೆಯ ಸಹಾಯದಿಂದಲೇ ಹೆಚ್ಚು ಕೆಲಸವಾದೀತು ಎಂದು ಸಜ್ಜನರೂ ನಂಬಿ ಕುಳಿತಿದ್ದಾರೆ.

ಗಾಂಧೀಜಿಯ ಬಹುತೇಕ ಸಂಗಡಿಗರು ಈ ಮೋಹದಲ್ಲಿ ಬಿದ್ದಿದಾರೆ. ಎಂಥ ಪರಿಸ್ಥಿತಿಯಲ್ಲಾದರೂ ರಾಜ್ಯ ನಡೆಸುವ ಜವಾಬ್ದಾರಿ ತಮ್ಮ ಮೇಲೆಯೇ ಇದೆ ಎಂದು ಇವರು ತಿಳಿದಿದ್ದಾರೆ. ನಾನೂ ಒಪ್ಪುತ್ತೇನೆ, ನಾವು ಸ್ವರಾಜ್ಯ ಗಳಿಸಿದೆವು. ರಾಜ್ಯ ನಡೆಸುವ ಹೊಣೆ ನಾವು ನಿರ್ವಹಿಸದಿದ್ದರೆ ಇನ್ನು ಸ್ವರಾಜ್ಯಪ್ರಾಪ್ತಿಯ ಅರ್ಥವಾದರೂ ಏನು? ಆದಕಾರಣ ಯಾವುದೇ ಸ್ಥಿತಿಯಲ್ಲಿ ರಾಜ್ಯ ನಡೆಸುವ ಹೊಣೆ ನಮ್ಮದೇ ಎಂದು ಅವರು ತಿಳಿಯುತ್ತಾರೆ.

ಅವರು ಹೇಳುವುದು ಸರಿ. ನಾವು ಸ್ವರಾಜ್ಯವನ್ನಂತೂ ಗಳಿಸಿದೆವು. ಆದರೆ ಸತ್ತೆಯನ್ನು ಕೈಗೆತ್ತಿಕೊಂಡು ಅದನ್ನು ಲಯಗೊಳಿಸುವ ಕೆಲಸವನ್ನು ಮರುಕ್ಷಣದಿಂದಲೇ ಮಾಡುವುದಕ್ಕಾಗಿ ಎಂದು ನನ್ನ ವಿಚಾರ. ಪೂರ್ಣರೀತಿ ವಿಲಯವಾಗಲು ಐವತ್ತು ವರ್ಷವಾಗಲಿ, ಆದರೆ ಅದರ ಆರಂಭ ಇಂದಿನಿಂದಲೇ ಆಗಬೇಕು.

ಈ ವಿಷಯವನ್ನು ನಾವು ಎಷ್ಟು ಜಿಜ್ಞಾಸೆ ಮಾಡಿದರೂ ಕಡಿಮೆಯೇ, ರಾಜ್ಯ ಕ್ಷೀಣವಾಗುತ್ತಾ ಹೋಗಬೇಕು ಎಂದು ಸಾಮ್ಯವಾದಿಗಳು ಭಾವಿಸುತ್ತಾರೆ. ಆದರೆ ಇಂದಿನ ಪರಿಸ್ಥಿತಿಯಲ್ಲಿ ರಾಜ್ಯವ್ಯವಸ್ಥೆ ಎಷ್ಟು ಸಾಧ್ಯವೋ ಅಷ್ಟು ಬಲಿಷ್ಠಗೊಳ್ಳಬೇಕೆಂದು ಆಶಿಸುತ್ತಾರೆ. ಆ ಆಧಾರದ ಮೇಲೆ ವಿರೋಧೀ ಶಕ್ತಿಗಳನ್ನೆಲ್ಲಾ ಮುಗಿಸಿಬಿಡಬೇಕೆನ್ನುತ್ತಾರೆ. ಅನಂತರ ರಾಜ್ಯ ಕ್ಷಯಿಸುತ್ತಾ ಹೋದೀತು ಎಂದರೆ ಸಾಮ್ಯವಾದದಲ್ಲಿ ರಾಜ್ಯಶಕ್ತಿಯನ್ನು ಬಲಗೊಳಿಸುವುದು ನಗದು, ರಾಜ್ಯಶಕ್ತಿಯ ವಿಲಯ ಸಾಲ! ಈ ಸಾಲ ಎಂದು ವಸೂಲಾದೀತು ಯಾರೂ ಹೇಳುವಂತಿಲ್ಲ. 'ಇಂದಂತೂ ಅತ್ಯಂತ ಬಲಶಾಲಿ ಸತ್ತೆ ಕೊಟ್ಟುಬಿಡು!'—ಇದೇ ಅದರ ಸಾರ. ನಾಳೆಯನ್ನು ಬಲ್ಲವರಾರು?

ಇಂದು ಗಾಂಧೀವಾಲಾಗಳು ಏನೆನ್ನುತ್ತಾರೆ? (ಅವರು ಗಾಂಧೀಜಿಯ ಹೆಸರೆನ್ನೆತ್ತಿಕೊಂಡು ಆಡುತ್ತಾರೆ, ಎಂತಲೇ ಅವರನ್ನು ಗಾಂಧೀವಾಲಾ ಎನ್ನುತ್ತೇನೆ.) ಯಾವ ಪರಿಸ್ಥಿತಿಯಲ್ಲಾದರೂ ರಾಜ್ಯಸತ್ತೆ ಬೇಕೇಬೇಕು ಎನ್ನುತ್ತಾರೆ ಅವರು. ಕಡಿಮೆ ಇದ್ದೀತು, ಆರಿಸಿ ಬಂದದ್ದಿದ್ದೀತು, ಪುಣ್ಯಕಾರಕವಾದುದು ಎಲ್ಲ ನಿಜ, ಆದರೆ ಅದು ಇದ್ದೇ ಇರುತ್ತದೆ. ಇದು ಅವರ ಶ್ರದ್ಧೆ, ಬಹುಮಂದಿಯ ಶ್ರದ್ಧೆ. ಅಂತಲೇ ರಾಜಕೀಯದಿಂದ ಬೇರ್ಪಟ್ಟುಹೋದರೆ

ಇಂದಿನ ಪರಿಸ್ಥಿತಿಯಲ್ಲಿ ಜಗತ್ತಿನ ಅತಿ ದೊಡ್ಡ ಸೇವೆಯ ಸಾಧನ ಕೈತಪ್ಪಿ ಹೋದೀತು ಎಂದು ಗಂಟುಹಾಕಿಕೊಂಡು ಕುಳಿತಿದ್ದಾರೆ. ಅಂತಲೇ ಮಧ್ಯಾವಧಿಯಲ್ಲಿ ಇದನ್ನು ಮಾಡಲೇಬೇಕು.

ಸತ್ತೆಯ ಮೂಲಕವೇ ಎಲ್ಲ ಸೇವೆಯೂ ಎಂದು ಇನ್ನು ಸಾಮ್ಯವಾದಿಗಳಂತೂ ನಂಬಿ ಕುಳಿತಿದ್ದಾರೆ. ಅವರದೇನೂ ಪ್ರಶ್ನೆಯೇ ಉಳಿದಿಲ್ಲ. ಯಾರು ಮನಸ್ಸಿನಲ್ಲಿ ಸೇವಾ ಪರಾಯಣರೋ, ವ್ಯಕ್ತಿಸ್ವಾತಂತ್ರ್ಯ ಮತ್ತು ಅಹಿಂಸೆಗೆ ಮಹತ್ವ ಕೊಡುವವರೋ, ಅವರು ಮಧ್ಯಾವಧಿಯಲ್ಲಿ ಸತ್ತೆಯ ಮೂಲಕವೇ ಸೇವೆ ಸಾಧ್ಯ ಎನ್ನುತ್ತಾರೆ. ಈ ಮಧ್ಯಾವಧಿ ಎನ್ನುವುದು ಯಾವಾಗಲೂ ಇತ್ತು, ಯಾವಾಗಲೂ ಇದೆ ಮತ್ತು ಯಾವಾಗಲೂ ಇದ್ದೀತು ಎನ್ನುತ್ತೇನೆ ನಾನು. ನಾವು ಏನು ಮಾಡಬೇಕಾಗಿದೆ ಅದನ್ನು ಇಂದೇ ಮಾಡತಕ್ಕದ್ದೆಂದು ನಮ್ಮ ಮನಸ್ಸಿನಲ್ಲಿ ನಿಶ್ಚಯಿಸಬೇಕು. ಜೀವದೊಡನೆ ರಾಜಿ ಮಾಡಿಕೊಳ್ಳುವ ಮನುಷ್ಯ ಜಗತ್ತಿನಲ್ಲಿ ಅಹಿಂಸೆಯ ಸ್ಥಾಪನೆ ಮಾಡಲಾರ.

ಇದು ಗಾಂಧೀ ವಿಚಾರವಲ್ಲ

ಸತ್ತೆ—ಈ ಮೋಹ ಗಾಂಧೀವಾಲಾಗಳನ್ನು ಬಿಟ್ಟದ್ದಲ್ಲ. ನಮ್ಮ ಗುರು ಗಾಂಧೀ ರಾಜಕೀಯ ಜೀವನಕ್ಕೆ ಬಹಳ ಮಹತ್ವ ಕೊಡುತ್ತಿದ್ದರು ಎಂದು ಅವರು ತಿಳಿಯುತ್ತಾರೆ. ಅದಕ್ಕಾಗಿಯೇ ನಾವೂ ಸತ್ತೆಗೆ ಗಮನ ಕೊಡಬೇಕೆನ್ನುತ್ತಾರೆ.

ಇದು ಗಾಂಧೀ ವಿಚಾರವಲ್ಲ ಎಂದು ನನಗನ್ನಿಸುತ್ತದೆ. ಸಾಮಾನ್ಯ ರೂಪದಲ್ಲಿ ನಾನು ಗಾಂಧೀಜಿಯ ಹೆಸರೆತ್ತಿ ಹೇಳುವುದಿಲ್ಲ. ಏಕೆಂದರೆ ಗಾಂಧೀಜಿಯ ಹೆಸರಿನಲ್ಲಿ ಹೇಳತೊಡಗಿದರೆ ಅವರ ಮಾತು ಹಾಗೂ ಪುಸ್ತಕಗಳನ್ನೆಲ್ಲ ತಲೆಕೆಳಗು ಮಾಡಬೇಕಾದೀತು. ಅದರಿಂದ ವಾದ-ವಿವಾದ ಆರಂಭವಾದೀತು. ಮತ್ತೆ ಭಗವಾನ್ ಬುದ್ಧನ ಶಿಷ್ಯರ ಸ್ಥಿತಿಗಿಂತ ಕೆಟ್ಟ ಗತಿ ನಮಗೊದಗೀತು. ಆದುದರಿಂದ ನಾನು ಗಾಂಧೀಜಿಯ ಹೆಸರನ್ನೆತ್ತಿಕೊಳ್ಳದೆ ಅವರ ವಿಚಾರಕ್ಕೆ ಮಾತ್ರ ಮಹತ್ವ ಕೊಡುತ್ತೇನೆ. ಆದರೆ ಈ ರೀತಿ ಗಾಂಧೀಜಿಯ ಹೆಸರನ್ನೆತ್ತಿಕೊಂಡು ಮಾತಾಡುವುದಾದರೆ ಆಗ ಹೇಳಬೇಕಾದೀತು, 'ಅಣ್ಣಾ, ಇದು ಗಾಂಧೀ ವಿಚಾರವಲ್ಲ'.

ಗಾಂಧೀಜೀ ರಾಜಕೀಯ ನಡೆಸುತ್ತಿದ್ದರು ಎಂಬ ದೊಡ್ಡದೊಂದು ಭ್ರಮೆ ಜನರಲ್ಲಿ ಹರಡಿದೆ. ಅವರೇನು ಮಾಡುತ್ತಿದ್ದರು, ಏನು ಮಾಡುತ್ತಿರಲಿಲ್ಲ ಎಂಬುದನ್ನು ಚರ್ಚೆ ಮಾಡುವುದರಿಂದ ಸಿಗುವುದೇನು? ನಮಗೇನಾಗಬೇಕು ಎಂಬುದಕ್ಕಾಗಿ ಈ ಚರ್ಚೆ ಮಾಡುವುದರಿಂದ ಈ ವಿಷಯದಲ್ಲಿ ವಿಚಾರ ಹುಟ್ಟುತ್ತದೆ. ಅದರಲ್ಲಿ ಗಾಂಧೀಜಿಯ ಉದಾಹರಣೆ ಮುಂದೆ ಬಂದು ನಿಲ್ಲುತ್ತದೆ. ಆಗ ಮೋಹ ಜನಿಸುತ್ತದೆ. ಅದಕ್ಕಾಗಿಯೇ ಆ ಮೋಹ ನಿರಸನ ಮಾಡಬೇಕು. ಗಾಂಧೀಜಿಯ ಹೆಸರಿನಿಂದ ಮತ್ತು ಗಾಂಧೀಜಿಯ ಜೀವನದ ತಪ್ಪು ನಿರೀಕ್ಷೆಯಿಂದ ಈ ಮೋಹಕ್ಕೆ ಬಲ ಸಿಕ್ಕುತ್ತದೆ. ಗಾಂಧೀಜಿ ಆದಿಯಿಂದ ಅಂತ್ಯದವರೆಗೆ ಲೋಕನೀತಿಯ ಕೆಲಸವನ್ನೇ ಮಾಡಿದರು ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ನನ್ನ ಈ ಹೇಳಿಕೆಯನ್ನು ಖಂಡಿಸುವವರಾರಾದರೂ ಇದ್ದರೆ ಅವರು ತಮ್ಮ ವಿಚಾರವನ್ನು ನನಗೆ ತಿಳಿಯಹೇಳಲಿ.

ರಾಜಕೀಯ ಪುರುಷ ಹೀಗೆ ಮಾಡಬಲ್ಲನೇ?

ಗಾಂಧೀಜೀ ರಾಜನೀತಿಯ ಪಕ್ಷಪಾತಿ ಆಗಿದ್ದರು ಎಂದು ನಿಮಗೇನಾದರೂ ಅನಿಸಿದರೆ ಅವರ ಅಂತಿಮ ಜೀವನದತ್ತ ದೃಷ್ಟಿ ಹಾಯಿಸಿ. ಸ್ವರಾಜ್ಯ ಸಿಕ್ಕಬಳಿಕ ಮಹಮ್ಮದಲೀ ಜಿನ್ನಾರವರಂತೆ ಭಾರತದ ಗವರ್ನರ್ ಜನರಲ್ ಆಗುವುದನ್ನು ಯಾರಾದರೂ ತಪ್ಪಿಸಲು ಸಾಧ್ಯವಿತ್ತೇ? ಆದರೆ ಅವರು ನವಾಖಾಲಿಯ ಹಾದಿ ಹಿಡಿದರು. ದಿಲ್ಲಿಯಲ್ಲಿ ಸ್ವಾತಂತ್ರ್ಯೋತ್ಸವ ಆಚರಿಸುತ್ತಿದ್ದಾಗ ಅಲ್ಲಿ ಅವರ ಪಾದಯಾತ್ರೆ ನಡೆದಿತ್ತು.

ಇನ್ನೊಂದು ಉದಾಹರಣೆ ತೆಗೆದುಕೊಳ್ಳಿ: ವೈಸ್‌ರಾಯ್ ಭವನ ಆಸ್ಪತ್ರೆಯಾದೀತು ಎಂದು ಗಾಂಧೀಜಿ ಹೇಳಿದ್ದರು. ಈ ಮಾತು ಅಹಿಂಸಾತ್ಮಕ ಕ್ರಾಂತಿಯ ಸಾರರೂಪ. ಹಿಂಸಾತ್ಮಕ ಕ್ರಾಂತಿಯಲ್ಲಿ ತದ್ವಿರುದ್ಧ ನಡೆಯುತ್ತದೆ. ದಬ್ಬಾಳಿಕೆಗೆ ಅಪ್ಪಣೆ ಹೊರಡುವ ಸ್ಥಳಗಳನ್ನು ತೋಪಿನ ಗುಂಡಿನಿಂದ ಉಡಾಯಿಸುತ್ತಾರೆ. ಇಲ್ಲದಿದ್ದರೆ ರಾಜಕೀಯ ಜನರು ಆ ಸ್ಥಳಗಳಿಂದ ದಬ್ಬಾಳಿಕೆಯ ಬಾವುಟವನ್ನಿಳಿಸಿ ತಮ್ಮ ಬಾವುಟವನ್ನೇರಿಸುವುದನ್ನೇ ದೊಡ್ಡ ಪರಾಕ್ರಮವೆಂದು ತಿಳಿಯುತ್ತಾರೆ. ಹಿಂಸೆ ಹಾಗೂ ರಾಜಕೀಯದ ನಡೆಯೇ ಅಂಥದು. ಆದರೆ ಗಾಂಧೀಜಿ ಇಂಥ ರಾಜಕೀಯದ ಬೆನ್ನು

ಬಿದ್ದವರಾಗಿರಲಿಲ್ಲ. ಅವರ ಅಖಂಡ ಸಾಧನೆ ಲೋಕನೀತಿಯದೇ ಆಗಿತ್ತು. ಆದಕ್ಕಾಗಿಯೇ ಸ್ವರಾಜ್ಯದಲ್ಲಿ ವೈಸ್‌ರಾಯ್ ಭವನವನ್ನು ಆಸ್ಪತ್ರೆಯನ್ನಾಗಿ ಬದಲಿಸುವ ಮಾತನಾಡಬಲ್ಲವರಾಗಿದ್ದರು.

ಮೊದಲಿನಿಂದಲೂ ಅವರ ನಿಲವು ಇಂಥದೇ. ಮತ್ತೊಂದು ಉದಾಹರಣೆ ಕೊಡಲೇ? ಚಕ್ರಗೋಷ್ಠಿಗೆ ಹೋಗಿ ಗಾಂಧೀಜಿ ಏನು ಹೇಳಿದರು? "ನಾನು ಅತ್ಯಂತ ನಮ್ರತಾಪೂರ್ವಕವಾಗಿ ಸ್ವರಾಜ್ಯ ಬೇಡುತ್ತೇನೆ" ಎಂದು ಅಲ್ಲಿ ಹೇಳಿದರು. ಅವರು ಆಡಿದ ಈ ಮಾತು ವಿಚಿತ್ರವಾದುದೇ. ಏಕೆಂದರೆ ಆ ಸಮಯದಲ್ಲಿ 'ಸ್ವರಾಜ್ಯ ನಮ್ಮ ಜನ್ಮಸಿದ್ಧ ಹಕ್ಕು. ಅದನ್ನು ನಾವು ಪಡೆದೇ ತೀರುವೆವು' ಎಂಬ ಭಾಷೆ ಆಡುತ್ತಿದ್ದ ಕಾಲ ಅದು. ಅಂಥ ಸಮಯ ದಲ್ಲಿ ಈ ನಾಯಕ ಅಲ್ಲಿ ಹೇಳಿದ "ನಾನು ನಮ್ರತಾಪೂರ್ವಕನಾಗಿ ಸ್ವರಾಜ್ಯ ವನ್ನು ಬೇಡುತ್ತೇನೆ, ಅದಿಲ್ಲದೆ ಭಾರತದ ಬಡವರ ಉದ್ಧಾರವಾಗದು, ಇದು ನನ್ನ ದೃಢ ನಂಬಿಕೆ. ನಮಗೆ ಸ್ವರಾಜ್ಯ ಏಕೆ ಬೇಕು? ನಾವು ಸ್ವತಂತ್ರರು ಎಂದು ಹೇಳಿಕೊಂಡು ಮೀಸೆಯ ಮೇಲೆ ಕೈಮಾಡುವುದಕ್ಕಲ್ಲ; ಅದರ ಹೊರತಾಗಿ ಬಡವರ ಸೇವೆಯೇ ಅಸಂಭವ". ಈ ರೀತಿ ಗಾಂಧೀಜಿ ಸ್ವರಾಜ್ಯದ ಬೇಡಿಕೆಯೊಡನೆ ಒಂದು ಹೇತುವನ್ನು ಜೋಡಿಸಿದರು. ಅದರ ಅಗತ್ಯವಾದರೂ ಏನಿತ್ತು? ಇದೇ ಗಾಂಧೀಜಿಯ ಅನುಪಮ ನಿಲುವು. ಈ ಭಾಷೆ ರಾಜನೀತಿಯವರದೋ, ಲೋಕನೀತಿಯವರದೋ ನೀವೇ ತಿಳಿಯಬಲ್ಲಿರಿ.

ಗಾಂಧೀಜಿ ರಾಜನೀತಿ ನಡೆಸಿದ್ದಿದ್ದರೆ....

ಇಷ್ಟಾದರೂ ಯೋಚಿಸಿ, ಬಾಪೂ ರಾಜನೀತಿ ನಡೆಸಿದ್ದರೆ ಕಾಂಗ್ರೆಸ್ಸನ್ನು ಕೊನೆಯಲ್ಲಿ ಲೋಕಸೇವಕ ಸಂಘವಾಗಿ ರೂಪಾಂತರಗೊಳಿಸಬೇಕೆಂಬ ಸಲಹೆ ಯನ್ನೇಕೆ ಅವರು ಕೊಡುತ್ತಿದ್ದರು. ನಿಮಗೆಲ್ಲ ಗೊತ್ತು ಸಾಯುವ ಮುನ್ನ ಬಾಪೂ ದೇಶಕ್ಕೆ ಆದೇಶ ಇತ್ತರು: "ಕಾಂಗ್ರೆಸಿನ ಸ್ವರಾಜ್ಯಪ್ರಾಪ್ತಿಯ ಕೆಲಸ ಮುಗಿಯಿತು, ಅದು ಇನ್ನು ಜನಸಾಮಾನ್ಯರ ಸೇವೆಯಲ್ಲಿ ತೊಡಗಬೇಕು. ಲೋಕಸೇವಕ ಸಂಘ ಆಗಿಬಿಡಬೇಕು". ಕಾಂಗ್ರೆಸ್ಸಿಗೆ ಇದು ಅವರಿತ್ತ ಅಂತಿಮ ಇಚ್ಛಾಪತ್ರ. ಅವರ ಸಾವಿಗೆ ಒಂದು ದಿವಸ ಮುಂಚೆ ಇದನ್ನು

ಅವರು ಬರೆದಿಟ್ಟಿದ್ದರು. ಅದರಲ್ಲಿ ಅವರೆಂದಿದ್ದಾರೆ: ಕಾಂಗ್ರೆಸ್ ರಾಜಕೀಯ ಸ್ವಾತಂತ್ರ್ಯವನ್ನು ಸಾಧಿಸಿದೆ. ಆದರೆ ದೇಶದ ಸಾಮಾನ್ಯ ಜನತೆಗೆ ಆರ್ಥಿಕ ಸ್ವಾತಂತ್ರ್ಯ, ಸಾಮಾಜಿಕ ಸ್ವಾತಂತ್ರ್ಯ ಮತ್ತು ನೈತಿಕ ಸ್ವಾತಂತ್ರ್ಯ ಪಡೆಯುವುದು ಇನ್ನೂ ಉಳಿದಿದೆ". ಈ ಕೆಲಸಕ್ಕಾಗಿ ಲೋಕಸೇವಕ ಸಂಘದ ಸ್ಥಾಪನೆಯಾಗಬೇಕು, ಕಾಂಗ್ರೆಸ್ ಇದರಲ್ಲಿ ಪೂರಾ ವಿಲಯನವಾಗಬೇಕು ಎಂಬುದು ಅವರಿಚ್ಛೆಯಾಗಿತ್ತು. ಅದರ ಹೊರತಾಗಿ ಖಾದೀ ಗ್ರಾಮೋದ್ಯೋಗ, ನಯೀ ತಾಲೀಂ, ಸ್ತ್ರೀ ಸೇವೆ, ಹರಿಜನ ಸೇವೆ, ಹಿಂದೂ-ಮುಸ್ಲಿಂ ಐಕ್ಯ, ಶಾಂತಿ ಕೊನೆಯ ಸ್ಥಾಪನೆ, "ಈ ರಚನಾತ್ಮಕ ಸಂಸ್ಥೆಗಳೆಲ್ಲಾ ಮತ್ತು ಆರ್ಥಿಕ ಸ್ವಾತಂತ್ರ್ಯದ ಕೆಲಸ ಮಾಡುವ ಎಲ್ಲರೂ ಅದರಲ್ಲಿ ಸೇರ ಬೇಕೆಂದು ಅವರಿಷ್ಟವಾಗಿತ್ತು. ದೇಶಸೇವೆಗಾಗಿ ಪಕ್ಷ ಮತ್ತು ಪಂಥಗಳಿಂದ ಮುಕ್ತವಾದ ಇಂಥದೊಂದು ಸಂಘಟನೆ ಆಗಬೇಕು ಮತ್ತು ಅದು ಹಳ್ಳಿ ಹಳ್ಳಿಯೂ ತನ್ನ ಕಾಲಮೇಲೆ ತಾನು ನಿಲ್ಲುವಂತೆ ಮಾಡಲು ನಡುಕಟ್ಟಿ ನಿಲ್ಲಬೇಕು".

ರಾಜಕೀಯ ವ್ಯಕ್ತಿಗಳಿಗೆ ಬಾಪೂವಿನ ಈ ಸಲಹೆ ಏಕ್‌ದಂ ಹಾಸ್ಯಾಸ್ಪದ ಎನಿಸೀತು! ಕಾಂಗ್ರೆಸ್ ಲೋಕಸೇವಕ ಸಂಘವಾಗಿಬಿಟ್ಟರೆ ದೇಶಕ್ಕೆ ಏನೇನಾಗಿಬಿಟ್ಟೀತು, ಯಾರ ರಾಜ್ಯ ನಡೆದೀತು ಎಂದೆಲ್ಲಾ ಅನಿಸುತ್ತದೆ. ದೇಶ ಚೂರು-ಚೂರಾದೀತು, ಭಯಂಕರ ಪಕ್ಷ ಭೇದ ಶುರುವಾದೀತು—ಎಂದೂ ಅನಿಸಬಹುದು. ಮತ್ತೆ ಪ್ರತ್ಯಾಘಾತೀ ಶಕ್ತಿಗಳು ಬಂದು ಕುಳಿತು ಬಿಟ್ಟಾವು. ಇಂಥ ಪರಿಸ್ಥಿತಿಯಲ್ಲಿ ಚುನಾವಣೆಗಳ ಮೂಲಕ ಕಾಂಗ್ರೆಸ್ಸಿನ ಹಿಡಿತ ಭದ್ರವಾಗಿರಲಿ—ಇದು ದೇಶಕ್ಕೆ ಅಗತ್ಯ ಇಂಥ ವಾದಗಳನ್ನು ಸಣ್ಣವರು-ದೊಡ್ಡವರೆಲ್ಲಾ ಮುಂದೆ ಮಾಡುತ್ತಲೇ ಇದ್ದಾರೆ. ಬಾಪೂವಿನ ಸಲಹೆಯನ್ನು ಕುರಿತು ವಿಚಾರಿಸುವಾಗ ಆ ಕಾಲದ ಕಾಂಗ್ರೆಸ್ ಮುಖಂಡರ ಮನಸ್ಸಿನಲ್ಲಿ ಇಂಥ ಹೊಣೆಗಾರಿಕೆಯ ಭಾವನೆಯೊಂದಿತ್ತು. ಲೋಕಸೇವಕ ಸಂಘ ರಚಿಸುವುದು ಅಪಾಯಕರ ಎಂದು ಅವರಿಗೆ ಆಗ ಅನಿಸಿತ್ತು. ಇಂದು ಇರುವ ವ್ಯವಸ್ಥೆಯನ್ನು ಇದ್ದಕ್ಕಿದ್ದಂತೆ ರದ್ದುಗೊಳಿಸಿದರೆ ಲೋಕಸೇವಕ ಸಂಘ ಎಂದು ಆದೀತು, ಜನತೆಯ ಮೇಲೆ ಅದರ ಅಚ್ಚು ಯಾವಾಗ ಬಿದ್ದೀತು ಎಂಬ ಶಂಕೆ ಇತ್ತು. ಅಲ್ಲಿಯ ತನಕ ದುರ್ದೈವ ವಶಾತ್ ಪ್ರತ್ಯಾಘಾತೀ ಶಕ್ತಿಗಳು

ದಿಲ್ಲಿಯ ಮೇಲೆ ತಮ್ಮ ಹತೋಟಿ ಸ್ಥಾಪಿಸಿದರೆ|ಇಷ್ಟೆಲ್ಲ ಪ್ರಯತ್ನವೂ ಮಣ್ಣು ಪಾಲಾದೀತು, ದೇಶ ಸ್ವಾಧೀನವಾದೀತೋ ಇಲ್ಲವೋ ಮತ್ತೆ ಪರಾಧೀನ ವಾಗಿ ಹೋದೀತು, ಇದನ್ನೆಲ್ಲಾ ಯೋಚಿಸಿ ಈ ಜನರು ಕಾಂಗ್ರೆಸ್ಸನ್ನು ಕಾಯಂ ಆಗಿಟ್ಟರು.

ಸರಕಾರದ ಅಧಿಕಾರವನ್ನು ಗೌಣಗೊಳಿಸುವ ಬಯಕೆ

ಆದರೆ ಗಾಂಧೀಜಿಯ ಸಲಹೆಯನ್ನು ಮನ್ನಿಸಿ ಲೋಕಸೇವಕ ಸಂಘ ವನ್ನು ರಚಿಸಿದ್ದರೆ ಈ ದೇಶದ ಮೇಲೆ ಒಳ್ಳೆ ಪ್ರಭಾವ ಬೀಳುತ್ತಿತ್ತು. ಜನತೆಗೆ ನಿಜವಾದ ಮಾರ್ಗ ತೋರಲು ನಿಷ್ಕಾಮ ಹಾಗೂ ನಿಷ್ಪಕ್ಷಭಾವದಿಂದ ಸೇವೆ ಸಲ್ಲಿಸಲು ಯೋಗ್ಯ ಮಾರ್ಗದರ್ಶನಕ್ಕಾಗಿ ನೀತಿಯ ವಿಚಾರ ನೀಡುವುದ ಕ್ಕಾಗಿ ಜನತೆಯ ಅಥವಾ ಸರ್ಕಾರದ ತಪ್ಪು ಆದಾಗ ಅದನ್ನು ತಟಸ್ಥ ಭಾವದಿಂದ ಜನತೆಯ ಎದುರು ಮಂಡಿಸಲು ಒಂದು ನೈತಿಕ ಶಕ್ತಿ ದೇಶದಲ್ಲಿ ಹುಟ್ಟುತ್ತಿತ್ತು. ಮಹತ್ವದ ಪ್ರಭಾವವಾಗಿ ದೇಶದಲ್ಲೊಂದು ಸೇವಾ ಸಂಸ್ಥೆ ಮುಖ್ಯವಾಗುತ್ತಿತ್ತು, ರಾಜ್ಯ ನಡೆಸುವ ಸತ್ತಾ ಸಂಸ್ಥೆ ಗೌಣವಾಗುತ್ತಿದ್ದಿತು. ಇದರ ಬದಲು ಇಂದು ಏನಾಗಿದೆ—ಸತ್ತೆಯ ಸಂಸ್ಥೆ ಮುಖ್ಯವಾಗಿದೆ, ಎಲ್ಲಿಂದ ಎಲ್ಲಿಗೂ ಅದರದೇ ಮಾತು, ಸಣ್ಣಸಣ್ಣ ಸೇವಾ ಸಂಸ್ಥೆಗಳು ಇದಕ್ಕೆ ಆಶ್ರಿತ ವಾಗಿ ಕೆಲಸಮಾಡುತ್ತಿವೆ, ಗಾಂಧೀಜಿಯಾದರೋ ಸರಕಾರದ ಸತ್ತೆಯನ್ನು ಗೌಣಗೊಳಿಸಿ ಜನತೆಯ ಸತ್ತೆಯನ್ನು ಮುಖ್ಯಗೊಳಿಸಬಯಸಿದ್ದರು.

ಬಾಪೂ ಕಾಂಗ್ರೆಸ್ಸನ್ನು ಲೋಕಸೇವಕ ಸಂಘ ಮಾಡುವ ಕೊಟ್ಟ ಸಲಹೆಯ ಅರ್ಥ: ನೀವು ಲೋಕಸೇವಕರಾದರೆ ಸತ್ತಾಧಾರಿಗಳ ಮೇಲೆ ನಿಮ್ಮ ಪ್ರಭಾವ ಉಳಿದೀತು ಎಂದು. ಸತ್ತೆಯ ಸ್ಥಾನ ದ್ವಿತೀಯ ಸಂಖ್ಯೆ ಯಲ್ಲುಳಿದೀತು, ಮೊದಲ ನಂಬರಿನಲ್ಲಲ್ಲ. ಲೋಕಸೇವಕ ಪ್ರಥಮ, ಸೇವೆ ರಾಣಿ ಮತ್ತು ಸತ್ತೆ ಅದರ ದಾಸಿ ಆದೀತು.

ನಿಜ ಹೇಳುವುದಾದರೆ ಗಾಂಧೀಜಿಯ ಈ ಸಲಹೆ ಕಾಗ್ರೆಸ್ಸಿಗೂ ಆಶೀರ್ವಾದ ರೂಪದಲ್ಲೇ ಇತ್ತು. ಈ ಆಶೀರ್ವಾದ ಬಲದಿಂದ ಕಾಂಗ್ರೆಸ್ ಯುಗಯುಗದವರೆಗೆ ಬದುಕಬಹುದಿತ್ತು. ಅವರು ಕಾಂಗ್ರೆಸ್ಸನ್ನು ಅಮರ ವಾಗುವಂತೆ ಮಾಡಬಯಸಿದ್ದರು. ರೂಪಕ್ಕಿಂತ ನಾಮ ದೊಡ್ಡದಾಗುತ್ತಿತ್ತು.

ಬಾಪೂ ಕಾಂಗ್ರೆಸ್ಸಿನ ರೂಪವನ್ನು ಅಳಿಸಿ ನಾಮವನ್ನು ಹೆಚ್ಚಿಸಬಯಸಿದ್ದರು. ಸ್ವರಾಜ್ಯ ಆಂದೋಲನಗಳ ಜಗತ್ತಿನ ಇತಿಹಾಸದಲ್ಲೇ ನಮ್ಮ ಕಾಂಗ್ರೆಸ್ಸಿಗೆ ವಿಶೇಷ ಸ್ಥಾನವಿತ್ತು. ಸ್ವರಾಜ್ಯ ಆಂದೋಲನದಲ್ಲಿ ಈ ಕಾಂಗ್ರೆಸ್ ಎಷ್ಟು ಉತ್ತಮ ಕೆಲಸಮಾಡಿದೆ ಅಷ್ಟು ಇತಿಹಾಸದಲ್ಲಿ ಇನ್ನೆಲ್ಲೂ ಆಗಿಲ್ಲ. ಕಾಂಗ್ರೆಸ್ ಅಹಿಂಸಾ ಹೋರಾಟ ನಡೆಸಿತು. ಇಂಥ ಕಾಂಗ್ರೆಸ್ಸಿನ ಹೆಸರು ಉಜ್ವಲವಾಗಿರಲೆಂದು ಗಾಂಧೀಜಿ ಬಯಸಿದ್ದರು.

ಉಪನಿಷತ್ತಿನಂಥ ದರ್ಶನ

ಅವರ ಸಲಹೆಯನ್ನು ಮನ್ನಿಸಿದ್ದರೆ ಕಾಂಗ್ರೆಸ್ ಈ ದೇಶದ ಎಲ್ಲಕ್ಕಿಂತ ದೊಡ್ಡ ಸೇವಾಸಂಸ್ಥೆ ಆಗುತ್ತಿತ್ತು. ಯಾವ ರಾಜಕೀಯ ಕೆಲಸಕ್ಕಾಗಿ ಕಾಂಗ್ರೆಸ್ ಹುಟ್ಟಿತ್ತೋ ಅದಂತೂ ಮುಗಿದುಹೋಗಿತ್ತು. ಕಾಂಗ್ರೆಸ್ ತನ್ನ ರೂಪಾಂತರಗೊಳಿಸಿಕೊಂಡು ದೇಶದ ರಚನಾತ್ಮಕ ಕೆಲಸವನ್ನು ಎತ್ತಿಕೊಂಡಿದ್ದರೆ ಒಂದು ಅತಿ ವಿಶಾಲ, ಅತಿ ದಿವ್ಯ ಹಾಗೂ ಭವ್ಯ ಕಲ್ಪನೆಯನ್ನು ಬಾಪೂ ಕಟ್ಟಿಕೊಂಡಿದ್ದರು. ಕಾಂಗ್ರೆಸ್ ತಾನು ಗಳಿಸಿದ ಪುಣ್ಯದ ಲಾಭ ಅದಕ್ಕೆ ಸಿಕ್ಕುತ್ತಿತ್ತು—ಪುಣ್ಯ ಹೆಚ್ಚುತ್ತಲೂ ಇತ್ತು. ಅವರದು ಇಂಥ ಒಂದು ಅತ್ಯಂತ ಶ್ರೇಷ್ಠ ಕಲ್ಪನೆಯಾಗಿತ್ತು. ಇದರಲ್ಲಿ ಅವರ ಪ್ರತಿಭೆ ಮಿಂಚುತ್ತಿತ್ತು. ಈ ಕಲ್ಪನೆ ಕುರಿತು ವಿಚಾರಮಾಡಿದಾಗಲೆಲ್ಲಾ ಇದು ಉಪನಿಷತ್ತಿನಂಥ ದರ್ಶನ ಎಂದು ನನಗನ್ನಿಸುತ್ತದೆ. ಉಚ್ಚ ಪ್ರತಿಭೆಯ ಹೊರತಾಗಿ ಅಂಥ ಕಲ್ಪನೆ ಯಾವಾಗಲೂ ಹೊಳೆಯುವುದಿಲ್ಲ.

ಸಾಮಾನ್ಯ ತರ್ಕ ಒಂದು ಸಂಗತಿ ಮತ್ತು ಪ್ರತಿಭೆಯೇ ಬೇರೆ ಸಂಗತಿ. ಸಾಮಾನ್ಯ ತರ್ಕದ ಆಧಾರದ ಮೇಲೆ ಹೇಳುವ ಮಾತು ತರ್ಕದಿಂದ ಕತ್ತರಿಸಲ್ಪಡುವುದಿಲ್ಲ. ಅದು ತರ್ಕದ ಭೂಮಿಕೆಯಲ್ಲಿ ಸರಿಹೋದಿತು. ಆದರೆ ಸಾಮಾನ್ಯ ಬುದ್ಧಿ ಉಳ್ಳವರಿಗೆ ಹೊಳೆಯುವಂಥದು ಬಾಪೂಗೆ ಹೊಳೆಯುತ್ತಿರಲಿಲ್ಲ. ಅವರಲ್ಲಿ ಸಾಮಾನ್ಯ ಬುದ್ಧಿ (Common sense) ಇರಲಿಲ್ಲ ಎಂದು ಇದರ ಅರ್ಥವಲ್ಲ. ಅದಂತೂ ಇದ್ದೇ ಇತ್ತು, ಅಲ್ಲದೆ ಅಸಾಮಾನ್ಯ ಬುದ್ಧಿಯೊಂದೂ ಇತ್ತು ಅವರಿಗೆ. ಈ ವಿಶೇಷ ಬುದ್ಧಿಯಿಂದ ಕಾಂಗ್ರೆಸ್ಸಿನ ಮೂಲಕ ರಾಜ್ಯಾಡಳಿತ ನಡೆದರೆ, ಇಂದಿನವರೆಗೆ ನಡೆಯುತ್ತಿರುವಂತೆ, ಅದು ರಾಜನೀತಿಯಾಗಿದ್ದೀತು, ಲೋಕನೀತಿಯಾಗಲಾರದು ಎಂದು ಗುರುತಿಸಿಕೊಂಡಿದ್ದರು.

ಇಂಥ ಪ್ರಖರ ಕಲ್ಪನೆಯನ್ನು ಅರಗಿಸಿಕೊಳ್ಳುವ ಚಿತ್ತ ನಮ್ಮಲ್ಲಿ ಆಗ ಇರಲಿಲ್ಲ, ಬಹುಶಃ ಇಂದಿಗೂ ಇಲ್ಲವೇನೋ. ಒಂದು ದಿವ್ಯದರ್ಶನ, ಮತ್ತೊಂದು ಚರ್ಮಚಕ್ಷುವಿನ ದರ್ಶನ. ಜನತೆ ಸ್ವಾವಲಂಬಿಯಾಗಬೇಕೆಂದು ಬಾಪೂ ಬಯಸುತ್ತಿದ್ದರು. ಆ ಕೆಲಸದಲ್ಲಿ ಕಾಂಗ್ರೆಸ್ಸಿನ ಶಕ್ತಿಯನ್ನು ತೊಡಗಿಸಲು ಯೋಚಿಸಿದ್ದರು. ಕಾಂಗ್ರೆಸ್ ರೂಪಾಂತರಗೊಂಡು ಲೋಕಸೇವಕ ಸಂಘ ಆಗಿದ್ದರೆ ಈ ದೇಶದಲ್ಲಿ ಬಹು ದೊಡ್ಡ ಜನಶಕ್ತಿ ಅಂಕುರಿಸುತ್ತಿತ್ತು.

ಆದರೆ ಹಾಗಾಗಲಿಲ್ಲ. ಈ ಕಾರಣದಿಂದ ತುಂಬ ಪ್ರಭಾವಶಾಲಿಯಾಗಿದ್ದ ಕಾಂಗ್ರೆಸ್ಸಿನ ಹೆಸರು ಕ್ಷೀಣವಾಗಿಹೋಯಿತು. ಅದರ ಭಾರೀ ಶಕ್ತಿ ಮುರಿಯಿತು. ಕಾಂಗ್ರೆಸ್ಸಿನ ಸ್ಥಿತಿ—**ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ**—ಪುಣ್ಯ ಕ್ಷೀಣವಾಗಿಹೋದಮೇಲೆ ಸ್ವರ್ಗದಿಂದ ಮತ್ತೆ ಮೃತ್ಯುಲೋಕಕ್ಕೆ ಬೀಳುತ್ತಾರೆ ಎಂಬಂತೆ ಆಯಿತು ಎಂದು ಇತಿಹಾಸಕಾರರು ಬರೆದಾರು. ಇದೊಂದು ದೊಡ್ಡ ಹಾನಿ. ಸ್ವರಾಜ್ಯದ ತರುವಾಯ ಕಾಂಗ್ರೆಸ್ ಎಷ್ಟೇ ದೊಡ್ಡದಾಗಿ ಉಳಿದಿದ್ದರೂ ಅದೊಂದು 'ಪಕ್ಷ' (party) ಆಗಿಬಿಟ್ಟಿತು. 'ಪಾರ್ಟಿ' ಶಬ್ದ 'ಪಾರ್ಟ್' ಎಂಬುದರಿಂದ ಆಗಿದೆ. 'ಪಾರ್ಟ್' ಎಂದರೆ ತುಂಡು. ಎಷ್ಟೇ ದೊಡ್ಡದಾಗಿದ್ದರೂ ಅದು ಪೂರ್ಣವಲ್ಲ. ಗಾಂಧೀಜಿಯ ಕಾಲದಲ್ಲಿ ಕಾಂಗ್ರೆಸ್ 'ರಾಷ್ಟ್ರೀಯ ಏಕತಾ ಪರಿಷತ್' ಆಗಿತ್ತು. ಅದರ ಮೂಲಕ ರಾಷ್ಟ್ರದ ಏಕೀಕರಣದ ಬಹು ದೊಡ್ಡ ಕೆಲಸವಾಗುತ್ತಿತ್ತು. ಸ್ವರಾಜ್ಯದ ಬಳಿಕ ಕಾಂಗ್ರೆಸ್ ಒಂದು ರಾಜಕೀಯ ಪಕ್ಷವಾಗಿಬಿಟ್ಟಿತು. ಒಂದು ಕಾಲದಲ್ಲಿ ದೇಶದ ನಾಯಕರಾಗಿದ್ದ ಅದರ ದೊಡ್ಡದೊಡ್ಡ ನಾಯಕರು ಒಂದು ಪಕ್ಷದ ನಾಯಕರಾಗಿಬಿಟ್ಟರು.

ಪ್ರಭಾವ ಬೀರುವ ಬದಲು ಪ್ರವಾಹಕ್ಕೆ ಬಿದ್ದರು

ಇದರ ಪರಿಣಾಮ ಏನಾಯಿತೆಂದು ನಾವು ನೋಡಿದ್ದೇವೆ. ಯಾವುದಾದರೊಂದು ನೀತಿಯ ಕೂಗು ಕೇಳಿಬಂದು ಇಡೀ ದೇಶ ಅದಕ್ಕೆ ಓಗೊಡುವಂಥ ಯಾವ ಸಂಸ್ಥೆಯಾಗಲೀ ಇಂದು ದೇಶದಲ್ಲಿ ಕಂಡುಬರುತ್ತಿಲ್ಲ ಎಂಬ ಪರಿಸ್ಥಿತಿ ಉಂಟಾಗಿದೆ. ಬೇರೆ ಬೇರೆ ಪಕ್ಷಗಳ ನಾಯಕರು ಜನತೆಯ ಎದುರು ಹೋಗಿ ಒಬ್ಬರು ಮತ್ತೊಬ್ಬರ ಮಾತನ್ನು ಖಂಡಿಸುತ್ತಾರೆ. ನಿಷ್ಕ್ರಿಯ

ರಾದ ಜನತೆಯಲ್ಲಿ ಇದರಿಂದ ಯಾವ ಕ್ರಿಯಾಶೀಲತೆಯೂ ಹುಟ್ಟುವುದಿಲ್ಲ. ನೈತಿಕ ನೇತೃತ್ವದ ಪೂರಾ ಅಭಾವ ಉಂಟಾಗಿದೆ. ಈ ಕಾರಣದಿಂದ ದೇಶದಲ್ಲಿ ಒಂದು ಬಗೆಯ ನಿಷ್ಕ್ರಿಯತೆ, ಶೂನ್ಯ ಹಾಗೂ ಕೊರತೆ ಆಗಿಬಿಟ್ಟಿದೆ. ಜನತೆ ದಿಕ್ಕುಗಾಣದಾಗಿದೆ. ಎಲ್ಲಿ ಹೋಗಬೇಕು ಏನು ಮಾಡಬೇಕು ಅದಕ್ಕೆ ತೋಚುತ್ತಲೇ ಇಲ್ಲ. ಗಾಂಧೀಜಿಯ ಸಲಹೆಯನ್ನು ಒಪ್ಪಿದ್ದರೆ ಈ ದಿನ ಬರುತ್ತಿರಲಿಲ್ಲ.

ಗಾಂಧೀಜಿ ತೀರಿಹೋದ ಮೇಲೆ ರಾಜಕೀಯವನ್ನು ತಮ್ಮ ಜೀವನ ನಿಷ್ಠೆಯಿಂದ ಪ್ರಭಾವಿತಗೊಳಿಸುವ ಬದಲು ನಾವೇ ಸ್ವತಃ ರಾಜಕೀಯದಿಂದ ಪ್ರಭಾವಿತರಾಗಿಬಿಟ್ಟಿದ್ದೇವೆ. ರಾಜಕೀಯ ಪ್ರವಾಹದ ವೇಗ ನಮ್ಮನ್ನೂ ಅದರಲ್ಲಿ ಕೊಚ್ಚಿಕೊಂಡು ಹೋಗುತ್ತಿದೆ. ಇಂದು ನಮ್ಮ ಜೀವನ ನಿಷ್ಠೆಯ ಪ್ರಭಾವ ರಾಜಕೀಯದ ಮೇಲೆ ಯಾವುದೂ ಉಳಿದಿಲ್ಲ. ಬದಲಾಗಿ ನಮ್ಮ ಜೀವನದ ಮೇಲೆ ರಾಜಕೀಯದ ಪ್ರಭಾವ ಸ್ಪಷ್ಟವಾಗಿಬಿಟ್ಟಿದೆ. ಗಾಂಧೀವಾದಿ ಎಂದು ಹೇಳಿಕೊಳ್ಳುವ ರಾಜಕೀಯ ಜನರು ಇಂದು ಗಾಂಧೀ ಮಾರ್ಗದಲ್ಲಿಲ್ಲ. ಅವರು ನಾನಾ ಫಡ್ನವೀಸನ ಹೆಜ್ಜೆಯಲ್ಲಿ ಸಾಗುವುದು ಗೊತ್ತಾಗುತ್ತಿದೆ. ಪರಿಣಾಮವೆಂದರೆ ಮತ್ತೊಬ್ಬರನ್ನು ಸುಧಾರಿಸುವ ಬದಲು ನಾವೇ ಕೆಡುತ್ತ ಹೋಗುತ್ತಿದ್ದೇವೆ.

ನಾವು ಯಾರ ಹೆಜ್ಜೆಯಲ್ಲಿ ?

ಇಂಗ್ಲೀಷರ ಧಾಳಿ ಬರುವುದರಲ್ಲಿತ್ತು. ಬೋರ್‌ಘಾಟ್‌ವರೆಗೆ ಇಂಗ್ಲಿಷರು ತಲುಪಿದ್ದರು. ಪುಣೆಯಲ್ಲಿ ಪೇಷ್ವೆ ಸಂಗಡಿಗರೊಡನೆ ತಯಾರಾಗಿದ್ದ. ತಲೆ ಕೊಟ್ಟಾದರೂ ಎದುರಿಸಬೇಕೆಂದು ಯೋಚಿಸುತ್ತಿದ್ದರು. ನಾನಾ ಫಡ್ನವೀಸ್ ಪುಣೆಯನ್ನು ತತ್ತರಿಸುವ ನೆಲವನ್ನಾಗಿ ಮಾಡುವ ಸಿದ್ಧತೆ ಮಾಡಿಟ್ಟಿದ್ದ. ಶಿಂಧೆ ಎಷ್ಟು ಸೇನೆ ತರುತ್ತಾನೆ? ಭೌನ್ಸ್ಲೆ ಎಷ್ಟು ಸೇನೆ ತರುತ್ತಾನೆ? ಹೋಳ್ಕರ್ ತರುವ ದಂಡೆಷ್ಟು? ಈ ರೀತಿ ಮಾತಾಡುತ್ತಿದ್ದರು.

"ನಾವು ಇಷ್ಟು ಸೇನೆ ತಂದರೆ ಅದಕ್ಕೆ ಪ್ರತಿಯಾಗಿ ನಮಗೇನು ಸಿಕ್ಕೀತು?"

"ಖಾನ್ ದೇಶದ ಇಂಥ ಭಾಗ ನಿಮಗೆ ಸಿಕ್ಕೀತು."

"ನಾವು ಇಷ್ಟು ಸೇನೆ ತಂದರೆ ಅದರ ಬದಲು ನಮಗೇನು ಸಿಕ್ಕೀತು?"

"ನಿಮಗೆ ಇಂಥ ಭಾಗ ಸಿಕ್ಕೀತು."

ದಿನವೆಲ್ಲಾ ಇದೇ ಮಾತು. ನಾನಾ ಫಡ್ನವೀಸನ ಕಾಲದಲ್ಲಿ ಯಾವ ಮಾತು ನಡೆಯುತ್ತಿತ್ತು ಅದೇ ಇಂದಿಗೂ ನಡೆಯುತ್ತಿದೆ. 'ನನಗೆ ಯಾವ ಸ್ಥಾನ ದೊರೆತೀತು? ನನಗೆ ಯಾವ ಪದವಿ?'

ಗಾಂಧೀಜೀ ಬಂದರು ಹೋದರು, ಪರಿಸ್ಥಿತಿಯಂತೂ ಇದೇ ರೀತಿ ಇದೆ. ನಾನಾ ಫಡ್ನವೀಸನ ಕಾಲದಲ್ಲಿ ನಡೆಯುತ್ತಿದ್ದುದಕ್ಕಿಂತ ಭಿನ್ನವಾದ ರಾಜನೀತಿ ನಡೆಯುತ್ತಿದೆಯೇ? ಇಂದು ರಾಜನೀತಿಯ ಬಲವಾದರೂ ಏನು? **ಕ್ಷಯಕಾರಿಣೀಶಕ್ತಿ**—ಗಳಿಸಿದ್ದ ಪುಣ್ಯ ಕ್ಷೀಣವಾಗುತ್ತಲಿದೆ. ಸ್ವರಾಜ್ಯ ಸಿಕ್ಕಮೇಲೆ ಅಧಿಕಾರ ನಡೆಸಿದವರಲ್ಲಿ ತಮ್ಮ ಪೂರ್ವ ಪುಣ್ಯ ಕ್ಷಯವಾಗುವುದರ ಬದಲು ಹೆಚ್ಚಿಸಿಕೊಂಡವರು ಎಷ್ಟು ಮಂದಿ ಇದ್ದಾರೆ? ಜನಕ ಮಹಾರಾಜನಂತೆ ಅಧಿಕಾರವನ್ನು ಅರಗಿಸಿಕೊಂಡವರು ಎಲ್ಲೋ ಸ್ವಲ್ಪ ಜನ. ಉಳಿದವರೆಲ್ಲರ ಪುಣ್ಯವಂತೂ ಕ್ಷಯಿಸುತ್ತಾ ಹೋಗುತ್ತಲೇ ಇದೆ.

ಬಾಪೂ ಅಹಿಂಸೆಯನ್ನು ರಾಣಿ ಮಾಡಬಯಸಿದ್ದರು

ಬಾಪೂ ಬಂದಮೇಲೂ ಭಾರತದಲ್ಲಿ ಇಂದು ನಡೆಯುತ್ತಿರುವ ರೀತಿಯ ರಾಜಕೀಯವೇ ನಡೆಯುವುದಾದರೆ, ಬಾಪೂ ಬಂದು ಏನು ಮಾಡಿದಂತಾಯಿತು, ನನಗಂತೂ ತಿಳಿಯುವುದೇ ಇಲ್ಲ. ಅವರ ಅವತಾರದ ಲಾಭ ನಮಗೇನಾದರೂ ಸ್ವಲ್ಪ ಸಿಕ್ಕಿದೆಯೋ ಇಲ್ಲವೋ? ಗಾಂಧೀಜೀ ಬಂದರು ಹೋದರು, ಆದರೂ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲೆಲ್ಲಾ ನಮ್ಮ ಚಿಂತನೆಯ ಮಟ್ಟ ಕಂದಾಚಾರದ್ದೇ ಆಗಿಬಿಟ್ಟಿದೆ. ನಮ್ಮ ಎಲ್ಲ ಕಾರುಬಾರು ಸೇನೆ, ಪೋಲಿಸ್ ಹಾಗೂ ಸರ್ಕಾರದ ಮೇಲೇ ಅವಲಂಬಿಸಿದೆ. ಗಾಂಧೀ ಬಂದರು, ಹೋದರು—ಸರಿ ಇಷ್ಟೇ ಆದದ್ದು. ಗಾಂಧೀಜಿ ಬಂದುದರಿಂದ ಏನು ಲಾಭವಾಯಿತು?

ಇಂದಿನ ವಿಜ್ಞಾನ ಯುಗದ ಎಲ್ಲಕ್ಕಿಂತ ದೊಡ್ಡ ಅಗತ್ಯ ಹಾಗೂ ಬೇಡಿಕೆಯೆಂದರೆ ಕರುಣೆಯ ಝರಿ ಪುಟಿದೇಳತಕ್ಕದ್ದು. ಅಹಿಂಸೆ ದಾಸಿ

ಆಗಿರದೆ ರಾಣಿ ಆಗತಕ್ಕದ್ದು. ದಂಡಶಕ್ತಿಯ ರಾಜ್ಯದಲ್ಲಿ ಅಹಿಂಸೆ ಇರಲಿ ಎಂದು ಇದುವರೆಗೆ ನಡೆದಿತ್ತು. ಶತಮಾನಗಳಿಂದ ದಂಡಶಕ್ತಿಯ ರಾಜ್ಯ ನಡೆಯುತ್ತಲೇ ಇದೆ. ಆದರ ವೇಷ ಬದಲಾಗುತ್ತಲಿದೆ ನಿಜ. ಈಗ ಜನತಂತ್ರದ ವೇಷವನ್ನದು ಧರಿಸಿದೆ. ಹೇಗಿದ್ದರೂ ರಾಜ್ಯ ದಂಡಶಕ್ತಿಯದೇ ಆಗಿದೆ. ಅಹಿಂಸೆ ಮೊದಲಿದ್ದಂತೆಯೇ ಉಳಿದಿದೆ, ಇಂದಿಗೂ ಅದು ದಾಸಿಯೇ ಆಗಿದೆ.

ಯುದ್ಧದಲ್ಲಿ ರೆಡ್ ಕ್ರಾಸ್ ಮುಂತಾದ ಮಂದಿ ಗಾಯಾಳು ಸೈನಿಕರ ಸೇವೆಗಾಗಿ ಹೋಗುತ್ತಾರೆ. ಅದರಲ್ಲಿ ಕರುಣೆ ಮತ್ತು ದಯೆ ಇರುತ್ತದೆ. ಆದರೆ ಈ ಕರುಣೆ ಯುದ್ಧದ ಅಂತ್ಯವನ್ನು ತರುವುದಿಲ್ಲ. ಅದಂತೂ ಯುದ್ಧದ ರುಚಿಯನ್ನು ಹೆಚ್ಚಿಸುತ್ತದೆ. ಯುದ್ಧದ ಪಾಪವನ್ನು ಕಡಿಮೆಮಾಡಿ ಒಂದು ಬಗೆಯಲ್ಲಿ ಯುದ್ಧಕ್ಕೆ ಬೆಂಬಲವನ್ನು ಕೊಡುತ್ತದೆ. ಇಂಥ ಕರುಣೆ ಮೊದಲೂ ಇತ್ತು.

ಗಾಂಧೀಜೀ ಇಂಥ ಕರುಣೆಯನ್ನು ಬಯಸಿರಲಿಲ್ಲ. ರಾಣಿಯಾಗಿದ್ದು ಅದರ ಆಧಾರದಮೇಲೆ ಮಾನವ ಸಮಾಜದ ರಚನೆ ಆಗುವಂಥ, ಹಾಗೆ ಮಾಡಬಲ್ಲೆವು ಎಂಬ ವಿಶ್ವಾಸ ಮಾನವನಿಗೆ ಉಂಟಾಗುವಂಥ ಕರುಣೆಯನ್ನು ಅವರು ಅಪೇಕ್ಷಿಸಿದ್ದರು. ಮೆಲ್ಲಮೆಲ್ಲಗೆ ದಂಡಶಕ್ತಿ ಕ್ಷೀಣವಾಗುತ್ತಾ ಬಂದು ಕೊನೆಯಲ್ಲಿ ಅದು ಪೂರಾ ರೂಪಾಂತರಗೊಳ್ಳಬೇಕು. ದಂಡಶಕ್ತಿ ಮೆಲ್ಲ ಮೆಲ್ಲನೆ ಕ್ಷೀಣವಾಗಿ ಸ್ವತಂತ್ರ, ಕರುಣಾಮೂಲಕವಾದ ಹಾಗೂ ಸಾಮ್ಯದ ಆಧಾರದಮೇಲೆ ನಿಂತ ಲೋಕಶಕ್ತಿ ಹೆಚ್ಚಬೇಕು. ಹಿಂಸಾಶಕ್ತಿಗೆ ವಿರುದ್ಧ ವಾದ ಮತ್ತು ದಂಡಶಕ್ತಿಯಿಂದ ಭಿನ್ನವಾದ ಲೋಕಶಕ್ತಿಯನ್ನು ನಾವು ಪ್ರಕಟಪಡಿಸಬೇಕು.

ಅಹಿಂಸೆಯ ವಿಕಾಸಕ್ಕಾಗಿ ಉಪಾಧಿರಹಿತ ಆಗಬೇಕಾದೀತು

ಇದನ್ನು ನಾನು ಗಾಂಧೀ ವಿಚಾರ ಎಂದು ತಿಳಿದಿದ್ದೇನೆ. ಇದರಲ್ಲಿ ರಾಜನೀತಿಯ ಆಮೂಲ ಪರಿವರ್ತನೆಯ ಮಾತು ಬರುತ್ತದೆ. ಹೊಸ ಲೋಕ ನೀತಿಯನ್ನು ಅರಳಿಸಬೇಕಾಗಿದೆ. ರಾಜನೀತಿ ಎಂಬ ಶಬ್ದ ಮತ್ತು ರಾಜ ನೀತಿಯ ಕಲ್ಪನೆ ಇರುವವರೆಗೆ ಅದರ ಆಧ್ಯಾತ್ಮೀಕರಣ ಆಗಲಾರದು ಎಂಬುದನ್ನು ತಿಳಿದುಕೊಳ್ಳುವ ಅಗತ್ಯವಿದೆ. ಅದರೊಂದಿಗೆ ಧರ್ಮಗ್ಲಾನಿ

ಆದೀತು. ಇದಕ್ಕಾಗಿ ರಾಜನೀತಿಯಲ್ಲಿ ಪರಿವರ್ತನೆ ತರುವುದೇ ರಾಜನೀತಿಯನ್ನು ಸತ್ಯಮಯಗೊಳಿಸುವ ಏಕಮಾತ್ರ ಉಪಾಯ. 'ನಾನು ಬ್ರಾಹ್ಮಣ', 'ನಾನು ಇಂಥ ಭಾಷೆಯವನು', 'ನಾನು ಇಂಥ ಧರ್ಮದವನು', 'ನನ್ನದಾದರೋ ಇಂಥ ರಾಜಕೀಯ ಪಕ್ಷ'—ಈ ಎಲ್ಲ ಬಿರುದುಗಳ ಬಂಧನವನ್ನು ಮುರಿಯದ ಹೊರತು ಅಹಿಂಸೆಯ ಶಕ್ತಿಯ ವಿಕಾಸಕ್ಕೆ ನಮ್ಮ ಬುದ್ಧಿ ಕೆಲಸಕ್ಕೆ ಬಾರದು. ಅಹಿಂಸೆಯ ಶಕ್ತಿಯ ವಿಕಾಸ ಮಾಡಬಯುಸುವೆವಾದರೆ ಬಿರುದಿಲ್ಲದೆ ಇರಬೇಕಾದೀತು.

ಹಾಗಲ್ಲದೆ ಹಿಂಸೆಯ ಪಂಜದಿಂದ ಜಗತ್ತಿಗೆ ಬಿಡುಗಡೆ ಇಲ್ಲ

ಈ ಮಾತು ಮನಸ್ಸಿನಲ್ಲಿ ಸ್ಪಷ್ಟವಾಗುವವರೆಗೆ ಹಾಗೂ ನಮ್ಮ ಗಂಟಲಲ್ಲಿ ಇಳಿಯುವವರೆಗೆ ಮತ್ತು ಮಧ್ಯದ ಅವಧಿಯಲ್ಲಿ ಏನೂ ಮಾಡದ ಹೊರತು, ದಾರಿಯೇ ಇಲ್ಲ ಎಂದು ಮನಸ್ಸಿಗೆ ಹೊಳೆಯುವವರೆಗೆ ಹಿಂಸೆಯ ಪಂಜದಿಂದ ಜಗತ್ತಿಗೆ ಬಿಡುಗಡೆ ಸಿಗಲಾರದು. ಆದುದರಿಂದ ಜಗತ್ತಿನಿಂದ ಹಿಂಸೆಯ ಬೇರುಗಳು ಮೂಲೋತ್ಪಾಟನವಾಗುವಂಥ ಪದ್ಧತಿಯಲ್ಲಿ ನಾವು ಕೆಲಸ ಮಾಡಬೇಕಾದೀತು. ಹೆಚ್ಚು ಸಮಯ ಹಿಡಿಸಿದರೂ ಅಡ್ಡಿ ಇಲ್ಲ.

ರಾಜನೀತಿಯನ್ನು ನಿರ್ಮಲಗೊಳಿಸಲು ನೀವೇಕೆ ಪ್ರಯತ್ನಿಸುವುದಿಲ್ಲ ಎಂದು ನನ್ನನ್ನು ಯಾರಾದರೂ ಯಾವಾಗಲಾದರೂ ಕೇಳಿದರೆ ನಾನು ಹೇಳುತ್ತೇನೆ ನಾನದನ್ನು ಮುಗಿಸಲೇಬೇಕೆಂದು ಇದ್ದೇನೆ. ವಿಜ್ಞಾನದ ಇಂದಿನ ಯುಗದಲ್ಲಿ ರಾಜನೀತಿ ಜೀರ್ಣ-ಶೀರ್ಣ ಆಗಿಹೋಗಿದೆ. ಸ್ವರಾಜ್ಯದ ಬಳಿಕ ಯಾವ ಹೊಸ ಕ್ರಮದಲ್ಲಿ ಕೆಲಸ ನಡೆಯಬೇಕೆಂದು ಗಾಂಧೀಜಿಯ ಮನಸ್ಸಿನಲ್ಲಿ ತೀವ್ರ ಚಿಂತನೆ ನಡೆಯುತ್ತಿತ್ತು. ಸೇವಾಗ್ರಾಮದಲ್ಲಿ ಒಂದು ಸಮ್ಮೇಳನ ಕರೆದು ತಮ್ಮ ಸಂಗಾತಿಗಳಿಗೇನೋ ತಿಳಿಸಬೇಕೆಂದಿದ್ದರು. ಆದರೆ ಅವರಿಗೆ ಆ ಅವಕಾಶವೇ ಸಿಗಲಿಲ್ಲ.

ಬೈಬಲಿನ ಕಥೆ ಎಲ್ಲರಿಗೂ ಗೊತ್ತು. ಪ್ರವಾದಿ ಯೇಸುವನ್ನು ಶಿಲುಬೆಗೇರಿಸಿಬಿಟ್ಟಿದ್ದರು ಮತ್ತು ಗೋರಿಗೂ ಸೇರಿಸಿಬಿಟ್ಟರು. ಅವರು ಅಲ್ಲಿಂದ ಎದ್ದು ಮತ್ತೆ ಕುಳಿತರು, ಮತ್ತು ತಮ್ಮ ಶಿಷ್ಯರಿಗೆ ದರ್ಶನವಿತ್ತು ಹೇಳಿದರು: "ನಾನು ಈಗ ಗೆಲಿಲೀಗೆ ಹೋಗುತ್ತೇನೆ, ಅಲ್ಲಿ ನಿಮ್ಮನ್ನು ಕಾಣುತ್ತೇನೆ,

ಇಲ್ಲಲ್ಲ." ಇದೇ ರೀತಿ ಗಾಂಧೀಜೀ ದಿಲ್ಲಿಯನ್ನು ಬಿಟ್ಟು ಹಳ್ಳಿಗಳಿಗೆ ಹೊರಟು ಹೋಗಿದ್ದಾರೆ ಎಂದು ನನಗನ್ನಿಸುತ್ತದೆ. 'ದಿಲ್ಲಿಯಲ್ಲಿ ನನ್ನನ್ನು ಸುಟ್ಟು ಬಿಟ್ಟರು, ಅಷ್ಟೇ ಸಾಕು, ಇನ್ನು ಅಲ್ಲಿ ನನಗೆ ಕೆಲಸವಿಲ್ಲ.' ಹೀಗೆ ಯೋಚಿಸಿ ಅವರು ಹಳ್ಳಿಗಳಿಗೆ ಹೊರಟುಹೋಗಿದ್ದಾರೆ—'ಹಳ್ಳಿಗಳಿಗೆ ಮರಳಿ' ಎಂಬುದು ಗಾಂಧೀಜಿಯ ಸೂತ್ರವಾಗಿತ್ತು. ಎಂತಲೇ ಅವರು ದಿಲ್ಲಿಯನ್ನು ಬಿಟ್ಟುಬಿಟ್ಟರು.

ಮರ ಕತ್ತರಿಸುವವನು ಅದರಮೇಲೆ ಕೂಡುವುದಿಲ್ಲ

ಒಮ್ಮೆ ಸ್ವರಾಜ್ಯ ಸಿಕ್ಕಿಬಿಡಲಿ, ಮತ್ತೆ ರಾಜನೀತಿಯ ಆಧ್ಯಾತ್ಮೀಕರಣ ಅಥವಾ ಸತ್ತೆಯ ಛೇದನ. ಬೇರೆ ಭಾಷೆಯಲ್ಲಿ ಹೇಳುವುದಾದರೆ ಅಧಿಕಾರದ ವಿಕೇಂದ್ರೀಕರಣ ಎನ್ನಬಹುದು. ಎರಡೂ ಮಾತು ಸೇರಿ ಒಂದು ಪೂರಾ ಅರ್ಥ ಆಗುತ್ತದೆ. ಒಂದು ಮಾತಿನಿಂದ ಪೂರಾ ಅರ್ಥ ಆಗುವುದಿಲ್ಲ. 'ಸ್ವರಾಜ್ಯ ಶಾಸ್ತ್ರ' ಎಂಬ ನನ್ನದೊಂದು ಸಣ್ಣ ಪುಸ್ತಕವಿದೆ. ಅದರ ಪ್ರಸ್ತಾವನೆಯಲ್ಲಿ ಒಂದು ಮಾತು: **ನ ತ್ವಹಂ ಕಾಮಯೇ ರಾಜ್ಯಂ**— ಅದರಲ್ಲಿ ಮತ್ತೂ ಒಂದು ಮಾತಿದೆ: **ಯತೇಮಹಿ ಸ್ವರಾಜ್ಯಾಯ.** ನಮಗೆ ರಾಜ್ಯ ಬೇಡ, ಸ್ವರಾಜ್ಯಕ್ಕಾಗಿ ನಾವು ಪ್ರಯತ್ನಿಸೋಣ. ರಾಜ್ಯ ಎಂದರೆ ಸರಕಾರದ ಅಧಿಕಾರ, ಸ್ವರಾಜ್ಯ ಎಂದರೆ ಪ್ರತಿಯೊಬ್ಬ ಮನುಷ್ಯನ ಅಧಿಕಾರ. ಎಲ್ಲಿ ಪ್ರತಿಯೊಬ್ಬನಿಗೂ ನನ್ನ ಅಧಿಕಾರ ಇದೆ ಎನಿಸುತ್ತದೆಯೋ ಅಲ್ಲಿ ಎಲ್ಲರ ಅಧಿಕಾರ ಸರ್ವರಾಜ್ಯ ನಡೆಯುತ್ತದೆ. ಇದು ತೀರಾ ಬೇರೆ ವಸ್ತು. ಇದನ್ನು ಬೇಕಾದರೆ ಸ್ವರಾಜ್ಯ ಎನ್ನಿ ಅಥವಾ ಸರ್ವರಾಜ್ಯ ಎನ್ನಿ. ಇದು ಲೋಕನೀತಿ. ಇದನ್ನು ತರುವುದಕ್ಕೆ ರಾಜನೀತಿಯನ್ನು ಕತ್ತರಿಸಬೇಕು. ಮರವನ್ನು ಕತ್ತರಿಸುವವನು ಮರದ ಮೇಲೆ ಹತ್ತಲಾರ. ಹೌದು, ಕೊಂಬೆ ಕತ್ತರಿಸುವವನು ಮರವನ್ನು ಹತ್ತಲೇಬೇಕು. ನಾವಾದರೋ ಮರವನ್ನು ಬುಡದಿಂದಲೇ ಕತ್ತರಿಸಬೇಕಾಗಿದೆ. ಅದಕ್ಕಾಗಿ ರಾಜನೀತಿಯಿಂದ ಬೇರೆ ಇದ್ದುಕೊಂಡು ಅದನ್ನು ಕತ್ತರಿಸಬೇಕು. ಇದು ಬರಿ ಭಾರತಕ್ಕೆ ಮಾತ್ರವಲ್ಲ, ಇಡೀ ಜಗತ್ತಿಗೂ ಹಿಡಿಯಷ್ಟು ಮಂದಿಯ ಕೈಲಿ ಸತ್ತೆ ಸೇರಿಹೋಗಿದೆ. ಅದನ್ನು ಕಿತ್ತುಕೊಳ್ಳಬೇಕು.

*

ಗಾಂಧೀ ವಿಚಾರದಲ್ಲಿ ವಿಶ್ವಾಸವಿಡುವವರ ಎದುರು ಒಂದು ಮುಖ್ಯ ಧ್ಯೇಯ : ಜನತೆಯನ್ನು ಎಚ್ಚರಿಸುವುದು, ರಾಜ್ಯವನ್ನು ಕ್ಷೀಣಗೊಳಿಸುವುದು. ಜನತೆಯ ಶಕ್ತಿ ಎಚ್ಚೆತ್ತು ರಾಜ್ಯ ಕ್ಷಯಿಸದ ಹೊರತು ಗಾಂಧೀಜಿಯ ಕಲ್ಪನೆಯ ಸಮಾಜ ತರಲಾರೆವು. ಆದುದರಿಂದ ಸರ್ವೋದಯ ಸಮಾಜದ ಎದುರು ಇಂದು ಇದೊಂದು ಕ್ರಾಂತಿಕಾರಿ ಧ್ಯೇಯ.

೭

ಸತ್ಯಾಗ್ರಹ

ಒಂದು ದೇಶ ಪರಾಧೀನವಾದಾಗ ಆ ದೇಶದ ಬಹುತೇಕ ಮಂದಿ ಇಲ್ಲವೇ ಪೂರಾ ತುಳಿಯಲ್ಪಡುತ್ತಾರೆ, ಸೋಲ್ಲೆತ್ತದಂತಾಗುತ್ತಾರೆ ಅಥವಾ ಬಂಡಾಯದ ಬಾವುಟವನ್ನೆತ್ತುತ್ತಾರೆ. ಹಾಗೂ ಹೇಗಾದರೂ, ಎಲ್ಲಾದರೂ, ಸ್ವಲ್ಪವಾದರೂ ಬಂಡಾಯ ಎಬ್ಬಿಸುತ್ತಾರೆ. ಜಗತ್ತಿನಲ್ಲಿ ಹೆಚ್ಚಾಗಿ ಈ ಎರಡೂ ಪ್ರಕ್ರಿಯೆಗಳನ್ನು ನೋಡುತ್ತೇವೆ. ಆದರೆ ಭಾರತದಲ್ಲಿ ಇಂಗ್ಲೀಷರ ಅಧಿಕಾರವಿದ್ದಾಗ ಇವೆರಡರಲ್ಲಿ ಒಂದೂ ಪ್ರಕ್ರಿಯೆ ಕಂಡುಬರಲಿಲ್ಲ. ಬದಲಾಗಿ ಮೂರನೆಯ ಪ್ರಕ್ರಿಯೆಯೇ ಹುಟ್ಟಿತು. ಈ ಕಾಲದಲ್ಲಿ ಇಲ್ಲಿ ಹುಟ್ಟಿದ ಮಹಾಪುರುಷರು ದಬ್ಬಾಳಿಕೆಯನ್ನೂ ಇಷ್ಟಪಡಲಿಲ್ಲ. ಶಸ್ತ್ರ ಹಿಡಿದು ಹೋರಾಡಲೂ ಇಚ್ಛಿಸಲಿಲ್ಲ. ಬದಲಾಗಿ ಮೂರನೆಯ ಸಂಗತಿಯನ್ನೇ ಅವರು ಅಪೇಕ್ಷಿಸಿದರು. ಅವರೆಲ್ಲಾ ಆತ್ಮಸಂಶೋಧನೆ ಆರಂಭಿಸಿದರು. ಇಷ್ಟೊಂದು ದೊಡ್ಡ ಸಂಸ್ಕೃತಿ ಉಳ್ಳ, ಇಷ್ಟು ವಿಶಾಲವಾದ ದೇಶ ಪರಾಧೀನವಾಗಲು ಕಾರಣಗಳನ್ನು ಕುರಿತು ಗಂಭೀರವಾಗಿ ವಿಚಾರ ಮಾಡತಕ್ಕದ್ದೆಂದು ಯೋಚಿಸಿದರು. ನಮ್ಮೊಳಗಿರುವ ದೋಷಗಳ ನ್ಯೂನತೆಗಳ ನಿರೀಕ್ಷಣೆ, ಪರೀಕ್ಷೆ, ಸಮೀಕ್ಷೆ, ನಿರಾಕರಣೆ ಹಾಗೂ ಸಂಶೋಧನೆ ಮಾಡಬೇಕು. ಈ ಬಗೆಯಾಗಿ ನಮ್ಮಲ್ಲಿ ಆತ್ಮಶುದ್ಧಿ ಆರಂಭವಾಯಿತು. ನಮ್ಮ ಜನರು ದೀನ ಹೀನರೂ ಆಗಲಿಲ್ಲ, ಅಥವಾ ಕುಪಿತರಾಗಿ ಅಲ್ಲಲ್ಲಿ ದಂಗೆಯೂ ಏಳಲಿಲ್ಲ. ಆಧ್ಯಾತ್ಮಿಕ ಸಂಶೋಧನದ ಹಿಂದೆ ಬಿದ್ದರು.

ಇದೊಂದು ಬಹುದೊಡ್ಡ ಸಂಗತಿ. ಜಗತ್ತಿನಾದ್ಯಂತ ಇಂಥ ಉದಾಹರಣೆ ಬಹುಶಃ ಸಿಗಲಾರದು. ಈ ಕಾಲದಲ್ಲಿ ರಾಜಾರಾಮ್ ಮೋಹನ್‌ರಾಯ್, ರಾಮಕೃಷ್ಣ ಪರಮಹಂಸ, ವಿವೇಕಾನಂದ, ಸ್ವಾಮಿ ದಯಾನಂದ, ರಮಣ ಮಹರ್ಷಿ, ಶ್ರೀ ಅರವಿಂದರು, ಲೋಕಮಾನ್ಯ ತಿಲಕ್,

ನ್ಯಾಯಮೂರ್ತಿ ರಾನಡೆ, ರವೀಂದ್ರನಾಥ ಠಾಕೂರ್, ಮಹಾತ್ಮಾ ಗಾಂಧೀ ಮುಂತಾದ ಅಸಂಖ್ಯಾತ ಮೇಲ್ಮಟ್ಟದ ಸ್ವತಂತ್ರ ವಿಚಾರಕರು ಭಾರತದಲ್ಲಿ ಆಗಿಹೋದರು. ಅವರು ವಿಚಾರದಲ್ಲಿ ಸಂಶೋಧನೆ ನಡೆಸಿದರು, ಜಗತ್ತಿನ ವಿಚಾರವನ್ನು ಬೆಳೆಸುವುದರಲ್ಲಿ ತಮ್ಮ ಕಾಣಿಕೆಯನ್ನು ನೀಡಿದರು. ಪರತಂತ್ರ ದೇಶದಲ್ಲಿ ಇಂಥ ಸ್ವತಂತ್ರ ಬುದ್ಧಿ ಉದಿಸಬಹುದು, ಅದು ಜಗತ್ತಿನಮೇಲೆ ಪರಿಣಾಮ ಬೀರಬಹುದು ಹಾಗೂ ಜಗತ್ತಿನ ಸಾಮೂಹಿಕ ವಿಚಾರಕ್ಕೆ ಹೊಸ-ಹೊಸ ಕಾಣಿಕೆ ನೀಡಬಹುದು ಎಂಬ ಅಪೇಕ್ಷೆಯನ್ನು ಮಾಡುವಂತೆಯೇ ಇಲ್ಲ. ಪರತಂತ್ರ ಭಾರತದಿಂದ ಅದರ ಸ್ವತಂತ್ರ ಬುದ್ಧಿಮತ್ತೆಯ ಕಾರಣದಿಂದ ಹೊರಹೊಮ್ಮಿದ ಹೊಸ ವಿಚಾರಗಳ ಪೈಕಿ ಮೂರು ಅತ್ಯಂತ ಮಹತ್ವದವಾಗಿದ್ದವು.

ಭಾರತದ ಮೂರು ಮಹಾನ್ ಕೊಡುಗೆ

೧. ರಾಮಕೃಷ್ಣ ಪರಮಹಂಸರು ಸರ್ವಧರ್ಮ ಸಮನ್ವಯದ, ಶಾಬ್ದಿಕವಲ್ಲದ, ಆದರೆ ಅನುಭವಾತ್ಮಕವಾದ ವಿಚಾರವನ್ನು ಜಗತ್ತಿಗೆ ಇತ್ತರು. ಎಲ್ಲ ಧರ್ಮಗಳಲ್ಲಿಯೂ ಒಳ್ಳೆ ಅಂಶವಿದೆ, ಆದರೆ ಭಿನ್ನ ಭಿನ್ನ ಧರ್ಮಗಳಲ್ಲಿರುವ ವಾಸನೆಗಳನ್ನು ಅತ್ಯಂತ ತಟಸ್ಥಬುದ್ಧಿಯಿಂದ ಹಾಗೂ ಪೂರಾ ಪ್ರೇಮಪೂರ್ವಕವಾಗಿ ಸ್ವಾನುಭವ ಪಡೆದು, ಅವುಗಳ ಮೂಲಕ್ಕೆ ಹೋಗಿ, ಆತ್ಮನ ನಿರ್ಣಯವನ್ನು ವ್ಯಕ್ತಮಾಡಿ, ಮೂಲದಲ್ಲಿ ಏಕತೆ ಇದೆ, ಅದ್ವೈತವಿದೆ ಎಂದು ಘೋಷಿಸುವುದು ಈ ಜಗತ್ತಿಗೆ ಅವರು ಕೊಟ್ಟ ದೊಡ್ಡದೊಂದು ಕೊಡುಗೆ.

೨. ಎರಡನೆಯ ವಿಚಾರ ಶ್ರೀ ಅರವಿಂದರದು. ವಿಜ್ಞಾನ ಯುಗದಲ್ಲಿ ಈ ವಿಚಾರವೇ ನಿಲ್ಲುವುದು, ಬೇರೆ ಅಲ್ಲ ಎಂದು ನನ್ನೆಣಿಕೆ. ನಾವು ನಮ್ಮ ಸಣ್ಣ ಮನಸ್ಸಿನಿಂದ ಮೇಲೆ ಬಾರದಿರುವವರೆಗೆ, ಮೇಲೆದ್ದು ಪರಮಾತ್ಮ ರಸದ ಸೇವನೆ ಮಾಡಿ ಸೇವೆಗಾಗಿ ಕೆಳಗಿಳಿದು ಬಾರದವರೆಗೆ, ನಾವು ನಿಜವಾಗಿ ಜಗತ್ತಿನ ಸೇವೆ ಮಾಡಲಾರೆವು. ಶ್ರೀ ಅರವಿಂದರು ಇಂಥ ಪ್ರಭಾವಶಾಲಿಯಾದ ವಿಚಾರವನ್ನು ಜಗತ್ತಿಗೆ ಇತ್ತರು. ಮನಸ್ಸನ್ನು ನಿರ್ಮೂಲಗೊಳಿಸುವ ಮಾತು ಸಾವಿರಾರು ವರ್ಷಗಳಿಂದ ನಡೆದುಬಂದಿದೆ. ಯೋಗಿಗಳು ಅದಕ್ಕಾಗಿ ಅನೇಕ ವಿಧ ಪ್ರಯತ್ನ ಮಾಡಿದರು. ಆದರೆ ಸಮಸ್ತ ಮಾನವ ಸಮಾಜ

ಮನಸ್ಸಿನಿಂದ ಮೇಲೇಳುವ ಪ್ರಯತ್ನ ಮಾಡಬೇಕು ಹಾಗೂ ಮಾಡೀತು. ಆಗಲೇ ಮಾನವ ಕುಲದ ಉದ್ಧಾರ ಎಂಬ ಮಾತನ್ನು ಶ್ರೀ ಅರವಿಂದರು ಹೇಳಿದರು.

೩. ಮೂರನೆಯ ಮಹಾನ್ ವಿಚಾರವನ್ನು ಮಹಾತ್ಮಾ ಗಾಂಧೀ ನೀಡಿದರು. ಸತ್ಯಾಗ್ರಹದ ವಿಚಾರವೇ ಅದು. ಎಲ್ಲಿಯವರೆಗೆ ನಾವು ಪರಸ್ಪರ ವಿರೋಧಿಯಾದ ಮಾತುಗಳ ಬಾಹ್ಯ ಉಪಾಯಗಳನ್ನು ಯೋಚಿಸುವುದಿಲ್ಲವೋ—ಹೋರಾಟ, ಯುದ್ಧ, ಇತ್ಯಾದಿ ಸ್ಥೂಲ ಉಪಾಯಗಳಿಂದ ಮೇಲೇಳುವುದಿಲ್ಲವೋ, ಜಗತ್ತಿನ ಸಂಕಟ ದೂರವಾಗಲಾರದು. ಅದಕ್ಕಾಗಿಯೇ ಸತ್ಯಾಗ್ರಹದ ಆವಶ್ಯಕತೆ ಇದೆ. ಇದು ಗಾಂಧೀಜೀ ಕೊಟ್ಟ ವಿಚಾರ.

ಗಾಂಧೀಜೀ ಸಾಮೂಹಿಕ ರೂಪದಲ್ಲಿ ಸತ್ಯಾಗ್ರಹದ ಪ್ರಯೋಗವನ್ನು ಮೊಟ್ಟಮೊದಲು ದಕ್ಷಿಣ ಆಫ್ರಿಕದಲ್ಲಿ ಮಾಡಿದರು. 'ಸತ್ಯಾಗ್ರಹ' ಶಬ್ದ ಹುಟ್ಟಿದುದು ಈ ಪ್ರಯೋಗದಲ್ಲಿಯೇ. ಈ ಶಬ್ದ ಸೃಷ್ಟಿಯಾಗುವ ಮುನ್ನ ದಕ್ಷಿಣ ಆಫ್ರಿಕದಲ್ಲಿ ಈ ಆಂದೋಲನವನ್ನು ನಿಶ್ಶಸ್ತ್ರ ಪ್ರತೀಕಾರ' ಎಂದು ಕರೆಯಲಾಗುತ್ತಿತ್ತು. ಈ ಹೆಸರಿನಿಂದ ಅರ್ಥ ಅನರ್ಥವೇ ಆಗುತ್ತಿತ್ತು—ಅದಕ್ಕಾಗಿ 'ಸತ್ಯಾಗ್ರಹ' ಶಬ್ದದ ಶೋಧನೆಯಾಯಿತು. ಎರಡರ ಅಂತರವನ್ನು ಗಾಂಧೀಜೀ ಈ ಬಗೆಯಾಗಿ ತಿಳಿಸಿದ್ದಾರೆ:

೧. ನಿಶ್ಶಸ್ತ್ರ ಪ್ರತೀಕಾರದಲ್ಲಿ ಪ್ರೇಮದ ಪ್ರಸ್ತಾಪವಿಲ್ಲ. ಸತ್ಯಾಗ್ರಹದಲ್ಲಿ ವೈರಭಾವದ ಪ್ರಸಕ್ತಿ ಇಲ್ಲ.

೨. ನಿಶ್ಶಸ್ತ್ರ ಪ್ರತೀಕಾರದಲ್ಲಿ ಬಹುವೇಳೆ ಶಸ್ತ್ರಬಲದ ಪೂರ್ವಸಿದ್ಧತೆ ಇರುತ್ತದೆ. ಸತ್ಯಾಗ್ರಹದಲ್ಲಿ ಅದರ ಉಪಯೋಗ ಸಾಧ್ಯವೇ ಇಲ್ಲ.

೩. ನಿಶ್ಶಸ್ತ್ರ ಪ್ರತೀಕಾರ ರಕ್ತ ಸಂಬಂಧಿಗಳ ವಿರುದ್ಧ ನಡೆಯಲಾರದು. ಸತ್ಯಾಗ್ರಹ ಪ್ರೇಮೀ ಜನರ ವಿರುದ್ಧವೂ ನಡೆಯಬಹುದು.

೪. ನಿಶ್ಶಸ್ತ್ರ ಪ್ರತೀಕಾರದಲ್ಲಿ ವಿರೋಧೀ ಪಕ್ಷಕ್ಕೆ ದುಃಖವುಂಟು ಮಾಡುವ, ಅವರನ್ನು ಸತಾಯಿಸುವ ಕಲ್ಪನೆ ಇರುತ್ತದೆ. ಸತ್ಯಾಗ್ರಹದಲ್ಲಿ ಇನ್ನೊಬ್ಬರಿಗೆ ದುಃಖ ಕೊಡುವ ಕಲ್ಪನೆಯೇ ಸಾಧ್ಯವಿಲ್ಲ.

ವಿಚಾರ ಮಾಡಿದರೆ ಸತ್ಯಾಗ್ರಹ ಎಂಬುದು ಒಂದು ಮಧ್ಯಮ ಪದ ಲೋಪವಾದ ಸಮಾಸದಿಂದ ಹುಟ್ಟಿದ ಶಬ್ದ ಎಂದು ಸಿದ್ಧವಾಗುತ್ತದೆ. ಸತ್ಯಾಗ್ರಹ ಎಂದರೆ 'ಸತ್ಯಕ್ಕಾಗಿ ಅಹಿಂಸಾತ್ಮಕ ಆಗ್ರಹ.' ಈ ರೀತಿ ಸತ್ಯಾಗ್ರಹ ಅಹಿಂಸೆಯ ಪ್ರಯೋಗ.

ಆಧ್ಯಾತ್ಮಿಕ ಹಿನ್ನೆಲೆ ಮತ್ತು ಐತಿಹಾಸಿಕ ಅಗತ್ಯ

ಗಾಂಧೀಜಿಗೆ ಭಾರತದ ಆಧ್ಯಾತ್ಮಿಕ ಹಿನ್ನೆಲೆಯ ಲಾಭ ದೊರೆಯಿತು. ಭಾರತೀಯ ಸಂಸ್ಕೃತಿಗೆ ಅನುಗುಣವಾಗಿ ಅವರು ಅಹಿಂಸೆಯ ಶಸ್ತ್ರ ನೀಡಿದರು. ಇಲ್ಲಿ ನಡೆದ ಅಧ್ಯಾತ್ಮ ಸಂಶೋಧನೆ ಆಗಿರದಿದ್ದರೆ ಸಮಾಜ ಮಹಾತ್ಮಾ ಗಾಂಧಿಯವರ ಅಹಿಂಸೆಯ ಮಾತನ್ನು ಕೇಳಲು ಸಿದ್ಧವಾಗಿರುತ್ತಿರಲಿಲ್ಲ. ಇತಿಹಾಸದಲ್ಲಿ ಯಾವುದೇ ಒಂದು ಸಾಮ್ರಾಜ್ಯ ಅಹಿಂಸೆಯಿಂದ ನಷ್ಟಗೊಂಡ ಯಾವ ಉದಾಹರಣೆಯೂ ಇಲ್ಲ. ಆದರೆ ಇಲ್ಲಿನ ಆಧ್ಯಾತ್ಮಿಕ ಹಿನ್ನೆಲೆಯ ದೆಸೆಯಿಂದ ಜನ ಅಹಿಂಸೆಯ ವಿಚಾರವನ್ನು ಅಂಗೀಕರಿಸಿದರು. ಗಾಂಧೀ ವಿಚಾರದ ಬೀಜ ಬಿತ್ತಲು ಈ ದೇಶದ ಮನೋಭೂಮಿ ಸಿದ್ಧವಾಗಿತ್ತು. ಈ ದೇಶದ ವಾತಾವರಣದಲ್ಲಿರುವ ಆಧ್ಯಾತ್ಮಿಕ ಭಾವನೆ ಪ್ರಾಣಿಮಾತ್ರದಲ್ಲಿರುವ ದಯಾ ಭಾವನೆ, ಸಕಲ ಜೀವಿಗಳಲ್ಲಿ ಆತ್ಮದ ಅಸ್ತಿತ್ವಕ್ಕೆ ಇರುವ ಮಾನ್ಯತೆ, ಈ ಕಾರಣಗಳಿಂದ ಗಾಂಧೀಜಿಯ ಪ್ರಯೋಗ ಈ ದೇಶದಲ್ಲಿ ಸಫಲವಾಯಿತು. ಇದರಲ್ಲಿ ಗಾಂಧೀಜಿಗೆ ಸಲ್ಲಬೇಕಾದ ಗೌರವಕ್ಕಿಂತ ಬಹು ಹೆಚ್ಚಿನ ಪಾಲು ಈ ದೇಶಕ್ಕೆ ಸಲ್ಲಬೇಕು. ಗಾಂಧೀಜೀ ಒಂದು ನಿಮಿತ್ತ ಮಾತ್ರ ಆದರು. ಅವರು ಬಂದಿರದಿದ್ದರೆ ಮತ್ತೊಬ್ಬ ಯಾರೋ ಹುಟ್ಟುತ್ತಿದ್ದರು. ಒಂದಲ್ಲ ಒಂದು ಪ್ರಕಾರವಾಗಿ ಈ ಶಕ್ತಿ ಪ್ರಕಟವಾಗುತ್ತಿತ್ತು. ಈ ಬಗೆಯಾಗಿ ಗಾಂಧೀಜಿಯ ಮೂಲಕ ಈ ದೇಶದ ಆಧ್ಯಾತ್ಮಿಕ ವೃತ್ತಿ ಪ್ರಕಟವಾಯಿತು ಹಾಗೂ ಅದನ್ನು ಪ್ರಕಟಪಡಿಸಲು ಪರಿಸ್ಥಿತಿಯ ಕಾರಣದಿಂದ ಅವಕಾಶ ಒದಗಿತು.

ಇಂಗ್ಲೀಷರು ಈ ದೇಶಕ್ಕೆ ಬಂದು ಹಿಂದೆ ಯಾವ ಸಾಮ್ರಾಜ್ಯವೂ ಮಾಡದಿದ್ದ ಒಂದು ಕೆಲಸ ಮಾಡಿದರು. ಅವರು ಪ್ರಜೆಗಳನ್ನು ನಿಶ್ಶಸ್ತ್ರಗೊಳಿಸಿದರು. ಅಂಥ ನಿಶ್ಶಸ್ತ್ರ ಪ್ರಜೆಗಳಿಗೆ ಉಳಿಯುವುದು ಎರಡೇ ದಾರಿ.

ಸದಾಕಾಲಕ್ಕೂ ಗುಲಾಮಗಿರಿಯನ್ನೇ ಒಪ್ಪುವುದು ಅಥವಾ ಪರಂಪರಾಗತ ಶಸ್ತ್ರಗಳನ್ನು ಬಿಟ್ಟು ಬೇರೊಂದು ಶಸ್ತ್ರ ಹುಡುಕುವುದು. ನಮ್ಮೆದುರು ಈ ಐತಿಹಾಸಿಕ ಅಗತ್ಯ ಇತ್ತು. ಭಗವಂತನ ಪ್ರೇರಣೆಯಿಂದ ಗಾಂಧೀಯಂಥ ಆತ್ಮಬಲದ ವ್ಯಾಪಕ ಉಪಯೋಗ ಮಾಡಿದ ವ್ಯಕ್ತಿ ಒಬ್ಬ ಸಿಕ್ಕ. ವಿದೇಶೀ ರಾಜ್ಯಕ್ಕೆ ಸಹಕಾರ ನೀಡುವುದನ್ನು ನಿಲ್ಲಿಸಿದರೆ ಆ ರಾಜ್ಯ ಬಿದ್ದುಹೋದೀತು ಎಂಬುದನ್ನು ಆತ ಕಲಿಸಿದ.

ಇದುವರೆಗೆ ಇತರರು ಬಹುಮಟ್ಟಿಗೆ ವ್ಯಕ್ತಿಗತ ಪ್ರಯೋಗ ನಡೆಸಿದ್ದು ದನ್ನು ಗಾಂಧೀಜೀ ಸಾಮೂಹಿಕವಾಗಿ ಪ್ರಯೋಗಮಾಡಿದರು. ಗಾಂಧೀಜಿಯ ಅಹಿಂಸೆ ಅಥವಾ ಸತ್ಯಾಗ್ರಹದ ವಿಶೇಷವೇ ಇದು. ಈ ಅಂತರ ಬಹು ಅಂಶ ಗಳಲ್ಲಿ ಪರಿಸ್ಥಿತಿಯ ಕಾರಣದಿಂದಲೂ ಆಗಿರಬಹುದು. ಪ್ರತಿಯುಗಕ್ಕೂ ತನ್ನದೇ ಆದ ಆವಶ್ಯಕತೆ ಹಾಗೂ ಶಕ್ಯತೆ ಇರುತ್ತದೆ. ಅದಕ್ಕನುಗುಣವಾಗಿ ಆಯಾ ಯುಗದ ಮಹಾಪುರುಷರಿಗೆ ಹೊಳೆಯುತ್ತದೆ. ವ್ಯಾಪಕ ಕ್ಷೇತ್ರದಲ್ಲಿ ಅಹಿಂಸೆಯನ್ನು ಪ್ರಯೋಗ ಮಾಡುವ ಕಲ್ಪನೆ ನಮ್ಮ ಕಾಲದ ಜನರಿಗೆ ಆದಷ್ಟು ಮೊದಲಿನ ಕಾಲದ ಜನರಿಗೆ ಆಗಲಿಲ್ಲ. ಇದಕ್ಕೆ ವಿಜ್ಞಾನವೇ ಕಾರಣ. ವಿಜ್ಞಾನವಿಲ್ಲದಿದ್ದ ಸಮಯದಲ್ಲಿ ಜಗತ್ತಿನ ಜನರು ಇಷ್ಟು ನಿಕಟ ವಾಗಿ ಇರಲಿಲ್ಲ. ಆದುದರಿಂದ ಹಿಂದಿನ ಕಾಲದಲ್ಲಿ ಆಧ್ಯಾತ್ಮಿಕ ಶಕ್ತಿಯ ಪ್ರಯೋಗ ವ್ಯಕ್ತಿಗತ ಮತ್ತು ಕೌಟುಂಬಿಕ ಕ್ಷೇತ್ರದವರೆಗೆ ಮಾತ್ರ ಸೀಮಿತ ವಾಗಿ ಉಳಿಯಿತು. ಆಧ್ಯಾತ್ಮಿಕ ಶಕ್ತಿಯ ವ್ಯಾಪಕ ಉಪಯೋಗ ಆಗಬಲ್ಲುದು ಎಂಬುದರ ಪ್ರತ್ಯಕ್ಷ ಅರಿವನ್ನು ಗಾಂಧೀಜೀ ಆಗುಮಾಡಿಸಿದರು. ಇದಕ್ಕೆ ಮೊದಲು ಅದರ ಪ್ರತ್ಯಕ್ಷ ಅನ್ವಯ ಭಾರೀ ಪ್ರಮಾಣದಲ್ಲಿ ಇತಿಹಾಸದಲ್ಲಿ ಎಂದೂ ಆಗಿರಲಿಲ್ಲ. ಅದನ್ನು ಹೀಗೆ ಅನ್ವಯಿಸಿ ತೋರಿಸುವ ಅವಕಾಶವನ್ನು ಭಗವಂತ ಭಾರತಕ್ಕೆ ಕೊಟ್ಟ. ಗಾಂಧೀಜಿಯ ಮೂಲಕ ಆ ಕೆಲಸ ಆಯಿತು.

ಸತ್ಯಾಗ್ರಹ ಒಂದು ಜೀವನ ನಿಷ್ಠೆ

ಈ ಸತ್ಯಾಗ್ರಹ ಶಕ್ತಿ ನಮಗೆ ಸದಾ ಉಪಯೋಗಿ. ಬಹುಶಃ ನಾವು ಸತ್ಯಾಗ್ರಹದ ಅರ್ಥವನ್ನು ಸರಿಯಾಗಿ ತಿಳಿದಿರಲಾರೆವು. ಸತ್ಯಕ್ಕೆ ಅಂಟಿ ಕೊಂಡಿರುವುದೇ ಸತ್ಯಾಗ್ರಹ. ನಮ್ಮ ಇಡೀ ಜೀವನವನ್ನು ಸತ್ಯಾಗ್ರಹಿ

ನಿಷ್ಠೆಯ ಮೇಲೆ ನಿಲ್ಲಿಸಬೇಕು. ಎಷ್ಟೇ ಕಷ್ಟ ಬರಲಿ ಯಾವುದನ್ನು ನಾವು ಸತ್ಯವೆಂದು ತಿಳಿಯುತ್ತೇವೆಯೋ ಅದಕ್ಕೆ ಅಂಟಿಕೊಳ್ಳುವುದೇ ಸತ್ಯಾಗ್ರಹ. ಅದಕ್ಕಾಗಿ ಕಷ್ಟ ಸಹಿಸಬೇಕಾದೀತು, ಅಡ್ಡಿ ಇಲ್ಲ. ಅಷ್ಟೇ ಅಲ್ಲ, ಇದಕ್ಕಾಗಿ ಕಷ್ಟ ಸಹಿಸುತ್ತೇವೆ ಎಂಬ ಪರಿವೆಯೂ ಇರತಕ್ಕದ್ದಲ್ಲ. ಸತ್ಯದ ಅನ್ವಯ ಮಾಡುವವರಿಗೆ ಆ ಪ್ರಯತ್ನದಲ್ಲಿ ಆನಂದವುಂಟಾಗುತ್ತದೆ.

ಈ ರೀತಿ ಆಪತ್ತಿನಲ್ಲೂ ಸತ್ಯಕ್ಕೆ ಅಂಟಿಕೊಳ್ಳುವ ಶಕ್ತಿ ಜನತೆಯಲ್ಲಿ ಇರಬೇಕು. ಈ ಶಕ್ತಿಯಿಂದಲೇ ಜಗತ್ತು ಹಿಂಸೆಯಿಂದ ಪಾರಾಗಬಲ್ಲುದು. ಜಗತ್ತಿಗೆ ಸತ್ಯಾಗ್ರಹಕ್ಕಿಂತ ಹೆಚ್ಚಾದ ಮುಕ್ತಿದಾಯಕ ಶಸ್ತ್ರ ಮತ್ತೊಂದಿಲ್ಲ ಎಂದು ನನ್ನ ನಂಬಿಕೆ. ಯಾವುದೇ ಸಮಾಜದಲ್ಲಿ ಎಂಥದೇ ಸಮಸ್ಯೆಗಳಿರಲಿ ಅವುಗಳ ಪರಿಹಾರಕ್ಕೆ ಈ ಶಕ್ತಿಯನ್ನು ಉಪಯೋಗಿಸಬಹುದು. ನಮ್ಮ ವಿದ್ಯಾರ್ಥಿಗಳು ಸತ್ಯಾಗ್ರಹದ ಶಕ್ತಿಯನ್ನು ನಿರ್ಮಿಸುವ ಯೋಜನೆ ನಮ್ಮ ಶಿಕ್ಷಣದಲ್ಲಿರಬೇಕು. ಈಗ ನಮ್ಮ ವಿದ್ಯಾರ್ಥಿಗಳಿಗೆ ಕೆಲವೊಂದು ವ್ಯಾವಹಾರಿಕ ಶಿಕ್ಷಣ ಕೊಡುತ್ತೇವೆ. ಅವರಿಂದ ಕೆಲವೊಂದು ಶಿಸ್ತನ್ನು ನಿರೀಕ್ಷಿಸುತ್ತೇವೆ. ಅದಕ್ಕೂ ಹೆಚ್ಚನ್ನು ನಾವು ಅವರಿಂದ ನಿರೀಕ್ಷಿಸುವುದೇ ಇಲ್ಲ. ಶಿಸ್ತು ಸಹ ಒಂದು ಒಳ್ಳೆಯ ಗುಣ, ಸಂದೇಹವಿಲ್ಲ. ಇದೇ ಸರ್ವಸ್ವವೂ ಅಲ್ಲ, ಸರ್ವ ಶ್ರೇಷ್ಠ ಗುಣವೂ ಅಲ್ಲ. ಸರ್ವಶ್ರೇಷ್ಠ ಗುಣ ಯಾವುದು ಎಂದು ಹೇಳುವುದು ಕಠಿಣ. ಆದರೆ ಗೀತೆಯಲ್ಲಿ ಅದನ್ನು 'ಅಭಯಂ' ಎಂದು ಹೇಳಲಾಗಿದೆ. ಆದುದರಿಂದ ನಿರ್ಭೀತಿಯ ಅಡಿಪಾಯದ ಮೇಲೆ ಸಮಸ್ತ ಶಿಕ್ಷಣದ ಕಟ್ಟಡ ನಿಲ್ಲಬೇಕು. ಸಮಾಜ ರಚನೆ ಮತ್ತು ರಾಜ್ಯವ್ಯವಸ್ಥೆಯೂ ಅದೇ ಆಧಾರದ ಮೇಲಿರಬೇಕು. ನಿರ್ಭಯವಾಗದ ಸತ್ಯನಿಷ್ಠೆ ಹೆಚ್ಚುವುದಿಲ್ಲ. ಸತ್ಯಕ್ಕೆ ಅಚಲವಾಗಿ ಅಂಟಿಕೊಳ್ಳುವ ಶಕ್ತಿಯೂ ಬರುವುದಿಲ್ಲ.

ನಿರ್ಭೀತಿ ಎಂದರೆ ಯಾರಿಗೂ ಹೆದರದಿರುವುದು. ಮತ್ತು ಯಾರನ್ನೂ ಹೆದರಿಸದಿರುವುದು. ಎರಡೂ ಸೇರಿ ನಿರ್ಭೀತಿ. ತನ್ನನ್ನು ದೇಹದಿಂದ ಭಿನ್ನವಾಗಿ ಕಾಣುವುದು ನಿರ್ಭೀತಿ. ಯಾರು ತನ್ನನ್ನು ದೇಹದಿಂದ ಭಿನ್ನ ಎಂದು ತಿಳಿಯುತ್ತಾನೆಯೊ ಆತ ಇತರರನ್ನು ದೇಹದಿಂದ ಭಿನ್ನವಾಗಿ ಕಾಣಬಲ್ಲ. ಆದುದರಿಂದ ಅವನು ಯಾರಿಂದಲೂ ತುಳಿಯಲ್ಪಡಲಾರ, ಯಾರನ್ನೂ ತುಳಿಯಲಾರ. ಶರೀರದಿಂದ ತಾನು ಬೇರೆ ಎಂದು ತಿಳಿಯುವುದೇ

ಆತ್ಮಜ್ಞಾನ. ಇದೇ ಸತ್ಯಾಗ್ರಹ ಶಕ್ತಿಯ ಅಧಿಷ್ಠಾನ. ಆತ್ಮಜ್ಞಾನವಿಲ್ಲದೆ ಸತ್ಯನಿಷ್ಠೆ ಅಸಂಭವ. ಸತ್ಯಕ್ಕಾಗಿ ಕಷ್ಟಪಡಬೇಕಾದೀತು, ಸಾಯುವತನಕ ಸೆಣಸಬೇಕಾದೀತು. ಇವೆಲ್ಲಾ ನಿರ್ಭೀತಿ ಆತ್ಮಜ್ಞಾನದ ಮೇಲೆ ಮಾತ್ರ ನಿಲ್ಲಬಲ್ಲದು.

ಸತ್ಯ, ಅಹಿಂಸೆ, ಸಮತ್ವ

ಸತ್ಯಾಗ್ರಹದಲ್ಲಿ ಅಹಿಂಸೆಯ ಮಹತ್ವವೂ ಸ್ಪಷ್ಟವೇ. ಏಕೆಂದರೆ ಬಹು ವೇಳೆ ಎದುರೆದುರು ನಿಂತಿರುವ ವಿರೋಧೀ ಪಕ್ಷಗಳು ಸತ್ಯದ ಹೆಸರಿನಲ್ಲೇ ಹೋರಾಡುತ್ತವೆ. ಎರಡೂ ಸತ್ಯದ ದಾವೆಯನ್ನೇ ಹೂಡುತ್ತವೆ. ಎರಡೂ ಪಕ್ಷಗಳು ತಮ್ಮ-ತಮ್ಮ ಪಕ್ಷದ ವಿಜಯಕ್ಕಾಗಿ ಭಕ್ತಿ-ಭಾವದಿಂದ ಪ್ರಾರ್ಥನೆ ಗೈಯುವುದನ್ನು ನೋಡಬಹುದು. 'ಹೇ, ಭಗವಂತಾ, ನಮ್ಮ ಶತ್ರುವನ್ನು ನಾಶಗೊಳಿಸು.' ಇಂಥ ಈಶ್ವರನ ಪ್ರಾರ್ಥನೆ ಗೈಯುವ ದಯಾಳು ಈಸಾಯಿಗಳು ಕಳೆದ ಮಹಾಯುದ್ಧದ ಕಾಲದಲ್ಲಿ ಎಲ್ಲ ಕಡೆಯೂ ಕಂಡುಬರುತ್ತಿದ್ದರು. ಆದುದರಿಂದ ಸತ್ಪಕ್ಷ ಯಾವುದು ಎಂಬುದನ್ನು ಈಶ್ವರನ ನಿರ್ಣಯಕ್ಕೆ ಬಿಟ್ಟು ಅಹಿಂಸೆಯ ಸಾಧನವನ್ನು ಯಾರು ಬಳಸುತ್ತಾರೆ ಎಂಬುದನ್ನು ನೋಡುವುದು ಲಾಭದಾಯಕ. ಹೌದು, ಅಹಿಂಸಾತ್ಮಕ ಎಂದು ಹೇಳಿಕೊಳ್ಳುವ ಎರಡೂ ಪಕ್ಷಗಳು ಒಬ್ಬರು ಇನ್ನೊಬ್ಬರ ವಿರುದ್ಧ ಉಪವಾಸ, ಇತ್ಯಾದಿಗಳಿಂದಲೂ ಹೋರಾಡಿಯಾರು. ಇಬ್ಬರೂ ಸತ್ಯದ ಆಣೆಯನ್ನೇ ಹೊತ್ತಾರು, ಆಗ ಸತ್ಯ ಮತ್ತು ಅಹಿಂಸೆ ಎರಡನ್ನೂ ಒತ್ತಟ್ಟಿಗಿಟ್ಟು ಸಮತ್ವಕ್ಕೆ ಮಹತ್ವ ಕೊಡಬೇಕಾದೀತು. ಸಮತ್ವ ಇರುವೆಡೆಯಲ್ಲೇ ಸತ್ಯ ಮತ್ತು ಅಹಿಂಸೆ ಎಂಬುದು ಅಲ್ಲಿ ಒರೆಗಲ್ಲು. ವಾಸ್ತವವಾಗಿ ನೋಡುವುದಾದರೆ ಸತ್ಯ, ಅಹಿಂಸೆ ಮತ್ತು ಸಮತ್ವ—ಈ ಮೂರೂ ಸೇರಿಯೇ ಒಂದು ವಿಚಾರ.

ಈಚೆಗೆ 'ಇಂಥವರ ವಿರುದ್ಧ ಸತ್ಯಾಗ್ರಹ ಮಾಡಬೇಕು' ಎಂಬ ಪರಿಭಾಷೆ ರೂಢವಾಗಿದೆ. ಅದೊಂದು ಭಾಷೆಯೇ. ಸತ್ಯಾಗ್ರಹದಲ್ಲಿ ವಿರುದ್ಧ-ಗಿರುದ್ಧ ಯಾವುದೂ ಇಲ್ಲ. ವಾಸ್ತವವಾಗಿ ನೋಡಿದರೆ ಯಾರ ಎದುರಿಗಾದರೂ ಸತ್ಯಾಗ್ರಹ, ಯಾರೊಂದಿಗಾದರೂ ಸತ್ಯಾಗ್ರಹ, ನಿಜ. ಎದುರಾಳಿಯ ವಿಚಾರ ಬದಲಾಯಿಸುವುದು ಸತ್ಯಾಗ್ರಹದಲ್ಲಿ ಮುಖ್ಯ ಮಾತು.

ಸ್ವತಃ ಶುಭ ವಿಚಾರ ಮಾಡುವುದು, ಎದುರಾಳಿಗೆ ಸರಿಯಾಗಿ ತಿಳಿಯಹೇಳಿ ಆತ ಅರಗಿಸಿಕೊಳ್ಳುವಂತೆ ಮಾಡುವುದು, ಆತನೊಡನೆ ವಿಚಾರ ವಿನಿಮಯ ಮಾಡುತ್ತಾ ತನ್ನ ವಿಚಾರದಲ್ಲೇ ದೋಷವೇನಾದರೂ ಇದ್ದರೆ ಅದನ್ನು ಶುದ್ಧ ಪಡಿಸಿಕೊಳ್ಳುವುದು ನಿಜವಾದ ಸತ್ಯಾಗ್ರಹದ ಸ್ವರೂಪ. ಎಷ್ಟೋ ವೇಳೆ ಎದುರಾಳಿ ಕಾಲ್ಪನಿಕ ಸ್ವಾರ್ಥದ ಕಾರಣದಿಂದ ಅಥವಾ ಕ್ರೋಧ-ಮೋಹಾದಿ ವಿಕಾರವಶನಾಗಿ ಕೇಳಲು ತಿಳಿಯಲು ಸಿದ್ಧನಿರುವುದಿಲ್ಲ. ಇದರಿಂದಾಗಿ "ದುಃಖ ಸಹನೆ" ಮುಂತಾದ ಅಹಿಂಸೆಯ ಪ್ರಯೋಗ ಹಾಗೂ ತಪಸ್ಸಿಗೆ ಆ ನಡುವಿನ ಸಮಯದಲ್ಲಿ ಅವಕಾಶ ಸಿಕ್ಕುತ್ತದೆ. ಆ ಕಾರಣದಿಂದ ಅಥವಾ ಅದಿಲ್ಲದೆಯೇ ತಿಳಿವಳಿಕೆ ಪಡೆಯುವ ಮನಸ್ಥಿತಿ ಬಂದುಬಿಟ್ಟರೆ ಅನಂತರದ ಕೆಲಸ ವಿಚಾರದ್ದೇ ಆಗುತ್ತದೆ. ಆದುದರಿಂದ ವಿಚಾರದಂತೆ ಸ್ವತಃ ನಡೆದು, ಆ ನಡೆಯನ್ನು ಸದಾ ಪಾಲಿಸುತ್ತಾ ಇತರರ ವಿಚಾರ ತಿಳಿಯಲು ಸದಾ ಸಿದ್ಧ ವಿರುವುದೇ ಸತ್ಯಾಗ್ರಹದ ಮುಖ್ಯ ಸ್ವರೂಪ. ಆದಿಯಲ್ಲಿ ವಿಚಾರ, ಅಂತ್ಯದಲ್ಲಿ ವಿಚಾರ ಮತ್ತು ಮಧ್ಯದಲ್ಲಿ ವಿಚಾರ—ಇದು ಸತ್ಯಾಗ್ರಹದ ನಿತ್ಯಧರ್ಮ. ಆದಿಯಲ್ಲಿ ವಿಚಾರ, ಅಂತ್ಯದಲ್ಲಿ ವಿಚಾರ ಮತ್ತು ಮಧ್ಯದಲ್ಲಿ ಅಹಿಂಸೆಯ ತಪಸ್ಸು—ಇದನ್ನು 'ಸತ್ಯಾಗ್ರಹದ ಆಪದ್ಧರ್ಮ' ಎಂದು ತಿಳಿಯಿರಿ.

ಸತ್ಯಾಗ್ರಹದ ಅರ್ಥ ಅಡ್ಡಿ ಒಡ್ಡುವುದಲ್ಲ

ಯಾರಾದರೂ ಸತ್ಯಾಗ್ರಹ ನಡೆಸಿದುದನ್ನು ಕೇಳಿದೊಡನೆ ತಂಪಾಗ ಬೇಕು, ಮನಸ್ಸಿಗೆ ಏಕ್‌ದಂ ಆನಂದವಾಗಬೇಕು. ಇಂದಾದರೋ ಇದಕ್ಕೆ ತೀರಾ ವಿರುದ್ಧ ಪ್ರತಿಕ್ರಿಯೆ ಉಂಟಾಗುತ್ತದೆ. ಸತ್ಯಾಗ್ರಹ ಆರಂಭವಾಗು ತ್ತಲೇ ಜನರಿಗೆ ಭಯವಾಗುತ್ತದೆ. ಕೆಲವರಂತೂ ಅದರ ಪ್ರತೀಕಾರದ ವಿಚಾರ ಮಾಡುತ್ತಾರೆ. ಯುದ್ಧದ ಪ್ರತಿಕ್ರಿಯೆ ಆಗುವಂತೆಯೇ ಸತ್ಯಾ ಗ್ರಹಕ್ಕೂ ಆಗುತ್ತದೆ. ಆದರೆ ಸತ್ಯಾಗ್ರಹದ ಸ್ವರೂಪ ಹಾಗಲ್ಲ. ಸತ್ಯಾಗ್ರಹದ ಸ್ವರೂಪ ಯುದ್ಧಕ್ಕೆ ತೀರಾ ವಿರುದ್ಧವಾದುದು. ಯುದ್ಧದಲ್ಲಿ ಒಂದು ಪಕ್ಷಕ್ಕೆ ಗೆಲುವು ಮತ್ತೊಂದು ಪಕ್ಷಕ್ಕೆ ಸೋಲು. ಸತ್ಯಾಗ್ರಹದಲ್ಲಿ ಎರಡೂ ಪಕ್ಷಗಳಿಗೆ ಗೆಲುವು. ಯುದ್ಧದಲ್ಲಿ ಪರಸ್ಪರರ ಮನಸ್ಸು ಪರಸ್ಪರರ ವಿರುದ್ಧ ಎದ್ದು ನಿಲ್ಲು ತ್ತದೆ. ಸತ್ಯಾಗ್ರಹದಲ್ಲಿ ಮನಸ್ಸು ಪರಸ್ಪರ ಹತ್ತಿರವಾಗುತ್ತದೆ. ಸತ್ಯಾಗ್ರಹ

ದಲ್ಲಿ ಪರಸ್ಪರರ ಬುದ್ಧಿಯ ನಡುವಿನ ಪರದೆ ತೆರೆಯುತ್ತದೆ. ವಿಚಾರಮಾಡಲು ಪ್ರೇರಣೆಯುಂಟಾಗುತ್ತದೆ. ಯುದ್ಧದಲ್ಲಿ ವಿಚಾರ ಕುಂಠಿತವಾಗುತ್ತದೆ. ಸತ್ಯಾಗ್ರಹದಲ್ಲಿ ಸಹನೆಯಿಂದ ತಮ್ಮ ವಿಚಾರವನ್ನು ತಿಳಿಸುತ್ತ ಇರಬೇಕಾಗುತ್ತದೆ. ಒಂದು ರೀತಿಯಿಂದ ತಿಳಿಯದಿದ್ದರೆ ಮತ್ತೊಂದು ರೀತಿಯಿಂದ ತಿಳಿಸಬೇಕಾಗುತ್ತದೆ. ಇದೇ ಸತ್ಯಾಗ್ರಹದ ಸರ್ವೋತ್ತಮ ಶುದ್ಧ ಸ್ವರೂಪ. ಜ್ಞಾನಶಕ್ತಿಯಲ್ಲಿ, ವಿಚಾರಶಕ್ತಿಯಲ್ಲಿ ವಿಶ್ವಾಸ, ಎನ್ನುವುದರ ಹೆಸರೇ ಸತ್ಯಾಗ್ರಹ. ಸತ್ಯಾಗ್ರಹ ಅಡ್ಡಿ ಒಡ್ಡುವ ಅಥವಾ ಒತ್ತಡ ಹೇರುವ ಕ್ರಮವಲ್ಲ.

ಪಿಸ್ತೂಲು ತೋರಿಸುವಂಥ ಸ್ಥಿತಿ

ಈಚೆಗೆ ಉಪವಾಸ-ಗಿಪವಾಸವನ್ನು ‘ಸತ್ಯಾಗ್ರಹ’ ಎಂದು ಭಾವಿಸುತ್ತಾರೆ. ಬಾಜ-ಬಜಂತ್ರಿ ಬಾರಿಸುವುದು, ಗಂಟಲು ಹರಿಯುವಂತೆ ಅರಚುವುದನ್ನು ‘ಭಕ್ತಿ’ ಎಂದು ತಿಳಿಯುವಂತೆ. ಬಾಜ-ಬಜಂತ್ರಿ ಬಾರಿಸುವುದರಿಂದ ನಿದ್ದೆ ಹತ್ತುವುದು ತಪ್ಪುತ್ತದೆ. ನಿದ್ದೆ ಬಾರದಿರುವುದೇ ಭಕ್ತಿ ಎನ್ನುವುದಾದರೆ ಇಡೀ ಜಗತ್ತಿನಲ್ಲಿ ಹದಿನಾರು ಗಂಟೆ ಕಾಲ ಭಕ್ತಿಯೇ ನಡೆದಿರುತ್ತದೆ ಎಂದು ಹೇಳಬೇಕಾದೀತು. ತಾಳ, ಮದ್ದಲೆ ಬಾರಿಸುವುದು ಭಕ್ತಿಯ ಲಕ್ಷಣವಾಗಲಾರದು. ಬದಲಾಗಿ ಅಕ್ಕಪಕ್ಕದವರಿಗೆ ಉಪದ್ರವ. ಹಾಗೆ ಮಾಡುವುದು ಭಕ್ತಿಗೆ ವಿರುದ್ಧ. ಹಾಗೆಯೇ ಉಪವಾಸ-ಗಿಪವಾಸ ಮಾಡಿ ಕಷ್ಟಪಡುವುದು ರಾಜಸ-ತಾಮಸ ಪ್ರವೃತ್ತಿಯಿಂದ ಪ್ರೇರಿತವಾಗಿದ್ದರೆ ಅದು ಸತ್ಯಾಗ್ರಹದ ಬದಲು ದುರಾಗ್ರಹದ ಲಕ್ಷಣವಾದೀತು. ಅದು ಯಾರಿಗಾದರೂ ಪಿಸ್ತೂಲು ತೋರಿಸಿದಂತೆ.

ನಮ್ಮ ಇಂಥ ದೊಡ್ಡ ದೇಶದಲ್ಲಿ ಅನೇಕ ಪ್ರಾಂತ, ಭಾಷೆ, ಜಾತಿಗಳು, ಪಂಥಗಳು, ಧರ್ಮಗಳು ಇವೆ. ಅಸಂಖ್ಯ ಸಮಸ್ಯೆಗಳು ಬರುತ್ತಲೇ ಇರುತ್ತವೆ. ಜನತೆಯ ಬಗೆಬಗೆಯ ಕಷ್ಟಕೋಟಲೆಗಳಿಗಂತೂ ಪಾರವೇ ಇಲ್ಲ. ಒಂದೊಂದು ಪ್ರಶ್ನೆ ಎತ್ತಿಕೊಂಡು ಒಬ್ಬೊಬ್ಬ ಮನುಷ್ಯ ಸರಕಾರದೆದುರು ಉಪವಾಸ ಕುಳಿತರೆ ದೊಡ್ಡ ಅವ್ಯವಸ್ಥೆಯೇ ಆಗಿಹೋದೀತು. ಅಂಥ ಒಂದೊಂದು ಉಪವಾಸಕ್ಕೂ ಸರ್ಕಾರ ಮಣಿಯುತ್ತ ಹೋದರೆ ಅಂಥ ಸರ್ಕಾರ ನಾಲಾಯಕ್ ಎಂದು ಸಿದ್ಧವಾದೀತು.

ಇಂದು ದೇಶ ಸ್ವತಂತ್ರ. ದೇಶದ ಆಡಳಿತ ಜನತಂತ್ರ ಪದ್ಧತಿಯಂತೆ ನಡೆಯುತ್ತದೆ. ಜನತೆಯ ಬಳಿ ಹೋಗಿ ತಮ್ಮ ಅಭಿಪ್ರಾಯದ ಪ್ರಚಾರ ಮಾಡಿ ಜನಮತವನ್ನು ತಮ್ಮ ಅಭಿಮತಕ್ಕೆ ತಕ್ಕಂತೆ ತಿರುಗಿಸಿಕೊಳ್ಳಲು ಪ್ರತಿಯೊಬ್ಬರಿಗೂ ಸ್ವಾತಂತ್ರ್ಯವುಂಟು. ಅದರ ಪ್ರಯೋಜನ ಪಡೆಯುವುದನ್ನು ಬಿಟ್ಟು ಉಪವಾಸವನ್ನು ಮಾಡುವುದು ಸರಿಯಲ್ಲ. ಜನರಿಗೆ ನಿಮ್ಮ ವಿಚಾರ ತಿಳಿಯಹೇಳಿ. ಜನತೆ ಸರ್ಕಾರದಿಂದ ಹಾಗೆ ಕೆಲಸ ಮಾಡಿಸೀತು. ಆದರೆ ಹೀಗೆಂದು ತಿಳಿದು ಉಪವಾಸ ಮುಂತಾದವು ನಡೆದರೆ, ಹಿಂಸಾಶಕ್ತಿ ಕೈಲಿಲ್ಲ, ಉಪವಾಸದ ಅಸ್ತ್ರವಂತೂ ಇದೆ, ಎಂದಾದೀತು. ಇದು ತೀರಾ ಅನುಚಿತ. ಉಪವಾಸದಿಂದ ಒತ್ತಾಯ ಹೇರಿದರೆ ಅದು ಸತ್ಯಾಗ್ರಹವಲ್ಲ, ಖೊಟ್ಟ ಕೆಲಸ. ಹೆದರಿಸಿ ಬೆದರಿಸುವುದು ಸತ್ಯಾಗ್ರಹದ ಅರ್ಥವಲ್ಲ ; ಅದು ಪ್ರೇಮದ ಪರಾಕಾಷ್ಠೆ. ಪ್ರೇಮ ಹೆಚ್ಚಿದಾಗಲೇ ಉಪವಾಸ ಮಾಡತಕ್ಕದ್ದು. ಪ್ರೇಮ ಹೆಚ್ಚಿದಾಗಲೇ ಉಪವಾಸ ಮಾಡತಕ್ಕದ್ದು. ಎದುರಾಳಿಯನ್ನು ಹೊಡೆದು ಬಡೆದರೆ ಆಗುವುದಿಲ್ಲ, ಆದಕಾರಣ ನಡೆಯಿರಿ ಉಪವಾಸ ಮಾಡೋಣ ಎನ್ನುವುದು ಸರಿಯಲ್ಲ.

ತಿತಿಕ್ಷೆ ಸತ್ಯಾಗ್ರಹದ ಗುಣವಲ್ಲ

ಯಾವುದೋ ಒಂದು ಸಮಸ್ಯೆ ಇದೆ ಎಂದು ತಿಳಿಯಿರಿ. ಸತ್ಯ ನನ್ನ ಪಕ್ಷದಲ್ಲಿ ಇದೆ ಎಂದು ನಾನು ತಿಳಿಯುತ್ತೇನೆ. ಎದುರಾಳಿ ನನ್ನದೇನನ್ನೂ ಒಪ್ಪುವುದಿಲ್ಲ. ನಾನು ಸತ್ಯಾಗ್ರಹ ಆರಂಭಿಸಿದೆ! ಸತ್ಯಾಗ್ರಹ ಎಂದರೆ ಉಪವಾಸ. ಮತ್ತೆ ಅವನೂ ನನ್ನೆದುರು ಕುಳಿತು ಉಪವಾಸ ಪ್ರಾರಂಭಿಸಿದ. ಈಗ ಯಾರ ಕಡೆ ಸತ್ಯವಿದೆ ಎಂದು ತೀರ್ಮಾನವಾಗುವುದು ಹೇಗೆ? ಉಪವಾಸವಿರಲು ಶಕ್ತಿ ನನಗೆ ಕಡಿಮೆ ಇದ್ದು ಇದಿರಾಳಿಗೆ ಹೆಚ್ಚಿದ್ದರೆ ಆಗ ಸತ್ಯ ಅವನ ಪಕ್ಷದಲ್ಲಿದೆಯೆಂದು ತಿಳಿಯುವುದೇ? ಹಸಿದುಕೊಂಡಿರುವ ಶಕ್ತಿಯ ಆಧಾರದ ಮೇಲೆ ಸತ್ಯದ ನಿರ್ಣಯ ಮಾಡುವುದಾದರೆ ಕುಸ್ತಿ ಆಡಿ ಏಕೆ ಸತ್ಯದ ನಿರ್ಣಯ ಮಾಡಬಾರದು? ಮತ್ತೆ ಯಾರಾದರೂ ಜೈನ ಧರ್ಮೀಯ ನನ್ನೆದುರು ಇದ್ದರೆ ಆತ ನನ್ನನ್ನು ಸೋಲಿಸಿಯೇಬಿಟ್ಟಾನು. ಏಕೆಂದರೆ ಅವನಿಗದೇ ರೂಢಿ. ಉಪವಾಸದಲ್ಲಿ ಆತ ನನ್ನನ್ನು ಸಹಜವಾಗಿ

ಸೋಲಿಸಿಯಾನು, ದಣಿಸಿಯಾನು. ಉಪವಾಸ ಮಾಡುವ ಶಕ್ತಿಯಲ್ಲಿ ಅವನೆದುರು ನಾನು ನಿಲ್ಲಲಾರೆ. ಆ ಕಾರಣದಿಂದ ನನ್ನ ಬಳಿ ಸತ್ಯವಿಲ್ಲ ಎದುರಾಳಿಯ ಬಳಿ ಸತ್ಯವಿದೆ ಎಂದು ನಿರ್ಣಯಿಸುವುದಾದರೆ, ಅದು ಸರಿಯೆಂದು ಹೇಳಬಹುದೇ ? ಖಂಡಿತವಾಗಿ ಆತ ತಿತಿಕ್ಷೆ ಉಳ್ಳವನು, ಸಹನಶಕ್ತಿ ಉಳ್ಳವನು. ಆದರೆ ತಿತಿಕ್ಷೆ ಉಳ್ಳವರೆಲ್ಲಾ ಸತ್ಯವಂತರು ಎಂದು ತಿಳಿಯುವುದು ತಪ್ಪು. ಶಸ್ತ್ರ ಅಧಿಕವುಳ್ಳವರ ಬಳಿ ಸತ್ಯವೂ ಹೆಚ್ಚಿರುತ್ತದೆಂದು ನಂಬುವುದು ಹೇಗೆ ಶಕ್ಯವಿಲ್ಲವೋ ಹಾಗೆ ಇದು ಸಾಧ್ಯವಿಲ್ಲ.

ಸಂಕ್ಷೇಪದಲ್ಲಿ ಹೇಳುವುದಾದರೆ ಸತ್ಯಾಗ್ರಹದ ಶಕ್ತಿ ತಿತಿಕ್ಷೆ ಅಲ್ಲ. ಸತ್ಯಾಗ್ರಹದಲ್ಲಿ ಕ್ಷಮಿಸಬೇಕಾಗುತ್ತದೆ, ಸಹಿಸಬೇಕಾಗುತ್ತದೆ. ಸಹನೆಯಿಂದ ನಡೆದುಕೊಳ್ಳಲು ಸಿದ್ಧವಾಗಿರುವುದು ಬೇರೆ ಮಾತು, ಸಹನೆಯನ್ನೇ ಆಯುಧವನ್ನಾಗಿಸಿಕೊಳ್ಳುವುದು, 'ಬನ್ನಿ, ಈಗ ನಾನು ಸಹಿಸುತ್ತೇನೆ' ಎನ್ನುವುದು ಸರಿಯಲ್ಲ. ಎದುರಾಳಿಯನ್ನು ಸೋಲಿಸಲು ತೋಪು ಇರುವಂತೆಯೇ ಉಪವಾಸಮಾಡುವುದು ಸತ್ಯಾಗ್ರಹದ ಲಕ್ಷಣವಲ್ಲ. ಕಷ್ಟ ಸಹನೆ ಮಾಡಲೇಬೇಕಾದರೆ ಸಹಿಸುವುದು ಬೇರೆ ಮಾತು. ಆದರೆ ಸತ್ಯಸ್ಥಾಪನೆಗಾಗಿ ಕಷ್ಟ ಸಹನೆಯ ಕಾರ್ಯಕ್ರಮವೇ ಆಗಬಾರದು. ಸತ್ಯ ಸ್ಥಾಪನೆಗೆ ವಿಚಾರದ ಹೊರತಾಗಿ ಬೇರೊಂದು ಶಕ್ತಿಯೇ ಇಲ್ಲ. ಹೀಗೆಂದ ಮಾತ್ರಕ್ಕೆ ಸತ್ಯಾಗ್ರಹಕ್ಕಾಗಿ ಉಪವಾಸದ ಅಗತ್ಯವೇ ಬಾರದು ಅಥವಾ ಯಾರಿಗೂ ಉಪವಾಸದ ಅಧಿಕಾರವಿಲ್ಲ ಎಂದಲ್ಲ. ಉಪವಾಸ ಸತ್ಯಾಗ್ರಹಿಯ ಉತ್ತಮ ಅಸ್ತ್ರ ಎಂದು ನನ್ನ ನಂಬಿಕೆ. ಆದರೆ ಈ ಅಸ್ತ್ರ ಸರಿಯಾಗಿ ಬಳಸಿದರೆ ಮಾತ್ರ ಫಲದಾಯಕ. ಸರ್ಕಾರ ತೀರಾ ವಿರುದ್ಧ ದಾರಿಯಲ್ಲಿ ನಡೆದರೆ ಜನತೆ ಏನೂ ಕೇಳದಂತಾದರೆ, ದಿಕ್ಕುಗೆಟ್ಟಿದ್ದರೆ ಅಂಥ ಸಮಯದಲ್ಲಿ ಅತ್ಯಂತ ವ್ಯಾಕುಲನಾಗಿ ಮಹಾಪುರುಷ ಪರಮೇಶ್ವರನ ಪ್ರಾರ್ಥನೆಗಾಗಿ ಉಪವಾಸ ಮಾಡಬಹುದು. ಅಂಥ ಉಪವಾಸ ಬೆದರಿಕೆಯ ರೂಪದ್ದಲ್ಲ. ಪ್ರೇಮದ ಪರಾಕಾಷ್ಠೆಯ ಸ್ವರೂಪ.

ನವಿಲುಗರಿ ಕಟ್ಟಿಕೊಂಡರೆ ಕಾಗೆ ನವಿಲಾಗದು

ಗಾಂಧೀಜೀ ತಮ್ಮ ಸತ್ಯಾಗ್ರಹದಲ್ಲಿ ಉಪವಾಸವನ್ನು ಆಶ್ರಯಿಸಿದ್ದರು

ಎಂಬುದನ್ನು ನಾವು ಮರೆಯಬಾರದು. ಆದರೆ ಅವರು ಎಂಥ ಮಹಾ ವ್ಯಕ್ತಿ! ಅವರು ಎಷ್ಟು ಸೇವೆ ಮಾಡಿದ್ದರು! ತಮ್ಮ ಹೃದಯದ ವ್ಯಾಕುಲತೆಯನ್ನು ಪ್ರಕಟಿಸುವ ಸಲುವಾಗಿ ಅವರು ಉಪವಾಸದ ಪ್ರಯೋಗ ಮಾಡಿದ್ದರು. ಉಪವಾಸ ಪ್ರೇಮ, ಕರುಣೆ ಮತ್ತು ಸಮತ್ವದ ಸಂಕೇತವಾಗುವುದಾದರೆ ಆಗ ಅದರ ಪ್ರಭಾವ ಬೀಳುತ್ತದೆ. ಅಂಥ ಸ್ಥಿತಿಯಲ್ಲಿ ಅದು ಉಚಿತವೆಂದೂ ಪರಿಗಣಿಸಲ್ಪಡುತ್ತದೆ. ಭಕ್ತ ಜನ ಚಪ್ಪಾಳೆ ಹೊಡೆಯುತ್ತಾರೆ, ಆಗ ಭಕ್ತಿಯ ಸ್ವರೂಪ ಪ್ರಕಟವಾಗುತ್ತದೆ. ಆದರೆ ಚಪ್ಪಾಳೆಯನ್ನು ನಾವು ಭಕ್ತಿಯ ಯುಕ್ತಿ ಎಂದು ತಿಳಿದರೆ ಅದು ಸರಿಯಲ್ಲ. ಭಕ್ತರು ಹಾಡುತ್ತಾರೆ, ಕುಣಿಯುತ್ತಾರೆ, ಗೌರಾಂಗ ಮಹಾಪ್ರಭು ಕುಣಿಯುವುದಕ್ಕೂ ಇತರರು ಕುಣಿಯುವುದಕ್ಕೂ ಅಂತರವಿರುತ್ತದೆ. ಸಂಸ್ಕೃತದ ಸೂಕ್ತಿಯುಂಟು: ಭಗವಾನ್ ಶಂಕರನ ನೃತ್ಯ 'ತಾಂಡವ ನೃತ್ಯ' ಎನಿಸುತ್ತದೆ. ಆದರೆ ಆತನ ಗಣ ನರ್ತಿಸುವಾಗ ಅದನ್ನು 'ಪಿಶಾಚ ನೃತ್ಯ' ಎನ್ನುತ್ತಾರೆ. ನಾಟ್ಯ-ನಾಟ್ಯದಲ್ಲೂ ಅಂತರವುಂಟು, ಎರಡರ ಪ್ರಭಾವವೂ ಬೇರೆ-ಬೇರೆ. ಹೀಗೆ ಪ್ರೇಮ, ಸತ್ಯ, ಕರುಣೆ, ಇತ್ಯಾದಿಗಳ ಸ್ವಾಭಾವಿಕ ಪರಿಣಾಮವಾಗಿ ಉಪವಾಸ ಬಂದರೆ ಅದರ ಪರಿಣಾಮ ಪ್ರೇಮ, ಸತ್ಯ, ಕರುಣೆ ಮುಂತಾದ ಪರಿಣಾಮದಿಂದ ಭಿನ್ನವಾಗಲಾರದು.

ಸತ್ಯಾಗ್ರಹ ನಿತ್ಯ ವಿಕಾಸಶೀಲ ಶಾಸ್ತ್ರ

ಈ ರೀತಿ ಸತ್ಯಾಗ್ರಹದ ವಿವಿಧ ಮುಖಗಳನ್ನು ಕುರಿತು ಗಂಭೀರವಾಗಿ ವಿಚಾರಮಾಡಬೇಕು. ಸೂಕ್ಷ್ಮವಾಗಿ ಪರಿಶೀಲನೆ ನಡೆಸುತ್ತಿರಬೇಕು. ಅದನ್ನು ವಿಕಾಸಗೊಳಿಸುತ್ತಿರಬೇಕು. ವರ್ಷಗಟ್ಟಲೆಯಿಂದ ಈ ವಿಷಯ ನಾನು ಚಿಂತನೆ ಮಾಡುತ್ತಿದೇನೆ. ಎಷ್ಟೋ ವಿಚಾರ ಹೊಳೆದಿವೆ. 'ಸತ್ಯಾಗ್ರಹ ನಿತ್ಯ ವಿಕಾಸಶೀಲ ಶಾಸ್ತ್ರ, ಇದುವರೆಗೆ ನಾವು ಅದರ ಶಾಸ್ತ್ರವನ್ನು ರಚಿಸಲಾಗಿಲ್ಲ, ಅದು ಮೆಲ್ಲಮೆಲ್ಲನೆ ಆದೀತು,' ಎಂದು ಗಾಂಧೀಜೀ ಯಾವಾಗಲೂ ಹೇಳುತ್ತಿದ್ದರು. ಅವರು ದೂರದರ್ಶಿ, ಕ್ರಾಂತದರ್ಶೀ ಆಗಿದ್ದರು. ತಾವು ಕೆಲಸ ಮಾಡುತ್ತಿದ್ದ ಕಾಲದ ಮಿತಿಯನ್ನು ಬಲ್ಲವರಾಗಿದ್ದರು. ಮುಂದೆ ಏನೇನು ಬಂದೀತು ಆ ಭವಿಷ್ಯ ದರ್ಶನವೂ ಅವರಿಗಾಗಿಬಿಟ್ಟಿತ್ತು. ಅಂತೆಯೇ

ಗಾಂಧೀಜೀ ಹೇಳುತ್ತಿದ್ದರು : 'ಗಾಂಧೀವಾದ ಎಂಬುದು ಯಾವುದೂ ಇಲ್ಲ, ಇರತಕ್ಕದ್ದಲ್ಲ.' ಗಾಂಧೀವಾದ ಒಂದು ಘಾತಕ ಶಬ್ದ, ಗಾಂಧಿಯ ಹೆಸರಿನೊಂದಿಗೆ ಸತ್ಯಾಗ್ರಹದ ಸಂಬಂಧವನ್ನು ಜೋಡಿಸಿದರೆ, ನನಗೆ ಅದರಿಂದ ಎಷ್ಟೇ ಪ್ರೇರಣೆ ಸಿಕ್ಕಿದ್ದರೂ, ಮುಂಚೆಯೇ ಸತ್ಯಾಗ್ರಹಕ್ಕೆ ಕೆಲವು ಇತಿ-ಮಿತಿ ಬಂದುಬಿಡುತ್ತದೆ ಎಂದು ಅವರು ಹೇಳುತ್ತಿದ್ದರು. 'ಗಾಂಧೀ' ಶಬ್ದ ಸತ್ಯಾಗ್ರಹಕ್ಕೆ ಮರ್ಯಾದಿತ ರೂಪ ಕೊಟ್ಟುಬಿಡುತ್ತದೆ. ಆದುದರಿಂದ ಆ ಶಬ್ದವನ್ನು ಅವರೊಂದಿಗೆ ಜೋಡಿಸಬಾರದು. ಗಾಂಧೀ ಯಾವುದೋ ಒಂದು ಚರಿತ್ರೆ ಎಂದು ವಿಚಾರ ಮಾಡಬಾರದು, ಅದೊಂದು ವಿಚಾರ ಎಂದು ತಿಳಿಯಬೇಕು. ಈ ರೀತಿ ವಿಚಾರ ಮಾಡಿದರೆ ಸತ್ಯಾಗ್ರಹ ಶಾಸ್ತ್ರದ ವಿಕಾಸಕ್ಕೆ ತುಂಬಾ ಸಹಾಯ ಸಿಕ್ಕೀತು.

ಗಾಂಧೀಜಿಯ ಕಾಲದಲ್ಲಿ ಇದ್ದ ರೀತಿಯಲ್ಲೇ ಸತ್ಯಾಗ್ರಹದ ಸ್ವರೂಪ ಇಂದು ಇರಲಾರದು ಎಂಬುದನ್ನು ನಾವು ಚೆನ್ನಾಗಿ ತಿಳಿದುಕೊಳ್ಳಬೇಕು. ಗಾಂಧೀಜಿಯ ಕಾಲಕ್ಕೂ ಇಂದಿನ ಕಾಲಕ್ಕೂ ಮೂಲಗಾಮಿಯಾದ, ಸ್ಥೂಲವಲ್ಲದ ಬಹಳ ಅಂತರ ಬಂದುಬಿಟ್ಟಿದೆ. ಭಾರತದ ಒಳಗೂ ಅಂತರವುಂಟಾಗಿದೆ, ಅಂತರರಾಷ್ಟ್ರೀಯ ಪರಿಸ್ಥಿತಿಯಲ್ಲಿಯೂ ಬದಲಾವಣೆಯಾಗಿದೆ—ಈ ಮಾತನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಬಾಪೂವಿನ ಹಾಗೂ ಇಂದಿನ ಕಾಲದಲ್ಲಿ ಮೂಲಭೂತ ವ್ಯತ್ಯಾಸ

ಬಾಪೂವಿನ ಕಾಲಕ್ಕೂ ಮತ್ತು ಇಂದಿನ ಕಾಲಕ್ಕೂ ಮೂರು ಪ್ರಕಾರದ ಅಂತರವಿದೆ. ಮೊದಲನೆಯದಾಗಿ ಅಂದು ನಾವು ಸ್ವತಂತ್ರರಿರಲಿಲ್ಲ, ಇಂದು ಸ್ವತಂತ್ರರಾಗಿದ್ದೇವೆ. ಎರಡನೆಯ ಅಂತರ, ಆಗ ಭಾರತದಲ್ಲಿ ಜನತಂತ್ರದ ಸ್ಥಾಪನೆಯಾಗಿರಲಿಲ್ಲ, ಈಗ ಜನತಂತ್ರ ಸ್ಥಾಪಿತವಾಗಿದೆ. ಮೂರನೆಯ ಅಂತರ, ಆ ಕಾಲದಲ್ಲಿ ಇದ್ದುದಕ್ಕಿಂತ ವಿಜ್ಞಾನ ಬಹಳ ಮುಂದೆ ಹೋಗಿಬಿಟ್ಟಿದೆ. ಆಗ ಅಭಿನವ ವಿಜ್ಞಾನ ಯುಗ ಇರಲಿಲ್ಲ. ಬಾಪೂ ಕಾಲದಲ್ಲಿ ಆಗತಾನೇ ಆರಂಭವಾಗಿತ್ತು. ಈ ಮೂರು ಘಟನೆಗಳೂ ಸಂಶೋಧನೆ ನಡೆಸಲು ನಮಗೆ ಪ್ರೇರಣೆ ನೀಡುತ್ತವೆ. ಆದುದರಿಂದ ಸತ್ಯಾಗ್ರಹದ ವಿಷಯದಲ್ಲಿ ಸಂಶೋಧನೆ ಮುಂದುವರಿಸಬೇಕು. ಇಂದಿನ ಸಂದರ್ಭದಲ್ಲಿ ಹಿಂದಿಗಿಂತ

ಭಿನ್ನವಾಗಿ ಸತ್ಯಾಗ್ರಹದ ಬಾಹ್ಯ ಸ್ವರೂಪವನ್ನು ಇಡಬೇಕೆಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ತತ್ವತಃ ಅದರ ಮೂಲರೂಪವಾದ ಆಂತರಿಕ ಪ್ರೇಮ ರೂಪ ಸ್ಥಿರವಾಗಿದ್ದೀತು.

ಗಾಂಧೀಜಿಯ ಕಾಲದಲ್ಲಿ ಅನುಷ್ಠಾನಕ್ಕೆ ತಂದ ಸತ್ಯಾಗ್ರಹದ ಪ್ರಕಾರವನ್ನೇ ಆದರ್ಶವೆಂದು ತಿಳಿದು ಮುನ್ನಡೆದು ತಿಳಿದರೆ ತಪ್ಪಾದೀತು. ಅವರ ಕಾಲದಲ್ಲಿ ವಿಶೇಷ ಪರಿಸ್ಥಿತಿ ಇತ್ತು. ಆ ಸ್ಥಿತಿಯಲ್ಲಿ ನಕಾರಾತ್ಮಕವಾಗಿಯೇ ಕೆಲಸ ಮಾಡಬೇಕಿತ್ತು. ಆಗ ಇಂಗ್ಲಿಷರನ್ನು ಹೊರದೂಡಬೇಕಾಗಿತ್ತು. ಅದು ಪೂರಾ ಪೂರಾ ನಕಾರಾತ್ಮಕ ಕೆಲಸವಾಗಿತ್ತು. ಸ್ವರಾಜ್ಯಕ್ಕೆ ಮುಂಚೆ ಸತ್ಯಾಗ್ರಹಕ್ಕೆ ನಕಾರಾತ್ಮಕ ಸ್ವರೂಪವಿತ್ತು. ಅಹಿಂಸಾತ್ಮಕ ಒತ್ತಾಯ ಹೇರಿ ವಿದೇಶೀ ರಾಜ್ಯವನ್ನು ಹೊರದೂಡುವುದು ಆ ಪ್ರಕಾರವಾಗಿತ್ತು. ಇಂದು ನಾವು ಮಾಡಬೇಕಾಗಿರುವ ಕೆಲಸ ಅಂಥದಲ್ಲ. ಇಂದು ನಾವು ನಮ್ಮ ಜನರನ್ನೇ ರೂಪಾಂತರಗೊಳಿಸಬೇಕಾಗಿದೆ. ಬಾಪೂ ಯಾವಾಗಲೂ ಸುಧಾರಿಸಿ ಅಥವಾ ಸಮಾಪ್ತಿಗೊಳಿಸಿ ಎಂಬ ಭಾಷೆ ಆಡುತ್ತಿದ್ದರು. ಇಂದು ನಾವು ಆ ಭಾಷೆ ಆಡಲಾರೆವು. ಅವರು ಬ್ರಿಟಿಷರಿಗೆ 'ಚಲೇಜಾವ್'— 'ಭಾರತ ಬಿಟ್ಟು ತೊಲಗಿ' ಎಂದು ಹೇಳಬಲ್ಲವರಾಗಿದ್ದರು. ಇಂದು ನಾವು ವ್ಯಾಪಾರಿಗಳಿಗೆ, ಭೂಮಾಲಿಕರಿಗೆ, ಶ್ರೀಮಂತರಿಗೆ ಭಾರತ ಬಿಟ್ಟುಹೋಗಿ ಎಂದು ಹೇಳಲಾರೆವು. ನಾವೆಲ್ಲರೂ ಇಲ್ಲೇ ಇರಬೇಕಾಗಿದೆ. ಯಾರೂ ಬಿಟ್ಟುಹೋಗುವವರಲ್ಲ. ಆದುದರಿಂದ ಇಂದು ಒಂದೆಡೆ ಒಟ್ಟಿಗೆ ಇರುವ ಯುಕ್ತಿ ಬರಬೇಕು.

ಗಾಂಧೀಜೀ ಇದ್ದಿದ್ದರೆ ಖಂಡಿತ ಸ್ವರೂಪ ಬದಲಾಯಿಸುತ್ತಿದ್ದರು

ಗಾಂಧೀಜೀ ಇಂದು ಇದ್ದಿದ್ದರೆ ಸತ್ಯಾಗ್ರಹದ ಸ್ವರೂಪವನ್ನು ಖಂಡಿತ ಬದಲಾಯಿಸುತ್ತಿದ್ದರು ಎಂಬುದರಲ್ಲಿ ನನಗೆ ಎಳ್ಳಷ್ಟೂ ಸಂದೇಹವಿಲ್ಲ. ಗಾಂಧೀಜಿಯ ಕಾಲದಲ್ಲಿ ನಡೆದ ಸತ್ಯಾಗ್ರಹದ ವಿಷಯಗಳಲ್ಲಿ ಇಂದು ಜನರಿಗೆ ಎಷ್ಟು ಆದರವಿದೆಯೋ ಅಷ್ಟು ಸ್ವತಃ ಗಾಂಧೀಜಿಗೆ ಇರಲಿಲ್ಲ.

ಪ್ಯಾರೇಲಾಲರ 'ಲಾಸ್ಟ್ ಫೇಸ್' ಪುಸ್ತಕ ಓದಿದರೆ ಬಾಪೂ ಯಾವ ರೀತಿ ಸತ್ಯಾಗ್ರಹ ನಡೆಸಿದರು, ಅದರಿಂದ ಯಾವ ಯಾವ ಶಕ್ತಿಗಳು ಪ್ರಕಟ

ನಾದವು—ಅವೆಲ್ಲಾ ಒಳ್ಳೆಯವೇ ಆಗಿರಲಿಲ್ಲ, ಎಂಬುದು ತಿಳಿದೀತು. ಅದು ನಿರ್ಬಲರ ಸತ್ಯಾಗ್ರಹವಾಗಿತ್ತು. ಅನಂತರ ಗಾಂಧೀಜೀ ಸ್ವತಃ ಹೇಳು ತ್ತಿದ್ದರು: 'ಸ್ವರಾಜ್ಯ ಗಳಿಸಬೇಕಾಗಿತ್ತು, ಅದಕ್ಕಾಗಿ ಭಗವಂತ ಕಣ್ಣಿಗೆ ಪಟ್ಟಿ ಕಟ್ಟಿದ್ದ, ಆದುದರಿಂದ ಕಣ್ಣಿದ್ದರೂ ನಾನೇನೂ ನೋಡಲಾರದವ ನಾಗಿದ್ದೆ.' ಅದಕ್ಕಾಗಿಯೇ ಗಾಂಧೀಜೀ ಇಂದು ಇದ್ದಿದ್ದರೆ ಅವರೂ ಸತ್ಯಾಗ್ರಹದ ಅಂದಿನ ಸ್ವರೂಪವನ್ನು ಸ್ಥಿರವಾಗಿ ಇಡುತ್ತಿರಲಿಲ್ಲ ಎಂದು ನಾನು ಹೇಳುತ್ತೇನೆ.

ಆದುದರಿಂದ ಇಂದು ಸತ್ಯಾಗ್ರಹಕ್ಕೆ ಗುಣವಂತ ಸ್ವರೂಪ ಬರ ಬೇಕಾಗಿದೆ. ಸ್ವರಾಜ್ಯ ಸಿಕ್ಕಮೇಲೆ ಜನತಂತ್ರದಲ್ಲಿ ನಡೆಯುವ ಸತ್ಯಾಗ್ರಹ ಬಹು ಅಧಿಕ ಸ್ಪಷ್ಟ, ಶಕ್ತಿಶಾಲಿ ಹಾಗೂ ಹೆಚ್ಚು ರಚನಾತ್ಮಕ ಅರ್ಥವುಳ್ಳ ದ್ದಾಗಿರಬೇಕು. ಎಂದಮೇಲೆ ರಚನಾತ್ಮಕ ಸತ್ಯಾಗ್ರಹದ ಹೇತು ಪ್ರೇಮವೇ ಆಗಿರಬಲ್ಲದು. ಇನ್ನೊಬ್ಬರ ಮೇಲೆ ಎಷ್ಟು ಹೆಚ್ಚು ಸ್ಥೂಲ ಒತ್ತಡ ಹೇರುವೆವೋ ಅಷ್ಟೂ ಸತ್ಯಾಗ್ರಹ ಹೆಚ್ಚು ಶಕ್ತಿಶಾಲಿಯಾದೀತು—ಎಂಬ ವಿಚಾರ ತಪ್ಪು. ವಾಸ್ತವವಾಗಿ ನೋಡಿದರೆ ಒತ್ತಡ ಎಷ್ಟು ಕಡಿಮೆಯೋ ಅಷ್ಟೂ ಪ್ರೇಮದ ಅಂಶ ಹೆಚ್ಚು, ಅಷ್ಟು ಸತ್ಯಾಗ್ರಹ ಹೆಚ್ಚು ಶಕ್ತಿಶಾಲಿ ಮತ್ತು ಇಂದಿನ ವಿಜ್ಞಾನ ಯುಗದಲ್ಲಿ ಸತ್ಯಾಗ್ರಹದಲ್ಲಿ ಮನಃಕ್ಷೋಭೆ ಆಗುವುದಾದರೆ ಎಲ್ಲವೂ ಏರುಪೇರಾದೀತು. ಜನತೆ ಚಿಂತನಶಕ್ತಿಯನ್ನು ಕಳೆದುಕೊಂಡೀತು.

ಈ ಕಾರಣಕ್ಕಾಗಿಯೇ ಬಾಪೂ ಹೇಳಿದ್ದರು: ಸತ್ಯಾಗ್ರಹದ ಶಾಸ್ತ್ರವನ್ನು ನಾನು ಬರೆಯಲಾರೆ, ಅದು ತಾನೇ ಕ್ರಮ-ಕ್ರಮವಾಗಿ ವಿಕಾಸ ಹೊಂದ ಬೇಕು ಎಂದು. ಅಂತೆಯೇ ಸತ್ಯಾಗ್ರಹದ ಪ್ರಕ್ರಿಯೆಯನ್ನು ವಿಕಾಸಗೊಳಿಸುವ ಹೊಣೆ ನಮ್ಮ ಮೇಲಿದೆ. ನಾವಾದರೋ ಅದನ್ನು ವಿಕಾಸಗೊಳಿಸುವ ಬದಲಾಗಿ ಗಾಂಧೀಜಿಯ ಕಾಲದಲ್ಲಿದ್ದುದಕ್ಕಿಂತ ಇನ್ನೂ ಕೆಳಮಟ್ಟಕ್ಕೆ ತಂದುಬಿಟ್ಟದ್ದೇವೆ.

ಸತ್ಯಾಗ್ರಹದ ನಕಾರಾತ್ಮಕ ವ್ಯಾಖ್ಯೆಯೇ ಜನರ ಮನಸ್ಸಿನಲ್ಲಿ ಸ್ಥಿರ ಗೊಂಡುಬಿಟ್ಟಿರುವುದು ಇದಕ್ಕೆ ಮುಖ್ಯ ಕಾರಣ. ಸತ್ಯಾಗ್ರಹ ಎಂದರೆ ಅಡ್ಡಿ ಒಡ್ಡುವ ಒಂದು ಪ್ರಕಾರ ಬಹಳ ಅಘಟಿತವಾಗದೆ ಒತ್ತಡ ಹೇರುವ ಒಂದು ಪದ್ಧತಿ—ಇಷ್ಟೇ ಅರ್ಥ ಜನರ ಮನಸ್ಸಿನಲ್ಲಿ. ಈ ಕಾರಣದಿಂದಲೇ ಎಷ್ಟೋ ಜನರಿಗೆ ಇದಕ್ಕೆ ಹೆಚ್ಚು ಆಕರ್ಷಣೆ.

*

ಜನತಂತ್ರದಲ್ಲಿ ಸತ್ಯಾಗ್ರಹದ ಸ್ಥಾನ

ಇದರ ಪರಿಣಾಮವಾಗಿ ಪ್ರತ್ಯಾಘಾತವೂ ಉಂಟಾಗಿದೆ. ಕೆಲವರು ಹೇಳುತ್ತಾರೆ—ಜನತಂತ್ರದಲ್ಲಿ ಸತ್ಯಾಗ್ರಹಕ್ಕೆ ಸ್ಥಾನವಿಲ್ಲ. ಇದು ಪೂರಾ ತಪ್ಪು ವಿಚಾರ. ಸತ್ಯಾಗ್ರಹ ಒಂದು ಜೀವನ ಪದ್ಧತಿ, ಅದೊಂದು ಕಾರ್ಯ ಪದ್ಧತಿ ಮತ್ತು ವಿಶಿಷ್ಟ ಪ್ರಸಂಗದಲ್ಲಿ ಉಪಾಯ ಪದ್ಧತಿ. ಆದುದರಿಂದ ಸತ್ಯಾಗ್ರಹಕ್ಕೆ ಇಂದೂ ಸ್ಥಾನವುಂಟು. ಪ್ರತಿಯೊಂದು ನಿರ್ಣಯವನ್ನೂ ಸರ್ವ ಸಮ್ಮತಿಯಿಂದ ಕೈಗೊಂಡರೆ ಮಾತ್ರ ಅಂಥ ವ್ಯವಸ್ಥೆಯಲ್ಲಿ ಸತ್ಯಾಗ್ರಹಕ್ಕೆ ಅವಕಾಶವಿರದು. ಎಲ್ಲರ ಸಮ್ಮತಿಯಿಂದ ನಿರ್ಣಯ ಕೈಗೊಳ್ಳುವ ಸಮಾಜ ರಚನೆಯಲ್ಲಿ ಸ್ವತಂತ್ರ ಸಾಮೂಹಿಕ ಸತ್ಯಾಗ್ರಹದ ಅಗತ್ಯವಿರದು. ಆಗ ಮಕ್ಕಳ ಎದುರು ತಾಯಿ ಸತ್ಯಾಗ್ರಹ ಮಾಡಬಹುದು. ಒಬ್ಬ ನೆರೆಯವನ ವಿರುದ್ಧ ಮತ್ತೊಬ್ಬ ನೆರೆಯವ ಸತ್ಯಾಗ್ರಹ ಮಾಡಬಲ್ಲ. ಇಲ್ಲಿ ಎದುರು ಮತ್ತು ವಿರುದ್ಧ ಎಂಬುದರ ಅರ್ಥ ಹಿಂಸೆಯ ಅರ್ಥದಲ್ಲಿ ಎಂಬಂತೆ ತಿಳಿಯ ಬಾರದು. ಯಾರನ್ನಾದರೂ ಸುಧಾರಿಸಲು ಸಹಾಯಕವಾಗಲೆಂದು ಅವರ ಮೇಲೆ ಪ್ರೇಮಪೂರ್ವಕವಾದ ತ್ಯಾಗದ ಮೂಲಕ ಪ್ರಯೋಗ ನಡೆಸಬಹುದು. ಆ ಅರ್ಥದಲ್ಲಿ ಇಲ್ಲಿ 'ವಿರುದ್ಧ' ಎಂಬ ಶಬ್ದವನ್ನು ಉಪಯೋಗಿಸಲಾಗಿದೆ. ನೆರೆಹೊರೆಯವರು ವ್ಯಕ್ತಿಗತ ಸತ್ಯಾಗ್ರಹ ನಡೆಸಿಯಾರು. ಸಾಮೂಹಿಕ ಸತ್ಯಾಗ್ರಹಕ್ಕೆ ಅವಕಾಶವೇ ಇರದು. ಪ್ರತಿಯೊಂದು ಸಾಮೂಹಿಕ ನಿರ್ಣಯವೂ ಸರ್ವ ಸಮ್ಮತಿಯಿಂದ ಕೈಗೊಳ್ಳುವ ಸಮಾಜ ರಚನೆಯಲ್ಲಿ ಮಾತ್ರ ಹೀಗೆ ನಡೆದೀತು. ಉಳಿದ ಬಗೆಯ ಜನತಂತ್ರದಲ್ಲಿ ಸತ್ಯಾಗ್ರಹಕ್ಕೆ ಅವಕಾಶ ಇದ್ದೇ ಇದೆ. ಈಗ ಅದರ ಸ್ವರೂಪ ಭಿನ್ನವಾಗಿದೆ ಎನ್ನುವುದು ಮಾತ್ರ ನಿಜ. ಈ ಸ್ಥಿತಿಯಲ್ಲಿ ಸತ್ಯಾಗ್ರಹವನ್ನು ಮತ್ತು ಅದರ ಶಾಸ್ತ್ರವನ್ನು ವಿಕಸಿತಗೊಳಿಸು ವುದು ನಮ್ಮ ತಲೆಯ ಮೇಲಿನ ಹಿರಿಯ ಹೊಣೆ.

ಬಾಪೂವಿನ ಸತ್ಯಾಗ್ರಹಗಳನ್ನು ಅಂತಿಮ ಆದರ್ಶವೆಂದು ಭಾವಿಸಬಾರದು

ಬಾಪೂವಿನೊಡನೆ ನಾನು ಅನೇಕ ಸಾರಿ ಚರ್ಚಿಸಿದ್ದೇನೆ. ವಿಶೇಷ ವಾಗಿ ಯಾವ ಯಾವ ಸತ್ಯಾಗ್ರಹಗಳು ನಡೆದವೋ, ಆ ಸಂದರ್ಭಗಳಲ್ಲಿ ನನಗೆ

ಅನಿಸಿದ್ದನ್ನು ನಾನು ಅವರೆದುರು ಇಟ್ಟಿದ್ದೇನೆ. ತಿಳಿಯಬೇಕೆಂದು ಅನಿಸಿದ್ದನ್ನು ನಮ್ರತಾಪೂರ್ವಕವಾಗಿ ಅವರ ಬಳಿ ಹೋಗಿ ಆಡಿದ್ದೇನೆ. ಅಧಿಕಾಂಶ ಸತ್ಯಾಗ್ರಹಗಳ ವಿಷಯದಲ್ಲಿ ಅವರು ತಮ್ಮ ತಪ್ಪನ್ನು ಒಪ್ಪಿದ್ದಾರೆ. ರಾಜಕೋಟೆಯ ಸತ್ಯಾಗ್ರಹದಲ್ಲಿ ಬಲಾತ್ಕಾರ ಬಂತು, ಅಹಮದಾಬಾದಿನ ಕಾರ್ಮಿಕರ ಸತ್ಯಾಗ್ರಹದಲ್ಲಿ ಕೆಲವು ಒತ್ತಡ ಉಂಟಾಯಿತು ಎಂದು ಅವರು ಒಪ್ಪಿದ್ದಾರೆ. ಅಂಬೇಡ್ಕರರಿಗೆ ಸಂಬಂಧಿಸಿದ ವಿಷಯದಲ್ಲಿ ಬಹಳ ಚರ್ಚಿಸುವ ಅವಕಾಶ ನನಗೆ ಸಿಗಲಿಲ್ಲ. 'ಕೋಮುವಾರು ಕೊಡುಗೆ' (Communal award) ಸಮಯದಲ್ಲಿ ಬಾಪೂ ಮಾಡಿದ ಉಪವಾಸದ ಕೆಟ್ಟ ಪರಿಣಾಮ ಸಾಮಾನ್ಯ ಮನುಷ್ಯರ ಮೇಲಾದರೆ ಅದಕ್ಕೆ ಸಾಮಾನ್ಯ ಮನುಷ್ಯರು ಹೊಣೆ ಎಂದು ಗ್ರಹಿಸತಕ್ಕದ್ದಲ್ಲ. ಆಗ ರವೀಂದ್ರನಾಥ ಟಾಗೂರರಮೇಲೆ ಅದರ ಕೆಟ್ಟ ಪರಿಣಾಮವಾಯಿತು. ಅವರು ಬಾಪೂವನ್ನು ಉಳಿಸಲು ಒಂದು ಮಾತು ಒಪ್ಪಿದರು. ಕೆಲ ದಿನಗಳ ಮೇಲೆ ಹೇಳಿದರು ಅದನ್ನೊಪ್ಪಿದ್ದು ತಪ್ಪಾಯಿತೆಂದು.

ತಮ್ಮ ಮೇಲೆ ಅನಾವಶ್ಯಕವಾಗಿ ಬಲಾತ್ಕಾರ ತಂದುಕೊಳ್ಳುವ ಮನುಷ್ಯರು ರವೀಂದ್ರನಾಥರಾಗಿರಲಿಲ್ಲ. ಅವರು ಭಾರತದ ಪಹರೆಗಾರ ಸ್ವರೂಪರಾಗಿದ್ದರು. ನಮ್ಮ ಆಂದೋಲನ ಉಚ್ಛೃಂಖಲತೆಯತ್ತ ಸಾಗಿದಾಗ ನಮ್ಮನ್ನು ಅವರು ತಡೆದರು. ಭಾರತವನ್ನು ಸಂಕುಚಿತ ದೇಶಾಭಿಮಾನದಿಂದ ಮುಕ್ತವಾಗಿಡಲು ಅವರು ಸತತ ಪ್ರಯತ್ನ ಮಾಡಿದರು. ಇಷ್ಟೊಂದು ಮಹಾನ್ ವ್ಯಕ್ತಿಯಾಗಿದ್ದರು. ಆದರೂ ಬಾಪೂವಿನಂಥ ವ್ಯಕ್ತಿ ಬದುಕಿರ ಬೇಕು ಎಂಬ ಆಸಕ್ತಿ, ಮೋಹವೆನ್ನಿ ಅಥವಾ ಕರುಣೆಯೆನ್ನಿ, ಅದರ ಸ್ಪರ್ಶ ಅವರಿಗಾಗಿತ್ತು. ಆದುದರಿಂದ ಅವರೂ ಅಂಥ ಮಾತನ್ನೊಪ್ಪಿದರು; ತಮ್ಮ ಬುದ್ಧಿಗೆ ಅದು ಸರಿಯೆಂದು ತಿಳಿಯದಿದ್ದರೂ ಸಹ, ಅದು ಸರಿಯಾಗಲಿಲ್ಲ ವೆಂದು ಅನಂತರ ಅವರು ಹೇಳಿದರೂ ಸಹ, ಬಾಪೂವಿನ ಈ ಉಪವಾಸದಲ್ಲಿ ಹೃದಯ ಪರಿವರ್ತನೆಯ ಪ್ರಕ್ರಿಯೆ ಕುಂಠಿತವಾಯಿತು ಎಂದೇ ಇದರ ಅರ್ಥ.

ಆದುದರಿಂದ ಈ ಕಾಲದಲ್ಲಿ ನಡೆದ ಸತ್ಯಾಗ್ರಹಗಳು ಸತ್ಯಾಗ್ರಹದ ಅಂತಿಮ ಆದರ್ಶಗಳು ಎಂದು ನಾವು ತಿಳಿಯಬಾರದು. ಈಗ ಜನತಂತ್ರದಲ್ಲಿ ಹೆಚ್ಚು ಪ್ರಭಾವಶಾಲಿಯಾಗಬೇಕಾದ, ಹೆಚ್ಚು ವಿಧಾಯಕವಾಗುವ ಸತ್ಯಾಗ್ರಹ ಗಳೇ ಪರಿಣಾಮಕಾರಿ ಎಂಬುದು ನಮ್ಮ ಲಕ್ಷ್ಯಕ್ಕೆ ಬರಬೇಕು.

ಗಾಂಧೀಜಿಯ ಕಲ್ಪನೆ ನಕಾರಾತ್ಮಕವಿರಲಿಲ್ಲ

ಮೂಲತಃ ಗಾಂಧೀಜಿಯ ವಿಚಾರ ವಿಧಾಯಕವಿತ್ತು. ಪ್ಯಾಸಿವ್ ರೆಸಿಸ್ಟೆನ್ಸ್ (Passive Resistance) ಎಂಬ ಶಬ್ದವನ್ನು ಅವರು ಒಪ್ಪಲಿಲ್ಲ. ಅದರಲ್ಲಿ ಪೂರ್ಣ ಪ್ರೇಮದ ದರ್ಶನವಾಗುವುದಿಲ್ಲ ಎಂದು ಅವರು ಹೇಳಿದರು. ಅನಂತರ 'ಸತ್ಯಾಗ್ರಹ' ಶಬ್ದ ರೂಢಿಗೆ ಬಂತು. ಗಾಂಧೀಜಿಯ ಸತ್ಯಾಗ್ರಹದ ಕಲ್ಪನೆ ನಕಾರಾತ್ಮಕವಿರಲಿಲ್ಲ ಎಂದು ನಿಶ್ಚಯವಾಗಿ ಹೇಳಬಹುದು. ಹಾಗಿದ್ದಿದ್ದರೆ ಸತ್ಯಾಗ್ರಹದ ಕಲ್ಪನೆಯಲ್ಲಿ ಅವರು ರಚನಾತ್ಮಕ ಕಾರ್ಯವನ್ನೂ ಸೇವಾಕಾರ್ಯವನ್ನೂ ಎಂದೂ ಜೋಡಿಸುತ್ತಿರಲಿಲ್ಲ.

ಗಾಂಧೀಜೀ ಮಾಡಿದುದರ ಬಾಹ್ಯ ಸ್ವರೂಪವನ್ನು ಮಾತ್ರ ನಾವು ನೋಡಿದೆವು. ಇಂದು ಅಷ್ಟರಿಂದಲೇ ಕೆಲಸ ನಡೆಯುವುದಿಲ್ಲ. ಅಂದು ಬ್ರಿಟಿಷರನ್ನು ಹೊರದೂಡುವ ನಕಾರಾತ್ಮಕ ಕೆಲಸವಿತ್ತು. ಆದರೂ ಅವರು ಆ ಕಾರ್ಯದೊಂದಿಗೆ ಅನೇಕ ರಚನಾತ್ಮಕ ಹಾಗೂ ವಿಧಾಯಕ ಕೆಲಸಗಳನ್ನು ಜೋಡಿಸಿದರು. ಅವರಲ್ಲೊಂದು ವಿಶೇಷ ಪ್ರತಿಭೆ ಇತ್ತು. ನಕಾರಾತ್ಮಕ ಕೆಲಸದೊಂದಿಗೆ ವಿಧಾಯಕ ವೃತ್ತಿಯನ್ನು ಸೇರಿಸದಿದ್ದರೆ ನಕಾರಾತ್ಮಕ ಕೆಲಸ ಪೂರೈಸಿದಮೇಲೆ ಅನೇಕ ರೀತಿಯ ಭಯ ಎದ್ದು ನಿಂತಾವು ಎಂದು ಅದು ಹೇಳುತ್ತಿತ್ತು. ಅಂತಲೇ ಸ್ವರಾಜ್ಯ ಆಂದೋಲನದೊಂದಿಗೆ ಅವರು ವಿವಿಧ ರಚನಾತ್ಮಕ ಕೆಲಸಗಳನ್ನು ಜೋಡಿಸಿದರು. ಇದು ಅವರ ಪ್ರತಿಭೆ. ಇಂಗ್ಲಿಷರನ್ನು ಹೊರದೂಡುವುದಕ್ಕೆ ಖಾದಿ, ಅಸ್ಪೃಶ್ಯತಾ ನಿವಾರಣೆ ಹಾಗೂ ಗ್ರಾಮೋದ್ಯೋಗಗಳ ರಕ್ಷಣೆಯು ಏಕೆ ಬೇಕು ಎಂದು ಜನ ಅವರನ್ನು ಕೇಳುತ್ತಿದ್ದರು. ಒಂದು ಸಾರಿ ಸತ್ಯಾಗ್ರಹ ನಡೆಯುತ್ತಿತ್ತು. ಮಧ್ಯದಲ್ಲಿ ಅಸ್ಪೃಶ್ಯತೆಯ ಪ್ರಶ್ನೆ ಎತ್ತಿಕೊಂಡು ಗಾಂಧೀಜೀ ಉಪವಾಸಕ್ಕೆ ತೊಡಗಿದರು. ಆಗ ಜನ ಕೂಗಿದರು: ಇದೇನು? ಸ್ವಾತಂತ್ರ್ಯದ ಹೋರಾಟದಲ್ಲಿ ಅಸ್ಪೃಶ್ಯತೆಯ ಮತ್ತು ದೇವಾಲಯ ಪ್ರವೇಶದ ಮಾತು ಹೇಗೆ ನುಗ್ಗಿ ಬಂತು? ಇದರಿಂದ ರಾಜಕೀಯ ಸ್ವಾತಂತ್ರ್ಯ ಚಳುವಳಿಯ ಬಲ ಕುಂದುತ್ತದೆ ಎಂದು. ಆದರೆ ಗಾಂಧೀಜೀ ಇದಕ್ಕೆ ಉತ್ತರವಾಗಿ "ಇದೆಲ್ಲಾ ಸತ್ಯಾಗ್ರಹದ ಅಂಗವೇ" ಎಂದು ಹೇಳಿದರು.

ಗಾಂಧೀಜಿಯ ಕಲ್ಪನೆ ನಕಾರಾತ್ಮಕವೇ ಆಗಿದ್ದರೆ ದೇಶದೆದುರು ಸತ್ಯಾಗ್ರಹಿಯೆಂದು ನನ್ನ ಹೆಸರನ್ನು ಇಡುವುದರಲ್ಲಿ ಏನೂ ಸಾರವಿರಲಿಲ್ಲ. ಜನಕ್ಕೆ ನನ್ನ ಪರಿಚಯುವೇ ಇರಲಿಲ್ಲ. ಯಾವುದೇ ರಾಜಕೀಯ ಕಾರ್ಯದ ಕೂಡಿಟ್ಟ ಬಂಡವಾಳವೂ ನನ್ನ ಬಳಿ ಇರಲಿಲ್ಲ. ಆದರೂ ನನ್ನ ಹೆಸರನ್ನು ಘೋಷಿಸಿದರು. ನನ್ನ ಇತರ ಗುಣಗಳನ್ನು ಕಂಡಾಗ ಅದರಲ್ಲಿ ಅವಶ್ಯವಾಗಿ ಇವನ ಮನಸ್ಸು ರಚನಾತ್ಮಕವಿದೆ, ಖಂಡನಾತ್ಮಕವಲ್ಲ ಎಂಬುದಂತೂ ಇದ್ದೇ ಇತ್ತು. ಸತ್ಯಾಗ್ರಹಿಗೆ ರಚನಾತ್ಮಕ ಕೆಲಸ ಆವಶ್ಯಕ ಎಂದು ಅವರು ತಿಳಿದಿದ್ದರು. ರಚನಾತ್ಮಕ ಕೆಲಸ ಪೂರ್ಣಗೊಂಡರೆ ಸ್ಥೂಲ ಸತ್ಯಾಗ್ರಹದ ಅಗತ್ಯವೇ ಇರದು ಎಂದೂ ಅವರು ಹೇಳುತ್ತಿದ್ದರು. ಇದು ಅವರ ಶ್ರದ್ಧೆಯಾಗಿತ್ತು. ರಚನಾತ್ಮಕ ಕೆಲಸಕ್ಕೆ ಅವರು ಇಷ್ಟು ಹೆಚ್ಚು ಮಹತ್ವ ಕೊಡುತ್ತಿದ್ದರು. ಸತ್ಯಾಗ್ರಹದ ಯಾವುದೇ ನಕಾರಾತ್ಮಕ ಅರ್ಥವೂ ಗಾಂಧೀಜಿಯ ಮನಸ್ಸಿನಲ್ಲಿರಲಿಲ್ಲ ಎಂಬುದು ನಿಶ್ಚಿತ. ಆದುದರಿಂದಲೇ ಅವರೇನೇನು ಮಾಡಿದರೂ ಅದನ್ನು ನೋಡಿಕೊಂಡು ನಾವು ನಡೆದರೆ ನಮ್ಮ ವಿಕಾಸವಾದೀತು.

ಎಷ್ಟು ಪ್ರೇಮವೋ ಅಷ್ಟೇ ಸತ್ಯಾಗ್ರಹದ ಹಕ್ಕು

ಇಂದು ಒಂದು ಮಾತಂತೂ ತೀರಾ ಸ್ಪಷ್ಟವಾಗಿಬಿಡಬೇಕು : ಉಪವಾಸ ಮತ್ತಿತರ ಕಷ್ಟಸಹನೆಯ ರಾಜಸ ತಾಮಸ ವ್ಯಕ್ತಿಪ್ರೇರಿತ ಪ್ರವೃತ್ತಿಗಳು ಸತ್ಯಾಗ್ರಹದ ಬದಲು ದುರಾಗ್ರಹದ ಲಕ್ಷಣಗಳೇ ಆಗುತ್ತವೆ. ಸತ್ಯಾಗ್ರಹದಲ್ಲಿ ಕ್ಲೇಶಸಹನೆ ಬಂದರೂ ಅದು ಕೇವಲ ವಿಚಾರ ಪರಿವರ್ತನೆಗಾಗಿ. ಮೂಲತಃ ಸತ್ಯಶೋಧಕ ವೃತ್ತಿಯೇ ಸತ್ಯಾಗ್ರಹದ ಬೀಜ, ವಿಚಾರನಿಷ್ಠೆಯೇ ಸತ್ಯಾಗ್ರಹದ ಶಕ್ತಿ. ನಿರ್ವೈರವೇ ಸತ್ಯಾಗ್ರಹದ ಬಲ. ನಿರ್ವೈರ ಪ್ರಕಟಿಸುವುದು ಅಗತ್ಯವಾದಾಗ ಅದು ವಿವೇಕಯುಕ್ತವಾದ ಕಷ್ಟಸಹನೆಯ ರೂಪದಲ್ಲಾಗುತ್ತದೆ. ಎಷ್ಟು ಪ್ರೇಮವೋ ಅಷ್ಟು ಸತ್ಯಾಗ್ರಹದ ಹಕ್ಕು.

ಪ್ರೇಮದ ಮಹಿಮೆಯನ್ನು ಎಲ್ಲ ಧರ್ಮಗಳೂ ಹಾಡಿವೆ. 'ನಾವು ಎಲ್ಲರನ್ನೂ ಪ್ರೀತಿಸುತ್ತೇವೆ, ಎಲ್ಲರೂ ನಮ್ಮನ್ನು ಪ್ರೀತಿಸಲಿ. ಜಗತ್ತನ್ನು ನಾವು ಮಿತ್ರನ ದೃಷ್ಟಿಯಿಂದ ನೋಡೋಣ, ಜಗತ್ತೂ ನಮ್ಮನ್ನು ಮಿತ್ರನ

ದೃಷ್ಟಿಯಿಂದ ನೋಡಲಿ'—ಇಂಥ ವಾಕ್ಯ ವೇದದಲ್ಲಿ ಬರುತ್ತದೆ. ನಾವೂ ಮತ್ತು ಜಗತ್ತು ಪರಸ್ಪರ ಪ್ರೇಮದಿಂದ ಇರೋಣ ಎಂಬ ಅಪೇಕ್ಷೆಯನ್ನು ಇಟ್ಟುಕೊಳ್ಳಲಾಗುತ್ತಿದೆ. ಜಗತ್ತು ನಮ್ಮನ್ನು ಪ್ರೇಮದಿಂದ ಕಾಣದಿದ್ದರೆ ನಾವೇನು ಮಾಡಲಾದೀತು? ಇದಕ್ಕೆ ಅದರಲ್ಲಿ ಯಾವ ಸ್ಪಷ್ಟನೆಯೂ ಇಲ್ಲ. ನಾವು ಪ್ರೇಮದಿಂದ ನಡೆದರೆ ಜಗತ್ತೂ ಪ್ರೇಮದಿಂದ ನಮ್ಮನ್ನು ನೋಡೀತು ಎಂಬ ನಿರೀಕ್ಷೆ. ವೇದದಲ್ಲಿ ಮಾನವನ ವಿಚಾರದ ಆರಂಭ ಅಂಕಿತವಾಗಿದೆ. ಆರಂಭದಲ್ಲಿ ಜಗತ್ತಿನತ್ತ ಪ್ರೇಮದ ದೃಷ್ಟಿಯಿಂದಲೇ ನೋಡು ಎಂದಿಷ್ಟೇ ಹೊಳೆಯಿತು. ಇಷ್ಟು ಹೊಳೆಯುವುದು ಕಡಿಮೆಯೇನಲ್ಲ.

ಮತ್ತೊಬ್ಬ ಮನುಷ್ಯ ಬಂದ, ಆತ ಹೇಳಿದ: 'ವೈರದಿಂದ ವೈರ ಎಂದೂ ಶಮನ ಆಗದು, ಅಕ್ರೋಧದಿಂದಲೇ ಕ್ರೋಧವನ್ನು ಗೆಲ್ಲಿ'— ಈ ಬಗೆಯ ವಿಚಾರ ಒಂದು ಹೆಜ್ಜೆ ಮುಂದೆ ಹೋಯಿತು. ಬುದ್ಧನ ಈ ಮಾತು ಹಿಂದಿನ ವಿಚಾರದಲ್ಲಿ ಇಷ್ಟೊಂದು ಹೆಚ್ಚಿನ ಅಂತರ ತಂದಿತು. ಹಿಂದಿನ ಚಿಂತನದ ಚಿತ್ರವೇ ನಖಶಿಖಾಂತ ಬದಲಾಯಿತು. ವೈರದಿಂದ ವೈರದ ಶಮನ ಆಗದು, ಎಂಬುದರಿಂದ ಜೀವನದ ಒಂದು ಮುಖವೇ ಪ್ರಕಟವಾಯಿತು.

ಅನಂತರ ಮತ್ತೊಬ್ಬ ಮನುಷ್ಯ ಬಂದ, ಆತ ಹೇಳಿದ: 'ಶತ್ರುವನ್ನು ಪ್ರೀತಿಸು.' ಹಿಂದಿನದೆಲ್ಲಾ ಬದಲಾಗಿಬಿಟ್ಟಿತು. ಏಸುವಿನ ಈ ಮಾತಿನಿಂದ ಮನುಷ್ಯ ಬಹಳ ಮುಂದುವರಿದ. ಶತ್ರುವನ್ನು ದ್ವೇಷಿಸಬೇಡ ಎಂದಷ್ಟೇ ಅಲ್ಲ, ಶತ್ರುವನ್ನು ಪ್ರೀತಿಸು!

ಜನರಾದರೋ ಇದನ್ನು ಪರಿಪೂರ್ಣ ಉಪದೇಶ ಎಂದು ತಿಳಿದರು. ಆದುದರಿಂದ 'ವಿಚಾರ ಉತ್ತಮವಿದೆ, ಆದರೆ ಸದ್ಯದ ಪರಿಸ್ಥಿತಿಯಲ್ಲಿ........' ಎದುರಾಳಿ ದ್ವೇಷಿಸುತ್ತಾನೆ ಎಂಬುದೇ ಸದ್ಯದ ಪರಿಸ್ಥಿತಿ ಎಂಬುದು ಏಸುವಿಗೆ ಗೊತ್ತೇ ಇತ್ತು. ಅಂಥದರಲ್ಲೇ ಪ್ರೀತಿಸುವ ಆದೇಶವನ್ನವರು ಕೊಟ್ಟರು. 'ಪ್ರಾಪ್ತವಲ್ಲದ ಆ ಪರಿಸ್ಥಿತಿಯಲ್ಲಿ ಶತ್ರುವನ್ನು ಪ್ರೀತಿಸು' ಎಂದರು. ಎಂದರೆ ಗಾಳಿಯಲ್ಲಿ ಹಲ್ಲು ಮಸೆಯಬೇಡ ಎಂದೇನೂ ಅವರು ಹೇಳಲಿಲ್ಲ. ಎದುರಿಗೆ ಒಬ್ಬ ಶತ್ರು ನಿಂತಿದ್ದಾನೆ. ಅವನು ನಮ್ಮನ್ನು ದ್ವೇಷಿಸುತ್ತಾನೆ. ಅವನು

ಚೆನ್ನಾಗಿ ಹಲ್ಲು ಕಡಿದು-ಕಡಿದು ಸೆಟೆದು ನಿಂತಿದ್ದಾನೆ. ಇದೇ 'ಪ್ರಾಪ್ತ ಪರಿಸ್ಥಿತಿ.' ಅದಕ್ಕಾಗಿಯೇ ಅವನನ್ನು ಪ್ರೀತಿಸು ಎಂದು ಯೇಸುವಿನ ಆದೇಶ. ಇದರ ಹೊರತಾಗಿ ನೀವು ಅವನನ್ನು ಹೇಗೆ ಗೆಲ್ಲಬಲ್ಲಿರಿ? ಶತ್ರುವನ್ನು ಪ್ರೇಮದಿಂದಲೇ ಗೆಲ್ಲಬೇಕೆಂದು ಸ್ಪಷ್ಟ ಸೂಚನೆ ಕೊಟ್ಟರು.

ಈಗ ಬಂದರು ಗಾಂಧೀಜೀ. ಹಾಲಿನಿಂದ ಬೆಣ್ಣೆ ಹೊರಡುತ್ತದೆ, ಅಂತೆಯೇ ಇಂದಿನ ಸಮಾಜದಿಂದ ಅವರು ಎದ್ದರು. ಹಾಲಿನ ಎಲ್ಲ ಒಳ್ಳೆಯ ಗುಣ ಬೆಣ್ಣೆಯಲ್ಲಿ ಸೇರಿರುವಂತೆ ಸಮಾಜದ ಎಲ್ಲ ಒಳ್ಳೆಯ ತತ್ವ ಸಮಾಜದ ಮಹಾಪುರುಷರಲ್ಲಿ ಸೇರಿಬಿಟ್ಟಿರುತ್ತದೆ. ಜೊತೆಗೆ ಬೆಣ್ಣೆ ಹಾಲಿಗೆ ಪರಕೀಯ ವಲ್ಲ. ಹಾಗೆಯೇ ಮಹಾಪುರುಷರು ಸಮಾಜದಿಂದ ಹೊರತಲ್ಲ. ಅವರು ಸಮಾಜದಿಂದ ಬೇರೆಯಾಗುವುದಿಲ್ಲ. ಭಾರತ ನಿಶ್ಯಸ್ತ್ರವಾಗಿಬಿಟ್ಟಿತ್ತು. ಅಂಥ ಸ್ಥಿತಿಯಲ್ಲಿ ಗಾಂಧೀಜೀ ಬಂದರು. 'ಶತ್ರುವನ್ನು ಪ್ರೀತಿಸು, ಈ ಮಾತು ಕೇವಲ ವ್ಯಕ್ತಿಗತವಲ್ಲ, ಶತ್ರುಗಳ ಸಮೂಹವನ್ನೂ ನಾವು ಪ್ರೀತಿಸಬೇಕು' ಎಂದು ಅವರು ಆದೇಶವಿತ್ತರು. 'ನಾನು ಮಾಡುತ್ತಿರುವುದೆಲ್ಲಾ ಭಾರತದ ಮೇಲಿನ ಪ್ರೇಮದಿಂದ ಮಾತ್ರವಲ್ಲ, ಇಂಗ್ಲೆಂಡಿನ ಮೇಲಿನ ಪ್ರೇಮದಿಂದಲೂ' ಎಂದು ಅವರು ಹೇಳುತ್ತಿದ್ದರು. ಅವರು ಸತ್ಯಾಗ್ರಹ ನಡೆಸಿದರು, ಮತ್ತೇನೆಲ್ಲ ಮಾಡಿದರು. ಅದೆಲ್ಲವನ್ನೂ ಪ್ರೇಮದಿಂದ ಪ್ರೇರಿತರಾಗಿಯೇ ಮಾಡಿದರು.

ಇದು ಹೊಸ ವಿಚಾರ, ಅದಕ್ಕೆ ಯೋಗ್ಯರಾಗಿ ನಾವಾಗಬೇಕು. ಪ್ರೇಮದ ಆಕ್ರಮಣವಾಗಬೇಕು. ನಾನು ಅದನ್ನು 'ಪ್ರತಿರೋಧೀ ಪ್ರೇಮ' ಎನ್ನುತ್ತೇನೆ. ಇದರಲ್ಲಿ ಎದುರಾಳಿ ಎಷ್ಟು ರೋಷವಂತನಾಗುವನೋ ಅಷ್ಟೂ ನಾವು ಗುಣವಂತರಾಗಬೇಕಾಗುತ್ತದೆ. ಎದುರಾಳಿಗೆ ನಮ್ಮ ಆತ್ಮ ದಲ್ಲೇ ಸ್ಥಾನ ಕೊಡಬೇಕು. ಈ ವೃತ್ತಿಯಿಂದಲೇ ಸತ್ಯಾಗ್ರಹ ಸಾಧ್ಯ.

ಸತ್ಯಾಗ್ರಹ ಇಷ್ಟು ಸಿಹಿಯಾಗಲಿ

ಗಾಂಧೀಜೀ ಮತ್ತು ಕಸ್ತೂರಿ ಬಾ ಅವರ ಒಂದು ಪ್ರಸಂಗ ಪ್ರೇಮದ ವ್ಯವಹಾರ ಹೇಗಿರುತ್ತದೆ ಎಂದು ತಿಳಿಸುತ್ತದೆ. ಕಸ್ತೂರಿ ಬಾ ಅವರ ಆರೋಗ್ಯ ಸರಿಯಿರಲಿಲ್ಲ. ಬೇರೆ ಉಪಚಾರಗಳಿಂದ ಯಶಸ್ಸು ಸಿಗಲಾದಾಗ ಉಪ್ಪು ಮತ್ತು ಬೇಳೆ ಬಿಟ್ಟುಬಿಡಲು ಗಾಂಧೀಜೀ ಹೇಳಿದರು. ಎಷ್ಟು

ತಿಳಿಯಹೇಳಿದರೂ ಅವರು ಒಪ್ಪಲಿಲ್ಲ. ಕೊನೆಯಲ್ಲಿ ಬಾ ಹೇಳಿದರು: "ಬೇಳೆ ಮತ್ತು ಉಪ್ಪನ್ನು ಬಿಡಲು ನಿಮಗೆ ಯಾರಾದರೂ ಹೇಳಿದರೂ ನೀವೂ ಬಿಡಲಾರಿರಿ." ಬಾಪೂ ಬರೆದಿದಾರೆ: "ಇದನ್ನು ಕೇಳಿ ನನಗೆ ದುಃಖವೂ ಆಯಿತು, ಹರ್ಷವೂ ಆಯಿತು. ನನ್ನ ಪ್ರೀತಿ ಪ್ರಕಟಪಡಿಸಲು ಅವಕಾಶ ಸಿಕ್ಕಿತು. ಆ ಹರ್ಷದಲ್ಲಿ ನಾನು ಕೂಡಲೇ ಹೇಳಿಬಿಟ್ಟೆ, ನಾನು ಒಂದು ವರ್ಷ ಅವಧಿಗೆ ಬೇಳೆಯನ್ನೂ ಉಪ್ಪನ್ನೂ ಬಿಟ್ಟಿದ್ದೇನೆ, ನೀನು ಬಿಡು ಅಥವಾ ಬಿಡದಿರು." ಆಗ ಬಾ ಹೇಳಿದರು: "ನನ್ನನ್ನು ಕ್ಷಮಿಸಿ, ನಿಮ್ಮ ಸ್ವಭಾವ ತಿಳಿದಿದ್ದೂ ನಾನು ಹಾಗೆ ಹೇಳಿಬಿಟ್ಟೆ. ನಾನಿನ್ನು ಬೇಳೆ ಮತ್ತು ಉಪ್ಪು ತಿನ್ನುವುದಿಲ್ಲ. ನೀವು ನಿಮ್ಮ ಪ್ರತಿಜ್ಞೆ ವಾಪಸು ತೆಗೆದುಕೊಳ್ಳಿ."

ಗಾಂಧೀಜೀ ಹೇಳುತ್ತಾರೆ: "ಇದನ್ನು ನಾನು 'ಸತ್ಯಾಗ್ರಹ'ದ ಹೆಸರಿನಲ್ಲಿ ಎಚ್ಚರಿಸಬಯಸುತ್ತೇನೆ."

ಸತ್ಯಾಗ್ರಹದ ಅಡಿಯಲ್ಲಿ ಪ್ರೇಮವಿರುತ್ತದೆ ಎಂಬುದು ಈ ಪ್ರಸಂಗದಿಂದ ಚೆನ್ನಾಗಿ ಸ್ಪಷ್ಟವಾಗುತ್ತದೆ. ಇಷ್ಟು ಸಿಹಿಯಾದ ಸತ್ಯಾಗ್ರಹ ಪ್ರೇಮದ ಪ್ರಕರ್ಷ. ಸತ್ಯಾಗ್ರಹದಿಂದ ವಾತ್ಸಲ್ಯದ ಚಿತ್ರ ಪ್ರಕಟವಾಗಬೇಕು. ಒಬ್ಬ ತಾಯಿ ತನ್ನ ಮಗನಿಗೆ ವಾತ್ಸಲ್ಯದಿಂದ ಮೊಲೆ ಕುಡಿಸುತ್ತಿದ್ದಾಳೆ. ಅದನ್ನು ನೋಡಿದರೆ ಪ್ರತಿಯೊಬ್ಬನಿಗೂ ಆನಂದವಾಗುತ್ತದೆ, ಪ್ರಸನ್ನತೆ ಉಂಟಾಗುತ್ತದೆ. 'ಕರುಣೆ, ಪ್ರೇಮ ಮತ್ತು ದಯೆಯ ಕೆಲಸವಾಯಿತು' ಎಂದು ಕೇಳಿದೊಡನೆಯೇ ಆನಂದವಾಗುತ್ತದೆ. ಕಿವಿಗಳು ಅಮೃತರಸವನ್ನು ಸವಿದಂತೆ 'ಖೂನಿಯಾಯಿತು' ಎಂದು ಕೇಳಿದೊಡನೆ ಯಾರ ಕಿವಿಗೂ ಒಳ್ಳೆಯದೆನಿಸುವುದಿಲ್ಲ, ಕೇಳಿದೊಡನೆ ಅರುಚಿ ಹುಟ್ಟುತ್ತದೆ. ಅನಂತರ ಬಹುಶಃ ಇದು ಉಳಿಸಿಕೊಳ್ಳುವ ಮಾತೋ ಅಥವಾ ಅಲ್ಲವೋ ಎಂಬ ವಿಚಾರ ಬಂದರೂ ಸಹ ತನ್ನನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಹಾಗೆ ಮಾಡಬೇಕಾಗಿ ಬಂತು ಎಂದು ಹೇಳಿದರೂ ಸಹ ಕೆಲವರು ಸಮರ್ಥಿಸಿಕೊಳ್ಳುತ್ತಾರೆ ಮತ್ತೆ ಕೆಲವರು ಸಮರ್ಥಿಸಿಕೊಳ್ಳುವುದೂ ಇಲ್ಲ. ಈ ಅಂಶ ಅನಂತರ ಹೊಳೆಯುತ್ತದೆ. ಆದರೆ ಮೊದಲು ಕೇಳಿದೊಡನೆ ಕೆಟ್ಟದೆನಿಸುವುದು ಎಲ್ಲರಿಗೂ ಹೌದು. ಅದೇ ರೀತಿ ಪ್ರೇಮದ ಕೆಲಸ ನಡೆದಾಗ ಕೇಳಿದೊಡನೆ ಎಲ್ಲರಿಗೂ ಒಳ್ಳೆಯದೆನಿಸುತ್ತದೆ. ಇದೇ ರೀತಿ 'ಇಂಥ ಸ್ಥಳದಲ್ಲಿ ಸತ್ಯಾಗ್ರಹ ನಡೆಯುತ್ತಿದೆ'

ಎಂದು ಕೇಳಿದರೆ ಮಾಧುರ್ಯ ಹಾಗೂ ಪ್ರಸನ್ನತೆಯ ಸರ್ವ ಸಾಮಾನ್ಯ ಅನುಭವವಾಗಬೇಕು. 'ಸತ್ಯಾಗ್ರಹ' ಶಬ್ದ ಕೇಳಿದೊಡನೆ ಸಿಹಿ ಎನಿಸಬೇಕು. ಕೇಳುವಿಕೆ ಸುಂದರವಾಗಬೇಕು. ಕೇಳಿದ ಮಾತ್ರಕ್ಕೆ ಇಂಥ ಒಳ್ಳೆಯ ಪ್ರಭಾವವಾದರೆ, ಇನ್ನು ಅದರ ಕೃತಿಯಿಂದ, ಅದರ ಅನುಷ್ಠಾನದಿಂದ ಇನ್ನೂ ಉಚ್ಚ ಪ್ರಭಾವ ಬೀಳಬೇಕು. ಎಲ್ಲರಿಗೂ ಹೀಗೆ ಅನಿಸುತ್ತದೆ ಎಂದೇನೂ ಅಲ್ಲ, ಏಕೆಂದರೆ ಚಿತ್ತ ವಿವಿಧ. ಕೆಲವರ ಚಿತ್ತ ಇಷ್ಟು ಮೋಹ ಗ್ರಸ್ತವಿರಬಹುದು, ಪರಮ ಮಂಗಲ ಕಾರ್ಯಕ್ಕೂ ತೀರಾ ವಿರುದ್ಧ ಪ್ರತಿ ಕ್ರಿಯೆ ಉಂಟಾಗಬಹುದು. ಆದರೆ ಸಾಮಾನ್ಯವಾಗಿ ಸತ್ಯಾಗ್ರಹದ ಮಾತು ಕೇಳುತ್ತಲೇ ತಂಪುಂಟಾಗಬೇಕು.

ಸತ್ಯಾಗ್ರಹದ ಪ್ರಕ್ರಿಯೆ ಸೌಮ್ಯ, ಸೌಮ್ಯತರ, ಸೌಮ್ಯತಮ ಆಗುತ್ತ ಸಾಗಲಿ

ಸತ್ಯಾಗ್ರಹದ ಪ್ರಕ್ರಿಯೆ ಉಗ್ರ, ಉಗ್ರತರ ಮತ್ತು ಉಗ್ರತಮ ಆಗುತ್ತಾ ಹೋಗುವುದಕ್ಕೆ ಬದಲಾಗಿ ಸೌಮ್ಯ, ಸೌಮ್ಯತರ ಮತ್ತು ಸೌಮ್ಯತಮ ಆಗುತ್ತ ಹೋಗಬೇಕು ಎಂದು ನಾನು ಹೇಳುತ್ತೇನೆ. ಹಿಂಸೆಯಲ್ಲಿ ಒಂದು ಪ್ರಯೋಗ ನಡೆದು ಸಫಲತೆ ಸಿಗದಿದ್ದರೆ ಹೆಚ್ಚು ತೀವ್ರ ಪ್ರಯೋಗ ನಡೆಯುತ್ತದೆ. ಅದೂ ಸಫಲವಾಗದಿದ್ದರೆ ತೀವ್ರತಮ ಪ್ರಯೋಗ ನಡೆಸುತ್ತಾರೆ. ಆದರೆ ಅಹಿಂಸೆಯಲ್ಲಿ ಒಂದು ಪ್ರಯೋಗ ನಡೆದು ಅದರ ಪರಿಣಾಮವಾಗದಿದ್ದರೆ, ಸೌಮ್ಯತರ ಮತ್ತು ಸೌಮ್ಯತಮ ಪ್ರಯೋಗ ನಡೆಸಬೇಕು. ಔಷಧಿಯಲ್ಲಿ ಉತ್ತರೋತ್ತರ ಹೆಚ್ಚು-ಹೆಚ್ಚು ಸಕ್ಕರೆ ಸೇರಿಸಿ ಔಷಧದ ಅಂಶ ಕಡಿಮೆ ಮಾಡುತ್ತಾ ಹೋದರೆ ಹೋಮಿಯೋಪಥಿಯಲ್ಲಿ ಅದರ ಶಕ್ತಿ ಹೆಚ್ಚುತ್ತದೆ ಎಂದು ವಿಶ್ವಾಸ. ಹೋಮಿಯೋಪಥಿಯ ಈ ಪ್ರಕ್ರಿಯೆ ಅಹಿಂಸೆಗೂ ಅನ್ವಯಿಸುತ್ತದೆಂದು ನನ್ನ ನಂಬಿಕೆ. ಅಹಿಂಸೆಯ ಮುಖ್ಯ ಹೋರಾಟ ಹೊರಗಲ್ಲ, ಎದುರಾಳಿಯ ಹಾಗೂ ನಮ್ಮ ಹೃದಯದಲ್ಲಿ ನಡೆಯುತ್ತದೆ.

ನೋಡಿರಿ ತಾಯಿ ಏನು ಮಾಡುತ್ತಾಳೆ? ಎರಡು ಮೂರು ಸಾರಿ ಮಗುವಿಗೆ ಹೇಳುತ್ತಾಳೆ: "ಮಗೂ, ಏಳು, ಎದ್ದೇಳು."—ಆದರೂ ಅವನು

ಏಳುವುದಿಲ್ಲ. ತಾಯಿ ಅವನನ್ನು ಅಲ್ಲಾಡಿಸುತ್ತಾಳೆ. ಶಬ್ದದ ಅನಂತರ ಆಗುವ ಸ್ಪರ್ಶ ಹಿಂಸೆಯದಲ್ಲ, ಪ್ರೇಮದ ಸ್ಪರ್ಶ. ಪ್ರೇಮ ತನ್ನ ಸೂಕ್ಷ್ಮ ಸ್ವರೂಪದಲ್ಲಿ ಸೋತುಹೋದಾಗ, ಅದರ ಸ್ಥೂಲಸ್ವರೂಪ ಪ್ರಕಟವಾಗುತ್ತದೆ. ಐದು ರೂಪಾಯಿಗಳಿಂದ ಕೆಲಸ ನಡೆಯದಿದ್ದಾಗ ಹತ್ತು ರೂಪಾಯಿ ತೆಗೆಯುತ್ತೇವೆ. ಐದು ರೂಪಾಯಿಗಳಿಂದ ಕೆಲಸ ನಡೆಯದಿದ್ದಾಗ ಅದರ ಬದಲು ಆರು ಪೆಟ್ಟು ಕೊಟ್ಟರೆ ಅದು ಬೆದರಿಕೆಯಾಗುತ್ತದೆ, ಹಿಂಸೆಯಾಗುತ್ತದೆ. ಐದು ಹೆಜ್ಜೆ ಸಾಲದೆ ಬಂದರೆ ಆರು ಹೆಜ್ಜೆ ನಡೆಯಿರಿ, ಹತ್ತು ಹಾಕಿ, ರಸ್ತೆ ಅದೇ ಇದ್ದೀತು. ಎದುರಿಗೆ ಜಡತೆ ಹೆಚ್ಚಿದಂತೆಲ್ಲಾ ನಾವು ಹೆಚ್ಚು ಚೈತನ್ಯ ಪ್ರಕಟಪಡಿಸಬೇಕು. ಅದರಲ್ಲಿ ಹೆದರಿಸಿ ಬೆದರಿಸುವ ಯಾವ ಮಾತೂ ಇರದು. ನನಗಂತೂ ಅಂತರಾತ್ಮನನ್ನು ಎಚ್ಚರಿಸಬೇಕಾಗಿದೆ, ಎಚ್ಚರಿಸುವುದೇ ಸತ್ಯಾಗ್ರಹ-ಪದ್ಧತಿ.

ಸಮ್ಯಕ್ ಚಿಂತನದಲ್ಲಿ ಅಹಿಂಸಕ ಸಹಯೋಗ

Resist not evil—'ಕೇಡಿನೊಡನೆ ಸೆಣಸಬೇಡ' ಎಂದು ಹೇಳಿ ನಿಂತುಬಿಟ್ಟ ಯೇಸು. ಇದರ ಅರ್ಥವನ್ನು ಕೇಡಿನ ಪ್ರತೀಕಾರವನ್ನು ಕೇಡಿನಿಂದ ಬೇಡ ಎಂಬುದಾಗಿಯೂ ಮಾಡಲಾಯಿತು. ಗಾಂಧೀಜಿಯೂ ಅದೇ ಅರ್ಥ ಹಚ್ಚಿದರು. ಅದು ಸರಿ. ಆದರೆ ಇಂದಿನ ಸಂದರ್ಭವೇ ಬೇರೆ. ಜಗತ್ತಿನಲ್ಲಿ ಇಂದು ಒಂದು ವಿಚಾರದಮೇಲೆ ಇನ್ನೊಂದು ವಿಚಾರದ ದಾಳಿ ನಡೆಯುತ್ತದೆ, ಆವೇಶದ್ದಲ್ಲ. ವಿಚಾರ ಪ್ರಚಾರಕ್ಕಾಗಿ ಶಸ್ತ್ರಾಸ್ತ್ರಗಳ ಉಪಯೋಗ ಮಾಡಲಾಗುತ್ತದೆ. ಆಗ 'ಕೇಡಿನ ಪ್ರತೀಕಾರ ಬೇಡ' ಎಂಬ ವಾಕ್ಯವನ್ನು ಪೂರ್ಣಗೊಳಿಸಿ ಅಹಿಂಸಕ ಪ್ರತೀಕಾರ ಎಂಬುದರ ಬದಲು (non-violent resistance) 'ಸಮ್ಯಕ್ ಚಿಂತನದಲ್ಲಿ ಅಹಿಂಸಕ ಸಹಯೋಗ' (non-violent assistance in right thinking) ಎಂಬ ಮಾತನ್ನು ಕೇಳಬೇಕು. ಸಮ್ಯಕ್ ಚಿಂತನದಲ್ಲಿ ಸಹಾಯ ಮಾಡುವ ಸಲುವಾಗಿ ಒಮ್ಮೊಮ್ಮೆ ಹೊರಗಿನಿಂದ ವಿರೋಧ ಮಾಡಬೇಕಾಗುತ್ತದೆ, ಅಸಹಕಾರ ಮಾಡಬೇಕಾದರೂ ಮಾಡಬೇಕಾದೀತು. ಆದರೆ ಅದರ ಸ್ವರೂಪ ಸಮ್ಯಕ್ ಚಿಂತನದಲ್ಲಿ ಅಹಿಂಸಕ ಸಹಕಾರದ್ದೇ ಆಗಿರಬೇಕು.

ನಮಗೂ ಮತ್ತು ಎದುರಾಳಿಗೂ ಈ ಮನುಷ್ಯ ಸರಿಯಾಗಿ ವಿಚಾರ ಮಾಡುವಲ್ಲಿ ನಮಗೆ ಸಹಾಯಕನಾಗಿದ್ದಾನೆ ಎಂದು ಅನುಭವವಾಗಬೇಕು. ಇಂದು ಹಿಂಸೆಯಲ್ಲೂ ಸಹ ಎಲ್ಲವೂ ಗಣಿತದ ಮೂಲಕ ಮತ್ತು ಸ್ವಸ್ಥವಾಗಿ ಮಾಡಬೇಕಾಗುತ್ತದೆ. ಅದರಲ್ಲಿಯೂ ಆವೇಶಕ್ಕೆ ಸ್ವಲ್ಪವೂ ಅವಕಾಶವಿಲ್ಲ. ಒಂದೆಡೆ ಕುಳಿತು-ಕುಳಿತೇ ದೂರ-ದೂರದವರೆಗೆ ನಿರ್ದೇಶಿತ ಶಸ್ತ್ರ ಕಳಿಸುತ್ತಾರೆ. ಸ್ವಲ್ಪವಾದರೂ ಆವೇಶ ಬಂದುಬಿಟ್ಟರೆ ಶಸ್ತ್ರ ಎಲ್ಲೆಲ್ಲೋ ಹೋಗಿಬಿಟ್ಟೀತು. ಹೂಡಿದ ಪಣ ಹುಳಿಗೂಡಿಹೋದೀತು. ಹಿಂಸೆಯಲ್ಲಿಯೇ ಇಂಥ ಮಾತಾದರೆ ಅಹಿಂಸೆಯಲ್ಲಂತೂ ಇಂದು ಆವೇಶ ಏನೇನೂ ಕೆಲಸಕ್ಕೆ ಬಾರದು. ಆಗುತ್ತಿರುವುದೆಲ್ಲಾ ವಿಚಾರಪೂರ್ವಕವಾಗಿಯೇ ಆಗುತ್ತದೆ, ಆದುದರಿಂದ ಅದರ ಪ್ರತೀಕಾರದ ಮಾತು ಬಂದಾಗ ಸಮ್ಯಕ್ ವಿಚಾರದ ಅಗತ್ಯವಿರುತ್ತದೆ. ಸತ್ಯಾಗ್ರಹದ ಮೂಲಕ ಯಾರ ವಿರುದ್ಧವಾಗಿಯಾದರೂ ಏನಾದರೂ ಮಾಡುವುದು ಅಥವಾ ಯಾರ ಮೇಲಾದರೂ ಒತ್ತಾಯ ಹೇರುವುದು ಇಲ್ಲ. ಸಮ್ಯಕ್ ಚಿಂತನದಲ್ಲಿ ಸಹಾಯ ಮಾಡುವುದು ಉಂಟು.

ಮೂಲದಲ್ಲಿ ಸತ್ಯಾಗ್ರಹೀ ಆಗಬೇಕಾದೀತು

ನನಗೆ ಈ 'ಸತ್ಯಾಗ್ರಹ' ಶಬ್ದ ಅಷ್ಟು ಇಷ್ಟವಲ್ಲ. ಇದರಲ್ಲಿ ಬರುವ 'ಆಗ್ರಹ' ಶಬ್ದ ತಪ್ಪಾಗಿ ಬಂದಿದೆ. ಆದರೆ ಇದು ನಡೆದುಬಂದಿದೆ, ನಡೆಸಿಕೊಂಡು ಹೋಗುತ್ತಿದೇವೆ. ಜೀವನದ ಸ್ವರೂಪ ಸತ್ಯಶೋಧನೆ. ಸತ್ಯದ ಒಂದೊಂದು ಅಂಶ ಕೈಗೆ ಬರುತ್ತದೆ. ಪೂರಾ ಸತ್ಯ ಒಂದೇ ಬಾರಿಗೆ ಕೈಗೆ ಬರುವುದಿಲ್ಲ. ನಮ್ರತೆ, ತಟಸ್ಥತೆ ಹಾಗೂ ಅನಾಗ್ರಹದಿಂದ ಸತ್ಯ ಪ್ರಾಪ್ತಿಯಾಗುತ್ತದೆ.

'ಸತ್ಯಾಗ್ರಹೀ' ಆಗಬೇಕಾದುದು ಅಗತ್ಯ ಎಂದು ನನ್ನ ಹೇಳಿಕೆ. ಯಾರಾದರೂ 'ಸತ್ಯದ ತಾಮ್ರ ಪಟ ನನಗೆ ಸಿಕ್ಕುಬಿಟ್ಟದೆ. ಅದರ ಆಗ್ರಹ ತೊಡಬೇಕಾದವನು ನಾನೇ, ಅದಕ್ಕೆ ಅಂಟಿಕೊಳ್ಳಬೇಕಾದವನು ನಾನೇ, ನಾನಿಷ್ಟೇ ಮಾಡಬೇಕಾದುದು, ಸತ್ಯವನ್ನು ನಾನು ಗ್ರಹಿಸಿಬಿಟ್ಟದ್ದೇನೆ ಮತ್ತು ಅದು ನನ್ನ ಬಳಿ ಇದೆ'-ಎಂದು ತಿಳಿದರೆ ಅದು ಸರಿಯಲ್ಲ. ಅದರ ಬದಲಾಗಿ ಸತ್ಯವಾದರೋ ವ್ಯಾಪಕ, ಅದು ಎಲ್ಲೆಲ್ಲೂ ಇದೆ ಎಂದು ನಾವು ತಿಳಿಯ

ಬೇಕಾದೀತು. ಅದು ಎಲ್ಲೆಲ್ಲಿ ಇವೆಯೋ ಅಲ್ಲಲ್ಲಿ ಅದನ್ನು ಗ್ರಹಿಸುವುದು ಸತ್ಯಾಗ್ರಹಿಯ ಭೂಮಿಕೆ. ಸತ್ಯಾಗ್ರಹ ಸಂಬಂಧವಾದ ಪ್ರಾಥಮಿಕ ಅಗತ್ಯ ಇದು. ಸ್ವಯಂ ಸತ್ಯವನ್ನೇ ತನ್ನ ಆಗ್ರಹವನ್ನಾಗಿ ಮಾಡಿಕೊಳ್ಳಬೇಕು.

ಇನ್ನೊಬ್ಬರಿಗೆ ಕಷ್ಟ ಕೊಡದೆ ತಾವೇ ಅದನ್ನು ಸಹಿಸುವುದು ಮತ್ತು ತಿಳಿಹೇಳುವುದು ಇದೇ ಸತ್ಯಾಗ್ರಹ. ಸತ್ಯಾಗ್ರಹದಲ್ಲಂತೂ ಸ್ವತಃ ಸತ್ಯದ ಆಚರಣೆಯನ್ನು ಆಗ್ರಹಪೂರ್ವಕವಾಗಿ ಮಾಡಬೇಕು. ಅದರಿಂದ ಇದಿರಾಳಿಯ ಹೃದಯ ಕರಗಿಬಿಡಬೇಕು. ಇದಕ್ಕೆ ಎಂಥ ತ್ಯಾಗಕ್ಕೂ ಸಿದ್ಧ ವಿರಬೇಕು. ಇದೇ ನಿಜವಾದ ಸತ್ಯಾಗ್ರಹ. 'ಒಬ್ಬ ಯೋಗಿ ಅತಿಮಾನಸದ ಭೂಮಿಕೆಯಿಂದ ಕೆಲಸ ಮಾಡಿದರೆ ಜಗತ್ತಿನ ಸಮಸ್ತ ದುಃಖ ಕ್ಲೇಶಗಳ ಮೇಲೂ ಪ್ರಭಾವ ಬೀಳಬಲ್ಲದು' ಎಂದು ಪುದುಚೇರಿಯವರು ಹೇಳುವರಲ್ಲಾ, ಇದೇ ಮಾತನ್ನೇ ಗಾಂಧೀಜೀ ನೇರಾದ ಭಾಷೆಯಲ್ಲಿ ಹೇಳುತ್ತಿದ್ದರು: 'ಒಬ್ಬನಾದರೂ ಪೂರ್ಣ ಸತ್ಯಾಗ್ರಹಿ ಇದ್ದರೆ ಅವನಿಂದ ಇಡೀ ಜಗತ್ತಿನ ಎಲ್ಲ ಅನ್ಯಾಯವೂ ದೂರವಾಗಬಲ್ಲದು. ಜಗತ್ತಿನಲ್ಲಿ ಒಬ್ಬನಾದರೂ ನಿಜವಾದ ಸತ್ಯಾಗ್ರಹಿ ಇದ್ದರೆ ಆತನ ಪ್ರಭಾವ ಇಡೀ ಜಗತ್ತಿನಮೇಲೆ ಆಗಬಲ್ಲದು ಎಂದು ನಾನೂ ಒಪ್ಪುತ್ತೇನೆ. ಜಗತ್ತಿನಾದ್ಯಂತ ಹೃದಯ ಕರಗೀತು. ಆದರೆ ಆತನ ಹೃದಯದಲ್ಲಿ ಜಗತ್ತಿಗಾಗಿ ಪ್ರೇಮವಿರಬೇಕು.

ಸತ್ಯಾಗ್ರಹ ನಿತ್ಯ ನಿರಂತರ

ಸತ್ಯಾಗ್ರಹ ನೈಮಿತ್ತಿಕವಲ್ಲ, ಅದೊಂದು ನಿತ್ಯವಸ್ತು ಎಂದು ಇದರಿಂದ ಗಮನಕ್ಕೆ ಬಂದೀತು. ವಾಸ್ತವವಾಗಿ ನೋಡಿದರೆ ಈಗ ಸಾಗುತ್ತಿರುವ ಗ್ರಾಮದಾನದ ಕೆಲಸವೂ ಒಂದು ಬಗೆಯ ಸತ್ಯಾಗ್ರಹವೇ. ಇದು ನಿರ್ವೈರ ಪ್ರತೀಕಾರ ಮತ್ತು ಸತ್ಯಾಗ್ರಹದ ಒಂದು ಅಂಗ. ಹಳ್ಳಿ-ಹಳ್ಳಿಗೆ ಹೋಗುವುದು, ಜನರಿಗೆ ವಿಚಾರ ತಿಳಿಸುವುದು, ಇವೆಲ್ಲಾ ಸತ್ಯಾಗ್ರಹವೇ. ಇದೊಂದು ರಚನಾತ್ಮಕ ಸತ್ಯಾಗ್ರಹ. ತನ್ನ ಜೀವನದಲ್ಲಿ ಸತ್ಯವಾಗಿ ನಡೆಯುವ ಆಗ್ರಹ ಇಟ್ಟುಕೊಳ್ಳುವ ಮನುಷ್ಯನ ಸತ್ಯಾಗ್ರಹ ಅವಿರತವಾಗಿ ಸಾಗುತ್ತದೆ.

ಬಾಪೂ ಸಹ ಅಂಥವರೆನ್ನಿಸಿಕೊಂಡಿದ್ದರು. ಸತ್ಯಾಗ್ರಹ ನಿತ್ಯವಸ್ತು, ಜೀವನ ವಸ್ತು, ಅದೊಂದು ನಿಷ್ಠೆ ಎಂದು ಅವರು ಹೇಳಿದ್ದಾರೆ. ಸತ್ಯಾಗ್ರಹ

ಪ್ರತಿಕ್ಷಣವೂ ಸ್ವೀಕಾರ್ಯ, ಆದರಣೀಯ ಹಾಗೂ ಸ್ವಾಗತಾರ್ಹ ಆಗಬೇಕು. ಮನುಷ್ಯನ ಜೀವನದಲ್ಲಿ ಸತ್ಯಾಗ್ರಹವಿಲ್ಲದೆ ಕಳೆಯುವ ಕ್ಷಣವೆಲ್ಲಾ ಅಷ್ಟು ಪಾಲು ವ್ಯರ್ಥವಾಯಿತು—ಇದು ಸತ್ಯಾಗ್ರಹದ ಸ್ವರೂಪವಾಗಬೇಕು.

ನಾನು ಕೇವಲ ವಿವರಣೆ ಕೊಟ್ಟಿದ್ದೇನೆ

ಸತ್ಯಾಗ್ರಹದ ಕಲ್ಪನೆ ಇಷ್ಟೊಂದು ವ್ಯಾಪಕ. ನಮ್ಮ ಎಲ್ಲ ಕೆಲಸದ ಸಾರವನ್ನು ಹೊರತರಬೇಕಾದರೆ ಅಥವಾ ಒಂದೇ ಶಬ್ದದಲ್ಲಿ ಹೇಳಬೇಕಾದರೆ, ಅದು ಸತ್ಯಾಗ್ರಹ. ಅಂಥ ಮಹಾನ್ ವಿಚಾರವನ್ನು ಮಹಾತ್ಮಾ ಗಾಂಧೀ ಕೊಟ್ಟರು. ಅದಕ್ಕೆ ನಾನು ಎಲ್ಲೋ ಸ್ವಲ್ಪ ವಿವರಣೆ ನೀಡಿದ್ದೇನೆ, ಅದಕ್ಕೆ ಕೆಲವು ಶಬ್ದ ಕೊಟ್ಟಿದ್ದೇನೆ, ಅದರಿಂದ ಚಿಂತನಕ್ಕೆ ಅನುಕೂಲ ಮತ್ತು ತಿಳಿಯಲು ಸಹಾಯಕ. ಮಗ ತಂದೆಯ ಹೆಗಲಮೇಲೆ ಕುತಿದ್ದಾನೆ, ಆದುದರಿಂದ ತಂದೆಗಿಂತ ಹೆಚ್ಚು ದೂರ ನೋಡಬಲ್ಲವನಾಗಿದ್ದಾನೆ. ನಾನು ಅದಕ್ಕೇನೂ ಬೆಳೆದಿಲ್ಲ. ಹಾಗೆ ಮಾಡಿದ್ದರೆ ನಿಮಗೆ ಖಂಡಿತ ಹೇಳುತ್ತಿದ್ದೆ. ವ್ಯರ್ಥ ವಿನಯ ಎಂಬುದು ಯಾವುದೂ ಈಶ್ವರ ಕೃಪೆಯಿಂದ ನನ್ನಲ್ಲಿಲ್ಲ, ಹೊಸ ವಸ್ತುವೇನಾದರೂ ನನಗೆ ಸಿಕ್ಕಿದ್ದರೆ ಈ ಸಂಗತಿ ಬಾಪೂ ದರ್ಶನದಲ್ಲಿರಲಿಲ್ಲ, ನನಗೆ ಸಿಕ್ಕಿದೆ ಎಂದು ನಾನು ಹೇಳುತ್ತಿದ್ದೆ. ಅಂಥದು ಯಾವುದೂ ಇಲ್ಲವೇ ಇಲ್ಲ. ಸತ್ಯಾಗ್ರಹ ವಿಚಾರ ಗಾಂಧೀಜಿಯದೇ, ಅದರಲ್ಲಿ ನಾನು ಯಾವ ವೃದ್ಧಿಯನ್ನಾಗಲೀ, ಪರಿವರ್ತನೆ ಅಥವಾ ಶುದ್ಧಿಯನ್ನಾಗಲೀ ಮಾಡಿಲ್ಲ, ಕೇವಲ ವಿವರಣೆ ನೀಡಿದ್ದೇನೆ.

ಒಂದು ಸಿದ್ಧಾಂತದ ವಿವರಣೆ ಆಗುತ್ತಲೇ ಇರುತ್ತದೆ. ಭಾರತದ ಇತಿಹಾಸದಲ್ಲಿ ನಾವಿದನ್ನು ನೋಡಿದ್ದೇವೆ. ಗಂಗೆ ಧಾರಾವಾಹಿಯಾಗಿ ಹರಿಯುತ್ತಿರುವುದನ್ನು ನಾವು ನೋಡುತ್ತಿರುವಂತೆಯೇ ಶಬ್ದಗಳ ಧಾರೆಯನ್ನು ನಾವು ನೋಡಬಹುದು. ಎಷ್ಟೋ ಸಲ ವಿವರಣೆಯೇ ಇಷ್ಟು ಹೊಸದಾಗಿಬಿಟ್ಟಿರುತ್ತದೆ, ಆ ಕಾರಣದಿಂದ ಮೂಲಶಬ್ದವೇ ಆಕರ್ಷಕವಾಗಿಬಿಡುತ್ತದೆ, ಆಗ ಹೊಸ ಶಬ್ದವೇ ಪ್ರಸ್ಫುಟಿತವಾದಂತೆ ಅನಿಸುತ್ತದೆ. ವಾಸ್ತವವಾಗಿ ಮೂಲಶಬ್ದವೇ ಈ ಸೊಗಸು ಎಂದು ತಿಳಿಯಬೇಕು. ಅದರೊಳಗೆ ಇಷ್ಟೊಂದು ವಿವರಣೆ ಸುಪ್ತವಾಗಿ ಕುಳಿತಿರುತ್ತದೆ.

ವಿಜ್ಞಾನಿಗಳಿಗೆ ಈ ಮಾತು ಗೊತ್ತು. ಕಪ್ಪೆಯ ಪೂರ್ವಾವಸ್ಥೆಗಿಂತ ಅದರ ಉತ್ತರಾವಸ್ಥೆ ತೀರಾ ಭಿನ್ನ ಎಂಬುದು ಅವರಿಗೆ ಗೊತ್ತು. ಪ್ರಾಣಿಯಾದರೋ ಅದೇ, ಆದರೆ ಅದು ಅನೇಕ ಅವಸ್ಥೆಗಳನ್ನು ದಾಟಿ ಈ ಅವಸ್ಥೆಗೆ ಬಂದಿದೆ. ಇರಲಿ, ಸತ್ಯಾಗ್ರಹದ ವಿಷಯದಲ್ಲಿ ಗಾಂಧೀಜಿಯ ವಿಚಾರಗಳಲ್ಲಿ ನಾನೇನೂ ವಿಶೇಷ ಬದಲಾವಣೆ ಮಾಡಿಲ್ಲ, ಕೇವಲ ವಿವರಣೆ ಇತ್ತಿದ್ದೇನೆ—ನಾ ಹೇಳಬೇಕಾದುದು ಇಷ್ಟೆ.

●

೮

ಶಾಂತಿ ಸೇನೆಯ ಅಕ್ಷಯ ಬೀಜ

ಮಹಾತ್ಮಾ ಗಾಂಧೀ ಸೂರ್ಯನಂತೆ ಅಸಂಖ್ಯ ಕಿರಣಗಳುಳ್ಳವರಾಗಿದ್ದರು. ಅವರ ಚಿಂತನದ ಪರಿಣಾಮವಾಗಿ ದೇಶದ ಎದುರು ಅನೇಕ ಕೆಲಸಗಳು ಎದ್ದು ನಿಂತವು. ಅವರನ್ನು ಕವಿಗೆ ಹೋಲಿಸಬಹುದಾದಷ್ಟು ಅವರ ಪ್ರತಿಭೆ ಅಸಾಧಾರಣವಾಗಿತ್ತು. ಅವರ ಪ್ರತಿಭೆ ಕವಿಯಂತೆ 'ನವನವೋನ್ಮೇಷಶಾಲಿನೀ'—ಹೊಸ-ಹೊಸ ಸ್ಫೂರ್ತಿದಾಯಿನಿಯಾಗಿತ್ತು. ತೀರಾ ಮುಪ್ಪಿನಲ್ಲಿಯೂ ಸಹ ಅವರ ಪ್ರತಿಭಾಶಾಲೀ ಮಿದುಳಿನಿಂದ ಒಂದಕ್ಕಿಂತ ಮಿಗಿಲಾದ ಮತ್ತೊಂದು ಕಲ್ಪನೆ ಹೊರಹೊಮ್ಮುತ್ತಿತ್ತು. ಅವರ ಅಂಥ ಕಲ್ಪನೆಗಳಲ್ಲಿ ಶಾಂತಿ ಸೇನೆಯದೂ ಒಂದು. ಮಹತ್ತರವಾದ ಕಲ್ಪನೆ ಅಕ್ಷಯ ಬೀಜದಂತೆ. ಅದರಿಂದ ಮೊಳಕೆ ಒಡೆಯಲು ಸಮಯ ಬೇಕಾಗುತ್ತದೆ. ಯಾವುದರಲ್ಲಿ ಬೇಗ ಮೊಳಕೆ ಒಡೆಯುತ್ತದೆಯೋ ಅವುಗಳ ಸಸಿ ಬೇಗನೆ ಸತ್ತೂಹೋಗುತ್ತದೆ. ಬಹುಕಾಲ ಬದುಕುವ ಮರಗಳ ಮೊಳಕೆ ಒಡೆಯಲು ಸಮಯ ಹಿಡಿಸುತ್ತದೆ. ಅವು ಬೆಳೆಯುವುದೂ ಮೆಲ್ಲಮೆಲ್ಲನೆ. ಇದೇ ರೀತಿ ಅಧಿಕ ಶಕ್ತಿಶಾಲಿಯಾದ ವಿಚಾರ ಮತ್ತು ಅಧಿಕ ಚಿರಂಜೀವಿಯಾದದ್ದು ಜನ ಮಾನಸದಲ್ಲಿ ಮೊಳೆಯಲು ಸಮಯ ಹಿಡಿಸುತ್ತದೆ. ಬಿತ್ತಿದ ಕೂಡಲೇ ಅವು ಹುಟ್ಟುವುದು ಕಾಣುವುದಿಲ್ಲ. ಹಾಗೆಂದು ಅವು ಲೋಪ ಹೊಂದಿದವು ಎಂದರ್ಥವಲ್ಲ. ಭೂಮಿಯಲ್ಲಿ ಏಕರೂಪವಾಗಿಬಿಡುತ್ತವೆ. ಭೂಮಿಯೊಳಗಿಂದ ಪರಮೇಶ್ವರ ಇವುಗಳನ್ನು ಅರಳಿಸುತ್ತಾನೆ.

ಕೆಲವೊಂದು ವಿಚಾರ ಅಕ್ಷಯ, ಮತ್ತೆ ಕೆಲವು ಕ್ಷೀಣ. ಕ್ಷೀಣ ವಿಚಾರ ಬೇಗ ಮೇಲೇಳುತ್ತದೆ, ಬಂದಂತೆಯೇ ಹೋಗಿಬಿಡುತ್ತದೆ. ಇತಿಹಾಸದಲ್ಲಿ ಇವಕ್ಕೇನೂ ಸ್ಥಾನವಿಲ್ಲ. ಆಯಾ ಕಾಲದ ಸಣ್ಣ ದೊಡ್ಡ ಇತಿಹಾಸಕಾರರು ಅವನ್ನು ಕುರಿತು ಬರೆಯಬಹುದು, ಓದುವವರು ಓದಿಯಾರು, ಹೆಚ್ಚುಕಾಲದ

ವರೆಗೆ ಇವು ಉಳಿಯುವು. ವಿಚಾರಕ್ಷೇತ್ರದಲ್ಲಿ ಇಂಥ ಸಣ್ಣ-ಪುಟ್ಟ ಕ್ಷೀಣ ವಿಚಾರಗಳಲ್ಲಿ ಏನೂ ಸಾಮರ್ಥ್ಯ ಕಾಣಸಿಗದು.

ವಿಚಾರದ ಭವ್ಯ ಮಂದಿರದ ಗರ್ಭಗುಡಿಯಲ್ಲಿ ಆತ್ಮ ಜೇವತೆಯ ವಾಸ. ಈ ದೇವತೆಯ ಹತ್ತಿರ ಗಂಭೀರ ವಿಚಾರ ಹರಡಿಕೊಂಡಿರುತ್ತವೆ. ಜೀವನದ ಇತರ ಸಣ್ಣ-ಸಣ್ಣ ಸಂಗತಿಗಳು ಹಾಗೂ ಸಣ್ಣ-ಸಣ್ಣ ವಿಚಾರಗಳು ಮಂದಿರದ ಅಂಗಳದಲ್ಲೇ ಬಿದ್ದಿರುತ್ತವೆ. ಮಂದಿರದ ಗರ್ಭಗುಡಿಗೆ ಇವುಗಳಿಗೆ ಪ್ರವೇಶವಿಲ್ಲ. ಯಾರಿಗೆ ಗೊತ್ತು, ಏತಕ್ಕೆ, ಅಕ್ಷಯ ವಿಚಾರ ಒಂದು ಗುಹೆ ಯಲ್ಲೂ ಅಡಗಿರಬಹುದು. ತತ್‌ಕ್ಷಣ ಕಾಣಿಸಲಿಕ್ಕಿಲ್ಲ. ಅನಂತರ ಪ್ರಕಟ ವಾಗಬಹುದು. ಗಾಂಧೀಜೀ ಬಿತ್ತಿದ ಇಂಥ ಒಂದು ಅಕ್ಷಯ ಬೀಜ ಈ ಶಾಂತಿಸೇನೆಯ ವಿಚಾರ.

ಶಾಂತಿಯೊಡನೆ 'ಸೇನೆ' ಶಬ್ದ !

ಗಾಂಧೀಜಿಯೇನೂ ದೊಡ್ಡ ವಿದ್ವಾಂಸರಾಗಿರಲಿಲ್ಲ. ಅವರಿಗೆ ಶಾಸ್ತ್ರ ಗೊತ್ತಿರಲಿಲ್ಲ. ಆದರೆ ಅವರ ಶಬ್ದ ಭಾರತೀಯ ಶಾಸ್ತ್ರಗಳಿಂದ ಹೊರಡು ತ್ತಿತ್ತು. ಬಹು ಸಲ ಸಂತರ ವಾಣಿಯಲ್ಲಿಯೂ ವೇದಕ್ಕೆ ಸಂಬಂಧಿಸಿದ ಶಬ್ದ ಪ್ರಕಟವಾಗುತ್ತದೆ. ಅಂಥದೇ ಇದು 'ಶಾಂತಿ ಸೇನೆ' ಶಬ್ದ. ಬಾಪೂ ನಮಗಿತ್ತ ಐದು-ಹತ್ತು ಶಬ್ದಗಳಲ್ಲಿ ಇದೊಂದು. ಇದು ಸರಿಯಾಗಿ ಧ್ಯಾನ ದಲ್ಲಿಟ್ಟುಕೊಳ್ಳಬೇಕಾದ ಶಬ್ದ. ಶಾಂತಿಯ ಮಾತನ್ನಂತೂ ಇಂದು ಎಲ್ಲರೂ ಆಡುತ್ತಾರೆ. ಆದರೆ ಇದು ಅಸಹಾಯಕವಾಗಿಬಿಟ್ಟಿದೆ. ಅದರಲ್ಲಿ ಸೇನೆಯ ಶಕ್ತಿ ಇಲ್ಲ. ಗಾಂಧೀಜಿಯ ಶಾಂತಿ ಮತ್ತು ಅಹಿಂಸೆ ಹೀಗೆ ಅಸಹಾಯಕ ವಾಗಿರಲಿಲ್ಲ. ಅಂತಲೇ ಅವರು 'ಶಾಂತಿ'ಯೊಡನೆ 'ಸೇನೆ' ಶಬ್ದ ಜೋಡಿಸಿದರು.

ಸೇನಾ ಶಬ್ದ ವೇದದಲ್ಲಿಯೂ ಬರುತ್ತದೆ: **'ಅಸೇನ್ಯಾ ವಃ ಪಣಯೋ ವಚಾಂಸಿ'**—ಎಲೈ ಜಿಪುಣರೇ, ನಿಮ್ಮ ಮಾತು ಅಸೈನ್ಯ ವಾದುದು, ಸೇನಾರಹಿತ. ಎಂದರೆ ನಿಮ್ಮ ವಾಣಿಯಲ್ಲಿ ಶಕ್ತಿಯಿಲ್ಲ, ಅಥವಾ ಮಾತಿನಲ್ಲಿ ಸಂಗತಿಯಿಲ್ಲ. ಸೇನೆ ಶಬ್ದದ ಅರ್ಥ, ಸಾಯಲು ಸಿದ್ಧವಿರುವ ಒಗ್ಗಟ್ಟಿದ್ದ ಜನ, ಅವರಲ್ಲಿ ಸಾಂಗತ್ಯವುಂಟು. ಶಾಂತಿಸೇನೆಗೆ ಎಷ್ಟೇ

ಹಗುರವಾದ ಅರ್ಥ ಮಾಡಿದರೂ ಸಮಯ ಬಂದಾಗ ಹಿಮ್ಮೆಟ್ಟದೆ ಸಾಯುವ ಸೈನಿಕರ ಸೇನೆ ಎಂದಂತೂ ಉಳಿಯುತ್ತದೆ.

ಹಿಂಸೆಯ ಶಕ್ತಿ ಯಾತರಲ್ಲಿದೆ? ಇಂಥ ಸ್ಥಳದಲ್ಲಿ ಅಪಾಯವುಂಟಾಯಿತೆಂದು ತಿಳಿಯಿರಿ. ಹಿಂಸೆಯ ಬಳಿ ಒಂದು ಕಾಲಿನಲ್ಲಿ ನಿಂತುಕೊಳ್ಳುವ ತಂತ್ರವುಂಟು. ಅದರ ಮೂಲಕ ಎರಡು, ನಾಲ್ಕು ಅಥವಾ ಹತ್ತುಸಾವಿರದ ದಳ ಇದ್ದಕ್ಕಿದ್ದಂತೆ ಬರಬಲ್ಲದು. ಈ ದಳ ಒಬ್ಬ ಮನುಷ್ಯನ ಆಜ್ಞೆಯ ಅಧೀನವಾಗಿ ಹಿಂದೆ-ಮುಂದೆ ನೋಡದೆ ಕೆಲಸ ಮಾಡುತ್ತದೆ. ಸೈನ್ಯದ ಬಲ ಇದರಲ್ಲಿದೆ.

ರಾಮನ ಜ್ಞಾನಪೂರ್ವಕ ಕೆಲಸ, ಹನುಮಂತನದು ಶ್ರದ್ಧೆಯದು

ಅಹಿಂಸೆಯಲ್ಲಿ ಅಂಥ ಶಕ್ತಿ ಬಂದೀತೇ ಎಂದು ಕೇಳೀರಿ? ಶಾಂತಿಸೇನೆ ಅಂಥ ಸಂಘಟನೆ ಎದ್ದುನಿಲ್ಲಬಹುದೇ? ಯಾರದಾದರೂ ಆಜ್ಞೆಯಿಂದ ಬಲಿದಾನ ನೀಡುವಷ್ಟು ತತ್ಪರತೆ ಬರಬಹುದೇ? ಈ ರೀತಿ ಬಲಿದಾನ ನೀಡುವವರ ಹೃದಯ ಪ್ರೇಮದಿಂದ ತುಂಬಿರಬಹುದೇ? ಈ ಎಲ್ಲ ಪ್ರಶ್ನೆಗಳೂ ಏಳುತ್ತವೆ. ಈ ಕೆಲಸ ಆಜ್ಞೆಯಿಂದ ಸಾಧ್ಯವೇ? ಸ್ವತಂತ್ರ ಚಿಂತನದಿಂದ ಈ ಕೆಲಸ ಸಾಧ್ಯವಿರುವಷ್ಟು ಆಜ್ಞೆಯಿಂದ ಆಗುವುದಕ್ಕಿಂತ ಲೇಶಮಾತ್ರವೂ ಕಡಿಮೆಯಿಲ್ಲ. ಇದು ನನ್ನ ಉತ್ತರ. ರಾಮಚಂದ್ರ ಜ್ಞಾನಪೂರ್ವಕವಾಗಿ ಮಾಡುವ ಕೆಲಸವನ್ನು, ಅದೇ ಮತ್ತು ಅಷ್ಟೇ ಪ್ರಾಣವಂತನಾದ ಕೆಲಸವನ್ನು ಹನುಮಂತ ಶ್ರದ್ಧೆಯಿಂದ ಮಾಡಬಲ್ಲ. ಬಾಪೂ 'ಶಾಂತಿ'ಯ ಸಂಗಡ 'ಸೇನೆ' ಶಬ್ದ ಜೋಡಿಸಿದಾಗ ಅದರಲ್ಲಿ ಸಂಘಟನೆ, ಅನುಶಾಸನ ಮತ್ತು ಸೇನಾಪತಿಯ ಆದೇಶಕ್ಕನುಸಾರವಾಗಿ ಕೆಲಸ ಮಾಡುವ ಮಾತು ಬಂದೇ ಬರುತ್ತದೆ.

ಈ ವಿಷಯವಾಗಿ ಗಾಂಧೀಜಿಯೊಡನೆ ನಾನು ನಡೆಸಿದ ಮಾತುಕತೆಯನ್ನು ಸಂಕ್ಷೇಪವಾಗಿ ಇಲ್ಲಿ ತಿಳಿಸುವುದು ಸೂಕ್ತ. 1942ರ ಆಂದೋಲನಕ್ಕೂ ಹಿಂದಿನ ಮಾತು. ಆ ಬಾರಿ ಸೆರೆಮನೆಗೆ ಹೋದೊಡನೆ ಕಾಲಿಡುತ್ತಲೇ, ಉಪವಾಸ ಪ್ರಾರಂಭಿಸುವ ವಿಚಾರ ಗಾಂಧೀಜಿಗಿತ್ತು. ಜೈಲಿನಲ್ಲಿ ಬಿದ್ದಿರುವ ಮಾತು ಹಳೆಯದಾಗಿ ಹೋಯಿತು. ಇಂಗ್ಲೀಷರ ರಾಜ್ಯವನ್ನು ನಾವಿನ್ನು ಮನ್ನಿಸುವುದಿಲ್ಲ. ಇಲ್ಲಿಂದ ಹೊರಟುಹೋಗಿರೆಂದು ಅವರಿಗೆ ಹೇಳಿದ್ದೇವೆ.

*

ಜೇಲಿಗೆ ಹೋಗುವುದರೊಂದಿಗೆ ಉಪವಾಸ ಮಾಡಬೇಕು. ಈ ಎಲ್ಲ ಮಂಥನ ಅವರ ಮನದಲ್ಲಿ ಸಾಗಿತ್ತು.

ಇದನ್ನು ಯಾರು ಮಾಡಬಲ್ಲರು? ಹೃದಯದಲ್ಲಿ ಪ್ರೇಮ ತುಂಬಿರುವವರೇ ಬಲಿದಾನ ನೀಡಬಲ್ಲರು. ಯಾರಾದರೂ ಒಬ್ಬ ವ್ಯಕ್ತಿ ಮಾಡಬಲ್ಲನಾದರೆ ಅದರ ಆಂದೋಲನವೇ ನಡೆಸಬಹುದೇ? ಪ್ರೇಮಪೂರ್ವಕ ಉಪವಾಸ ಮಾಡಿ ಸಾವಿನೊಂದಿಗೆ ಸರಸವಾಡುವ ಜನ-ಆಂದೋಲನ ಶಕ್ಯವೇ? ಸೇನೆಯಲ್ಲಿ ಲಕ್ಷಾಂತರ ಮಂದಿ ಭರ್ತಿಯಾಗಬಹುದಾದರೆ ಇದರಲ್ಲಿಯೂ ಹಾಗಾಗಬಹುದೇ? ಅದು ಸಾಧ್ಯವೆಂದು ಗಾಂಧೀಜಿಗನಿಸಿತು ಮತ್ತು ಇದರ ಆರಂಭ ತಮ್ಮಿಂದಲೇ ಎಂದು. ಉಪವಾಸದ ಆರಂಭ ಗಾಂಧೀಜಿಯಿಂದಲೇ ಎಂದು ತಿಳಿದೊಡನೆ ಎಲ್ಲರೂ ಗಾಬರಿಗೊಂಡರು. ಏನಾದರೂ ಉಪಾಯದಿಂದ ಇದನ್ನು ತಡೆಯಬೇಕೆಂದು ಯೋಚಿಸಿದರು. ಕನಿಷ್ಠ ಬಾಪೂ ಆದರೂ ಉಪವಾಸ ಮಾಡದಿರಲೆಂದು. ಆದರೆ ಉಪವಾಸದ ಸರಪಳಿ ಮುಂದೆ ಸಾಗದು. ಅಥವಾ ಉಪವಾಸಕ್ಕಾಗಿ ಸೇನೆ ಸಜ್ಜಾಗದು, ಆದೇಶದಿಂದ ಇಂಥ ಕೆಲಸ ನಡೆಯದು—ಬಾಪೂ ಹತ್ತಿರದವರಲ್ಲಿ ಈ ಬಗೆಯ ವಿಚಾರವಿತ್ತು.

ಇಂಥ ಸ್ಥಿತಿಯಲ್ಲಿ ಬಾಪೂ ನನ್ನನ್ನು ಕರೆದು ನನ್ನೊಡನೆ ಈ ಮಾತನ್ನಿಟ್ಟರು: "ನಾನು ಹೀಗೆ ಮಾಡಬೇಕಾಗಿದೆ." "ಜ್ಞಾನಿಯಾದವನು ಜ್ಞಾನಪೂರ್ವಕವಾಗಿ ಮಾಡುವುದನ್ನು ಅನುಯಾಯಿ ಶ್ರದ್ಧೆಯಿಂದ ಮಾಡಬಲ್ಲನೇ?" ಎಂಬುದು ಪ್ರಶ್ನೆಯಾಗಿತ್ತು. ನಾನು ಉತ್ತರ ಕೊಟ್ಟೆ: 'ಹೌದು, ಮಾಡಬಲ್ಲ. ರಾಮಚಂದ್ರ ಜ್ಞಾನಪೂರ್ವಕವಾಗಿ ಮಾಡುತ್ತಿದ್ದ ಕೆಲಸವನ್ನೇ ಹನುಮಂತ ಶ್ರದ್ಧೆಯ ಮೂಲಕ ಮಾಡಬಲ್ಲವನಾಗಿದ್ದ' ಎಂಬ ದೃಷ್ಟಾಂತವನ್ನು ನಾನು ಕೊಟ್ಟೆ. ಮಾತು ಮುಗಿದುಹೋಯಿತು. ವಿಚಾರ ಮಾಡಲು ಏನೂ ಉಳಿಯಲೇ ಇಲ್ಲ. ನಾನೆದ್ದು ಹೊರಟುಹೋದೆ. ಬಾಪೂ ಸಂಗಡ ನಡೆದದ್ದು ನನ್ನದು ಇಷ್ಟೇ ಮಾತು. ನಾನೇನೂ ವಚನಬದ್ಧನಾಗಿರಲಿಲ್ಲ. ಬಾಪೂ ಹಾಗೆ ಮಾಡಿದರೆ ನಾನೇನು ಮಾಡಬೇಕೆಂದು ಕೊಂಡಿರಲಿಲ್ಲ.

ಮತ್ತೆ ಆಗಸ್ಟ್ ಒಂಬತ್ತರ ದಿನ ಬಂತು, ಬಾಪೂ ಬಂಧಿತರಾದರು,

ಆದರೆ ಅವರ ಮನಸ್ಸಿನಲ್ಲಿ ಇನ್ನೂ ಉಪವಾಸಮಾಡುವುದು ಬೇಡ, ಸಮಯ ಪಕ್ವವಾಗಲಿ, ಆಗ ಮಾಡೋಣ ಎಂಬ ವಿಚಾರವಿತ್ತು. ಪ್ರಾರಂಭದಲ್ಲಂತೂ ಸರಕಾರದೊಡನೆ ಪತ್ರವ್ಯವಹಾರ ನಡೆದೀತು—ಮೇಲೆ ಉಲ್ಲೇಖಿಸಿದಂತೆ ಈ ಬಾರಿ ಜೈಲಿಗೆ ಹೋದೊಡನೆ ಉಪವಾಸಕ್ಕೆ ಇಳಿಯಬೇಕೆಂದು ನಿಶ್ಚಿತ ವಾಗಿತ್ತು.

ಬಾಪೂ ತಿಳಿದೇ ಬಿಟ್ಟಿದ್ದರು....

ಆಗ ಪ್ಯಾರೇಲಾಲರು ಹೊರಗಿದ್ದರು. ಜೈಲಿಗೆ ಹೋದೊಡನೆ ಉಪವಾಸ ಪ್ರಾರಂಭಿಸತಕ್ಕದ್ದಲ್ಲ ಎಂದು ವಿನೋಬಾಗೆ ಸುದ್ದಿ ಮುಟ್ಟಿಸು ಎಂದು ಬಾಪೂ ಅವರಿಗೆ ಹೇಳಿದ್ದರು. ಈ ಮನುಷ್ಯ ನನ್ನೊಡನೆ ಇಷ್ಟೊಂದು ಚರ್ಚೆ ಮಾಡಿ ಕೊಂಡು ಹೋಗಿದ್ದಾನೆ, ಜೈಲಿಗೆ ಹೋಗುತ್ತಲೇ ಉಪವಾಸ ಶುರುಮಾಡಿ ಬಿಡುತ್ತಾನೆ ಎಂದು ಅವರು ತಿಳಿದೇಬಿಟ್ಟಿದ್ದರು. ಅವರೇನೂ ನನಗೆ ಆಜ್ಞೆ ಕೊಟ್ಟಿರಲಿಲ್ಲ. ಹೀಗೆ ಮಾಡಬಹುದೇ ಎಂದು ನನ್ನ ಸಲಹೆ ಕೇಳಿದ್ದರು. "ಆಗಬಹುದು" ಎಂದು ನಾನು ಹೇಳಿದ್ದೆ. ಆಜ್ಞೆಗಿಂತ ಹೆಚ್ಚು ಬೆಲೆಯುಳ್ಳ ವಸ್ತು ನನಗೆ ಸಿಕ್ಕಿತ್ತು. ಇದು ಯಾವುದೇ ಆದೇಶದಿಂದ ನನಗೆ ಸಿಕ್ಕಿರಲಿಲ್ಲ.

ಆ ದಿನಗಳಲ್ಲೇ ನಾನು ಜೈಲಿಗೆ ಹೋದೆ. ಜೈಲಿಗೆ ಹೋಗುತ್ತಲೇ ಜೈಲರಿಗೆ ಹೇಳಿದೆ: 'ನೀವು ನನ್ನನ್ನು ಬಲ್ಲಿರಿ. ಸೆರೆಮನೆಯ ಎಲ್ಲ ನಿಯಮ ಗಳನ್ನೂ ಸೂಕ್ಷ್ಮವಾಗಿ ಪಾಲಿಸುವವನು ನಾನು. ಬೇರೆಯವರೂ ಪಾಲಿಸು ವಂತೆ ಮಾಡುವವನು. ಆದರೆ ಈ ಬಾರಿ ಹಾಗಾಗುವುದಿಲ್ಲ. ಮುಂಜಾನೆ ನಾನು ಊಟ ಮಾಡಿ ಬಂದಿದ್ದೇನೆ, ಮಧ್ಯಾಹ್ನ ಊಟದ ಪ್ರಶ್ನೆಯಿಲ್ಲ. ಸಂಜೆಯಿಂದ ನಾನು ಊಟ ಮಾಡುವುದಿಲ್ಲ. ಎಲ್ಲಿಯತನಕ ಮಾಡುವುದಿಲ್ಲ ಎಂಬುದು ನನಗೆ ಗೊತ್ತಿಲ್ಲ. ನಿಮ್ಮ ಶಿಸ್ತನ್ನು ಮುರಿಯುವುದಕ್ಕಾಗಿ ಅಲ್ಲ. ನನ್ನದೊಂದು ಶಿಸ್ತಿದೆ ಅದನ್ನು ಪಾಲಿಸುವುದಕ್ಕಾಗಿ. ಇಷ್ಟು ಹೇಳಿ ನಾನು ಒಳಗೆ ಹೋಗಿಬಿಟ್ಟೆ. ಎರಡು ಗಂಟೆಗಳ ಬಳಿಕ ಕರೆ ಬಂತು. ಬಾಪೂ ಹೇಳಿಕಳಿಸಿದ್ದ ಸಂದೇಶವನ್ನು ಪ್ಯಾರೇಲಾಲಜೀ ಕಿಶೋರಲಾಲ ಭಾಯೀ ಯವರ ಬಳಿ ಕಳಿಸಿದ್ದರು—ಆಗ ಕಿಶೋರಲಾಲ ಭಾಯೀ ವರ್ಧಾದಲ್ಲಿದ್ದರು. ಕಿಶೋರಲಾಲ ಭಾಯಿ ಡೆಪ್ಯುಟಿ ಕಮಿಷನರನ್ನು ಕೇಳಿದರು—ಮತ್ತು ಅವರು

ಗವರ್ನರರನ್ನು ಕೇಳಿದರು—"ಇಂಥ ಸಂದೇಶ ಕಳುಹಿಸಬಹುದೇ?" ಗವರ್ನರ್ ಹೇಳಿದರು: "ಕೊಡಬಹುದು, ಶರತ್ತು ಇಷ್ಟೇ, ಒಂದು ಶಬ್ದವನ್ನು ಅದಕ್ಕಿಂತ ಹೆಚ್ಚಾಗಿ ಹೇಳತಕ್ಕದ್ದಲ್ಲ, ಭೇಟಿಯಿಲ್ಲ, ಉಪವಾಸ ಮಾಡದಿರಲು ಬಾಪೂ ಆದೇಶವಿದೆ ಎಂದಷ್ಟೇ ಹೇಳಿಬಿಡತಕ್ಕದ್ದು."

ಡೆಪ್ಯುಟಿ ಕಮೀಷನರ್ ಹೇಳಿದರು: "ಸರಿ, ನಿಮ್ಮ ಸಂದೇಶವನ್ನು ಅವರಿಗೆ ತಲುಪಿಸಲಾಗುವುದು."

ಕಿಶೋರ್ ಭಾಯೀ ಹೇಳಿದರು: "ನೀವು ಹೇಳಿದರೆ ಅದನ್ನು ನಿಜ ಎಂದು ನಂಬಲಾರರು. ನಮ್ಮಲ್ಲಿಯೇ ಒಬ್ಬರು ಹೋಗಬೇಕಾದೀತು."

ಅನಂತರ ವಾಲುಂಜ್‌ಕರ್ ಬಂದರು. ಬಾಪೂ ಸಂದೇಶ ತಿಳಿಸಿದರು. ಹೀಗೆ ನನ್ನ ಉಪವಾಸ ನಡೆಯಲಿಲ್ಲ. ಅನಂತರ ಬಾಪೂ ಉಪವಾಸ ಪ್ರಾರಂಭಿಸಿದಾಗ ನಾನೂ ಪ್ರಾರಂಭಿಸಿದೆ. ಇದೂ ನನ್ನ ಹೃದಯದ ಅನುಭೂತಿಯನ್ನು ವ್ಯಕ್ತಪಡಿಸಬಯಸುತ್ತೇನೆ. ಬಾಪೂ ಎಷ್ಟು ಆನಂದದಿಂದ ಉಪವಾಸ ನಡೆಸಬಯಸಿದರೋ ಅದಕ್ಕಿಂತ ಲೇಶಮಾತ್ರ ಕಡಿಮೆ ಆನಂದವೂ ನನ್ನ ಉಪವಾಸದಲ್ಲಿರಲಿಲ್ಲ ಎಂದು ನಾ ಹೇಳಬಲ್ಲೆ.

ಜ್ಞಾನವಂತೂ ನನಗಿರಲಿಲ್ಲ, ಅದು ಗಾಂಧೀಜಿಯ ಬಳಿ ಇತ್ತು. ನಾನಾದರೋ ಶ್ರದ್ಧೆಯಿಂದ ನಂಬಿದ್ದೆ. ಇದನ್ನು ಆದೇಶವೆಂದೇ ನಾನು ತಿಳಿದಿದ್ದೆ. ಶ್ರದ್ಧೆಯಿಂದ ಆಜ್ಞೆಯೆಂದು ತಿಳಿದು ಅತ್ಯಂತ ಆದರಪೂರ್ವಕವಾಗಿ ಮತ್ತು ಪ್ರೇಮಪೂರ್ವಕವಾಗಿ ನಮ್ಮ ಬಲಿದಾನ ಮಾಡಬಹುದು, ಇದರಲ್ಲಿ ನನಗೆ ಯಾವ ಶಂಕೆಯೂ ಇಲ್ಲ. ಈ ಘಟನೆಯಿಂದ ನಾನಿದನ್ನು ಹೇಳಬಲ್ಲೆ. ಆಜ್ಞೆಯಿಂದ ಈ ಕೆಲಸವಾಗುತ್ತದೆ, ಸಂದೇಹವಿಲ್ಲ. ಅಹಿಂಸೆಯೂ ಆ ಶಕ್ತಿಯನ್ನು ತೋರಿಸಬೇಕಾದೀತು. ಆಗಲೇ ಸೇನೆ ಎದ್ದುನಿಲ್ಲಬಲ್ಲದು. ಶಾಂತಿ ಸೇನೆಯ ಕಲ್ಪನೆಯನ್ನು ನೀಡಿ ಗಾಂಧೀಜಿ ಅಹಿಂಸಾ ಸೇನೆಯನ್ನು ಸಿದ್ಧಪಡಿಸುವ ಮಾತಾಡಿದ್ದಾರೆ. ಅವರಿಗಾದರೋ ಅಹಿಂಸೆಯ ಪೂರ್ಣ ಶಕ್ತಿಯನ್ನು ಪ್ರಕಟಿಸಬೇಕಾಗಿತ್ತು.

ಗಾಂಧೀಜಿಯ ಅಹಿಂಸೆ ಏಕಾಂಗೀ ಆಗಿರಲಿಲ್ಲ

ಗಾಂಧೀಜೀ ಅಹಿಂಸೆಯನ್ನು ಅನ್ನ ನೀರಿನವರೆಗೆ ಮಾತ್ರ ಸೀಮಿತ

ವಾಗಿಡಲಿಲ್ಲ. ಮುಲಾಮು ಪಟ್ಟಿ ಹಚ್ಚುವ ಅಥವಾ ರೋಗಿಗಳ ಸೇವೆ ಮಾಡುವ ಅಥವಾ ಅಲ್ಪ-ಸ್ವಲ್ಪ ಸಹಾಯ ಸಲ್ಲಿಸುವವರೆಗೆ ಮಾತ್ರ ಮರ್ಯಾದಿತಗೊಳಿಸಲಿಲ್ಲ. ಅವರು ಅಹಿಂಸೆಯಲ್ಲಿ ವೀರತೆ ತುಂಬಿದರು. ಎದುರಿಗೆ ದಾಳಿ ನಡೆಯುತ್ತಿದ್ದರೂ ಅಲ್ಲಿಗೆ ಓಡಿಹೋಗಿ ಕೈಯಲ್ಲಿ ಯಾವ ಆಯುಧವಿಲ್ಲದೆ ಎದುರಿಸುವ ಶಕ್ತಿ ಅವರ ಅಹಿಂಸೆಯಿಂದ ಹುಟ್ಟಿತು. ಪ್ರೇಮ ಹಾಗೂ ನಿರ್ಭಯದಿಂದ ಕೆಲಸ ಮಾಡಿಯೇವು, ಸಾಯಬೇಕಾಗಿ ಬಂದರೆ ಸತ್ತೇವು ಎನ್ನುವಂತಾಯಿತು. ನಮಗೆ ಇಂಥ ಪಾಠ ಕಲಿಸಿದರು ಗಾಂಧೀಜೀ. ಎಲ್ಲಕ್ಕಿಂತ ದೊಡ್ಡ ಮಾತೆಂದರೆ ಇಂದಿನ ವಾತಾವರಣದಲ್ಲಿ ಹಿಂಸೆ ಹಬ್ಬಿ ಹೋಗಿದೆ. ಹಿಂಸೆಯಿಂದ ಏನಾದರೂ ಸಾಧಿಸಬಹುದೆಂದು ಜನರಲ್ಲಿ ನಂಬಿಕೆ ಕುಳಿತುಬಿಟ್ಟಿದೆ. ಹಿಂಸೆಯಿಂದ ಸ್ವಲ್ಪ ಕೆಲಸವಾಗುತ್ತದೆ. ಅದು ಹಿಂದೆಯೂ ಆಗುತ್ತಿತ್ತು, ಈಗಲೂ ಆಗುತ್ತದೆ. ಆದರೆ ಇದೆಲ್ಲಾ ನಿಕೃಷ್ಟ ಕೆಲಸ. ಹಾಗಾದರೂ ಸಹ ಒಟ್ಟಿನಲ್ಲಿ ದೇಶಕ್ಕೆ ಹಾನಿಯೇ ಆಗುತ್ತದೆ. ಇದೆಲ್ಲಾ ಅಹಿಂಸೆಯ ವಿಚಾರಸರಣಿಯಲ್ಲಿ ಬರುತ್ತದೆ. ಇಂದು ಅಹಿಂಸೆಯ ಈ ವಿಚಾರ ಸರಣಿಯನ್ನು ಬಹು ತೀವ್ರವಾಗಿ ಖಂಡಿಸುತ್ತಾರೆ. ಮಾತಿನಲ್ಲಾದರೋ ಎಲ್ಲರೂ ಅಹಿಂಸೆಯನ್ನಂಗೀಕರಿಸುತ್ತಾರೆ. ವಾಸ್ತವವಾಗಿ ನೋಡಿದರೆ ಭಾರತದ ಮಾನಸಿಕ ಸ್ಥಿತಿ ಇಂದು ಡೋಲಾಯಮಾನ. ಗಾಂಧೀಜೀ ಹುಟ್ಟಿಸಿದ ಶ್ರದ್ಧೆ ಇಂದು ಎರಡೂ ರೀತಿ ಮುರಿದು ಬೀಳುತ್ತಿದೆ. ಕೆಲವರು ಈ ಶ್ರದ್ಧೆಯನ್ನು ಏಕಾಂಗೀ ಎಂದು ತಿಳಿದು ಬಿಟ್ಟುಬಿಡುತ್ತಿದಾರೆ. ಮತ್ತೆ ಕೆಲವರು ಈ ಶ್ರದ್ಧೆಗೆ ತಮಗೆ ಅನುಕೂಲವಾದ ವ್ಯಾವಹಾರಿಕ ಅರ್ಥ ಕೊಡು ತ್ತಿದ್ದಾರೆ. ನಾವೂ ಗಾಂಧೀ ವಿಚಾರವನ್ನು ವ್ಯವಹಾರಾನುಕೂಲವಾಗಿ ಅನುಸರಿಸುತ್ತಿದ್ದೇವೆ ಎಂದು ತಿಳಿಯುತ್ತಿದ್ದಾರೆ.

ಆರ್ಯನಾಯಕಂಜೀ ಬೈಬಲ್ ಪ್ರಚಾರದ ಸಂಗತಿಯನ್ನು ನನಗೆ ತಿಳಿಸಿದರು. ಪ್ರತಿಯೊಬ್ಬ ಈಸಾಯಿ ಸೈನಿಕನ ಬಳಿಯೂ ಬೈಬಲ್ಲಿರುತ್ತದೆ. ಇದೂ ಬರೀ ಢೊಂಗೀ ಎಂದು ಹೇಗೆ ಹೇಳಬಲ್ಲಿರಿ? ಯುದ್ಧ ದೇಶದ ಕರೆ, ದೇಶದ ಅಗತ್ಯ ಎಂದಂತೂ ತಿಳಿಯುತ್ತೇವೆ. ಆದುದರಿಂದ ಕರುಣಾವಂತ ಮನುಷ್ಯರೂ ಅದರಲ್ಲಿ ಭರ್ತಿಯಾಗುತ್ತಾರೆ. ಜೊತೆಗೇ ಬೈಬಲ್ಲನ್ನೂ ಓದು ತ್ತಿರುತ್ತಾರೆ. ಸೈನ್ಯಕ್ಕೆ ಸೇರುವುದು ನಮ್ಮ ಕರ್ತವ್ಯ ಎಂದು ತಿಳಿಯುತ್ತಾರೆ.

ಅವರು ಮನಸ್ಸನ್ನು ಕಟ್ಟಿಟ್ಟುಬಿಟ್ಟಿರುತ್ತಾರೆ. ಗಾಂಧೀಜೀ ನಮಗೆ ಇತ್ತ ಅಹಿಂಸೆಯ ವಿಚಾರದ ಗತಿಯೂ ಹೀಗೇ ಆಗಿಬಿಡುತ್ತಿದೆ. ಕೆಲವರಂತೂ ಮೊದಲಿನಿಂದಲೂ ಇದನ್ನು ಏಕಾಂಗೀ ಎಂದು ತಿಳಿದಿದ್ದರು, ಇಂದೂ ಹಾಗೇ ತಿಳಿಯುತ್ತಾರೆ, ಹಾಗೆ ಹೇಳಿ ಬಿಟ್ಟುಬಿಡುತ್ತಾರೆ. ಇನ್ನೊಂದು ಕಡೆ, ಕೆಲವರು ಅದನ್ನು ಮೊದಲೂ ಒಳ್ಳೆಯದು ಎಂದು ತಿಳಿದಿದ್ದರು, ಈಗಲೂ ಒಳ್ಳೆಯದು ಎಂದು ತಿಳಿಯುತ್ತಾರೆ, ಆದರೆ ವ್ಯವಹಾರದಲ್ಲಿ ಜಾರಿಗೆ ತರುವಾಗ ಒಂದು ಹದ್ದಿನವರೆಗೆ ಬಿಡಲೇಬೇಕಾಗುತ್ತದೆ ಎಂದು ತಿಳಿದು ಬಿಟ್ಟುಬಿಡುತ್ತಾರೆ.

ಗಾಂಧೀ ವಿಚಾರದ ಉಪ್ಪು ತಿನ್ನುವವರ ಕರ್ತವ್ಯ

ಈ ರೀತಿ ಅಹಿಂಸೆಯ ವಿಕಾಸ ಎಂದೂ ಆಗಲಾರದು. ಒಂದು ಕಡೆ ಸಾಧನ-ಶುದ್ಧಿ ಮತ್ತು ಸಾಧ್ಯ-ಸಾಧನಗಳ ಏಕತೆ, ಇತ್ಯಾದಿ ತತ್ವಜ್ಞಾನ ಗಾಂಧೀಜಿಯ ಹೆಸರಿನಲ್ಲಿ ಸಾಗುತ್ತದೆ. ಇನ್ನೊಂದು ಕಡೆ ವ್ಯವಹಾರದಲ್ಲಿ ಒರೆಗಲ್ಲು ಪರೀಕ್ಷೆಯ ಸಮಯ ಬಂದಾಗ ನಾವು ತೆಪ್ಪಗೆ ಕುಳಿತು ಎಲ್ಲ ವ್ಯವಸ್ಥೆಯನ್ನೂ ಪೋಲೀಸ್ ಮತ್ತು ಸೇನೆಗೆ ಬಿಡುತ್ತೇವೆ. ಇದೆಂಥ ಮಾತು? ಜನ ಕಲ್ಲು ಬೀರುತ್ತಾರೆ, ಗೋಳೀಬಾರ್ ಆಗುತ್ತದೆ. ಅಹಮದಾಬಾದಿನಲ್ಲಿ ದಂಗೆ ನಡೆಯುತ್ತಿದ್ದರೆ ನಾವು ಮನೆಯಲ್ಲಿ ಕೈಕಟ್ಟಿ ಕುಳಿತಿರುತ್ತೇವೆ, ಆದರೂ ನಮ್ಮನ್ನು ಗಾಂಧೀವಾದೀ ಎಂದುಕೊಳ್ಳುತ್ತೇವೆ. ಅಲ್ಲಿ ಯಾರಾದರೂ ಒಬ್ಬ ವ್ಯಕ್ತಿ ನಡುವೆ ನುಗ್ಗಿ ಇದೇನು ಮಾಡುತ್ತಿರುವುದು ಎಂದು ಕೇಳಬಾರದೆ? ಜನ ಹೇಳುತ್ತಾರೆ, ಅಹಮದಾಬಾದಿನಲ್ಲಿ ಅಂಥ ಜನ ಬಂದರು, ಖಾದೀ ಭಂಡಾರ ಸುಡತೊಡಗಿದರು ಎಂದು. ಆದರೆ ಯಾರಾದರೂ ಒಬ್ಬ ಮನುಷ್ಯ ಯಾಕೆ ಎದ್ದು ನಿಲ್ಲಲಿಲ್ಲ? ಅಣ್ಣಾ, ನೀನು ಖಾದಿ ಸುಡುವ ಮುನ್ನ ನನ್ನನ್ನು ಸುಡು ಎಂದೇಕೆ ಕೇಳಲಿಲ್ಲ? ಇದು ನನಗೆ ಅರ್ಥವಾಗುತ್ತಿಲ್ಲ. ಏನು ನಾವು ಎಲ್ಲ ಜವಾಬ್ದಾರಿಯನ್ನೂ ಮೊದಲು ಪ್ರಭುತ್ವಕ್ಕೆ, ಸರ್ಕಾರಕ್ಕೆ ಅರ್ಥಾತ್ ಪೋಲೀಸರಿಗೂ, ಸೇನೆಗೂ ಒಪ್ಪಿಸಿ ನಾವು ಮನೆಯಲ್ಲೇ ಕುಳಿತುಕೊಳ್ಳಬೇಕೇನು? ಈ ರೀತಿ ಅಹಿಂಸೆ ಉಳಿದೀತೇ? ವಾಸ್ತವಿಕವಾಗಿ ಗಾಂಧೀಜಿಯ ಖಾದೀ ಗ್ರಾಮೋದ್ಯೋಗ, ಹರಿಜನ ಸೇವೆ, ಇತ್ಯಾದಿ ಕೆಲಸಗಳ ಹಿಂದೆ ಒಂದು ವಿಚಾರವಿದೆ. ಖಾದೀ ಬಟ್ಟೆಯಲ್ಲ, ಒಂದು ವಿಚಾರ. ಅದರ

ಹಿಂದಿರುವುದು ಅಹಿಂಸೆಯ ವಿಚಾರ. ಗಾಂಧೀ ವಿಚಾರದ ಉಪ್ಪುಂಡವರು ಶಾಂತಿಯ ಕೆಲಸ ಎತ್ತಿಕೊಳ್ಳದೆ ಹೇಗೆ ಉಳಿದಾರು? ಶಾಂತಿಸ್ಥಾಪನೆಯ ಹೊಣೆ ಹೊರದವರು ಗಾಂಧೀ ವಿಚಾರದ ಉಪ್ಪು ತಿಂದಿಲ್ಲ ಅಥವಾ ಗಾಂಧೀ ವಿಚಾರಕ್ಕೆ ಉಪ್ಪುಂಡು ಎರಡು ಬಗೆದಿದ್ದಾರೆ.

ಶಾಂತಿ ಸೇನೆಯ ಕಲ್ಪನೆಯ ಹಿಂಬದಿಯ ವಿಶಾಲ ದರ್ಶನ

ಅಹಿಂಸೆ ವೀರರದಾಗಬೇಕು ಎಂದು ಗಾಂಧೀಜೀ ಹೇಳುತ್ತಿದ್ದರು. ಸ್ವರಾಜ್ಯ ಪ್ರಾಪ್ತಿಯ ಸಮಯದಲ್ಲಿ ಕುರುಡು ಅಹಿಂಸೆಯ ನಡವಳಿಕೆಯೇ ಎಲ್ಲೆಡೆ ನಡೆಯುತ್ತಿದ್ದಾಗ ಎಲ್ಲರೂ ಶಸ್ತ್ರವಿಲ್ಲದೆ ಏನೂ ಮಾಡಲಾಗದು ಎಂದು ಹಲುಬುತ್ತಿದ್ದಾಗ ನನ್ನ ಕಣ್ಣಿಗೆ ಭಗವಂತ ಪಟ್ಟಿ ಕಟ್ಟಿ ಸ್ವರಾಜ್ಯ ತರುವ ಕೆಲಸ ಒಪ್ಪಿಸಿದ್ದಾನೆ ಎಂದು ಗಾಂಧೀಜೀ ಹೇಳಿಬಿಟ್ಟಿದ್ದರು. ಅಹಿಂಸೆ ವೀರರದೇ ಆಗಬೇಕು, ನಮ್ಮ ಅಹಿಂಸೆ ನಿರ್ಬಲರದು, ಆದಕಾರಣ ಶಕ್ತಿಹೀನ ಎಂದು ಸಿದ್ಧವಾಗಿದೆ ಎಂಬುದಾಗಿ ಗಾಂಧೀಜೀ ಹೇಳಬೇಕಾಗಿ ಬಂತು.

ಅವರ ಅನುಯಾಯಿಗಳೆಂದುಕೊಳ್ಳುವ ನಾವು ವ್ಯವಹಾರದಲ್ಲಿ ವೀರರ ಅಹಿಂಸೆಯನ್ನು ಆಚರಿಸಿ ತೋರಿಸಬೇಕು. ಇಂದು ಆಹಿಂಸೆ ಮತ್ತು ಕರುಣೆ ದಾಸಿಯಾಗಿಬಿಟ್ಟಿವೆ. ಹೆಚ್ಚೆಂದರೆ ರೆಡ್ ಕ್ರಾಸ್‌ನ ಕೆಲಸ ಮಾಡುತ್ತವೆ. ಹಿಂಸೆಯದೇ ರಾಜ್ಯ ನಡೆಯುತ್ತದೆ. ಗಾಂಧೀಜಿಗೆ ಇದು ಮಾನ್ಯವಿರಲಿಲ್ಲ. ಅವರಿಗಾದರೋ ಎಲ್ಲೆಡೆ ಅಹಿಂಸೆ ಮತ್ತು ಕರುಣೆಯ ರಾಜ್ಯ ಹಬ್ಬಿಸ ಬೇಕಾಗಿತ್ತು. ನಮ್ಮ ಕರುಣೆ ಮತ್ತು ಅಹಿಂಸೆ ಇಡೀ ಜಗತ್ತನ್ನು ಕಾರುಣ್ಯಮಯ ಹಾಗೂ ಅಹಿಂಸಕಗೊಳಿಸುವ ಧೈರ್ಯ ಮಾಡಬೇಕು. ನಮ್ಮ ಕಾರುಣ್ಯದಿಂದ ಅಣು, ಜಲಜನಕದ ಬಾಂಬುಗಳನ್ನು ಕೊನೆಗೊಳಿಸ ಬೇಕು. ಇಂಥ ಧೈರ್ಯ ನೀಡುವ ಕರುಣೆ ಬೇಕು. ಕರುಣೆಯ, ಅಹಿಂಸೆಯ ಇಂಥ ಶಕ್ತಿ ನಾವು ಹುಟ್ಟಿಸಬೇಕು. ಅದಕ್ಕಾಗಿಯೇ ಶಾಂತಿ ಸೇನೆಯ ಯೋಜನೆ. ಅದರ ಕಲ್ಪನೆಯ ಹಿಂದೆ ಇಂಥದೊಂದು ವಿಶಾಲ ದರ್ಶನ.

ಸೇನಾ-ಮುಕ್ತಿಯ ಮೊದಲ ಮೆಟ್ಟಿಲು

ಗಾಂಧೀಜೀ ಸೇನಾ ಮುಕ್ತಿಯ ಮಾತಾಡಿದ್ದರು. ಅವರ ನೇತೃತ್ವದಲ್ಲಿ

ನಾವು ಸ್ವರಾಜ್ಯ ಬೇಡುತ್ತಿದ್ದೆವು. ನಾವು ಸೇನೆಯ ಖರ್ಚನ್ನು ಅರ್ಧಕ್ಕೆ ಇಳಿಸುತ್ತೇವೆ ಎಂಬುದೂ ಅದರಲ್ಲಿ ಒಂದು ಮಾತು. ದೇಶವನ್ನು ಗುಲಾಮಗಿರಿಯಲ್ಲಿಡಲು ಬ್ರಿಟಿಷರಿಗೆ ದೊಡ್ಡ ಸೇನೆ ಬೇಕಾಗುತ್ತದೆ. ಆದರೆ ದೇಶ ಸ್ವತಂತ್ರವಾದರೆ ಕಡಿಮೆ ಸೇನೆ ಇಡುತ್ತೇವೆ. ಬ್ರಿಟಿಷರ ರಕ್ಷಣಾ ವೆಚ್ಚದ ಅಡಿಯಲ್ಲಿ ದೇಶ ಬೀಸಿಹೋಗುತ್ತಿದೆ. ಇದರಿಂದ ನಾವು ದೇಶವನ್ನುಳಿಸುತ್ತೇವೆ. ಕಾಂಗ್ರೆಸ್ ಇಂಥ ಭಾಷೆಯನ್ನಾಡುತ್ತಿತ್ತು. ಈಗ ಅದು ಯಾವ ಭಾಷೆಯನ್ನಾಡುತ್ತದೆ? ಸ್ವರಾಜ್ಯದಲ್ಲಿ ಸೇನೆಯ ಬಜೆಟ್ಟೆಷ್ಟು? ಅರ್ಧವಾಯಿತೋ, ಹೆಚ್ಚಿತೋ?

ಇಂದು ಇಷ್ಟೆಲ್ಲಾ ಯೋಚಿಸುವ ಧೈರ್ಯವನ್ನೇ ನಾವು ಮಾಡುವುದಿಲ್ಲ, ಮಾನಸಿಕವಾಗಿ ನಾವು ಸ್ವತಂತ್ರರೇ ಆಗಿಲ್ಲ. ಭಯವೂ ಸ್ವಲ್ಪ ಕಾರಣ. ಭಾರತದಲ್ಲಿ ಒಳಗೊಳಗೆ ಎಂಥ ಪ್ರೇಮ ಬೇಕೋ ಅಂಥ ಪ್ರೇಮವಿಲ್ಲ. ಹಿಂದೂಸ್ಥಾನ ಏಕರಸವಾದರೆ, ಎಲ್ಲರಲ್ಲಿ ಐಕ್ಯವುಂಟಾದರೆ ದೇಶದ ಶಕ್ತಿ ಪ್ರಕಟವಾದೀತು. ಮೊದಲಿನಂತೆ ಈಗಲೂ ಭಾರತ ಅಸಂಖ್ಯ ಭೇದದಲ್ಲಿ ಬಿದ್ದಿದೆ, ತೊಡಕಾಗಿ ಹೋಗಿದೆ. ಗಾಂಧೀಜಿಯ ಪ್ರಯತ್ನದಿಂದ ಸ್ವಲ್ಪ ಮಟ್ಟಿಗೆ ಐಕ್ಯ ಹುಟ್ಟಿತು. ಅದರಿಂದಲೇ ಸ್ವರಾಜ್ಯದ ದರ್ಶನವಾಯಿತು. ಆದರೆ ಇದು ಮೇಲುಮೇಲಿನ ಒಗ್ಗಟ್ಟು. ಸ್ವರಾಜ್ಯ ಬಂದಮೇಲೆ, ಎಂಥೆಂಥ ಜಗಳ ನಡೆಯುತ್ತದೆ ಎಲ್ಲರಿಗೂ ಗೊತ್ತು. ಅಂಥ ಕೆಲವು ಭಯಸ್ಥಾನಗಳು ದೇಶದಲ್ಲಿವೆ. ಹೀಗೆಲ್ಲಾ ಆದರೆ ಸೇನೆಯ ಖರ್ಚನ್ನು ಇಳಿಸುವ ಧೈರ್ಯ ಬರಲಾರದು.

ಇಂದೇ ಇದ್ದಕ್ಕಿದ್ದಂತೆ ಸೈನ್ಯದ ವಿಸರ್ಜನೆ ಆಗುವುದು ಸಾಧ್ಯವಿಲ್ಲ. ಅದು ಇರಲಿ, ನಾಳೆಯಾದರೂ ಅದು ನಷ್ಟವಾಗಿ ಹೋಗಬೇಕಲ್ಲವೇ? ಇಷ್ಟೇ ನನ್ನ ಮಾತು. ನೀವು ಶಸ್ತ್ರದ ಆಧಾರವನ್ನು ಬಿಡಲಾರದವರೆಗೆ ಇದೆಂದೂ ಆಗುವುದೇ ಸಾಧ್ಯವಿಲ್ಲ. ಅದಕ್ಕಾಗಿ ನಾವು ದೇಶದಲ್ಲಿ ಅಹಿಂಸೆಯ ಶಕ್ತಿಯನ್ನು ಎಬ್ಬಿಸಿ ನಿಲ್ಲಿಸಬೇಕು. ಕನಿಷ್ಠಪಕ್ಷ ಭಾರತದಲ್ಲಿ ಆಂತರಿಕ ಶಾಂತಿಗಾದರೂ ಪೋಲೀಸ್ ಅಥವಾ ಸೇನೆಯ ಉಪಯೋಗ ಬೇಕಾಗಿಲ್ಲ ಎಂದು ಭಾರತದಲ್ಲಿ ಸಿದ್ಧವಾಗಬೇಕು. ಆಮೇಲೆ ಅಂತರರಾಷ್ಟ್ರೀಯ ಕ್ಷೇತ್ರದಲ್ಲಿ ಅಹಿಂಸೆ ಯಾವರೀತಿ ಪ್ರವೇಶಿಸಬಹುದು ಎಂಬುದರ ದರ್ಶನವಾದೀತು.

ಆದರೆ ದೇಶದಲ್ಲಿ ದಂಗೆಯಾಗುವ ಸ್ಥಳದಲ್ಲೆಲ್ಲಾ ಪೋಲೀಸ್ ಬಂದರೇ ಶಾಂತಿ ಸ್ಥಾಪನೆಯಾಗುವುದಾದರೆ, ನಾವು ಪರಿಸ್ಥಿತಿಯನ್ನು ಹಾಗೇ ಬಿಡುವುದಾದರೆ ನಮಗೆ ಸೇನೆಯಿಂದ ಎಂದೂ ಮುಕ್ತಿ ಸಿಗಲಾರದೆಂದು ತಿಳಿಯಿರಿ. ಸೇನೆಗಾಗಿ ಮಾಡುವ ವೆಚ್ಚವೂ ಎಂದೂ ಕಡಿಮೆಯಾಗಲಾರದು. ರಕ್ಷಣೆಯ ಶಕ್ತಿ ಅಹಿಂಸೆಗೆ ಬಾರದೆ ಅದು ಕಾಣೆಯಾಗಲಾರದು, ದಾಸಿಯಾಗಿಯೇ ಉಳಿದೀತು. ಆದುದರಿಂದ ಶಾಂತಿಸೇನೆ ಸ್ಥಾಪಿತವಾಗಬೇಕು, ಆಂತರಿಕ ಶಾಂತಿ ಅದರ ಮೂಲಕ ನೆಲೆಗೊಳ್ಳಬಲ್ಲದು ಎಂಬ ಭರವಸೆ ಜನರಿಗೆ ಉಂಟಾಗ ಬೇಕು. ಆಗ ಮೆಲ್ಲಮೆಲ್ಲನೆ ಆಂತರಿಕ ಬಂದೋಬಸ್ತಿಗೆ ಪೋಲೀಸರ ಅಗತ್ಯ ಬೇಕಾಗಿಲ್ಲದಂತಾದೀತು. ಮುಂದೆ ಸೇನೆಯ ಅಂಕುಶವೂ ಕಳಚೀತು. ಅದಕ್ಕೆ ಶಾಂತಿಸೇನೆಯ ರಚನೆ ಮೊದಲ ಅಗತ್ಯ.

ಸದಾಕಾಲಕ್ಕೂ ಸೇವಾ-ಸೇನೆ

ಇದು ಬಾಪೂವಿನ ಶಾಂತಿಸೇನೆಯ ಕನಸಾಗಿತ್ತು. ಈ ಕನಸನ್ನು ಅವರು ಪೂರ್ಣಗೊಳಿಸಲಾಗಲಿಲ್ಲ, ಅದರಲ್ಲಿ ಆಶ್ಚರ್ಯವೂ ಇಲ್ಲ. ಆಗ ಇದಕ್ಕೆ ಭೂಮಿಕೆಯೇ ಇರಲಿಲ್ಲ. ಆ ಭೂಮಿಕೆಗೆ ಎಲ್ಲಕ್ಕಿಂತ ಮೊದಲು ದೇಶ ದಲ್ಲಿ ಸೇವಾಸೇನೆಯನ್ನು ಹರಡಬೇಕಾಗಿತ್ತು. ಶಾಂತಿ ಸೇನೆಯ ಮೊದಲ ಆವಶ್ಯಕತೆ ಸೇವಾ-ಸೇನೆ. ಸೇವಾ-ಸೇನೆ ಇಲ್ಲದೆ ಶಾಂತಿಸೇನೆಯ ಭೂಮಿಕೆ ಸಿದ್ಧಗೊಳ್ಳದು.

ಶಾಂತಿಸೇನೆಯೇ ಸದಾಕಾಲಕ್ಕೂ ಸೇವಾ-ಸೇನೆಯಾದೀತು. ನಿರಂತರವಾಗಿ ಸೇವೆಗೈಯುತ್ತಿದ್ದೀತು. ಪರಿಚಯ ಬೆಳೆಸುತ್ತಾ ಹೋದೀತು ಮತ್ತು ಅಶಾಂತಿಯ ಸಮಯದಲ್ಲಿ ಅದರ ಶಮನಕ್ಕೆ ಪ್ರಯತ್ನಿಸೀತು. ಈಗ ಅಲ್ಲಲ್ಲಿ ಸಿಡಿದೇಳುತ್ತಿರುವ ಅಶಾಂತಿಯ ಸ್ಥಳಕ್ಕೆ ಹೋಗಿ ಶಾಲೆಗಾಗಿ ತನ್ನನ್ನು ತಾನು ಹೋಮಗೊಳಿಸಿಕೊಳ್ಳುವ ಕಲ್ಪನೆಯಿಂದ ಈ ಮಾತು ಹೊಮ್ಮಿದೆ. ಆದರೆ ಇಷ್ಟುಮಾತ್ರದಿಂದಲೇ ಶಾಂತಿ-ಸೈನಿಕನನ್ನು ತಯಾರು ಮಾಡಿ ದಂತಾಗುವುದಿಲ್ಲ. ತಾಯಿಯಂತೆ ಎಲ್ಲರ ಸೇವಕನಾದಾಗಲೇ ಅವನು ಶಾಂತಿ ಸೈನಿಕನಾಗಬಲ್ಲ. ನಿರಂತರ ವಾತ್ಸಲ್ಯಭಾವದಿಂದ ನಾವು ಸೇವೆ ಸಲ್ಲಿಸಿದರೆ, ನಮ್ಮ ಮತ್ತು ಜನತೆಯ ನಡುವೆ ಸ್ನೇಹ ನಿರ್ಮಾಣವಾದರೆ ಅಂಥ

ಸ್ಥಿತಿಯಲ್ಲಿ ಏನಾದರೂ ಕಠಿಣ ಪ್ರಸಂಗ ಬಂದರೆ ಮನುಷ್ಯನಿಗೆ ಆಗ ಪ್ರಾಣಕ್ಕೆ ಯಾವ ಬೆಲೆಯೂ ಕಂಡುಬರುವುದಿಲ್ಲ. ಸ್ವಾಭಾವಿಕವಾಗಿ ತ್ಯಾಗವಾಗಿ ಹೋಗುತ್ತದೆ. ಆಗ ಅದನ್ನು ತ್ಯಾಗ ಎಂದೂ ತಿಳಿಯುವುದಿಲ್ಲ. ಪ್ರೇಮ ಕಾರ್ಯ ಎಂದು ತಿಳಿಯುತ್ತಾರೆ ಎಂತಲೇ ಶಾಂತಿಸೇನೆ ಸದಾಕಾಲಕ್ಕೂ ಸೇವಾ-ಸೇನೆ.

ಜನರ ಸಮ್ಮತಿ ಅವಶ್ಯ ಸಿಗಲಿ

ಈ ಸೇನೆ ಯಾವ ಆಧಾರದ ಮೇಲೆ ನಿಂತಿದ್ದೀತು. ನಮ್ಮ ಸರ್ಕಾರ ಸೈನ್ಯವನ್ನು ಸಿದ್ಧಗೊಳಿಸುತ್ತದೆ. ಅದರ ಹಿಂದೆ ನಮ್ಮ ಸಮ್ಮತಿ ಉಂಟು. ಅದಕ್ಕೆ ಜನರಿಂದ ಗಳಿಸಿದ ಮತ ಆಧ್ಯಾತ್ಮಿಕ ಆಧಾರ. ಜನತೆಯಿಂದ ವಸೂಲಾದ ತೆರಿಗೆ ಭೌತಿಕ ಆಧಾರ. ಶಾಂತಿ-ಸೇನೆಯ ಹಿಂದೆಯೂ ಇಂಥ ಯಾವುದಾದರೂ ಆಧಾರ ಬೇಕು. ನಾವು ಕರುಣಾಪ್ರೇರಿತರಾಗಿದ್ದು ಸೇವೆ ಸಲ್ಲಿಸುವ ಇಚ್ಛೆ ಇದ್ದರೆ ಮಾತ್ರವೇ ಸಾಲದು, ಶಾಂತಿ ಸೈನಿಕನಾಗಿದ್ದು ನಾನು ಎಲ್ಲರ ಕೆಲಸ ಮಾಡಬಯಸುತ್ತೇನೆ, ಆದರೆ ನಿಮ್ಮ ಸಮ್ಮತಿಯಿಲ್ಲದೆ ನಾನು ಕೆಲಸ ಮಾಡಿದರೆ ನನ್ನಲ್ಲಿ ಯಾವುದೇ ಬಗೆಯ ಶಕ್ತಿ ಬಾರದು. ಜನರ ನಡುವೆ ಹೋಗಿ ನಾವು ಸತ್ತುಹೋದರೂ ಸರಿಯೇ, ಅವರ ಮಧ್ಯೆ ಶಾಂತಿ ಸ್ಥಾಪಿಸಬಲ್ಲೆವೆಂಬುದಷ್ಟೇ ಅಲ್ಲ. ಇದನ್ನು ನಾವು ಬಯಸುತ್ತೇವೆ. ಶಾಂತಿ ಸ್ಥಿರವಾಗಿರುವಂತೆ ನಮ್ಮ ಇರುವಿಕೆಯಿಂದ ಜನರ ಮನಸ್ಸಿನ ಮೇಲೆ ಪ್ರಭಾವ ವುಂಟಾಗಬೇಕು ಎಂಬುದೇ ಅಪೇಕ್ಷೆ. ಇಷ್ಟು ಮಾತ್ರವೇ ಸೇವೆಗೆ ಅಧಿಕಾರ ವಲ್ಲ. ಜನರ ಮನಸ್ಸಿನಮೇಲೆ ನೈತಿಕ ಪ್ರಭಾವ ಬೀರುವ ಅಧಿಕಾರ ಬಯಸುವವರಿಗೆ ಜನರ ವತಿಯಿಂದ ಕೆಲವೊಂದು ಸಮ್ಮತಿ ಸಿಗಬೇಕಾದೀತು. ನಿಮ್ಮ ಸೇವೆ ನಮಗೆ ಸಮ್ಮತ, ಅದಕ್ಕಾಗಿ ನಾವೇನಾದರೂ ಮಾಡುತ್ತೇವೆ ಎಂಬುದು ಸಮ್ಮತಿ. ಅದಕ್ಕಾಗಿಯೇ ನಾನು ಸರ್ವೋದಯ ಪಾತ್ರೆಯ ಯೋಜನೆಯನ್ನು ಇಟ್ಟೆ. ಅದು ಜನಸಮ್ಮತಿಯ ಪ್ರತೀಕ, ನಮ್ಮ ಕೆಲಸಕ್ಕೆ ಜನತೆಯ ಮುದ್ರೆ. ಅದರ ಮೂಲಕ ಶಾಂತಿಸೇನೆಗೆ ಇಂತಿಷ್ಟು ಆರ್ಥಿಕ ಆಧಾರವೂ ಸಿಕ್ಕುತ್ತದೆ. ವಸ್ತುತಃ ಅದು ಜನತೆಯ ಮೂಲಕ ಎದ್ದ ಸೇನೆ ಯಾಗುತ್ತದೆ.

ಸುರಕ್ಷಿತ ಅಲ್ಲ, ಸ್ವರಕ್ಷಿತ

ಶಾಂತಿಸೇನೆಯ ವಿಷಯದಲ್ಲಿ ಒಂದು ಮಾತು ಧ್ಯಾನದಲ್ಲಿಡುವಂಥದು. ಮಿಲಿಟರಿಯ ಆಧಾರದಮೇಲೆ ಜನ ಸುರಕ್ಷಿತರಿರುವಂತೆ ಶಾಂತಿಸೇನೆಯ ಆಧಾರದಮೇಲೆ ಸುರಕ್ಷಿತರಾಗಿರುತ್ತಾರೆ ಎಂದು ತಿಳಿದು ಮುಂದುವರಿಯುವುದು ಸರಿಯಲ್ಲ. ಈ ರೀತಿ ಜನ ಸುರಕ್ಷಿತರಿದ್ದರೂ ಸ್ವರಕ್ಷಿತರಾಗಲಾರರು. ಪರಿಸ್ಥಿತಿ ಹೀಗಿರುವವರೆಗೂ ವಾಸ್ತವಿಕ ಶಾಂತಿಯ ಅನುಭವವಾಗದು. ಕಡೆಗೆ ಯಾವುದೇ ಹಳ್ಳಿ ಅಥವಾ ಪಟ್ಟಣದ ಶಾಂತಿಯ ಹೊಣೆಗಾರಿಕೆ ಅಲ್ಲಿಯ ನಿವಾಸಿಗಳದೇ ಆಗಿರುತ್ತದೆ. ಶಾಂತಿ ಸೈನಿಕನೂ ಅಲ್ಲಿಯ ನಿವಾಸಿಯೇ ಆಗಿರುತ್ತಾನೆ, ಈ ಕಾರಣದಿಂದ ಅವನದೂ ಹೌದು. ಇದಕ್ಕಾಗಿ ಹಳ್ಳಿಹಳ್ಳಿಯಲ್ಲೂ ಮತ್ತು ನಗರಗಳ ಮೊಹಲ್ಲಾ-ಮೊಹಲ್ಲಾಗಳಲ್ಲೂ ಶಾಂತಿಸೇನೆಯ ಸುವ್ಯವಸ್ಥಿತ ಯೋಜನೆ ಆಗಬೇಕು. ಪ್ರತಿ ಐದು ಸಾವಿರ ಜನಸಂಖ್ಯೆಯ ಹಿಂದೆ ಒಬ್ಬ ಶಾಂತಿಸೈನಿಕ ಇರಬೇಕೆಂದು ನನ್ನ ಕಲ್ಪನೆ. ಆ ಕ್ಷೇತ್ರದಲ್ಲಿ ಅವನ ಗಾಢ ಪರಿಚಯವಿರಬೇಕು. ಹಾಗಿಲ್ಲದೆಹೋದರೆ ಒಂದು ಸ್ಥಳದ ಶಾಂತಿಸೈನಿಕನನ್ನು ಇನ್ನೊಂದು ಕಡೆ ಕಳುಹಿಸುವುದು ಕೃತಕ ವಿಷಯವಾದೀತು. ಯಾವುದಾದರೂ ವಿಶೇಷ ಪ್ರಸಂಗದಲ್ಲಿ ಹೊರಗಿನ ಶಾಂತಿಸೈನಿಕ ಬಂದು ಸ್ಥಳೀಯ ಶಾಂತಿ ಸೈನಿಕನಿಗೆ ನೆರವು ನೀಡಬಹುದು. ಸಂಕ್ಷೇಪದಲ್ಲಿ ಪ್ರಜೆಗಳು ಸ್ವರಕ್ಷಿತರಾಗುವುದೇ ಶಾಂತಿಸೇನೆಯ ಮೂಲ ಉದ್ದೇಶ, ಸುರಕ್ಷಿತವಾಗುವುದಲ್ಲ. ಶಾಂತಿಸೇನೆಯ ಕೆಲಸ ಪೋಲೀಸ್ ಅಥವಾ ಸೇನೆಯದಲ್ಲ. ಪ್ರಜೆಗಳ ತಮ್ಮದೇ ಆದ ಸಂಘಟನೆ. ಶಾಂತಿಸೈನಿಕರು ಪ್ರಜೆಗಳಿಂದಲೇ ಮೂಡಿದವರಾಗಿರಬೇಕು. ಪೋಲೀಸ್ ಮತ್ತು ದಂಡಿನ ಕೈಯಿಂದ ನಾಗರಿಕ ಜೀವನವನ್ನು ಮುಕ್ತಗೊಳಿಸಬೇಕು. ಈ ಮಾತನ್ನು ಜನರಿಗೆ ಸರಿಯಾಗಿ ತಿಳಿಸಿ ನಮ್ಮ ಕೆಲಸ ಮಾಡಬೇಕು.

ರೋಗ ಹುಟ್ಟದಂತೆಯೇ ಆರೋಗ್ಯಶಾಸ್ತ್ರ ನೋಡುತ್ತದೆ. ಒಂದು ಪಕ್ಷ ಹುಟ್ಟಿದರೂ ಅದನ್ನು ದೂರಗೊಳಿಸಲು ಔಷಧವನ್ನು ಹುಡುಕುತ್ತದೆ. ಇದೇ ರೀತಿ ಶಾಂತಿಸೇನೆ ಅಶಾಂತಿಯ ಕಾರಣಗಳು ಹುಟ್ಟದಂತೆ ಮೊದಲು ನೋಡುತ್ತದೆ. ಆದರೂ ಅಶಾಂತಿ ಸಿಡಿದೆದ್ದರೆ ತನ್ನ ತಲೆ ಕೊಡಲು ತಯಾರಿರುತ್ತದೆ. ಆ ಸಮಯದಲ್ಲಿ ಪ್ರೇಮಪೂರ್ವಕವಾದ ಆತ್ಮ ಬಲಿದಾನದ ಸಿದ್ಧತೆಯಲ್ಲೇ

ದಂಗೆ ನಡೆಸುವವರ ಮಧ್ಯೆ ಹೋಗಿ ಅವರನ್ನು ತಡೆಯಲು ಪ್ರಯತ್ನಿಸಬೇಕಾದೀತು. ಇದರಲ್ಲಿ ಕೇವಲ ದ್ವೇಷವಿಲ್ಲದಿದ್ದರೆ ಮಾತ್ರ ಸಾಲದು, ಪ್ರೇಮ ಬೇಕು, ಅದೂ ಉಭಯ ಪಕ್ಷಗಳ ಬಗೆಗೂ ಪ್ರೇಮ. ತಪ್ಪಾಹಾದಿಯಿಂದ ಅವರನ್ನು ತಡೆಯಬಯಸುತ್ತೇವೆ. ಅವರು ತಡೆಯದಿದ್ದರೆ ಮೊದಲು ನಾವು ನಮ್ಮ ಬಲಿದಾನಕ್ಕೆ ಸಿದ್ಧವಾಗಿರಬೇಕು. ಶಾಂತಿಸೇನೆಯಲ್ಲಿ ಪುರುಷರಿಗಿಂತ ಸ್ತ್ರೀಯರು ವಿಶೇಷ ಉಪಯುಕ್ತವಾಗಿ ಭಾಗವಹಿಸಬಲ್ಲರು. ರಣಾಂಗಣ ದಲ್ಲಾದರೋ ಝಾನ್ಸಿಯ ರಾಣಿಯಂಥ ಒಬ್ಬಿಬ್ಬ ಮಹಿಳೆಯರು ಕಂಡು ಬರುತ್ತಾರೆ. ಶಾಂತಿಸೇನೆಯಲ್ಲಾದರೋ ಪ್ರತಿಯೊಬ್ಬ ಸೋದರಿಯೂ ಕೆಲಸ ಮಾಡಬಲ್ಲಳು. ಸೋದರಿಯರ ಹೃದಯದಲ್ಲಿ ದಯೆ ಇರುತ್ತದೆ, ಅವರ ಹೃದಯ ಕೋಮಲ, ನಿರ್ದಯವಾಗಿ ಕೊಲೆಗೈಯುವುದು ಅವರ ಕೆಲಸವಲ್ಲ. ಆದರೆ ಈ ಸೇನೆಯಲ್ಲಿ ಪ್ರೇಮದ ಕೆಲಸ. ಸೋದರಿಯರು ಈ ಕೆಲಸವನ್ನೆಲ್ಲಾ ಚೆನ್ನಾಗಿ ಮಾಡಬಲ್ಲರು. ಬಾಪೂ ಸಹ ಸೋದರಿಯ ವಿಷಯದಲ್ಲಿ ತುಂಬಾ ಆಸೆ ಇಟ್ಟುಕೊಂಡಿದ್ದರು. ಸೋದರಿಯರ ಶಕ್ತಿಯನ್ನು ಜಾಗೃತಗೊಳಿಸುವಲ್ಲಿ ಶ್ರೀಕೃಷ್ಣನ ತರುವಾಯ ಆಸೆಯಿಟ್ಟುಕೊಂಡಿದ್ದವರು ಬಾಪೂ ಮಾತ್ರವೇ. ಬಾಪೂವಿನ ಈ ಆಸೆಯ ಸ್ಪರ್ಶ ಸೋದರಿಯರಿಗೆ ಆಗಬೇಕಾದರೆ ಅವರು ಚೆನ್ನಾಗಿ ಕೆಲಸ ಮಾಡಬಹುದು.

ಪ್ರಥಮ ಸೇನಾಪತಿ, ಪ್ರಥಮ ಸೈನಿಕ

ಶಾಂತಿ ಸೇನೆಯ ಕಲ್ಪನೆಯಲ್ಲಿ ಗಾಂಧೀಜಿಯ ಇಷ್ಟಾರ್ಥ ಅಪೂರ್ಣ ವಾಗಿಯೇ ಉಳಿಯಿತು. ಅವರು ಈ ಕಲ್ಪನೆಯನ್ನು ಪ್ರತಿಪಾದಿಸಿದಾಗ ನಮ್ಮಂಥ ದುರ್ಬಲ ಸಂಗಾತಿಗಳಿಗೆ ಅದು ಅಸಂಭವವಾಗಿಯೇ ತೋರಿತು. ಇದು ಕೃತಿಯಲ್ಲಿ ಬಾರದ ಸಂಗತಿ ಎಂದೇ ಅನಿಸಿತು. ದೊಡ್ಡ ಕಾರ್ಯ ಕರ್ತರ ಪಡೆಯನ್ನು ಆವರು ನಿಲ್ಲಿಸಿದ್ದರು. ಆದರೆ ಶಾಂತಿ-ಸೇನೆಯ ಮಾತು ಬಂದಾಗ ಸೇವಕರು ಒಳ್ಳೆ ಸಂಖ್ಯೆಯಲ್ಲಿದ್ದರೂ ಈ ಕೆಲಸಕ್ಕಾಗಿ ಅಷ್ಟು ಜನ ಸಿದ್ಧರಿರಲಿಲ್ಲ. ವಿಶಿಷ್ಟ ಶಾಂತಿ-ಸೈನಿಕರು ಸಿಗಲಿಲ್ಲ. ಕೃತಿಯಲ್ಲಿ ಬಾರದಂಥ ಯಾವ ವಿಚಾರವೂ ಗಾಂಧೀಜಿಯದು ಇರುತ್ತಿರಲಿಲ್ಲ. ಅದು ಅವರದೊಂದು ವೈಶಿಷ್ಟ್ಯ. ನನ್ನ ಮಾತಿನಂತೆ ನಡೆಯುವ ಕನಿಷ್ಠ ಒಬ್ಬ ವ್ಯಕ್ತಿಯಾದರೂ

ಹೊರಟಾಸು. ಆ 'ಒಬ್ಬ' ಸ್ವತಃ ಗಾಂಧೀಜಿಯೇ ಆಗಿರುತ್ತಿದ್ದರು ಎಂದು ಅವರು ಹೇಳುತ್ತಿದ್ದರು, ಗಾಂಧೀಜಿಯು ಶಾಂತಿ-ಸೇನೆಯ ಸೇನಾಪತಿಯಂತೆ ಆದೇಶವಿತ್ತರು. ಮತ್ತೆ ತಾವೇ ಶಾಂತಿ-ಸೇನೆಯ ಸೈನಿಕರಂತೆ ಆ ಆದೇಶದ ಪಾಲನೆ ಮಾಡಲು ಹೊರಟರು. ಇದೆಲ್ಲಾ ನನ್ನ ಕಣ್ಣಿಂದ ನಾನು ಸ್ವತಃ ನೋಡಿದ್ದು. ಆದುದರಿಂದ ಶಾಂತಿಸೇನೆಯ ಸೇನಾಪತಿಯ ಆಜ್ಞೆಯನ್ನು ಶಿರಸಾವಹಿಸಿದ ಒಬ್ಬ ಸೈನಿಕನೂ ಇರಲಿಲ್ಲ ಎನ್ನುವಂತಿಲ್ಲ. ಒಬ್ಬ ಸೈನಿಕ ಸಂತೂ ಹೊರಟ. ಸೇವೆ ಸಲ್ಲಿಸಿ ತನ್ನ ಹಾದಿ ಆರಿಸಿಕೊಂಡ. ಅವನ ಬಲಿದಾನ ಭಾರತಮಾತೆಯ ಚರಣಗಳಲ್ಲಿ ಅರ್ಪಿತವಾಯಿತು. ಅವರು ಬಿತ್ತಿದ ಅಕ್ಷಯಬೀಜ ಅವಶ್ಯ ಬೆಳೆದೀತು. ●

೯

ಅಹಿಂಸೆಯ ಶಕ್ತಿ

ಜಗತ್ತಿನಲ್ಲಿ, ಭಾರತದಲ್ಲಿ ಸದಾ ಸಂತ ಸತ್ಪುರುಷರು ಹುಟ್ಟಿ ಜನರಿಗೆ ಆಧ್ಯಾತ್ಮಿಕ ಮೂಲ್ಯಗಳನ್ನು ಬೋಧಿಸಿದ್ದಾರೆ. ಜನ ಕೇಳುತ್ತಾ ಬಂದಿದ್ದಾರೆ, ತಿಳಿದುಕೊಳ್ಳುವಷ್ಟು ತಿಳಿದುಕೊಂಡಿದ್ದಾರೆ, ಎಷ್ಟನ್ನು ಜಾರಿಗೆ ತರಬಹುದೋ ಅಷ್ಟನ್ನು ಜಾರಿಗೂ ತಂದಿದ್ದಾರೆ. ಜಾರಿಗೆ ತರಲಾಗದಿದ್ದರೆ ಅದನ್ನು ತಮ್ಮ ದೌರ್ಬಲ್ಯ ಎಂದು ತಿಳಿದು ಮೂಲ್ಯಗಳನ್ನು ಆದರದಿಂದ ಕಂಡಿದ್ದಾರೆ. ವ್ಯವಹಾರದಲ್ಲಿ ಇದು ಸಾಧ್ಯವಿಲ್ಲ ಎಂದು ಭಾವಿಸಿಕೊಂಡಿದ್ದಾರೆ.

ಆದರೆ ಯುಗದ ಬೇಡಿಕೆ ಹಾಗೂ ಸಂತರ ಉಪದೇಶ ಒಂದಾದಾಗ ಕ್ರಾಂತಿಯಾಗುತ್ತದೆ. ಗಾಂಧೀಜಿಯ ವಿಷಯದಲ್ಲಿ ನಾವು ಇದನ್ನು ನೋಡಬಹುದು. ಹಿಂಸೆಯ ಪ್ರತೀಕಾರವನ್ನು ಅಹಿಂಸೆಯಿಂದ ಮಾಡಿ, ಅಸತ್ಯದ ಪ್ರತೀಕಾರವನ್ನು ಸತ್ಯದಿಂದ ಮಾಡಿ ಎಂದು ಗಾಂಧೀಜೀ ಹೇಳಿದರು. ನಿಶ್ಶಸ್ತ್ರ ಪ್ರತೀಕಾರವನ್ನು ಅವರು ಕಲಿಸಿದರು. ಹಾಗೆ ನೋಡಿದರೆ ಇದು ಹಳೆಯ ಮಾತೇ, ಹೊಸದೇನೂ ಅಲ್ಲ; ಇದು ಹಿಂದೂಸ್ಥಾನದ ಸಂಸ್ಕೃತಿಯಲ್ಲೇ ಅರಳಿ ಫಲಿಸಿದ ಸ್ವರೂಪ. ಭಗವಾನ್ ಬುದ್ಧ, ಮಹಾವೀರ ಮತ್ತಿತರ ಸಂತರು ಇದನ್ನೇ ಕಲಿಸಿದರು. ಆದರೆ ಗಾಂಧೀಜಿಯ ನಾಲಿಗೆಯ ಮೇಲೆ ಈ ಮಾತು ಬಂದಾಗ ಅದರ ಕ್ರಾಂತಿಕಾರಿ ಅರ್ಥ ಪ್ರಕಟವಾಯಿತು; ಏಕೆಂದರೆ ಅದಕ್ಕೊಂದು ಐತಿಹಾಸಿಕ ಹಿನ್ನೆಲೆ ಇತ್ತು. ಒಂದು ಜ್ವಲಂತ ಐತಿಹಾಸಿಕ ಹಿನ್ನೆಲೆ. ಹಿಂದಿನ ಕಾಲದಲ್ಲಿ ಭಾರತದಲ್ಲಿ ಶಸ್ತ್ರಗಳಿದ್ದವು. ಎಲ್ಲರ ಕೈಲಿ ಇದ್ದುವೆಂದಲ್ಲ. ಎಲ್ಲರೂ ಇಟ್ಟುಕೊಳ್ಳಲು ಅವಕಾಶವಿತ್ತು. ಬ್ರಾಹ್ಮಣರು ಬೇಕಾದರೂ ಶಸ್ತ್ರ ಇಟ್ಟುಕೊಳ್ಳಬಹುದಿತ್ತು. ಶಸ್ತ್ರವನ್ನು ಸೀಮಿತಗೊಳಿಸುವ ಅಹಿಂಸೆಯ ಒಂದು ಪ್ರಯೋಗವನ್ನು ಭಾರತ ನಡೆಸಿತು. ಶಸ್ತ್ರಗಳ ಅಗತ್ಯ ಬಿದ್ದಾಗ ಏನು ಮಾಡಬೇಕು? ಕೇವಲ ಒಂದು ವರ್ಗದ

ಕೈಯಲ್ಲಿ ಶಸ್ತ್ರವಿರಲಿ, ಉಳಿದೆಲ್ಲ ವರ್ಗಗಳೂ ಶಸ್ತ್ರ ಬಿಟ್ಟುಬಿಡಲಿ ಎಂದು ಆಗ ನಿಶ್ಚಯವಾಯಿತು. ಅಂಥ ಒಂದು ಪ್ರಯೋಗವನ್ನು ಭಾರತ ನಡೆಸಿತು. ಪರಿಣಾಮವಾಗಿ ಅಹಿಂಸೆಯ ವಿಚಾರ ಭಾರತದಲ್ಲಿ ಬೇರೂರಿತು. ಆದರೂ 'ಶಸ್ತ್ರದ ಮೂಲಕ ರಕ್ಷಣೆ'ಯ ಮಾತು ಸ್ಥಿರವಾಗಿತ್ತು. ಅಷ್ಟುಮಟ್ಟಿಗೆ ಅಹಿಂಸೆ ದುರ್ಬಲವಾಗಿತ್ತು.

ಆದರೆ ಇಂಗ್ಲಿಷರು ಬಂದು ಸಾಟಿಯಿಲ್ಲದ ಕೆಲಸ ಮಾಡಿದರು. ಹಿಂದೆ ಯಾರೂ ಅಂಥದನ್ನು ಮಾಡಿರಲಿಲ್ಲ. ಇಂಗ್ಲಿಷರು ಶಸ್ತ್ರ ಕಿತ್ತುಕೊಂಡು ಹಿಂದುಸ್ಥಾನದ ಜನತೆಯನ್ನು ಪೂರಾ ನಿಶ್ಯಸ್ತ್ರಗೊಳಿಸಿದರು. ಹಿಂದೆ ಯಾವ ರಾಜನೂ ಎಲ್ಲೂ ಹೀಗೆ ಮಾಡಿರಲಿಲ್ಲ. ಇದಕ್ಕೊಂದು ಕಾರಣವಿತ್ತು. ಯಾವ ರಾಜನಿಗೂ ಆ ಶಕ್ತಿಯೂ ಇರಲಿಲ್ಲ. ಮತ್ತೊಂದು ಕಾರಣವೆಂದರೆ, ಒಮ್ಮೆ ಪ್ರಜೆಗಳನ್ನು ನಿಶ್ಯಸ್ತ್ರಗೊಳಿಸಿಬಿಟ್ಟರೆ ಹೊರಗಿಂದ ಆಕ್ರಮಣವಾದರೆ ರಕ್ಷಣೆಯ ಜವಾಬ್ದಾರಿಯು ಕೇವಲ ಆಳರಸರ ಮೇಲೇ ಬೀಳುತ್ತಿತ್ತು. ಅಷ್ಟು ಶಕ್ತಿ ಅವರಲ್ಲಿರಲಿಲ್ಲ. ಆದಕಾರಣ ಇದುವರೆಗೆ ಯಾರೂ ಜನತೆಯನ್ನು ಪೂರಾ ನಿಶ್ಯಸ್ತ್ರಗೊಳಿಸಲಿಲ್ಲ. ಆದರೆ ಇಂಗ್ಲಿಷರು ಹಾಗೆ ಮಾಡಿದರು. ಅವರು ಪ್ರಜೆಗಳನ್ನು ಸಂಪೂರ್ಣ ನಿಶ್ಯಸ್ತ್ರಗೊಳಿಸಿದರು. ಯಾವುದೇ ಕಾರಣದಿಂದ ಯಾವನೇ ಮನುಷ್ಯ ಅನುಮತಿ ಇಲ್ಲದೆ ಶಸ್ತ್ರ ಇಟ್ಟುಕೊಳ್ಳಲಾರದಾದ. ಇಂಥ ಸ್ಥಿತಿಯಲ್ಲಿ ಹಿಂದುಸ್ಥಾನದೆದುರು ದೊಡ್ಡದೊಂದು ಪ್ರಶ್ನೆ ಉದ್ಭವವಾಯಿತು—ಸದಾ ಕಾಲಕ್ಕೂ ಇಂಗ್ಲಿಷರ ಗುಲಾಮರಾಗಿಯೇ ಉಳಿಯುವುದೋ ಹೆಚ್ಚು ಶಕ್ತಿಶಾಲಿಯಾದ ಹೊಸದೊಂದು ಶಸ್ತ್ರವನ್ನು ಹುಡುಕಿಕೊಳ್ಳುವುದೋ? ಜನತೆಯ ಕೈಯಲ್ಲಿ ಶಸ್ತ್ರವಿರಲಿಲ್ಲ. ಈ ಸ್ಥಿತಿಯಲ್ಲಿ ನಿಶ್ಯಸ್ತ್ರವಾಗಿ ಹೋರಾಡುವ ಪರಂಪರೆ ಇಲ್ಲದಿದ್ದರೆ ಭಾರತ ಶಾಶ್ವತವಾಗಿ ಗುಲಾಮಗಿರಿಯಲ್ಲಿ ಇರುತ್ತಿತ್ತು. ಆದರೆ ಇಷ್ಟು ದೊಡ್ಡ ದೇಶ ಸದಾಕಾಲವೂ ಗುಲಾಮವಾಗಿರುವುದು ಅಸಂಭವವಾಗಿತ್ತು. ಆದುದರಿಂದ ನಿಶ್ಯಸ್ತ್ರ ಮಾರ್ಗವನ್ನು ಹುಡುಕುವುದು ಐತಿಹಾಸಿಕ ಆವಶ್ಯಕತೆಯಾಯಿತು. ಇದರಿಂದಲೇ ಮಹಾತ್ಮಾ ಗಾಂಧೀ ಬಂದರು. ಅವರು ಬರದಿದ್ದಲ್ಲಿ ಮತ್ತಾರೋ ಬರುತ್ತಿದ್ದರು. ಅವರ ಶಿಕ್ಷಣ ಮತ್ತು ಅವರಿದ್ದ ಸಮೂಹದಿಂದಾಗಿ, ಅವರ ಸಂಸ್ಕಾರದ ದೃಷ್ಟಿಯಿಂದ ಗಾಂಧೀಜೀ ಬಂದುದು ಸ್ವಾಭಾವಿಕವೇ ಆಗಿತ್ತು.

ಗಾಂಧೀ : ಗುಜರಾತಿನ ಸಂಸ್ಕೃತಿರೂಪಿಯಾದ ಮಾವಿನಹಣ್ಣು

ಗಾಂಧೀಜೀ ಸ್ವತಃ ಗುಜರಾತಿನ ಸಂಸ್ಕೃತಿರೂಪಿಯಾದ ಮಾವಿನ ಹಣ್ಣಾಗಿದ್ದರು—ಈ ಪ್ರದೇಶದಲ್ಲಿ ನಡೆದಿದ್ದ ತಪಸ್ಸಿನ ಫಲವಾಗಿ ಗಾಂಧೀಜೀ ಇಲ್ಲಿ ಹುಟ್ಟಿದರು. ಗಾಂಧೀಜೀ ಗುಜರಾತಿನಲ್ಲಿ ಪಕ್ವಗೊಂಡುದು ಚಮತ್ಕಾರವೂ ಅಲ್ಲ, ಭಾಗ್ಯವಿಶೇಷವೂ ಅಲ್ಲ. ಅದರ ಹಿಂದೆ ಒಂದು ತತ್ವವುಂಟು. ಗುಜರಾತಿನ ಮೊಸರಿನಲ್ಲಿಯೇ ಇಂಥ ಬೆಣ್ಣೆ ಹೊರಡುತ್ತದೆ. ಗುಜರಾತಿನಲ್ಲಿ ಎಲ್ಲಕ್ಕಿಂತ ಮೇಲೆ ತೇಲಿಬರುವ ಒಂದು ಗುಣವಿದೆ. ಅದು ಅಲ್ಲಿಯ ಜನತೆ ತಮ್ಮದಾಗಿಸಿಕೊಂಡಿರುವ ಸಾರ್ವತ್ರಿಕ ಅಹಿಂಸೆ. ಈ ಕಾರಣದಿಂದಲೇ ಗಾಂಧೀಜೀ ಗುಜರಾತಿನಲ್ಲಿ ಹುಟ್ಟಿದ್ದರೆಂದು ನಾನು ತಿಳಿಯುತ್ತೇನೆ. ನೋಡುವುದಕ್ಕೆ ಇದು ಬಹಳ ಸಣ್ಣ ಸಂಗತಿಯೆಂದು ಕಾಣುತ್ತದೆ. ಗುಜರಾತಿನ ಸಾಮಾನ್ಯ ಜನ ಮಾಂಸಾಹಾರವನ್ನು ಪೂರಾ ಬಿಟ್ಟುಬಿಟ್ಟಿದ್ದಾರೆ. ಇಂಥದು ಜಗತ್ತಿನ ಇನ್ನಾವ ಕಡೆಯೂ ನೋಡಸಿಗುವುದಿಲ್ಲ. ಮಾಂಸಾಹಾರ ಪರಿತ್ಯಾಗದ ಆಂದೋಲನವನ್ನು ನಮ್ಮ ಪೂರ್ವಜರು ನಡೆಸಿದರು. ಸಾವಿರಾರು ವರ್ಷಗಳವರೆಗೆ ಇದನ್ನು ನಡೆಸಿದರು. ತುಂಬಾ ತಪಸ್ಸು ಮಾಡಿದರು. ಫಲವಾಗಿ ಭಾರತದಲ್ಲಿ ಮಾಂಸ ತಿನ್ನುವ ಜನರಂತೂ ಇದ್ದಾರೆ, ಅವರೂ ಸಹ ಅದನ್ನು ಗೌಣವೆಂದು ತಿಳಿಯುತ್ತಾರೆ. ಬಹಳ ಒಳ್ಳೆಯದೆಂದು ಭಾವಿಸುವುದಿಲ್ಲ. ಸಸ್ಯಾಹಾರದ ಮಹಿಮೆಯನ್ನು ಭಾರತ ಅಂಗೀಕರಿಸಿಬಿಟ್ಟಿದೆ. ಇಷ್ಟೊಂದು ಪ್ರಬಲವಾದ ಪ್ರಯೋಗ ಹಿಂದೂಸ್ಥಾನದಲ್ಲಿ ನಡೆದುದು ಜಗತ್ತಿನಲ್ಲೇ ಹಿಂದುಸ್ಥಾನದ ವೈಶಿಷ್ಟ್ಯ. ಸಾಮಾನ್ಯ ಜನಸಮುದಾಯವೂ ಮಾಂಸಾಹಾರವನ್ನು ಬಿಟ್ಟುಕೊಟ್ಟಿರುವುದು ಹಿಂದೂಸ್ಥಾನದಲ್ಲಿ ಗುಜರಾತಿನ ವೈಶಿಷ್ಟ್ಯ. ಇದೇನೂ ಸಣ್ಣ ಘಟನೆಯಲ್ಲ. ಈ ಅಹಿಂಸೆಯ ಪರಿಣಾಮವಾಗಿಯೇ ಗಾಂಧೀಜಿಯಂಥ ವಿಭೂತಿ ಪುರುಷರು ಗುಜರಾತಿನಲ್ಲಿ ಪಕ್ವಗೊಂಡರು. ಇಡೀ ಜಗತ್ತಿನ ದುಃಖದ ನಿವಾರಣೆಗಾಗಿ ವಿಶಿಷ್ಟ ಪ್ರಕಾರದ ಪ್ರತೀಕಾರ ಸಾಧ್ಯವೆಂಬ ದರ್ಶನ ಅವರಿಗಾಯಿತು.

ಯುಗದ ಬೇಡಿಕೆಯ ಬಲ

ನಿಶ್ಶಸ್ತ್ರ ಪ್ರತೀಕಾರದ ಮಾರ್ಗ ಹುಡುಕಲು ಒಂದು ಐತಿಹಾಸಿಕ

ಅಗತ್ಯವುಂಟಾಯಿತು, ಅದರಿಂದ ಗಾಂಧೀಜೀ ಬಂದರು ಎಂದು ನಾನು ಹೇಳುತ್ತಿದ್ದೆ. ಲಕ್ಷಾಂತರ ಜನ ಇಲ್ಲದಿದ್ದರೆ ಅವರ ಮಾತು ಕೇಳುತ್ತಿರಲಿಲ್ಲ. ಬಹಳವೆಂದರೆ ನನ್ನಂಥ ನಾಲ್ಕು ಮಂದಿ ಶಿಷ್ಯರು ಸಿಕ್ಕುತ್ತಿದ್ದರು. ಇಡೀ ದೇಶದಲ್ಲಿ ಈ ವಿಚಾರ ಹಬ್ಬಿತು. ಹರಕುಮುರಕಾಗಿಯಾದರೂ ಅದು ಕೃತಿಗೂ ಬಂತು. ಇಂಗ್ಲೀಷರು ತಮ್ಮ ಕೈಲೇ ಎಲ್ಲ ಆಯುಧವನ್ನು ಇಟ್ಟುಕೊಂಡುದು ಒಂದು ವಿಶಿಷ್ಟ ಪರಿಸ್ಥಿತಿಯನ್ನೇ ನಿರ್ಮಿಸಿತು. ಇದರಿಂದ ಗಾಂಧೀಜಿಯ ಅಹಿಂಸೆಯ ವಿಚಾರಕ್ಕೆ ಯುಗದ ಬೇಡಿಕೆಯ ಬಲ ಸಿಕ್ಕಿತು.

ಇಲ್ಲಿ ಇಂಗ್ಲೀಷರ ರಾಜ್ಯ ಶಕ್ತಿಶಾಲಿಯಾಗಿತ್ತು, ಅದರ ಹಿಡಿತ ಜೋರಾಗಿತ್ತು. ಅದನ್ನು ಎದುರಿಸುವುದು ಹೇಗೆ? ಅದಕ್ಕೆ ಅಹಿಂಸಾತ್ಮಕ ಯುಕ್ತಿಯನ್ನು ಗಾಂಧೀಜೀ ಕಲಿಸಿದರು. ಅವರು ಹೇಳಿದರು: "ನಾವು ನಿರ್ವೈರವಾಗಿಯೂ ಇರುತ್ತೇವೆ, ಎದುರಿಸಿಯೂ ತೀರುತ್ತೇವೆ." ಜಗತ್ತಿಗೆ ಇಷ್ಟೊಂದು ದೊಡ್ಡ ವಿಚಾರ ಸಿಕ್ಕಿತು. ನಿರ್ವೈರ ಮತ್ತು ಪ್ರತೀಕಾರವೃತ್ತಿ, ಎರಡೂ ಸೇರಿತ್ತು. ತತ್ಫಲವಾಗಿ ಸಮಾಜಕ್ಕೆ ಹೊಸದೊಂದು ಮಾರ್ಗ ತೆರೆಯಿತು. ನಿರ್ವೈರದಿಂದ ಪ್ರತೀಕಾರದ ಶಕ್ತಿ ಹೆಚ್ಚಿತು, ಪ್ರತೀಕಾರದಿಂದ ನಿರ್ವೈರದ್ದು. ಭಾರಿ-ಭಾರಿ ಶಸ್ತ್ರಗಳೆಲ್ಲಾ ವ್ಯರ್ಥವಾದಂಥ ಯುಕ್ತಿಯೊಂದನ್ನು ಗಾಂಧೀಜೀ ನಮಗೆ ತೋರಿಸಿಕೊಟ್ಟರು. ಇಂಗ್ಲೀಷರು ರಾಜ್ಯ ನಡೆಸಲು ಸಾವಿರಾರು ಜನರ ಮತ್ತು ಕೋಟಿಗಟ್ಟಲೆ ಜನಗಳ ಸಹಕಾರ ಅತ್ಯಗತ್ಯ, ಆ ಸಹಕಾರವನ್ನು ನಿಲ್ಲಿಸುವುದೇ ಈ ಯುಕ್ತಿ. ಹಾಗೆ ಮಾಡಿದರೆ ಅಷ್ಟೊಂದು ಶಕ್ತಿಶಾಲಿಗಳಾದ ಇಂಗ್ಲೀಷರದು ಏನೂ ನಡೆಯಲಾರದು. ನಾವು ಸಹಕರಿಸದಿದ್ದರೆ ನಮ್ಮನ್ನವರು ಕೊಂದಾರು ಅಥವಾ ಸತಾಯಿಸಿಯಾರು, ಹಾಗಾದರೂ ಸಹ ನಾವು ಸಹಕರಿಸತಕ್ಕದ್ದಲ್ಲ. ಪ್ರಾಣ ಕೊಟ್ಟೇವು, ಆದರೆ ನಿಮ್ಮ ಮರ್ಜಿಯಂತೆ ಕೆಲಸ ಮಾಡೆವು. ಇಂಥ ಆತ್ಮಬಲದ ಯುಕ್ತಿಯನ್ನು ಗಾಂಧೀಜೀ ಕಲಿಸಿದರು.

ನಿರ್ಭಯವಾಗಿ 'ನ'ಕಾರ ಹೇಳುವ ಶಕ್ತಿ

ಒಬ್ಬ ಮನುಷ್ಯನನ್ನು ರಾಕ್ಷಸ ಹಿಡಿದ, ರಾಕ್ಷಸ ಅವನನ್ನು ಚೆನ್ನಾಗಿ ದುಡಿಸಿಕೊಳ್ಳುತ್ತಿದ್ದ, ಆರಾಮದ ಹೆಸರೇ ಇಲ್ಲ. ಸಣ್ಣ ಸೊಲ್ಲೆತ್ತಿದರೂ ತಿಂದು

ಬಿಡುವುದಾಗಿ ರಾಕ್ಷಸ ಬೆದರಿಸುತ್ತಿದ್ದ. ಕುಳಿತುಕೊಳ್ಳಲೂ ಬಿಡುತ್ತಿರಲಿಲ್ಲ. ಆಗ ಆ ಮನುಷ್ಯ ಎಷ್ಟು ದಿವಸ ನಡೆದೀತು ಇದು ಎಂದು ಯೋಚಿಸ ತೊಡಗಿದ. ಒಂದು ದಿನ ಹೇಳಿಯೇ ಬಿಟ್ಟ. "ಹೋಗು, ಕೆಲಸ ಮಾಡುವು ದಿಲ್ಲ, ತಿನ್ನುವುದಾದರೆ ತಿಂದುಹಾಕಿಬಿಡು." ಆದರೆ ರಾಕ್ಷಸ ಅವನನ್ನು ತಿನ್ನಲಿಲ್ಲ. ಏಕೆಂದರೆ ಒಮ್ಮೆ ತಿಂದುಹಾಕಿಬಿಟ್ಟರೆ ಕೆಲಸ ಮಾಡುವವರು ಯಾರು? ಆಮೇಲೆ ಆ ಮನುಷ್ಯನಿಗೆ ಧೈರ್ಯ ಬಂತು. ಅನಂತರ ಅವನು ಹೇಳಿದ: "ಕೂಲಿಯಿಲ್ಲದೆ ಕೆಲಸ ಮಾಡುವುದಿಲ್ಲ." ರಾಕ್ಷಸ ಕೂಲಿ ಯನ್ನೂ ಕೊಡತೊಡಗಿದ.

ಸಾರಾಂಶವೆಂದರೆ ನಕಾರ ಹೇಳುವ ಶಕ್ತಿ ಇದು, ನಿಮ್ಮ ತಪ್ಪು ಕೆಲಸ ದಲ್ಲಿ ಸಹಕಾರ ನೀಡುವುದಿಲ್ಲ ಎಂದು ಹೇಳುವ ಧೈರ್ಯ ನಮಗೆ ಬರಬೇಕು. ಹಾಗೆ ಹೇಳುತ್ತಾ ಸಾಯಬೇಕಾಗಿ ಬಂದರೂ ಸಾಯಬೇಕು. ಸಾವಿಗೆ ನಾವು ಹೆದರಬಾರದು. ಆತ್ಮ ಎಂದೂ ಸಾಯುವುದಿಲ್ಲ ಎಂದರೆ ನಮಗೆ ಸಾವಿಲ್ಲ. ಮನುಷ್ಯನಲ್ಲಿ ಅಂಥ ನಿರ್ಭೀತಿ ಬರಬೇಕು. ಎದುರಾಳಿಗೆ ನಿರ್ಭೀತಿಯಿಂದ ನಿನ್ನ ಕೆಟ್ಟ ಕೆಲಸದಲ್ಲಿ ನಾವು ಸಹಾಯ ಮಾಡುವುದಿಲ್ಲ ಎಂದು ಪ್ರೇಮ ದಿಂದ ಹೇಳಬೇಕು. ಇದು ನಿಜವಾದ ಅಹಿಂಸೆ.

ಹೆದರಿ-ಹೆದರಿ ಮನೆಯಲ್ಲಿ ಕುಳಿತು ಯುದ್ಧಕ್ಕೆ ಹೋಗದಿದ್ದರೆ ಅಹಿಂಸೆ ಆಯಿತು ಎಂದಲ್ಲ. ಯುದ್ಧಕ್ಕೆ ಹೋಗಿ ಹೇಳಬೇಕು ನಾ ಸಾಯಲು ಸಿದ್ಧ ವಿದ್ದೇನೆ, ಆದರೆ ಕೊಲ್ಲುವುದಿಲ್ಲ ಎಂದು. ಈ ಶಕ್ತಿ ಅಹಿಂಸೆಯದು, ಅದು ನಿಜವಾದ ಶಕ್ತಿ. ಅಹಿಂಸಾ ಶಕ್ತಿಯಿಂದ ಹಿಂಸೆಯ ದೊಡ್ಡ ರಾಕ್ಷಸನನ್ನು ಸಣ್ಣ ಬಾಲಕನೂ ಎದುರಿಸಬಲ್ಲ. ಅವನು ಇಷ್ಟೇ ತಿಳಿಯಬೇಕು—'ಸತ್ತರೆ ತಾನೇ ಏನು?' ಇಲ್ಲಿ ಶಾಶ್ವತ ಇರುವವರಾದರೂ ಯಾರು? ಭಗವಂತ ನಿನಗೆ ಯಾವ ದಿನವನ್ನು ಗೊತ್ತುಪಡಿಸಿದ್ದಾನೆಯೋ ಅದೇ ದಿನ ಸಾಯುವೆ. ಇಲ್ಲವಾದರೆ ಎಂದೂ ಇಲ್ಲ. ಇಂಥ ಅಹಿಂಸಾ ಶಕ್ತಿಯ ಎದುರು ಅಣು ಶಕ್ತಿಯೂ ಏನನ್ನೂ ಮಾಡಲಾರದು. ಈ ಯುಕ್ತಿಯನ್ನು ಗಾಂಧೀಜೀ ಕಲಿಸಿದರು. ವಾಸ್ತವವಾಗಿ ಇದು ನಮ್ಮ ಪುರಾತನ ಋಷಿಮುನಿಗಳ ಯುಕ್ತಿ. ಗಾಂಧೀಜೀ ಅದನ್ನೇ ಮತ್ತೆ ನಮ್ಮ ಮುಂದೆ ಇಟ್ಟರು. ಅವರು ಒಂದು ಹೆಜ್ಜೆ ಮುಂದೆ ಹೋಗಿ, ಅತ್ಯಂತ ದೊಡ್ಡ ಪ್ರಶ್ನೆಗಳನ್ನು ಪರಿಹರಿಸಬಲ್ಲ ಬಲಶಾಲೀ

ಶಕ್ತಿ ಅಹಿಂಷೆ ಎಂಬುದನ್ನು ನಮಗೆ ಕಲಿಸಿದರು. ಅಹಿಂಸಾ ಶಕ್ತಿಯನ್ನು ರಾಜಕೀಯ ಕ್ಷೇತ್ರದಲ್ಲಿ ಪ್ರಯೋಗ ಮಾಡಿ ತೋರಿಸಿದರು.

ಅಹಿಂಸೆಯ ಆತ್ಮ-ಪ್ರತ್ಯಯ ಆಗಲಿಲ್ಲ

ಆದರೆ ಜಗತ್ತಿನ ಹಾಗೂ ಭಾರತದ ಕೆಲವು ಜನರಿಗೆ ಶಂಕೆ ಉಳಿದು ಬಿಟ್ಟಿತು. ನಮಗೆ ಸಿಕ್ಕ ಸ್ವರಾಜ್ಯ ಕೇವಲ ಅಹಿಂಸೆಯ ಶಕ್ತಿಯಿಂದಲೇ ಅಲ್ಲ ಎಂದು. ಸ್ವರಾಜ್ಯ ದೊರೆತುದರಲ್ಲಿ ಜಗತ್ತಿನ ಪರಿಸ್ಥಿತಿಯದೂ ಸಾಕಷ್ಟು ಭಾಗವಿದೆ, ನಿಜ. ಆದರೆ ನಮ್ಮೊಳಗೆ ಇರಬೇಕಾದಷ್ಟು ಅಹಿಂಸೆಯ ಅನುಭವ ನಮಗಾಗಲಿಲ್ಲ ಎಂಬುದು ಮೂಲ ಸಂಗತಿ. ವೀರರಿಗೆ ಶೋಭಿಸುವಂಥ ಅಹಿಂಸೆಯನ್ನು ನಾವು ಪ್ರಯೋಗ ಮಾಡಲಿಲ್ಲ. ಗಾಂಧೀಜೀ ನಮಗೆ ವೀರರ ಅಹಿಂಸೆ ಕಲಿಸಲು ಪ್ರಯತ್ನಿಸಿದರು. ಆದರೂ ನಮ್ಮದು ಅಸಹಾಯಕತೆಯ ಅಹಿಂಸೆ ಆಗಿತ್ತು. ಗಾಂಧೀಜೀ ಬಯಸಿದಂಥ ಪ್ರತೀಕಾರ ನಡೆಯಲಿಲ್ಲ. ಜನರಿಗೆ ಅವರಲ್ಲಿ ನಂಬಿಕೆಯಿತ್ತು, ಅವರ ಹಿಂದೆ ಜನ ಹೋದರು. ಅದು ಬಲಶಾಲಿಗಳ ಅಹಿಂಸೆ ಆಗದೆ ದುರ್ಬಲರದಾಯಿತು. ಗಾಂಧೀಜಿಯ ಮಾರ್ಗದರ್ಶನದಲ್ಲಿ ನಡೆದ ಅಹಿಂಸಕ ಹೋರಾಟದಲ್ಲಿ ನಾವು ಹರಕು-ಮುರಕು ಅಹಿಂಸೆ ಆಚರಿಸಿದೆವು. ಮನಸ್ಸಿನಲ್ಲೋ ದ್ವೇಷ ಇಟ್ಟುಕೊಳ್ಳುತ್ತಿದ್ದೆವು, ಮೇಲೆ-ಮೇಲೆ ಅಹಿಂಸೆಯ ಆಚರಣೆ ತೋರಿಸುತ್ತಿದ್ದೆವು. ಪರಿಣಾಮತಃ ಸ್ವರಾಜ್ಯ ಬಂತು, ಆದರೂ ಅಹಿಂಸೆಯಿಂದ ಸ್ವರಾಜ್ಯ ಸಾಧಿಸಿದೆವು ಎಂದು ನಮಗೆ ಅನಿಸಲಿಲ್ಲ. ಇದರಿಂದ ಅಹಿಂಸೆಯ ಸ್ವಾರಸ್ಯ ಮುಗಿದುಹೋಯಿತು. ಅಹಿಂಸಾ ಶಕ್ತಿಯ ಕೆಲವು ಚಮತ್ಕಾರಗಳನ್ನು ನಾವು ನೋಡಿದೆವು, ಆದರೂ ಆ ಶಕ್ತಿಯ ಪ್ರತ್ಯಯ ನಮ್ಮಲ್ಲಿ ಕಾಣಲಿಲ್ಲ.

ಅಂತಲೇ ಇಂದಿಗೂ ನಮ್ಮಲ್ಲಿ ಅನೇಕರ ಮನಸ್ಸಿನಲ್ಲಿ ಹಿಂಸೆ-ಅಹಿಂಸೆಯ ಸಮಸ್ಯೆಯ ಅಂತಿಮ ಪರಿಹಾರ ಉಂಟಾಗಿಲ್ಲ. ಒಟ್ಟಿನಲ್ಲಿ ಅಹಿಂಸೆಯ ರಕ್ಷಣೆಗೆ ಸ್ವಲ್ಪ ಹಿಂಸೆ ಮಾಡಬೇಕಾಗಿ ಬಂದೀತು ಎಂದು ಜನ ಭಾವಿಸುತ್ತಾರೆ. ಹಳೆಯ ಕಾಲದಲ್ಲಂತೂ ಒಳ್ಳೊಳ್ಳೇ ಜನರೇ ಹಾಗೆ ತಿಳಿಯುತ್ತಿದ್ದರು. ಆದರೆ ಇಂದು ಗಾಂಧೀಜೀ ಆಗಿಹೋದಮೇಲೆಯೂ ಸಹ ನಮ್ಮ ಮನಸ್ಸಿನಲ್ಲಿ ಈ ವಿಷಯವಾಗಿ ಒಂದು ರಾಜಿ ಆಗಿಹೋಗಿದೆ. ಹಿಂದಿನ ಧರ್ಮಗಳಲ್ಲಿಯೂ

ಸಹ ಹಾಗೆಯೇ ಆಯಿತು. ಅಹಿಂಸೆ ಖಂಡಿತವಾಗಿಯೂ ಉತ್ತಮ, ಆದರೆ ಅದು ವ್ಯಕ್ತಿಗತ ಜೀವನದಲ್ಲಿ ಎಂದು ಅವರು ತಿಳಿದರು. ಸಮಾಜದಲ್ಲಾದರೋ ಹಿಂಸೆಯೊಡನೆ ಸ್ವಲ್ಪ ರಾಜಿ ಮಾಡಿಕೊಳ್ಳಬೇಕಾಗುತ್ತದೆ. ಹಾಗಿಲ್ಲದಿದ್ದರೆ ಭಾನುವಾರದ ದಿವಸ ಪೂರ್ಣಶ್ರದ್ಧೆಯಿಂದ ಬೈಬಲ್ ಓದುವುದು, ಉಳಿದ ಆರು ದಿವಸ ಹೊಸ ಹೊಸ ಆಯುಧಗಳನ್ನು ತಯಾರಿಸಿ ಅವುಗಳನ್ನು ಪೇರಿಸುತ್ತ ಹೋಗುವುದು ಹೇಗೆ ಸಾಧ್ಯ? ಮುಂದೆ ಬರಲಿರುವ ಸಮಾಜಕ್ಕೆ ಅಹಿಂಸೆ ಬಹು ಉಪಯುಕ್ತವಾಗುತ್ತದೆ ಎಂದು ಈ ಜನ ತಿಳಿಯುತ್ತಾರೆ. ಆದರೆ ಕಣ್ಣುಮುಂದಿರುವ ಸಮಾಜಕ್ಕೆ ಹಿಂಸೆ ಮುಂತಾದ ವ್ಯವಹಾರವನ್ನೇ ನಡೆಸಬೇಕಾದೀತು ಎಂದು ತಿಳಿಯುತ್ತಾರೆ. ಗಾಂಧೀಜೀ ನಮಗೆ ಕೊಟ್ಟ ಶಿಕ್ಷಣವನ್ನು ಹೀಗೆ ಗೌಣವೆಂದು ಭಾವಿಸುತ್ತಾರೆ. ಇದಕ್ಕೆ ಕಾರಣ ಸಮಾಜದಲ್ಲಿ ಇಲ್ಲಿಯವರೆಗೆ ನೈತಿಕ ಸಾಧನಗಳಿಗೆ ಸಿಗಬೇಕಾದಷ್ಟು ಪ್ರತಿಷ್ಠೆ ಸಿಗದಿರುವುದು.

ಗಾಂಧೀ ಅನುಯಾಯಿಗಳೋ ಅಥವಾ ತಿಲಕರದೋ?

ಆದುದರಿಂದ ನಾನು ಅನೇಕ ಸಾರಿ ಹೇಳುತ್ತೇನೆ: ನಾವೆಲ್ಲರೂ ಗಾಂಧೀಜಿಯ ಅನುಯಾಯಿಗಳೆಂದು ಹೇಳಿಕೊಂಡರೂ ವಾಸ್ತವವಾಗಿ ನಮ್ಮಲ್ಲಿ ಕೆಲವರು ತಿಲಕ ಮಹಾರಾಜರ ಅನುಯಾಯಿಗಳೇ ಹೌದು. ಲೋಕಮಾನ್ಯರು ತಮ್ಮ ಗೀತಾ ರಹಸ್ಯದಲ್ಲಿ ಅಹಿಂಸೆಗೆ ಬಹು ಗೌರವ ಕೊಟ್ಟಿದ್ದಾರೆ, ಆದರೆ ಅನಂತರ ಹೇಳಿದರು 'ಇದರ ಸ್ಥಾನ ವ್ಯಕ್ತಿಗತ ಜೀವನದಲ್ಲಿ, ಸಾರ್ವಜನಿಕ ಜೀವನದಲ್ಲಿ ಅಹಿಂಸೆ ನಡೆಯಬಾರದು' ಎಂದು. ನಮ್ಮಲ್ಲಿ ಬಹು ಮಂದಿ ಲೋಕಮಾನ್ಯರ ಈ ನಂಬಿಕೆಯನ್ನೇ ವ್ಯವಹಾರದಲ್ಲಿ ಅನುಸರಿಸುತ್ತಾರೆ. ಸಮಾಜ ಜೀವನದಲ್ಲಿ ಆಚರಿಸುವ ಪ್ರಶ್ನೆ ಬಂದಾಗ ಹಿಂಸೆ-ಅಹಿಂಸೆಯ ವಿಷಯದಲ್ಲಿ ರಾಜಿ ಮಾಡಿಕೊಂಡುಬಿಡುತ್ತಾರೆ.

ರೈಫಲ್ ಕ್ಲಬ್ ತೆಗೆಯಬೇಕಾಗಿದ್ದರೂ ಗಾಂಧೀಜಿಯ ಹೆಸರನ್ನೆತ್ತಿಕೊಂಡೇ ತೆಗೆಯುತ್ತಾರೆ. 'ಅಂಜಿ ಓಡುವುದಕ್ಕಿಂತ ಶೌರ್ಯದಿಂದ ಸಾಯುವುದು ಮೇಲು' ಎಂದೆಲ್ಲ ಹೇಳಿಕೊಳ್ಳುತ್ತಾರೆ. ಮತ್ತೆ ನೋಡಿ! ದಿಲ್ಲಿಯಲ್ಲಿ ಗಾಂಧೀಜಿಯ ಸಮಾಧಿಯ ಬಳಿಯೇ ಬಂದೂಕ ಹೊತ್ತ ಸಿಪಾಯಿ

ಪಹರೆಯಿರುತ್ತಾನೆ. ಅಹಿಂಸೆಯ ಪೂಜಾರಿಯ ಸಂಗಡ ಇಂಥ ವರ್ತನೆಯಿಂದ ಖಂಡಿತ ನೋವಾಗುತ್ತದೆ. ಆದರೆ ಅಂಥ ಸಮಯದಲ್ಲಿ ವಿನೋದ ಮಾಡಿಬಿಡುತ್ತೇನೆ. ಮರಾಠಿಯಲ್ಲಿ ಒಂದು ಗಾದೆಯಿದೆ: **'ಅತಿ ಝಾಲೇ, ಹಸುಂ ಆಲೇ'** ಇದು ಗಾಂಧೀಜಿಯದೇ ತಪ್ಪು, ಅವರು ಸಾಯಲು ದಿಲ್ಲಿಯನ್ನೇ ಆರಿಸಿಕೊಂಡರು ಎಂದು ನಾನು ವಿನೋದದಿಂದ ಹೇಳಿಬಿಡುತ್ತೇನೆ. ದಿಲ್ಲಿಯಲ್ಲಾದರೋ ಎಲ್ಲಾ ದಿಲ್ಲಿ ರೀತಿಯಲ್ಲೇ ನಡೆಯಬೇಕಲ್ಲ? ಹೌದು, ಈ ಸೈನಿಕರು ಸಮಾಧಿಯ ಬಗೆಗೆ ಆದರರೂಪವಾಗಿ ತಮ್ಮ ಶಸ್ತ್ರವನ್ನು ಕೆಳಗೆ ಮಾಡಿ ನಿಂತಿರುತ್ತಾರೆ. ಹಿಂಸೆ ಅಹಿಂಸೆಯ ಎದುರು ತಲೆಬಾಗಿ ನಿಂತಿದೆ ಎಂಬ ಪ್ರತೀಕಾರ್ಥವೂ ಹೊರಡಬಹುದು.

ಅನುಕೂಲಸಿಂಧುವೇ ಸಂತೋಷವೇ?

ಇದುವರೆಗೆ ನಮಗೆ ನಿಜವಾಗಿ ಅಹಿಂಸೆಯ ಶಕ್ತಿಯ ಪೂರಾ ಪೂರಾ ಭಾಸವೇ ಆಗಿಲ್ಲ. ಇಲ್ಲದಿದ್ದರೆ ಗಾಂಧೀಜಿಯ ಹೆಸರಿನಲ್ಲಿ ಹೀಗೆಲ್ಲಾ ನಡೆಯುತ್ತಿರಲಿಲ್ಲ. ಅಹಿಂಸೆಯ ಧ್ಯಾನ ಕೇವಲ ವ್ಯಕ್ತಿಜೀವನದಲ್ಲಿ ಮಾತ್ರವಲ್ಲ, ಸಾರ್ವಜನಿಕ ಜೀವನದಲ್ಲೂ ಅದಕ್ಕೆ ಸ್ಥಾನವಿದೆ ಎಂದು ಮುಖ್ಯವಾಗಿ ಒತ್ತಿ ಹೇಳಿದ್ದರು ಗಾಂಧೀಜೀ. ಅಹಿಂಸೆಯ ಮಾತನ್ನು ಧರ್ಮಗಳು ಕಡಿಮೆ ಹೇಳಿವೆಯೇ? ಜೈನ ಧರ್ಮವಾದರೋ ವ್ಯಕ್ತಿಗತ ಜೀವನಲ್ಲಿ ಅಹಿಂಸೆಯ ವಿಚಾರವನ್ನು ಎಷ್ಟು ಸೂಕ್ಷ್ಮವಾಗಿ ಮಾಡುತ್ತದೆ. ಪ್ರಾಣಿ ಮಾತ್ರಕ್ಕೆ ಕಷ್ಟವಾಗಬಾರದು ಎಂದು ಎಚ್ಚರ ವಹಿಸುತ್ತದೆ. ಜಂತುಗಳ ನಾಶವಾಗುವುದನ್ನೂ ಜೈನರು ಸಹಿಸುವುದಿಲ್ಲ. ಮತ್ತೊಂದು ಕಡೆ ಅವರೇ ಸೇನೆಯನ್ನು ಸಮರ್ಥಿಸುತ್ತಾರೆ. ಮಾಂಸಾಹಾರವನ್ನು ನಿಷೇಧಿಸುತ್ತಾರೆ, ಸೇನೆ ಬೇಕೆನ್ನುತ್ತಾರೆ. ಈ ರೀತಿ ನಾವು ಎಲ್ಲ ಧರ್ಮಗಳ ಜೊತೆಯೂ ರಾಜಿ ಮಾಡಿಕೊಂಡು ಬಿಟ್ಟಿದ್ದೇವೆ. ಧರ್ಮವೂ ವ್ಯಾವಹಾರಿಕವಾಗಿರಬೇಕು ಎನ್ನುತ್ತೇವೆ, ಎಲ್ಲ ಧರ್ಮಗಳನ್ನೂ ಸಮಾಪ್ತಿಗೊಳಿಸುವ ಇಂಥ ಧರ್ಮ ಅನುಕೂಲಸಿಂಧು. ಧರ್ಮ ನಮ್ಮ ಅನುಕೂಲಕ್ಕೆ ತಕ್ಕಂತೆ ನಡೆಯುವುದು. ಧರ್ಮಕ್ಕಾಗಿ ಯಾವುದೇ ಕಷ್ಟ, ಅನನುಕೂಲಪಡಲು ತಯಾರಿಲ್ಲ.

ಬೇರೆಯವರು ಹೇಗೆ ಬೇಕಾದರೂ ಹೇಳಲಿ; ಗಾಂಧೀಜನರು ಹೀಗೆ

ಹೇಳತೊಡಗಿದರೆ ಗಾಂಧೀಜಿ ಬಂದದ್ದು ಹೋದದ್ದು ಎಲ್ಲಾ ವ್ಯರ್ಥ ಎಂದು ನಾನು ಹೇಳುತ್ತೇನೆ. ಗಾಂಧೀ ವಿಚಾರಕ್ಕೆ ಹೀಗೆ ಅರ್ಥ ಮಾಡುವುದಾದರೆ ಬಾಪೂಗೆ ನಾವು ಬಹು ಅನ್ಯಾಯ ಮಾಡುತ್ತೇವೆ.

ಹಿಂಸೆ-ಅಹಿಂಸೆಯ ವಿಷಯದಲ್ಲಿ ನಮ್ಮ ಮನಸ್ಸಿನಲ್ಲಿ ನಾವು ನಿಚ್ಚಳವಾಗಿಲ್ಲ ಎಂಬುದೇ ನಿಜ. ಅದರಿಂದಲೇ ಇಷ್ಟು ವರ್ಷಗಳಾದರೂ ದೇಶದಲ್ಲಿ ಹಿಂಸೆ ಕಡಿಮೆಯಾಗಿಲ್ಲ. ಜನರ ಮನಸ್ಸಿನಲ್ಲಿ ಈಗಲೂ ಅದು ಇದೆ. ಗಾಂಧೀಜಿ ಮತ್ತು ಸುಭಾಷ್ ಬಾಬೂ ಇಬ್ಬರ ಮಾರ್ಗಗಳಿವೆ, ದೇಶಕ್ಕೆ ಎರಡೂ ಅಗತ್ಯ, ಎರಡೂ ಒಂದಾದರೆ ಆಗಲೇ ದೇಶದ ಕೆಲಸ ನಡೆದೀತು ಎಂದು ಜನ ಯೋಚಿಸುತ್ತಾರೆ. ಜಲಜನಕ ಮತ್ತು ಆಮ್ಲಜನಕ ಸೇರಿ ನೀರಾಗುವಂತೆಯೇ ದೇಶದ ಕೆಲಸ ಪಾರುಗಾಣಲು ಗಾಂಧೀಜೀ ಮತ್ತು ಸುಭಾಷ್ ಬಾಬು ಇಬ್ಬರ ಮಾರ್ಗವೂ ಬೇಕು ಎಂದವರು ತಿಳಿಯುತ್ತಾರೆ. ಎರಡರ ಸಂಯೋಗದಿಂದಲೇ ಇಂದು ಕೆಲಸ ನಡೆಯುತ್ತಿದೆ ಎಂಬ ಭ್ರಮೆ ಜನರ ಮನಸ್ಸಿನಲ್ಲಿ.

ಅಣುಯುಗದಲ್ಲಿ ವಿಜ್ಞಾನದ ಸವಾಲು

ನಿಜವಾಗಿ ಇಂದು ಜಗತ್ತು ಅಹಿಂಸೆಯತ್ತ ತೀವ್ರವಾಗಿ ಮುಂದೆ ಸಾಗುತ್ತಿದೆ. ವಿಜ್ಞಾನ ಹಿಂದೆ ಇದ್ದಿರದಿದ್ದ ಸಮಸ್ಯೆಯೊಂದನ್ನು ಮನುಷ್ಯನ ಎದುರು ಹುಟ್ಟಿಸಿದೆ. ಹಿಂದೆ ಇದ್ದ ಹಿಂಸೆಯ ಸಾಧನಗಳಿಂದ ಕೆಲವು ಪ್ರಶ್ನೆಗಳು ಪರಿಹಾರವಾಗುತ್ತಿದ್ದುವು. ಹಾಗೆ ಹಿಂಸೆ ಬದುಕಿತ್ತು. ಹಿಂಸೆಯಿಂದ ಲಾಭವೂ ಆಗುತ್ತಿತ್ತು, ನಷ್ಟವೂ. ಎಷ್ಟು ಲಾಭವಾಗುತ್ತಿತ್ತೋ ಅಷ್ಟು ಹಿಂಸೆಗೆ ಆಶ್ರಯ ಸಿಗುತ್ತಿತ್ತು. ಈಗ ಅಣುಶಸ್ತ್ರ ಬಂದಿವೆ. ಈಗ ಇಲ್ಲವೆ ಅಹಿಂಸಕ ಸಮಾಜ ನಿರ್ಮಾಣವಾದೀತು ಇಲ್ಲವೇ ಮಾನವಕುಲವೇ ಮುಗಿದುಹೋದೀತು. ವಿಜ್ಞಾನ ಈ ಸಮಸ್ಯೆಯನ್ನು ಮನುಷ್ಯನೆದುರು ನಿಲ್ಲಿಸಿಬಿಟ್ಟಿದೆ. ಅಣುಶಸ್ತ್ರಗಳ ಸಂಶೋಧನೆಯಾದಮೇಲೆ ಅತಿ ಹಿಂಸೆ ಹಾಗೂ ಅತಿ ಅಹಿಂಸೆ ಪರಸ್ಪರ ಕೈಚಾಚುತ್ತಿವೆ. ಈ ಅಣುಶಸ್ತ್ರಗಳು ಮಾನವನನ್ನು ಅಹಿಂಸೆಯತ್ತ ಒಯ್ಯುತ್ತದೆಂದು ನನ್ನ ನಂಬಿಕೆ. ಇಲ್ಲದಿದ್ದರೆ ಮಾನವಕುಲವೇ ನಾಶವಾಗಿಹೋಗುತ್ತದೆ. ದೇವರಿಗೆ ಸಂಹಾರ ಬೇಕಿಲ್ಲದಿದ್ದರೆ ಅಹಿಂಸಕ

ಸಮಾಜ ಅನಿವಾರ್ಯ. ಇಂದು ಜಗತ್ತು ಅಹಿಂಸೆಯತ್ತ ತೀವ್ರವಾಗಿ ಸಾಗುತ್ತಿದೆಯೆಂದು ನನ್ನ ವಿಶ್ವಾಸ.

ಗಾಂಧೀಜಿಯ ಮರಣದ ಬಳಿಕ ಬಹಳ ಸಂದೇಶಗಳು ಬಂದುವು. ಅದರಲ್ಲಿ ಜನರಲ್ ಮೆಕಾರ್ಥರರ ಸಂದೇಶವೂ ಇತ್ತು: 'ಜಗತ್ತು ಎಂದಾದರೊಂದು ದಿನ ಗಾಂಧೀಜಿಯ ಮಾತನ್ನೇ ಕೇಳಬೇಕಾದೀತು, ಅದರ ಹೊರತು ದಾರಿಯೇ ಇಲ್ಲ'—ಎಂದಿತ್ತು. ಅವರಿಗೆ ಹಾಗೆ ಹೇಳಬೇಕಾಗಿಯೇ ಇದೆ. ಅಣುಶಸ್ತ್ರಗಳ ದೆಸೆಯಿಂದ ಒಂದು ವಿಶಿಷ್ಟ ಪರಿಸ್ಥಿತಿ ನಿರ್ಮಾಣವಾಗಿದೆ.

ಆದುದರಿಂದ ಇಂದು ಹಿಂಸೆ ಗತಕಾಲದ ವಸ್ತುವಾಗಿಹೋಗಿದೆ. ಗಾಂಧೀಜಿಯ ಅಹಿಂಸೆಯ ಮಾತು ನಮ್ಮ ಕಾಲಕ್ಕೆ ಅತ್ಯಂತ ಅನುಕೂಲವಾಗಿದೆ. ನಾವು ನಮ್ಮ ಸಾಮಾಜಿಕ ಸಮಸ್ಯೆಗಳನ್ನೂ ಹಾಗೂ ಆರ್ಥಿಕ ಸ್ವಾತಂತ್ರ್ಯದ ಪ್ರಶ್ನೆಯನ್ನೂ ಅಹಿಂಸಾ ಶಕ್ತಿಯಿಂದ ಪರಿಹರಿಸಿಕೊಂಡರೆ ಜಗತ್ತಿನಲ್ಲಿ ನಿಶ್ಶಸ್ತ್ರ ಪ್ರತೀಕಾರ ಪ್ರಭಾವಶಾಲಿ ಎಂದು ಸಿದ್ಧವಾದೀತು. ಜಗತ್ತಿಗೆ ಒಂದು ಹಾದಿ ಸಿಕ್ಕೀತು. ಇಂದು ಹಿಂಸೆ ನಡೆಸಿ ನಡೆಸಿ ಸೋತು ಹೋಗಿರುವ ಜಗತ್ತು ಅದನ್ನು ಬಿಡಲು ಸಿದ್ಧವಿದೆ, ಅಂಥ ಪರಿಸ್ಥಿತಿ ಇದೆ. ಆದುದರಿಂದ ಸಾಮಾಜಿಕ, ಆರ್ಥಿಕ ಕ್ಷೇತ್ರದಲ್ಲಿ ಅಹಿಂಸೆಯ ಚಮತ್ಕಾರವನ್ನು ನಾವು ಮಾಡಿ ತೋರಿಸಬೇಕು. ಸಾಮಾಜಿಕ ಸಮಸ್ಯೆಗಳು ಅಹಿಂಸೆಯಿಂದ ಪರಿಹಾರವಾಗುತ್ತವೆ ಎಂಬ ಪ್ರತೀತಿಯನ್ನು ಜಗತ್ತಿಗೆ ಮನಗಾಣಿಸಿಕೊಡಬೇಕು. ಗಾಂಧೀಜಿಯ ನೇತೃತ್ವದಲ್ಲಿ ಅಹಿಂಸೆಯ ಮಾರ್ಗದಿಂದ ಸ್ವರಾಜ್ಯ ಪ್ರಾಪ್ತಿ ಮಾಡಿದೆವು. ಅನಂತರ ಈ ಕೆಲಸವನ್ನು ಮಾಡಬೇಕಾಗಿದೆ. ●

೧೦

ನಿಶ್ಶಸ್ತ್ರ ಪ್ರತೀಕಾರ

ಮನುಷ್ಯನ ವ್ಯಕ್ತಿಗತ ಜೀವನದಲ್ಲಿ ಧರ್ಮಸಂಕಟದ ಸಮಯಗಳು ಬರುತ್ತವೆ. ಮನಸ್ಸಿನಲ್ಲಿ ಏಳುವ ಪರಸ್ಪರ ವಿರೋಧೀ ಎಂದು ಭಾಸವಾಗುವ ವಿಚಾರಗಳಲ್ಲಿ ಏನಾದರೊಂದು ನಿರ್ಣಯ ಮಾಡಿಕೊಳ್ಳಬೇಕಾಗುತ್ತದೆ. ಅಂಥ ಪ್ರಸಂಗ ರಾಷ್ಟ್ರಜೀವನದಲ್ಲಿಯೂ ಬರುತ್ತವೆ. ಆ ಸಮಯದಲ್ಲಿ ಅನೇಕ ಮನೀಷಿಗಳ ನಿರ್ಣಯಗಳಲ್ಲಿ ಅಂತರವಷ್ಟೇ ಅಲ್ಲ, ಪರಸ್ಪರ ವಿರೋಧವೂ ಉಂಟಾಗುತ್ತದೆ.

ಎರಡನೇ ಮಹಾಯುದ್ಧ ಕಾಲದ ನಾಲ್ಕು ಭೂಮಿಕೆಗಳು

ಎರಡನೇ ಮಹಾಯುದ್ಧದ ಕಾಲದಲ್ಲಿ ನಮ್ಮ ವ್ಯಾವಹಾರಿಕ ಹಾಗೂ ಆಧ್ಯಾತ್ಮಿಕ ನಾಯಕರಲ್ಲಿ ಭಿನ್ನ-ಭಿನ್ನ ಅಭಿಪ್ರಾಯಗಳಿದ್ದುದನ್ನು ನಾವು ನೋಡಿದೆವು. ಭಾರತದ ದೊಡ್ಡ ದೊಡ್ಡವರೆನಿಸಿಕೊಂಡ ನಾಲ್ವರ ಭೂಮಿಕೆ ನಾಲ್ಕು ಬಗೆಯಾಗಿತ್ತು. ಸುಭಾಷರದೊಂದು ಭೂಮಿಕೆ. ಅವರು ಹೇಳಿದರು : ಭಾರತದ ಸ್ವಾತಂತ್ರ್ಯ ಸಾಧಿಸಲು ಇದು ಸದವಕಾಶ, ಆದಕಾರಣ ಇಂಗ್ಲೀಷರ ವಿರುದ್ಧ ದಂಗೆ ಹೂಡಬೇಕು. ಮತ್ತು ಅವರ ವಿರೋಧಿಗಳ ಸಹಕಾರವನ್ನೂ ಪಡೆಯಬೇಕು. ಎರಡನೇ ಭೂಮಿಕೆ ಪಂಡಿತ ನೆಹರೂ, ಸರ್ದಾರ್ ಪಟೇಲ್ ಮುಂತಾದವರದು. ಇಂಗ್ಲಿಷರು ಭಾರತಕ್ಕೆ ಸ್ವರಾಜ್ಯ ಕೊಟ್ಟುದಾದರೆ ನಮ್ಮಿಂದ ಎಷ್ಟೆಲ್ಲ ಸಾಧ್ಯವೋ ಅಷ್ಟು ಬಗೆಯಿಂದಲೂ ಸಹಕಾರ ನೀಡ ಬಹುದು ಎಂಬುದು ಅದರ ಅಭಿಪ್ರಾಯವಾಗಿತ್ತು. ಗಾಂಧೀಜಿಯದು ಮೂರನೇ ಭೂಮಿಕೆ. ಅವರೆಂದರು : ನಾವು ಸರಕಾರದೊಡನೆ ಅಸಹಕಾರ ಮಾಡುತ್ತೇವೆ, ಆದರೆ ಅದು ಭಾರತಕ್ಕೆ ಸ್ವರಾಜ್ಯ ಕೊಟ್ಟರೆ ನಾವು ಅದಕ್ಕೆ ನೈತಿಕ ಸಮರ್ಥನೆ ಕೊಡಬಲ್ಲೆವು. ಮತ್ತಾವ ಸಹಾಯವನ್ನೂ ಮಾಡ ಲಾರೆವು. ನಮ್ಮ ನೈತಿಕ ಸಮರ್ಥನೆ ಸಿಕ್ಕೀತು, ಆದರೆ ಶಸ್ತ್ರ ಹಿಡಿದಲ್ಲ.

ನಾಲ್ಕನೆಯ ಭೂಮಿಕೆ ಶ್ರೀ ಅರವಿಂದರದು. ಈ ಯುದ್ಧದಲ್ಲಿ ಉಭಯ ಪಕ್ಷಗಳ ತುಲನೆಯಲ್ಲಿ ದೈವೀಶಕ್ತಿಗಳು ಬ್ರಿಟಿಷ್ ಮತ್ತು ಫ್ರೆಂಚರ ಪರವಾಗಿ ಅಧಿಕ ಪ್ರಮಾಣದಲ್ಲಿರುವುದು ಸ್ಪಷ್ಟ ಎಂದು ಅವರು ಹೇಳಿದರು. ಆದುದರಿಂದ ನಮ್ಮ ಸಹಾನುಭೂತಿ ಅವರ ಕಡೆಗಿರಬೇಕು, ಯಾವ ಷರತ್ತೂ ಇಲ್ಲದೆ ಸಹಾಯ ಸಲ್ಲಿಸಬೇಕು. ಹೀಗೆ ಹೇಳಿ ಸಹಾನುಭೂತಿಯ ಪ್ರತೀಕವಾಗಿ ಪುದುಚೇರಿಯ ಆಶ್ರಮದಿಂದ ಸ್ವಲ್ಪ ಹಣವನ್ನೂ ಬ್ರಿಟಿಷ್ ಸರಕಾರಕ್ಕೆ ಕಳುಹಿಸಿದರು.

ಈ ರೀತಿ ಅರವಿಂದರ ಬೇಷರತ್ ಸಮರ್ಥನೆ, ಸುಭಾಷರ ಬೇಷರತ್ ವಿರೋಧ, ಗಾಂಧೀಜಿಯ ಷರತ್ತಿನ ನೈತಿಕ ಸಮರ್ಥನೆ ಮತ್ತು ಪಂಡಿತ್ ನೆಹರೂ ಅವರ ಷರತ್ತಿನಿಂದ ಕೂಡಿದ ಸೈನಿಕ ಸಹಾಯ—ಇವು ನಾಲ್ವರು ದೊಡ್ಡವರ ನಾಲ್ಕು ಬಗೆಯ ತೀರಾ ಭಿನ್ನ-ಭಿನ್ನ ವಿಚಾರವಾಗಿತ್ತು. ಹೀಗೆ ಅನಿವಾರ್ಯವಾಗುವ ಇಂಥ ಪ್ರಸಂಗಗಳು ಬರುತ್ತವೆ.

ವೀರರಾಗಿ, ಮಹಾವೀರರಾಗಿ

ಭಾರತದ ಮೇಲೆ ಚೀಣಾ ಆಕ್ರಮಣ ನಡೆಸಿದಾಗಲೂ ಇಂಥದೇ ಪ್ರಸಂಗ ಬಂತು. ಭಿನ್ನ ಭಿನ್ನ ಪಕ್ಷಗಳ ಜತೆಯಲ್ಲಿರುವ ಗಾಂಧೀಜಿಯ ರಾಜಕೀಯ ಸಂಗಾತಿಗಳು ಹಾಗೂ ರಚನಾತ್ಮಕ ಕೆಲಸ ಮಾಡುವ ಸಂಗಡಿಗರಲ್ಲಿ ಭಿನ್ನ ಭಿನ್ನ ಮತವಿತ್ತು. ಈ ಹೋರಾಟದ ಸಮಾಚಾರ ಸಿಕ್ಕ ದಿನವೇ ನಾನು ನನ್ನ ಅಭಿಪ್ರಾಯ ಪ್ರಕಟಿಸಿದೆ. ಇದು ಚೀನದ ಕೀಳು ಆಕ್ರಮಣ, ಅನುಚಿತ ಕೆಲಸ, ಭಾರತದ ಮೇಲೆ ಯುದ್ಧವನ್ನು ಅದು ಹೇರಿದೆ ಎಂದು ಹೇಳಿದೆ. ಇದೇ ರೀತಿ ಆಕ್ರಮಣವಾಗುತ್ತಿದ್ದರೆ, ಯಾವ ದೇಶವೂ ಅದನ್ನು ಸಹಿಸಲು ಶಕ್ಯವಿಲ್ಲ. ಸಹಿಸಿದರೆ ದೇಶ ಮುಂದೆ ಹೋಗಲಾರದು. ಆದಕಾರಣ ಭಾರತದೆದುರು ಇಂದು ಒಂದು ಧರ್ಮಯುದ್ಧ ಬಂದು ನಿಂತಿದೆ. ಜನತೆಯನ್ನು ಲಕ್ಷಿಸಿ ನಾನು ಹೇಳಿದೆ: 'ವೀರರಾಗಿ, ಮಹಾವೀರರಾಗಿ'. ಕ್ರೂರಿಗಳಲ್ಲದವರು ಮತ್ತು ಹೇಡಿಗಳಲ್ಲದವರು, ಎಂದರೆ ನಿರ್ಭೀತಿಯಿಂದ ಎದುರಿಸುವವರು ವೀರರು. ಯಾವುದೇ ಶಸ್ತ್ರವಿಲ್ಲದೆ ಸಾಯಲು ಸಿದ್ಧವಿರುವವರು ಮತ್ತು ಇತರರನ್ನು ಕೊಲ್ಲುವ ಕಲ್ಪನೆಯನ್ನೇ ಮಾಡದಿರುವವರು ಮಹಾ

ವೀರರು. ಚೀನದ ಆಕ್ರಮಣದ ಸಮಯದಲ್ಲಿ ಇದು ನನ್ನ ನಿಲುವಾಗಿತ್ತು.
ಆ ಸಮಯದಲ್ಲಿ ಸರಿಯಾದ ವೇಳೆಯಲ್ಲಿ ನಾವೇನೂ ಮಾಡಲಿಕ್ಕಿಲ್ಲವಲ್ಲ, ಚೀನದ ಆಕ್ರಮಣವನ್ನು ಅಹಿಂಸಕ ಪ್ರತೀಕಾರದಿಂದ ಎದುರಿಸಲಾರೆವಲ್ಲ ಎಂದು ಪಶ್ಚಾತ್ತಾಪ ಉಳಿದುಬಿಟ್ಟಿತು. ಇದರೊಡನೆ ಗಾಂಧೀಜಿಯ ಹೆಸರನ್ನು ಕೆಲವರು ಜೋಡಿಸಿ ಗಾಂಧೀಜೀ ಇದ್ದಿದ್ದರೆ ಹೀಗೆ ಮಾಡುತ್ತಿದ್ದರು ಎಂದೆಲ್ಲಾ ಹೇಳಿದರು.

ಆದರೆ ಈ ರೀತಿ ಗಾಂಧೀಜಿಯ ಹೆಸರೆನ್ನಿತ್ತಿಕೊಳ್ಳುವುದು ಸರಿಯಲ್ಲ. ಈ ಸಮಯದಲ್ಲಿ ಗಾಂಧೀಜೀ ಇದ್ದಿದ್ದರೆ ಹೀಗೆ ಮಾಡುತ್ತಿದ್ದರು ಎಂದು ಹೇಳುವವರು ಗಾಂಧೀಜಿಯ ಅಂತರ್ಯಾಮಿಗಳಾಗಬೇಕು. **ಲೋಕೋತ್ತ-ರಾಣಾಂ ಚೇತಾಂಸಿ ಕೋ ಹಿ ವಿಜ್ಞಾತುಮರ್ಹತಿ** — ಎಂದರೆ 'ಲೋಕೋತ್ತರ ಪುರುಷರ ಮನಸ್ಸಿನಲ್ಲಿರುವುದನ್ನು ಯಾರು ಬಲ್ಲರು?' ಎಂಬ ಮಾತನ್ನು ನಾವು ತಿಳಿಯಬೇಕು. ಗಾಂಧೀಜೀ ನಿತ್ಯ ವಿಕಾಸಶೀಲರಾಗಿದ್ದರು. ಅವರಿಗೆ ಸತ್ಯದ ನಿತ್ಯನೂತನ ದರ್ಶನವಾಗುತ್ತಿತ್ತು. ಪರಿಸ್ಥಿತಿಯನ್ನರಿತು ಅತ್ಯುನ್ನತ ಮಟ್ಟಕ್ಕೆ ಏರುವ ಶಕ್ತಿ ಅವರಲ್ಲಿತ್ತು. ಆದುದರಿಂದ ಇಂದು ಗಾಂಧೀಜೀ ಇದ್ದಿದ್ದರೆ ಏನು ಮಾಡುತ್ತಿದ್ದರು ಎಂದು ಊಹಿಸುವುದು ಸರಿಯಲ್ಲ. ಇಂದಿನ ಪರಿಸ್ಥಿತಿ ಇಷ್ಟೊಂದು ಬದಲಾಯಿಸಿಹೋಗಿದೆ. ಗಾಂಧೀಜೀ ಎಷ್ಟು ಹೇಳಿರುವರೋ ಅದರಿಂದ ಮಾರ್ಗದರ್ಶನ ಸಿಗುವುದಿಲ್ಲ. ಕಾಲಕಾಲಕ್ಕೆ ಅವರು ಬದಲಾಗುತ್ತ ಹೋಗುತ್ತಿದ್ದರು.

ಒಂದು ಕಾಲದಲ್ಲಿ ಅವರು ಕಾಠೇವಾಡದ ಪೋಷಾಕು ಧರಿಸುತ್ತಿದ್ದರು. ಆಗ ತಲೆಯಮೇಲೆ ದೊಡ್ಡದೊಂದು ಪೇಟ ಕಟ್ಟುತ್ತಿದ್ದರು. ಆ ಕಾಲದಲ್ಲಿ ಅದು ದೇಶೀ ಪೋಷಾಕೆಂದು ತಿಳಿಯಲ್ಪಡುತ್ತಿತ್ತು. ಹಗುರವಾದದ್ದೆಂತಲೂ ತಿಳಿಯುತ್ತಿದ್ದರು. ಸಾಹೇಬರ ಪೋಷಾಕಿಗೆ ಗೌರವವಿತ್ತು. ಆದಕಾರಣ ಗಾಂಧೀಜೀ ಆ ಸಮಯದಲ್ಲಿ ರೈತನ ವೇಷ ತೊಟ್ಟರು. ಅನಂತರ ಅವರಿಗೆ ಹೊಳೆಯಿತು, ತಲೆಯಮೇಲೆ ಇಷ್ಟೆಲ್ಲ ವ್ಯರ್ಥ ಹೊರೆ ಏಕೆ? ಪೇಟವನ್ನು ಇಳಿಸಿ ಗಾಂಧೀ ಟೋಪಿಯನ್ನು ಧರಿಸಿದರು. ಆಮೇಲೆ ಟೋಪಿಯನ್ನೂ ಇಳಿಸಿಬಿಟ್ಟರು. ಈ ರೀತಿ ಸರಿಸುಮಾರು ಎಲ್ಲ ವಿಷಯಗಳಲ್ಲೂ ಅವರ ನಿಲುವು ಕಾಲಕಾಲಕ್ಕೆ ಬದಲಾಗುತ್ತ ಹೋಗಿದೆ.

ಯುದ್ಧ—ಗಾಂಧೀಜಿಯ ಮನಸ್ಸು

ಯುದ್ಧದ ವಿಷಯದಲ್ಲಿ ಗಾಂಧೀಜಿಯ ಮಾನಸಿಕ ಇತಿಹಾಸವನ್ನು ನೋಡಿ. 1909ರಲ್ಲಿ ಜುಲೂ ಯುದ್ಧದ ಸಮಯದಲ್ಲಿ ಗಾಯಾಳು ಸೈನಿಕರ ಸೇವೆ ಮಾಡಿದರು. ಹೀಗೆ ಆ ಯುದ್ಧದಲ್ಲಿ ಅವರು ಭಾಗವಹಿಸಿದರು. ಸೇವೆಯ ಕೆಲಸ ಕರುಣೆಯ ಕೆಲಸವಾದರೂ ಅದನ್ನು ಮಾಡುವವರು ಯುದ್ಧದಲ್ಲಿ ಸಹಕರಿಸಿದಂತೆ.

ಅನಂತರ ಭಾರತಕ್ಕೆ ಬಂದರು. ಮೊದಲ ವಿಶ್ವಯುದ್ಧದ ಸಮಯದಲ್ಲಿ ಸೈನ್ಯಕ್ಕೆ ಜನರನ್ನು ಸೇರಿಸುವ ಕೆಲಸವನ್ನು ಆರಂಭಿಸಿದರು. ನಮ್ಮಲ್ಲಿ ಕತ್ತಿ ಹಿರಿಯುವ ಧೈರ್ಯವೂ ಇಲ್ಲ, ಶಕ್ತಿಯೂ ಇಲ್ಲ. ಇಷ್ಟೊಂದು ನಿರ್ವೀರ್ಯರಾಗಿಹೋಗಿದ್ದಾರೆ ನಮ್ಮ ಜನ ಎಂದರು. ಆದುದರಿಂದ ಒಮ್ಮೆ ನಮ್ಮ ಜನ ಸೇನೆಗೆ ಸೇರಿದರೆ ಧೈರ್ಯ ಬರುತ್ತದೆ, ನಮ್ಮ ಕೂಗು ಕೇಳಿ ಬರುತ್ತದೆ ಎಂದರು. ಆ ಸಮಯದಲ್ಲಿ ಸೇನಾ ಭರ್ತಿಗೆ ಅವರು ಏನೆಲ್ಲ ಪ್ರಯತ್ನ ಮಾಡಿದರೆಂಬುದನ್ನು ನಾನು ನನ್ನ ಕಣ್ಣಿಂದ ನೋಡಿದ್ದೇನೆ. ತಿರುಗಿ ತಿರುಗಿ ಕಡೆಗೆ ಬೇನೆ ಬಿದ್ದರು. ಆದರೆ ಗುಜರಾತಿನಲ್ಲಿ ಸಫಲತೆ ಸಿಗಲಿಲ್ಲ. ಕಡೆಗೆ ಇಷ್ಟೊಂದು ಸಿಟ್ಟಾಗಿ ಹೇಳಿಬಿಟ್ಟರು. ಇಲ್ಲಿ ವೈಷ್ಣವ ಧರ್ಮ ಮತ್ತು ಜೈನಧರ್ಮ ಎರಡೂ ಸೇರಿ ಗುಜರಾತನ್ನು ಹಾಳುಮಾಡಿಬಿಟ್ಟವೆ! ಒಂದು ಭಕ್ತಿ ಕಲಿಸಿತು ಮತ್ತೊಂದು ಅಹಿಂಸೆಯನ್ನು. ಈ ಭಕ್ತಿ ಮತ್ತು ಅಹಿಂಸೆ ತೀರಾ ನಿಷ್ಪ್ರಯೋಜಕ. ಇದು 1918ರ ಮಾತು.

ಮತ್ತೆ 1940ರಲ್ಲಿ ಎರಡನೇ ವಿಶ್ವಯುದ್ಧದ ಸಮಯದಲ್ಲಿ ಬಾಪೂ ತಳೆದ ನಿಲುವು: ಸರಕಾರ ನಮಗೆ ಸ್ವರಾಜ್ಯ ಕೊಟ್ಟರೆ ನಾವು ಯುದ್ಧದಲ್ಲಿ ಅದಕ್ಕೆ ನೈತಿಕ ಸಮರ್ಥನೆ ಕೊಡುತ್ತೇವೆ; ಸೈನ್ಯ, ಹಣ ಯಾವುದನ್ನೂ ಕೊಡುವುದಿಲ್ಲ.

ಆಮೇಲೆ ಸ್ವರಾಜ್ಯ ಬಂತು. 1947ರಲ್ಲಿ ಕಾಶ್ಮೀರದ ಸಮಸ್ಯೆ ಉಂಟಾಯಿತು. ಪಂಡಿತ್ ನೆಹರೂ, ಬಾಪೂ ಸಲಹೆ ಕೇಳಿದರು. ಬಾಪೂ ಹೇಳಿದರು: ಈಗ ನೀವು ಸೇನೆ ಕಳುಹಿಸುವುದು ಅನಿವಾರ್ಯ.

1907 ರಿಂದ 1947ರ ವರೆಗೆ, ಎಂದರೆ 40 ವರ್ಷಗಳ ಕಾಲ ಬಾಪೂವಿನ ಮಾನಸಿಕ ಇತಿಹಾಸ ಇದು. ಅನಂತರ ನಾವು ಇಷ್ಟೊಂದು ವರ್ಷ

ಮುಂದೆ ಬಂದಿದ್ದೇವೆ. ಈಗ ಬಾಪೂ ಇದ್ದಿದ್ದರೆ ಏನು ಮಾಡುತ್ತಿದ್ದರು ಎಂದು ನಿರ್ಣಯಿಸುವುದು ಹಾಗೂ ಆ ರೀತಿ ಯೋಚಿಸುವುದು ಸರಿಯಲ್ಲ. ಹಾಗೆ ಮಾಡುವುದರಿಂದ ಅವರಿಗೂ ಮತ್ತು ನಮಗೂ ಅನ್ಯಾಯ ಎಸಗುತ್ತೇವೆ. ಆದುದರಿಂದ ಬಾಪೂವನ್ನು ಅವರ ಸ್ಥಾನದಲ್ಲೇ ಇಟ್ಟು ನಾವು ವಿಚಾರ ಮಾಡಬೇಕು.

ಇದುವರೆಗೆ ಅಂತರರಾಷ್ಟ್ರೀಯ ಸತ್ಯಾಗ್ರಹ ಎಲ್ಲೂ ಆಗಿಲ್ಲ

ಅಂತರರಾಷ್ಟ್ರೀಯ ಕ್ಷೇತ್ರದಲ್ಲಿ ಸತ್ಯಾಗ್ರಹದ ಪ್ರಯೋಗ ಎಲ್ಲಾದರೂ ಆಗಿರುವುದು ತಿಳಿದ ಇತಿಹಾಸದಲ್ಲಿ ಎಲ್ಲೂ ಇಲ್ಲ ಎಂಬುದನ್ನು ತಿಳಿಯಬೇಕು. ಇದುವರೆಗೆ ಸ್ಥಾಪಿತವಾಗದುದನ್ನು ನಾವು ಈಗ ಸ್ಥಾಪಿಸಬೇಕು. ಇಂದಿನ ವರೆಗೆ ಇರದಿದ್ದ ಅಣುಯುಗದಲ್ಲಿ ಅದನ್ನು ಸ್ಥಾಪಿಸಬೇಕು. ಎಂದರೆ ಅಂತರ ರಾಷ್ಟ್ರೀಯ ಕ್ಷೇತ್ರದಲ್ಲಿ ಸತ್ಯಾಗ್ರಹವನ್ನು ಈ ಅಣುಯುಗದಲ್ಲಿ ಸ್ಥಾಪಿಸಬೇಕು. ಇವೆರಡೂ ಸಂಗತಿಗಳನ್ನು ನಾವು ಯೋಚಿಸಬೇಕು. ಈ ಅಣುಯುಗದಲ್ಲಿ, ಅಂತರರಾಷ್ಟ್ರೀಯ ಕ್ಷೇತ್ರದಲ್ಲಿ ಸತ್ಯಾಗ್ರಹದ ಸ್ವರೂಪ ಎಂಥದಿರಬೇಕೆಂದು ಯೋಚಿಸಬೇಕು.

ಇದರಲ್ಲಿ ಚಳುವಳಿ ಹೂಡಿ ಎರಡೂ ಸೇನೆಗಳ ನಡುವೆ ಹೋಗಿ ನಿಲ್ಲುವ ಕಲ್ಪನೆ ನನಗೆ ತೀರಾ ಒರಟಾಗಿ ಕಾಣುತ್ತದೆ. ಸತ್ಯಾಗ್ರಹ ಆತ್ಮಶಕ್ತಿ ಪ್ರಧಾನ ವಾಗಿರಬೇಕೇ ಅಥವಾ ಶರೀರ ಶಕ್ತಿ ಪ್ರಧಾನವೇ ? ಹಿಮಾಲಯಕ್ಕೆ ಹೋಗ ಬೇಕಾಗಿದ್ದರೆ ಆತ್ಮಶಕ್ತಿಯಲ್ಲಿ ವಿಶ್ವಾಸವುಳ್ಳ ಎಷ್ಟು ಮಂದಿ ಸಜ್ಜನರು ಅಲ್ಲಿಗೆ ಹೋಗಬಲ್ಲರು ? ಸತ್ಯಾಗ್ರಹವಾದರೋ ಶರೀರ ಶಕ್ತಿಯಲ್ಲ, ಆತ್ಮಶಕ್ತಿಯೆಂದು ಹೇಳಿಕೊಳ್ಳುತ್ತದೆ.

ಆದುದರಿಂದ ಇದು ಸತ್ಯಾಗ್ರಹದ ಅತ್ಯಂತ ಒರಟು ಪ್ರಕಾರ ಎಂದು ಸಿದ್ಧವಾಗುತ್ತದೆ. ಅಂತರರಾಷ್ಟ್ರೀಯ ಕ್ಷೇತ್ರದಲ್ಲಿ, ಅಣು ಯುಗದಲ್ಲಿ ಸತ್ಯಾಗ್ರಹದ ಪ್ರಯೋಗವನ್ನು ಮಾಡಲಿಚ್ಛಿಸಿದರೆ ನೀವೂ ಅದರ ಆಧ್ಯಾತ್ಮಿಕ ವಿಧಾನವನ್ನು ಹುಡುಕಬೇಕಾದೀತು. ಅದು ಸಿಕ್ಕದಿದ್ದರೆ ಇದುವರೆಗೆ ಸಿಕ್ಕಿಲ್ಲ ಎಂದು ಹೇಳಬೇಕು.

ಧೀರೇನ್ ಭಾಯಿ ಒಂದು ಮಹತ್ವದ ಮಾತನ್ನು ಹೇಳಿದ್ದಾರೆ: ಹಿಂಸೆ

ಯಲ್ಲಿ ಸೇನೆ ಯುದ್ಧ ಮಾಡಿದರೆ ಅದರ ಹಿಂದೆ ಜನರಿರುತ್ತಾರೆ. ಅಹಿಂಸೆಯಲ್ಲಾದರೋ ಜನ ಕಾದಾಡುತ್ತಾರೆ, ಅವರ ಹಿಂದೆ ಸೇನೆ ಸಹಾಯಕ್ಕಿರಬೇಕು. ಅಹಿಂಸೆಯ ಒಂದು ಪ್ರಕ್ರಿಯೆಯನ್ನು ಅವರು ನಮ್ಮ ಮುಂದೆ ಇಟ್ಟಿದ್ದಾರೆ. ಈ ರೀತಿ ಶೋಧ ಮಾಡುತ್ತಲಿದ್ದರೆ ಇತರ ಸಂಗತಿಗಳೂ ನಮ್ಮ ಮನಸ್ಸಿಗೆ ಬಂದಾವು.

ಹೊಸ ಪರಿಸ್ಥಿತಿ, ಹೊಸ ಚಿಂತನ

ರಣರಂಗದಲ್ಲಿ ಎದೆಯೊಡ್ಡಿ ಗುಂಡನ್ನು ತಡೆದು ನಿಲ್ಲಿಸುವ ಅಹಿಂಸಕ ಪ್ರತೀಕಾರ ಮಾಡುವ ಅಹಿಂಸಾ ಶಕ್ತಿಯನ್ನು ನಿರ್ಮಿಸುವುದು ಸಾಧ್ಯವಿಲ್ಲವೇ? ಈ ಪ್ರಶ್ನೆ ನಮ್ಮ ಮನಸ್ಸಿನಲ್ಲಿ ಏಳುತ್ತಲಿರುತ್ತದೆ. ಇಂಥ ಪ್ರಯೋಗ ಯಾವಾಗ ಸಾಧ್ಯ, ಯಾವಾಗ ಇಲ್ಲ ಎಂಬುದು ಯೋಚಿಸತಕ್ಕ ವಿಷಯ. ವ್ಯಕ್ತಿಗತ ಜೀವನದಲ್ಲಿ ಕೆಲವು ಕಡೆ ಇಂಥ ಪ್ರಹಾರವನ್ನು ಸಹಿಸಿದರು. ಅದರಲ್ಲಿ ಅವರು ಸತ್ತರು, ಸತ್ತು ಬದುಕಿದ್ದಾರೆ. ಸಣ್ಣ-ಸಣ್ಣ ಸಮಾಜಗಳು ಅಸಹಕಾರ ನಡೆಸಿರುವ ಉದಾಹರಣೆಗಳಿವೆ. ಒಂದು ರಾಷ್ಟ್ರ ಅಸಹಕಾರದ ಕೂಗನ್ನೆಬ್ಬಿಸಿದ ಉದಾಹರಣೆ ನಮ್ಮ ದೇಶದ್ದು. ಆದರೆ ಈ ಎಲ್ಲ ಉದಾಹರಣೆಗಳಿಗಿಂತ ಭಿನ್ನವಾದ ಒಂದು ಪರಿಸ್ಥಿತಿ ನಮ್ಮೆದುರಿಗಿದೆ. ಅಣುಯುಗದಲ್ಲಿ, ಅಂತರರಾಷ್ಟ್ರೀಯ ಮಟ್ಟದಲ್ಲಿ ಅಂಥ ಪ್ರಯೋಗ ನಡೆಸುವ ಪ್ರಶ್ನೆ ಅದು. ಶಸ್ತ್ರಗಳ ಉತ್ತರೋತ್ತರ ವಿಕಾಸದಲ್ಲಿ ಅನೇಕ ಮಂದಿ ವೈಜ್ಞಾನಿಕರು, ವೀರರು ಮತ್ತು ಮುತ್ಸದ್ದಿಗಳು ತಮ್ಮ ಬುದ್ಧಿಯನ್ನೂ ಪ್ರಾಣವನ್ನೂ ಬಲಿಕೊಟ್ಟಿದ್ದಾರೆ. ಇದನ್ನು ನಾವು ತಿಳಿಯಬೇಕು. ಅಹಿಂಸೆಯ ವಿಕಾಸದಲ್ಲಿಯೂ ಅನೇಕ ಮನೀಷಿಗಳು ಪ್ರಾಚೀನ ಕಾಲದಿಂದ ಚಿಂತನ ನಡೆಸಿದ್ದಾರೆ. ಹಿಂಸೆಯನ್ನು ಮರ್ಯಾದಿತಗೊಳಿಸುವ ವ್ಯಕ್ತಿಗತ ಪ್ರಯೋಗವನ್ನೂ ಮಾಡಿದ್ದಾರೆ. ಇಂತಿಷ್ಟು ಜಾತಿಯವರೆಗೆ ಹಿಂಸೆಯ ಪ್ರಯೋಗವನ್ನು ಸೀಮಿತಗೊಳಿಸುವ ಸಮಾಜ ವ್ಯವಸ್ಥೆಯ ನಿರ್ಮಾಣದ ಪ್ರಯೋಗವೂ ನಡೆದಿದೆ. ಈ ಎಲ್ಲ ಪ್ರಾಚೀನ ಅನುಭವದ ಬಂಡವಾಳ ನಮ್ಮ ಬಳಿ ಇದೆ. ಆದರೆ ಇಂದು ಅದೆಲ್ಲಕ್ಕಿಂತ ಹೆಚ್ಚಾಗಿ ಒಂದು ಹೊಸ ಪರಿಸ್ಥಿತಿ ನಮ್ಮ ಎದುರು ಇದೆ. ಆದುದರಿಂದ ಹೊಸ ಚಿಂತನೆಯನ್ನೇ ಮಾಡಬೇಕು.

ಭಾವ-ಸಂಶುದ್ಧಿಯತ್ತ ಧ್ಯಾನವಿರಲಿ

ಸತ್ಯಾಗ್ರಹದ ವಿಷಯದಲ್ಲಿ ಸೌಮ್ಯ, ಸೌಮ್ಯತರ, ಸೌಮ್ಯತಮದ ಮಾತನ್ನು ನಾನು ಹೇಳಿದ್ದೇನೆ. ಶಬ್ದಶಕ್ತಿ ಕುಂಠಿತವಾದರೆ ಶಸ್ತ್ರಶಕ್ತಿ ಬರುತ್ತದೆ. ಶಬ್ದಶಕ್ತಿ ಶುದ್ಧ ಚಿಂತನದಿಂದ ಉಂಟಾಗುತ್ತದೆ. ಅದಕ್ಕಾಗಿ ಸ್ಥೂಲಕ್ರಿಯೆ ಹೆಚ್ಚಿಸುವ ಅಗತ್ಯವಿಲ್ಲ. ಅದು ಭಾವಶುದ್ಧಿಯಿಂದ ಉಂಟಾಗುತ್ತದೆ. ಒಬ್ಬನೇ ಪೂರ್ಣ ಸತ್ಯಾಗ್ರಹಿ ಇದ್ದರೂ ಇಡೀ ಜಗತ್ತನ್ನು ದುಃಖ ಮುಕ್ತಗೊಳಿಸಬಲ್ಲ ಎಂದು ಗಾಂಧೀಜೀ ಹೇಳಿದ್ದರು. ತಮ್ಮ ಪ್ರತಿಭೆಯ ದೆಸೆಯಿಂದ ಅವರಿಗೆ ಆ ದರ್ಶನವಾಯಿತು. ಆದುದರಿಂದ ಭಾವಸಂಶುದ್ಧಿಯ ಕಡೆಗೆ ನಾವು ಗಮನ ಕೇಂದ್ರಿತಗೊಳಿಸಬೇಕು.

ಇದೇ ಸಂದರ್ಭದಲ್ಲಿ ಅಹಿಂಸಕ ಪ್ರತೀಕಾರದ ಬದಲು ಸಮ್ಯಕ್ ಚಿಂತನದಲ್ಲಿ ಅಹಿಂಸಕ ಸಹಕಾರದ ಮಾತನ್ನು ಆಡಿದ್ದೇನೆ. ಸ್ಥೂಲ ಪ್ರಕ್ರಿಯೆಯನ್ನು ಹಿಡಿದರೆ ಸೂಕ್ಷ್ಮಶಕ್ತಿಯಾದ ನಮ್ಮ ಮುಖ್ಯ ಶಕ್ತಿಯ ವಿಕಾಸ ಆಗುವುದಿಲ್ಲ. ಆ ಸೂಕ್ಷ್ಮಶಕ್ತಿಯ ಪ್ರಯೋಗದಿಂದಲೇ ಇವೆಲ್ಲ ಪ್ರಶ್ನೆ ಬಗೆಹರಿಯುವುದು. ಆದುದರಿಂದ ಅಧಿಕ ಕ್ರಿಯಾ ಮೋಹದಲ್ಲಿ ಬೀಳಬಾರದು. ಚಿತ್ತವನ್ನು ಕರ್ಮಭಾರದಿಂದ ಮುಕ್ತವಾಗಿಟ್ಟು ಈ ವಿಷಯಗಳಲ್ಲಿ ನಾವು ಚಿಂತನ ಮಾಡಬೇಕು. ಅಹಿಂಸೆಯ ವಿಕಾಸದ ದೃಷ್ಟಿಯಿಂದ ಸಂಶೋಧನೆ ಮಾಡುತ್ತ ಇರಬೇಕು. ಹೀಗೆ ಮಾಡುತ್ತಾ ಗಾಂಧೀಜಿಯಿಂದ ಪಡೆದ ಕೊಡುಗೆಯನ್ನು ಮುಂದೆ ಬೆಳೆಸಬೇಕು.

೧೧

ದರಿದ್ರನಾರಾಯಣನ ಉಪಾಸನೆ

ಭಾಗವತದಲ್ಲಿ ಒಂದು ಕಥೆಯಿದೆ. ಶುಕದೇವರು ವಿರಕ್ತರಾಗಿ ಮನೆ ಬಿಟ್ಟು ಹೊರಟಿದ್ದರು. ಅವರ ಪರಮ ವಿರಕ್ತ, ಜ್ಞಾನಶಿರೋಮಣಿ, ವಿದ್ಯಾನಿಧಿ ತಂದೆ ವ್ಯಾಸರಿಗೂ ಸಮ್ಮೋಹನವುಂಟಾಯಿತು. ಅವರು ಮಗನ ಹಿಂದೆ ಓಡಿ ಹೇಳತೊಡಗಿದರು: "ಮಗನೇ, ಎಲ್ಲಿ ಹೋಗುತ್ತಿದ್ದೀಯೆ, ಸ್ವಲ್ಪ ನಿಲ್ಲು." ಆದರೆ ಶುಕದೇವರು ನಿಲ್ಲಲಿಲ್ಲ. ಶುಕದೇವರು ತಂದೆಗೆ ಉತ್ತರ ಕೊಡದಿದ್ದುದು ಅವಿನಯವಾಗದಿರಲೆಂದು ಅವರ ಪರವಾಗಿ ಮರಗಳು ಉತ್ತರ ಕೊಟ್ಟವು. ಶುಕದೇವರೊಡನೆ ತನ್ಮಯವಾಗಿಹೋದ ಮರಗಳು ಉತ್ತರವಿತ್ತವು. ಶುಕದೇವರು ಇಷ್ಟೊಂದು ಸರ್ವಭೂತ ಹೃದಯರಾಗಿ ಹೋಗಿದ್ದರು. ಅವರ ಪರವಾಗಿ ಮಾತನಾಡುವ ಕೆಲಸವನ್ನು, ಉತ್ತರ ಕೊಡುವ ಕೆಲಸವನ್ನು ವೃಕ್ಷಗಳೂ ಮಾಡುತ್ತಿದ್ದವು. ಶುಕದೇವರದು ಇದೊಂದು ಅದ್ಭುತ ಉದಾಹರಣೆ. ಶುಕದೇವರು ನಮ್ಮ ಹೃದಯದಲ್ಲಿದ್ದಾರೆ ಎಂಬ ಅನುಭವವನ್ನು ಸಂಪೂರ್ಣ ಭೂತಸೃಷ್ಟಿ ಪಡೆದಂತೆ ನಮ್ಮ ಕಾಲದಲ್ಲಿ ಸಮಸ್ತ ಭಾರತದ ಜನರಿಗೂ ಗಾಂಧೀಜೀ ನಮ್ಮ ಮನೆಯ ಮನುಷ್ಯರು, ನಮ್ಮ ಹಿತೈಷಿ ಎಂಬ ಅನುಭವವುಂಟಾಯಿತು. ನಿಸ್ಸಂಶಯವಾಗಿಯೂ ಅವರು ಭಾರತದ ಜನತೆಯ ಹೃದಯವನ್ನು ಪ್ರವೇಶಿಸಿದ್ದರು. ಅವರ ನಿಧನದ ಸಮಯದಲ್ಲಿ ತಮ್ಮ ಪರಿವಾರದ ಒಬ್ಬ ಮನುಷ್ಯ ಹೊರಟುಹೋದ ಎಂಬಂತೆ ಭಾರತದ ಜನರಿಗೆ ಅನಿಸಿತು. ಇಂಥ ಏಕಾತ್ಮತೆಯನ್ನು ಗಾಂಧೀಜೀ ಭಾರತದ ಜನರೊಡನೆ ಸಾಧಿಸಿದ್ದರು.

ನನ್ನ ತಪಸ್ಸಿನ ಹಿಮಾಲಯ ಅಲ್ಲಿ, ಎಲ್ಲಿ ....

ಗಾಂಧೀಜಿಯ ಕೆಲವೊಂದು ವಿಚಾರ ಕೆಲವು ಜನರಿಗೆ ಹಿಡಿಸುತ್ತಿರಲಿಲ್ಲ. ಆಗ ಒಬ್ಬೊಬ್ಬರು ಹೇಳುತ್ತಿದ್ದರು: ನೀವು ಹಿಮಾಲಯಕ್ಕೋ ಕಾಶಿಗೋ

ಹೊರಟುಹೋಗಿ, ಒಳ್ಳೆಯದಾದೀತು ಎಂದು. ಆಗ ಬಾಪೂ ನಗುತ್ತ ಹೇಳು ತ್ತಿದ್ದರು: "ನೀವು ಹಿಮಾಲಯಕ್ಕೆ ಹೋಗುವುದಾದರೆ ನಾನೂ ನಿಮ್ಮ ಹಿಂದೆ ಹಿಂದೆಯೇ ಹಿಮಾಲಯಕ್ಕೆ ಹೋಗುತ್ತೇನೆ. ನೀವು ಇಲ್ಲೇ ಇರುವು ದಾದರೆ ನಿಮ್ಮ ಈ ಸೇವಕನೂ ಇಲ್ಲಿಯೇ ಇರುವವನೇ. ಸ್ವಾಮಿ ಎಲ್ಲಿಯೋ ಅಲ್ಲೇ ಸೇವಕ." ಭಾರತದ ಜನತೆಯೊಂದಿಗೆ ಅವರಲ್ಲಿ ಅಂಥ ಆತ್ಮೀಯತೆ ಇತ್ತು.

ಮತ್ತೆ ಅವರು ಇದನ್ನೂ ಹೇಳುತ್ತಿದ್ದರು, "ಇನ್ನೂ ಎಲ್ಲಿ ದಾರಿದ್ರ್ಯ ವಿದೆಯೋ ಅಲ್ಲೇ ನನ್ನ ತಪಸ್ಸಿನ ಹಿಮಾಲಯ. ನಾನು ಅದನ್ನು ತೊಲಗಿಸ ಬೇಕಾಗಿದೆ, ಶೋಷಣೆಯನ್ನು ದೂರ ಮಾಡಬೇಕಾಗಿದೆ, ದುಃಖ ನಿವಾರಣೆ ಮಾಡಬೇಕಾಗಿದೆ. ದೇಶದ ಒಬ್ಬನೇ ಒಬ್ಬ ಮನುಷ್ಯನು ಜೀವನದ ಆವಶ್ಯಕತೆ ಯಿಂದ ವಂಚಿತನಾಗಿರುವವರೆಗೆ ನನಗೆ ಶಾಂತಿ ಸಿಗದು. ನಾನು ಕಾಲು ಚಾಚಿ ಕುಳಿತುಕೊಳ್ಳಲಾರೆ."

ಆದುದರಿಂದಲೇ ಸ್ವರಾಜ್ಯ ಬಂದಾಗಲೂ ಬಾಪೂವಾದರೋ ನವಾಖಾಲಿ ಯಲ್ಲಿ ತಿರುಗುತ್ತಿದ್ದರು. ಸ್ವರಾಜ್ಯಕ್ಕಾಗಿ ಸತತವಾಗಿ ನಲವತ್ತು ವರ್ಷ ಅವರು ಕೆಲಸ ಮಾಡಿದರು; ಅವರ ಇಪ್ಪತ್ನಾಲ್ಕು ತಾಸು ಸ್ವರಾಜ್ಯದ ಚಿಂತನೆಯಲ್ಲೇ ಹೋಗುತ್ತಿತ್ತು. ಕಡೆಗೆ ಸ್ವರಾಜ್ಯ ಬಂತು, ದಿಲ್ಲಿ ಮತ್ತು ಇತರ ದೊಡ್ಡ ದೊಡ್ಡ ಶಹರುಗಳಲ್ಲಿ ಉತ್ಸವಗಳು ನಡೆಯುತ್ತಿದ್ದವು. ಆಗ ಗಾಂಧೀಜೀ ನವಾಖಾಲಿಯಲ್ಲಿ ಪಾದಯಾತ್ರೆ ಮಾಡುತ್ತಿದ್ದರು. ದುಃಖಿತರ ಕಂಬನಿಯನ್ನು ಒರೆಸುವ ಕೆಲಸದಲ್ಲಿ ನಿರತರಾಗಿದ್ದರು.

ಈ ರೀತಿ ಗಾಂಧೀಜೀ ಸಾಮಾನ್ಯ ಜನತೆಯೊಡನೆ ಸತತವಾಗಿ ಏಕರೂಪವಾಗಲು ಪ್ರಯತ್ನಿಸುತ್ತಿದ್ದರು. ನಮ್ಮ ಬಳಿ ಇರುವುದನ್ನೆಲ್ಲಾ ಜನಸಾಮಾನ್ಯರ ಸೇವೆಯಲ್ಲೇ ಅರ್ಪಿಸಬೇಕು. ಗಾಂಧೀಜೀ ನಮಗೆ ಈ ಮಾತನ್ನು ತಿಳಿಸಿದರು. ಪ್ರತಿ ಮನುಷ್ಯನ ಪ್ರತಿ ಕೆಲಸದಲ್ಲಿ ಈ ಮಾತನ್ನು ನೆನಪಿಟ್ಟಿರಬೇಕು. ನಾವೇನು ಮಾಡಿದರೂ ಅದರಿಂದ ಬಡವರಿಗೆ ಸಹಾಯ ವಾಗುವುದೇ ಎಂಬುದನ್ನು ನೋಡಬೇಕು. ಪ್ರತಿಯೊಬ್ಬ ವ್ಯಕ್ತಿಯೂ ಹೀಗೇ ಯೋಚಿಸಬೇಕು. ಗಾಂಧೀಜೀ ಈ ದೃಷ್ಟಿಯನ್ನು ನಮ್ಮೆದುರು ಇಟ್ಟರು.

ಅವರ ಈ ನಿಲುವು ಮೊದಲಿನಿಂದಲೇ ಇತ್ತು. ಅವರು ಚಕ್ರಗೋಷ್ಠಿಗೆ ಹೋದಾಗಲೂ ಅಲ್ಲಿ ಹೇಳಿದರು: "ನಾನು ಅತ್ಯಂತ ನಮ್ರತಾಪೂರ್ವಕವಾಗಿ ಸ್ವರಾಜ್ಯವನ್ನು ಬೇಡುತ್ತೇನೆ." ವಿಚಿತ್ರವೆನಿಸುವಂಥ ಈ ಮಾತನ್ನು ಅವರು ಆಡಿದರು. ಆಗ ದೇಶದಲ್ಲಿ ಸ್ವರಾಜ್ಯ ನಮ್ಮ ಜನ್ಮಸಿದ್ಧ ಹಕ್ಕು ಮತ್ತು ಅದನ್ನು ನಾವು ಪಡೆದೇ ತೀರುವೆವು ಎಂಬ ಭಾಷೆಯನ್ನಾಡುತ್ತಿದ್ದ ಕಾಲ. ಆಗ ಬಾಪೂ ಹೇಳಿದರು, "ನಾನು ನಮ್ರತಾಪೂರ್ವಕವಾಗಿ ಸ್ವರಾಜ್ಯ ಬೇಡುತ್ತೇನೆ, ಏಕೆಂದರೆ ಅದರ ಹೊರತಾಗಿ ಭಾರತದ ಬಡವರ ಉದ್ಧಾರವಾಗಲಾರದು ಎಂದು ನನಗೆ ವಿಶ್ವಾಸವಾಗಿ ಹೋಗಿದೆ." ನಾವು ಏತಕ್ಕೆ ಸ್ವರಾಜ್ಯ ಬಯಸಿದೆವು? ಮೀಸೆಯ ಮೇಲೆ ಕೈಹಾಕಿ ಅಟ್ಟಹಾಸ ತೋರಲು ನಾವು ಸ್ವರಾಜ್ಯ ಬಯಸಲಿಲ್ಲ. ಅದರ ಹೊರತಾಗಿ ಬಡವರ ಸೇವೆ ಅಸಂಭವ ಎಂಬುದಕ್ಕಾಗಿ. ಅವರು ಚಕ್ರಗೋಷ್ಠಿಯಲ್ಲೇ ಈ ಮಾತನ್ನಾಡಿದರು. ಅವರಿಗೆ ಸ್ವರಾಜ್ಯ ಒಂದು ಸಾಧನ ಮಾತ್ರ ಆಗಿತ್ತು. ಅಂತಿಮವಾಗಿ ಬಡವರ ಒಳಿತೇ ಅವರಿಗೆ ಮುಖ್ಯವಾಗಿತ್ತು.

"ದುರ್ಯೋಧನ ಕೋ ಮೇವಾ ತ್ಯಾಗೋ ...."

ಇಂಥ ಒಬ್ಬ ಪರಮ ಸೇವಕ ಮೊದಲೂ ಭಾರತದಲ್ಲಾಗಿಹೋಗಿದ್ದಾನೆ. ಇಂದು ಎಲ್ಲರೂ ಶ್ರೀಕೃಷ್ಣಚರಿತ್ರೆಯನ್ನು ಹಾಡುತ್ತಾರೆ. ಆತನ ಹೆಸರಿನಲ್ಲಿ ಆನಂದದಿಂದ ಕುಣಿಯುತ್ತಾರೆ. ಆತನ ಗೋಪಾಲ ಎಂಬ ಹೆಸರು ಸುಪರಿಚಿತ. ಜನರಿಗನಿಸುತ್ತದೆ ಗೋಪಾಲ ನಮ್ಮವನು ಎಂದು. ಯಾವಾಗಲೂ ನಮ್ಮ ಕೆಲಸ ಮಾಡುವವ, ವೃದ್ಧರ ಸೇವೆ ಮಾಡುವವ, ನಮ್ಮ ದನಕರುಗಳನ್ನು ಆಪತ್ತಿನಿಂದ ಕಾಯುವವ, ನಮ್ಮ ಸೋದರಿಯರ ಸೇವೆ ಮಾಡುವವ, ತನಗೆ ಎಂಥದೇ ಅಪಾಯ ಬಂದರೂ ಸಹಿಸಿ ಎಲ್ಲೂ ರಾಜ್ಯಸತ್ತೆ ಪಡೆಯದಿರುವವ. ಇಂಥ ಗೋಪಾಲ ನಮ್ಮವನು ಎಂದು ಜನರಿಗನ್ನಿಸುತ್ತಿತ್ತು. ಆತ ಪರಮ ಬ್ರಹ್ಮಜ್ಞಾನಿ. ಆದರೂ ಮನುಷ್ಯನಂತೆ ಇರುತ್ತಿದ್ದ. ಶ್ರೀಕೃಷ್ಣ ಪಾಂಡವರ ಪ್ರತಿನಿಧಿಯಾಗಿ ಹೋದಾಗ ದುರ್ಯೋಧನ ಆತನನ್ನು ತನ್ನ ಮಹಲಿನಲ್ಲಿ ಇಳಿಸಿದ. ಸಿಹಿ ತಿಂಡಿ ತಿನ್ನಲು ಕೊಟ್ಟ. ಆದರೆ ಆತ ಅದನ್ನು ಸ್ವೀಕರಿಸಲಿಲ್ಲ. ವಿದುರನ ಕುಟೀರಕ್ಕೆ

ಹೋಗಿ ಅಲ್ಲಿನ ತರಕಾರಿಯನ್ನೇ ತಿಂದ. ಇದರಲ್ಲೇ ಅವನಿಗೆ ಆನಂದ ವುಂಟಾಯಿತು.

ಅದೇ ರೀತಿ ಗಾಂಧೀಜೀ ಸಹ ಲಂಡನ್ನಿನಲ್ಲಿ ಚಕ್ರಗೋಷ್ಠಿಯ ಸಮಯ ದಲ್ಲಿ ಮಾಡಿದರು. ಲಂಡನ್ನಿನ ಅತ್ಯಂತ ಬಡಜನರ ಮಧ್ಯೆ ಅವರ ನಿವಾಸ ಗಳಲ್ಲಿ ತಂಗಿದರು. ಅಲ್ಲಿಂದ ಚಕ್ರಗೋಷ್ಠಿಗೆ ಹೋಗಲು ದಿನವೂ ಅವರಿಗೆ ಒಂದು ಒಂದೂಕಾಲು ಗಂಟೆ ಸಮಯ ಹಿಡಿಸುತ್ತಿತ್ತು. ಆದರೂ ಅವರು ಬಡವರ ಮಧ್ಯೆಯೇ ಇದ್ದರು. ಈ ರೀತಿ ಸಾಮಾನ್ಯ ಜನತೆಯೊಡನೆ ಅವರು ಏಕರೂಪರಾಗಿದ್ದರು.

ಉಪಾಸನೆಗೆ ಅವರು 'ರಾಮನಾಮ'ವನ್ನೇ ಆರಿಸಿಕೊಂಡರು. ಭಕ್ತಿಯಲ್ಲಿಯೂ ಗಾಂಧೀಜಿಗೆ ಯಾವುದೇ ವಿಶೇಷಶ್ರೇಣಿ ಇಷ್ಟವಿಲ್ಲ ಎಂದು ರಾಜಾಜಿ ಒಮ್ಮೆ ಸರಿಯಾಗಿಯೇ ಹೇಳಿದರು. ಸಾಮಾನ್ಯರಲ್ಲಿ ಸಾಮಾನ್ಯ ರಾದ ಅಶಿಕ್ಷಿತ ಸ್ತ್ರೀಪುರುಷರು ಸ್ಮರಿಸುವ ರಾಮನಾಮವನ್ನೇ ಬಾಪೂ ಸಹ ಅಪೇಕ್ಷಿಸಿದರು. ವಿಶಿಷ್ಟ ಜನರಿಗೆ ಮಾತ್ರ ಸೀಮಿತವಾದ ಭಕ್ತಿಯೂ ಅವರಿಗೆ ಇಷ್ಟವಿರಲಿಲ್ಲ. ಅಂತಿಮ ಸಮಯದಲ್ಲಿಯೂ ಯಾವ ಹೆಸರನ್ನು ಸ್ಮರಿಸುತ್ತಾ ಅವರು ಹೊರಟುಹೋದರು? 'ಹೇ ರಾಮ!' ಎಂದು ಹೇಳುತ್ತಾ ಹೊರಟು ಹೋದರು. ಎಲ್ಲರವನಾಗಿರುವ ರಾಮನನ್ನು ಉಚ್ಚರಿಸುತ್ತಲೇ ಕೊನೆಯುಸಿ ರೆಳೆದರು. ಇದರ ಬದಲಾಗಿ ಅವರು 'ಓಂ' ಎಂದು ಹೇಳಿ ಹೊರಟು ಹೋಗಿದ್ದರೆ ಅವರು ದರಿದ್ರನಾರಾಯಣರೊಡನೆ ಏಕರೂಪರೆಂದಾಗು ತ್ತಿರಲಿಲ್ಲ. ಹೌದು, ನಾರಾಯಣನೊಡನೆ ಏಕರೂಪರಾಗುತ್ತಿದ್ದರು. ಆದರೆ ಕೊನೆಗೂ ಅವರ ಬಾಯಿಂದ ರಾಮನಾಮವೇ ಹೊರಟಿತು. ಇದು ಅವರ ದರಿದ್ರನಾರಾಯಣನ ಉಪಾಸನೆಗೆ ಅನುರೂಪ.

ವಿವೇಕಾನಂದರ ಶಬ್ದ

'ದರಿದ್ರನಾರಾಯಣ' ಶಬ್ದವನ್ನು ವಿವೇಕಾನಂದರು ಕೊಟ್ಟರು. ಅದ್ವೈತ ವಿಚಾರವನ್ನು ದರಿದ್ರನಾರಾಯಣನ ಸೇವೆಯೊಂದಿಗೆ ಜೋಡಿಸುವ ಪ್ರಕ್ರಿಯೆಯನ್ನು ಮೂಲತಃ ವಿವೇಕಾನಂದರು ಮಾಡಿದರು. ಆಧುನಿಕ ಯುಗದಲ್ಲಿ ಸೇವಾಯೋಗದ ಆರಂಭವನ್ನು ವಿವೇಕಾನಂದರು ಮಾಡಿದರೆಂದು

ಹೇಳಬಹುದು. ಶಂಕರರ ಅದ್ವೈತ ಮತ್ತು ಯೇಸುವಿನ ಪ್ರೇಮಮಯ ಸೇವಾಭಾವ ಇವೆರಡರ ಸಂಯೋಗ ವಿವೇಕಾನಂದರಲ್ಲಿ ಕಾಣಸಿಗುತ್ತದೆ. ದರಿದ್ರನಾರಾಯಣನನ್ನು ಉಪಾಸನೆ ಮಾಡುವ ಮಾತನ್ನು ಅವರು ಹೇಳಿದರು. ಈ 'ದರಿದ್ರನಾರಾಯಣ' ಎಂಬ ಶಬ್ದ ಲೋಕಮಾನ್ಯ ತಿಲಕರಿಗೂ ಬಹಳ ಪ್ರಿಯವಾಗಿತ್ತು. ದೇಶಬಂಧು ಚಿತ್ತರಂಜನ ದಾಸರು ಅದನ್ನು ಪ್ರಚಲಿತಗೊಳಿಸಿದರು. ಆದರೆ ಆ ಶಬ್ದವನ್ನು ಮನೆ ಮನೆಗೂ ಮುಟ್ಟಿಸುವ ಕೆಲಸವನ್ನು ಮತ್ತು ಅದಕ್ಕೆ ಅನುಸಾರವಾಗಿ ಇಡೀ ರಚನಾತ್ಮಕ ಕಾರ್ಯಕ್ರಮವನ್ನು ನಿಲ್ಲಿಸಿದ ಕೆಲಸವನ್ನು ಗಾಂಧೀಜೀ ಮಾಡಿದರು. ಸ್ವರಾಜ್ಯಪ್ರಾಪ್ತಿಯ ಕೆಲಸಕ್ಕೆ ಮಾನವಸೇವೆಯ ರೂಪವನ್ನು ಅವರು ಇತ್ತರು.

ದರಿದ್ರನಾರಾಯಣ ಎಂಬ ಶಬ್ದದಿಂದ ಎಲ್ಲ ಆಸ್ತಿಕರು ಮತ್ತು ನಾಸ್ತಿಕರ ನಡುವಿನ ಭೇದ ಕೊನೆಗಾಣುತ್ತದೆ. ಇಬ್ಬರೂ ಒಂದೇ ವೇದಿಕೆಯ ಮೇಲೆ ಬರುತ್ತಾರೆ. ಯಾರು ಪ್ರತ್ಯಕ್ಷ ಸೇವೆಯನ್ನು ಬಿಟ್ಟು ಗಾಳಿಯಲ್ಲಿ ಮಾತನಾಡುವುದಿಲ್ಲ ಅವರನ್ನು ನಾಸ್ತಿಕರೆನ್ನುತ್ತಾರೆ. ಅಂಥ ನಾಸ್ತಿಕರಲ್ಲೂ ಸಜ್ಜನರಾಗಿ ಹೋಗಿದ್ದಾರೆ. ಮಾನವ ಹೃದಯದಲ್ಲಿ ವಿಶ್ವಾಸವಿರುವವರು, ಮಾನವ ಹೃದಯದಲ್ಲಿ ಒಂದು ಜ್ಯೋತಿ ಇದೆ ಎಂದು ತಿಳಿಯುವವರು ಹಾಗೂ ಅದರ ಆಧಾರದಮೇಲೆ ನಾವು ಎಲ್ಲ ಬಗೆಯ ಅಂಧಕಾರವನ್ನೂ ದೂರಮಾಡಬಹುದು ಎಂದು ನಂಬಿರುವವರೇ ನಿಜವಾದ ಆಸ್ತಿಕರು.

ಒಂದು ಜನಸೇವೆಯ ವಿಚಾರ, ಮತ್ತೊಂದು ಹೃದಯ ಪರಿವರ್ತನೆಯ ವಿಚಾರ, ಭಕ್ತಿಮಾರ್ಗ. ಮನುಷ್ಯನ ಸೇವೆ ಮಾಡುತ್ತೇವೆ ಎನ್ನುತ್ತಾರೆ ಅವರು. ಮತ್ತು ನಮ್ಮ ಸೇವೆಯಿಂದ ಅವರ ಹೃದಯ ಪರಿವರ್ತನೆ ಮಾಡೋಣ. ನಾರಾಯಣನ ಸ್ಪರ್ಶ ಮಾಡಬೇಕಾಗಿದೆ ನಾವು, ಯಾವ ಸೇವೆಗೆ ನಾರಾಯಣನ ಸ್ಪರ್ಶವಾಗುವುದೋ ಅದರಲ್ಲಿ ಹೃದಯ ಪರಿವರ್ತನೆಯ ಶಕ್ತಿ ಬಂದೀತು. ದರಿದ್ರನಾರಾಯಣ ಶಬ್ದದಿಂದ ಇವೆರಡೂ ಸೇರಿ ಹೋಗುತ್ತವೆ.

ಸೇವಾ ವೃತ್ತಿಗೆ ನಿರ್ಮಾಣ ಕಾರ್ಯದ ಸ್ವರೂಪ

ಈ ರೀತಿ ನೋಡಿದರೆ ವಿವೇಕಾನಂದರು ದೊಡ್ಡದೊಂದು ಕೆಲಸ ಮಾಡಿದರು. ಅದ್ವೈತ ತತ್ವಜ್ಞಾನ, ಅದನ್ನು ಸಾಧಿಸುವ ಭಿನ್ನ-ಭಿನ್ನ ಉಪಾಸನೆಗಳು, ತತ್ಪ್ರಕಾಶಕವಾದ ಸೇವೆ, ಈ ಪ್ರಕಾರವಾಗಿ ಜೀವನದಲ್ಲಿ ಏಕರಸ ವಿಚಾರ ಭಾರತಕ್ಕೆ ಸಿಕ್ಕಿತು. ಮಹಾತ್ಮಾ ಗಾಂಧಿಯವರು ಮಾನವಸೇವೆಯ ಈ ವಿಚಾರವನ್ನು ಅಧಿಕ ವ್ಯಾಪಕಗೊಳಿಸಿ ಅದರೊಡನೆ ಉತ್ಪಾದಕ ಶರೀರಶ್ರಮದ ಅಗತ್ಯವನ್ನು ಸ್ಪಷ್ಟಗೊಳಿಸಿದರು.

ಸೇವಾ ವೃತ್ತಿಯ ನಿರ್ಮಾಣ ಕಾರ್ಯದ ಸ್ವರೂಪ ಕೊಟ್ಟು ಅದನ್ನು ಬೆಳೆಸಿದರು. ಎದುರಿಗೆ ಹಸಿದ ಮನುಷ್ಯ ನಿಂತಿದ್ದರೆ ಅವನಿಗೆ ಊಟ ಕೊಡುವುದು ಸೇವೆ. ಇದಕ್ಕೆ ಬದಲಾಗಿ ಚರಖಾ ಕೊಟ್ಟು ಅಥವಾ ಭೂಮಿ ಕೊಟ್ಟು, ಅದರಿಂದ ಉತ್ಪಾದನೆ ಮಾಡಿ ಉಣ್ಣುವುದನ್ನು ಕಲಿಸುವುದು ನಿರ್ಮಾಣ ಕಾರ್ಯ. ಇದೇ ನಿಜವಾದ ಸೇವೆ.

ಸೇವೆಗೆ ನಿರ್ಮಾಣ ಕಾರ್ಯದ ಸ್ವರೂಪ ಸಿಕ್ಕರೆ ಲಾಭವೇ ಆದೀತು, ಮತ್ತು ಹಾನಿಯೂ, ಈ ಮಾತನ್ನು ಸೂಕ್ಷ್ಮವಾಗಿ ತಿಳಿದುಕೊಳ್ಳುವುದು ಅಗತ್ಯ. ಭೂತದಯೆ ಮತ್ತು ಸೇವಾಭಾವಗಳ ಜೊತೆ-ಜೊತೆಗೆ ನಿರ್ಮಾಣ ಕಾರ್ಯದ ವಿಚಾರ ಸೇರುವುದು ಲಾಭ. ಇದರಿಂದ ಸೇವೆ ಅಧಿಕ ಕಾರ್ಯಕಾರಿಯಾಗುತ್ತದೆ. ನಿರ್ಮಾಣಕಾರ್ಯ ಮಾಡುತ್ತಾ-ಮಾಡುತ್ತಾ ಸೇವಾಭಾವ ಹಾಗೂ ಅದ್ವೈತಭಾವ ಒಂದು ಕಡೆ ಉಳಿದುಹೋಗುತ್ತದೆ. ಚರಖಾದಂಥ ಸ್ಥೂಲ ಸಾಧನವನ್ನೇ ಸರ್ವಸ್ವವೆಂದು ತಿಳಿಯತೊಡಗುತ್ತೇವೆ. ಇದು ಹಾನಿ. ಸೂಕ್ಷ್ಮ ತತ್ವವನ್ನೂ ಬಿಟ್ಟುಕೊಟ್ಟು ಸ್ಥೂಲ ಕರ್ಮದಲ್ಲಿ ನಾವು ತೊಡಗಿಕೊಳ್ಳುತ್ತೇವೆ. ಆದುದರಿಂದ ಮೂಲಭಾವನೆಯನ್ನು ನಾವು ಮರೆಯತಕ್ಕದ್ದಲ್ಲ.

'ದರಿದ್ರ' ತೆಗೆದುಹಾಕಿ 'ನಾರಾಯಣ' ಇಟ್ಟುಕೊಳ್ಳಬೇಕು

ಮತ್ತೊಂದು ಸಂಗತಿಯನ್ನೂ ಗಮನದಲ್ಲಿಡಬೇಕು. ಗಾಂಧೀಜೀ ತಮ್ಮ ಜೀವನದಲ್ಲಿ ದರಿದ್ರನಾರಾಯಣನ ಉಪಾಸನೆಯ ಉತ್ತಮ ಉದಾಹರಣೆಯನ್ನು ತೋರಿದರು. ಆದರೆ ನಾವು ಇನ್ನು ಮುಂದೆ ವಿಚಾರ

ಮಾಡಬೇಕಾಗಿದೆ. ಈಗ 'ದರಿದ್ರ' ಶಬ್ದ ಇರತಕ್ಕದ್ದಲ್ಲ, ಕೇವಲ 'ನಾರಾಯಣ' ಇರಲಿ. ಇದು ನಮ್ಮೆಲ್ಲರ ಆಸೆ. ಜಗತ್ತಿನಲ್ಲಿ ಯಾರೂ ದರಿದ್ರರಿರಬಾರದು. ಅವರಿಂದ ಬೇರೆ ಉಳಿದು ಅವರ ಸೇವೆ ಮಾಡಲು ನನಗೆ ಇಚ್ಛೆ ಇಲ್ಲ. ನನಗೆ ಸೇವೆಯ ಅವಕಾಶ ಒದಗಿಸಲು ಭಗವಂತ ಸದಾ ದರಿದ್ರನ ರೂಪದಲ್ಲಿ ಬರಲಿ ಎಂಬುದು ನನಗೆ ಇಷ್ಟವಿಲ್ಲ. ನಾನು ನೇರಾಗಿ ನಾರಾಯಣನ ಸೇವೆಗೈಯಬಯಸುತ್ತೇನೆ. ಆದುದರಿಂದ ಈಗ ಯಾರೂ ಬಡವರೂ ಬೇಡ, ಯಾರೂ ಶ್ರೀಮಂತರೂ ಬೇಡ. ಎಲ್ಲರೂ **ಅಮೃತಸ್ಯ ಪುತ್ರಾಃ** ಆಗಿಬಿಡಲಿ. ಅಮೃತದ ಮಕ್ಕಳಲ್ಲಿ ಅಸಮಾನತೆ ಸಾಧ್ಯವಿಲ್ಲ. ಎಲ್ಲರೂ ಹೆಗಲಿಗೆ ಹೆಗಲು ಹಚ್ಚಿ ಭಗವಂತನ ಮತ್ತು ಸೃಷ್ಟಿಯ ಸೇವೆ ಮಾಡಲಿ. ಯೇಸುವೂ ಒಂದೆಡೆ ಹೇಳಿದ್ದಾನೆ: The poor you have always with you—ಬಡವರು ಯಾವಾಗಲೂ ನಿಮ್ಮೊಡನೆ ಇದ್ದಾರೆ. ಯೇಸುವಿನ ಈ ಮಾತು ನನಗೆ ಅಳುಕುತ್ತದೆ. ಹಾಗಾದರೆ ಅದೊಂದು ದೊಡ್ಡ ಸಂಕಟವೇ ಆದೀತು. ನಾವು ಬಡವರನ್ನು ಸದಾ ಬಡವರನ್ನಾಗಿಯೇ ಇಡಬೇಕೇಕೆ? ಅವರ ಸೇವೆಯ ಲಾಭ ನನಗೆ ಸಿಗಲೆಂದೇ? ಇಲ್ಲ, ಅವರ ಬಡತನವನ್ನೂ ತೊಲಗಿಸಬೇಕು. ಸದಾ ದರಿದ್ರರ ಸೇವೆಯನ್ನು ಮಾಡುವ ಭಾವನೆ ಇಟ್ಟುಕೊಳ್ಳುವುದೇ ದಾರಿದ್ರ್ಯ. ಗಾಂಧೀಜೀ ಸಹ ಬಡತನವನ್ನು ಬೇರು ಸಹಿತ ನಷ್ಟಗೊಳಿಸಬಯಸಿದರು. ಇದಕ್ಕಾಗಿ ಅವರು ತಮ್ಮ ಇಡೀ ಜೀವನವನ್ನು ಅರ್ಪಣ ಮಾಡಿದರು.

೧೨

ಅಹಿಂಸಕ ಸಮಾಜ ರಚನೆಯ ದರ್ಶನ

ಒಮ್ಮೆ ನನ್ನ ಬಳಿ ಗಾಂಧೀಜಿಯ ಚಿತ್ರಗಳ ದೊಡ್ಡದೊಂದು ಆಲ್ಬಮ್ ಬಂತು. ಅದರಲ್ಲಿ ತುಂಬ ಸುಂದರವಾದ ಚಿತ್ರಗಳಿದ್ದವು. ಆದರೆ ನೂಲಿನ ಒಂದು ಲಡಿಯನ್ನು ನಾನು ನೋಡಿದಾಗ ನನಗೆ ಅದರಲ್ಲಿ ಗಾಂಧೀಜಿಯ ಅನುಪಮ ರೂಪ ತೋರಿಬರುತ್ತದೆ. ಅಷ್ಟು ಅದ್ಭುತವಾದ ಅವರ ಚಿತ್ರ ನನಗೆ ಮತ್ತಾವುದರಲ್ಲೂ ಕಾಣುವುದಿಲ್ಲ. ಗಾಂಧೀಜಿಯ ಜೀವನ ಚಿತ್ರ ನೂಲಿನ ಲಡಿಯಲ್ಲಿ ಸ್ಪಷ್ಟವಾಗಿ ಕಾಣುವಂತೆ ಮತ್ತಾವುದೇ ಸ್ಥೂಲ ಶಾರೀರಿಕ ಚಿತ್ರದಲ್ಲಿ ಕಾಣುವುದಿಲ್ಲ.

ಸೂತ್ರಾಂಜಲಿ : ಬಾಪೂಗೆ ಅತಿದೊಡ್ಡ ಸ್ಮಾರಕ

ಆದುದರಿಂದಲೇ ನಾನು ಬಾಪೂ ಸ್ಮೃತಿಯಲ್ಲಿ ಸೂತ್ರಾಂಜಲಿ ಅರ್ಪಿಸುವ ಕಾರ್ಯಕ್ರಮವನ್ನು ದೇಶದ ಮುಂದಿಟ್ಟೆ. ಪ್ರತಿ ವರ್ಷ ಫೆಬ್ರವರಿ ೧೨ ರಂದು ನಮ್ಮ ಕೈಯಿಂದ ನೂತ ನೂಲಿನ ಒಂದು ಲಡಿಯನ್ನು ಸಮರ್ಪಿಸುತ್ತೇವೆ. ಈ ಕಾರ್ಯಕ್ರಮ ಬಾಪೂ ಬಗೆಗೆ ಶ್ರದ್ಧೆಯ ಎಲ್ಲಕ್ಕಿಂತ ದೊಡ್ಡ ಪ್ರತೀಕಕ್ಕೆ ಸಮಾನ. ಬಾಪೂಗೆ ಎಲ್ಲಕ್ಕಿಂತ ದೊಡ್ಡ ಸ್ಮಾರಕವೂ ಹೌದು.

ಇದಂತೂ ಒಂದು ಸಣ್ಣ ಸಂಗತಿ, ಎಷ್ಟು ಸಣ್ಣದೋ ಅಷ್ಟೇ ಶಕ್ತಿಶಾಲಿ. ಇದರಲ್ಲಿ ಶರೀರಶ್ರಮ, ಅಹಿಂಸಕ ಪ್ರೇಮ ಮತ್ತು ತ್ಯಾಗದ ದೀಕ್ಷೆ ಸಿಕ್ಕುತ್ತದೆ. ಇದು ನಮ್ಮ ಶ್ರಮ ಪ್ರತಿಷ್ಠೆಯ ಭಾವನೆಗೆ ಪ್ರತೀಕ. ಇದರಲ್ಲಿ ಭ್ರಾತೃ ಭಾವಕ್ಕೆ ಮನ್ನಣೆ ನೀಡುತ್ತೇವೆ. ಅದರ ದರ್ಶನವಾಗುತ್ತದೆ. ಇದು ಸರ್ವೋದಯ ವಿಚಾರಕ್ಕೆ ನೀಡುವ ಮತ. ಇಡೀ ರಾಷ್ಟ್ರಕ್ಕೇ ಇದೊಂದು ಸುಂದರ ಉಪಾಸನೆ.

ಒಂದು ರಾಷ್ಟ್ರೀಯ ಉಪಾಸನೆ

ದೇಶದ ಪ್ರತಿಯೊಬ್ಬ ಬಾಲಕನೂ ಮಾಡಬಲ್ಲ ರಾಷ್ಟ್ರೀಯ ಉಪಾಸನೆಯೊಂದು ದೇಶದೆದುರು ಇರಬೇಕೆಂದು ಬಾಪೂ ಹೇಳಿದ್ದರು. ಧಾರ್ಮಿಕ ಹಾಗೂ ಪಾಂಥಿಕ ಉಪಾಸನೆಗಳಂತೂ ಇದ್ದೇ ಇವೆ. ಆದರೆ ಅವುಗಳಿಂದ ಭೇದ ಹುಟ್ಟುತ್ತದೆ. ದೇಶದಲ್ಲಿ ಅಭೇದ ಉತ್ಪನ್ನ ಮಾಡುವ ಉಪಾಸನೆ ಬೇಕು. ದೇಶಕ್ಕಾಗಿ ನಾನು ಏನನ್ನಾದರೂ ಮಾಡುತ್ತಿದ್ದೇನೆಂದು ಎಲ್ಲರಿಗೂ ಅನಿಸಬೇಕು.

ಈ ವಿಚಾರದಿಂದಲೇ ಚರಖಾದ ವಿಕಾಸವಾಯಿತು. ನೂಲುವುದು ಅತ್ಯಂತ ಹಗುರವಾದ ಸರಳ ಶ್ರಮ. ಕಿಶೋರ್‌ಲಾಲ್ ಭಾಯೀ ಅವರಂಥ ಮನುಷ್ಯರೂ ಸಹ ಚರಖಾದ ಮೂಲಕ ದೇಶಕ್ಕಾಗಿ ಏನಾದರೂ ಉತ್ಪಾದನ ಮಾಡಬಹುದು. ಅವರಿಗೆ ಸಂಜೆಯೊಳಗೆ ಸತ್ತುಹೋಗುತ್ತೇನೆ ಎಂದು ಮುಂಜಾನೆ ಅನಿಸುತ್ತದೆ, ಸಂಜೆಗೆ ಮುಂಜಾನೆಯಾದೀತೋ ಇಲ್ಲವೋ ಎನಿಸುತ್ತದೆ. ತಮ್ಮ ಬಟ್ಟೆಗೆ ಬೇಕಾಗುವಷ್ಟು ನೂಲನ್ನು ಅವರು ನೂತುಕೊಂಡೇ ಬಿಡುತ್ತಾರೆ. ಅತ್ಯಂತ ದುರ್ಬಲನಾದ ನಾಗರಿಕನನ್ನು ಚರಖಾ ಉತ್ಪಾದಕನನ್ನಾಗಿಸಬಲ್ಲದು. ಇದು ಅದರ ವಿಶೇಷತೆ. ಇಂಥದೊಂದು ಸಾಧನವನ್ನು ಬಾಪೂ ನಮಗೆ ಹೊಸ ರೂಪದಲ್ಲಿ ಮತ್ತು ಹೊಸ ವಿಚಾರ ಸಹಿತವಾಗಿ ಕೊಟ್ಟರು.

ಕಚ್ಚಾ ತಂತು....

ಮೊದಲು ಬಾಪೂಗೆ ಚರಖಾ ಹೊಳೆಯಲಿಲ್ಲ. ಮಗ್ಗ ಭಾಸವಾಯಿತು. ೧೯೧೬ರ ಮಾತು. ನಾನು ಆಗ ಆಶ್ರಮವನ್ನು ತಲುಪಿದಾಗ ಕೊಚರಬ್‌ನಲ್ಲಿ ಎಲ್ಲರೂ ಸೇರಿ ನೂಲಿನ ಪಟ್ಟಿಗಳನ್ನೂ ಮತ್ತು ಬಟ್ಟೆಯನ್ನೂ ನೇಯುತ್ತಿದ್ದೆವು. ಈ ಕೆಲಸದ ಮೂಲಕ ಸ್ವಾವಲಂಬನೆ ಸಾಧಿಸಲು ನನಗೆ ಎಷ್ಟು ನೇಯಬೇಕಾದೀತು ಎಂದು ನಾನು ಪ್ರಶ್ನೆ ಕೇಳಿದೆ. ಇಪ್ಪತ್ತೈದು ಗಜ ಎಂದು ಹೇಳಿದರು. ೨೫ ಗಜ ನೇಯಲು ನಾನು ಪ್ರಯತ್ನಿಸುತ್ತಿದ್ದೆ. ಒಂದು ದಿವಸ ನಿರ್ಧಾರ ಮಾಡಿ ಕುಳಿತೆ, ರಾತ್ರಿ ಒಂಭತ್ತು-ಹತ್ತು ಗಂಟೆತನಕ ನೇಯುತ್ತಲಿದ್ದೆ. ಇಪ್ಪತ್ತೈದು ಗಜದ ಪಟ್ಟಿಯನ್ನೇ ಪೂರ್ಣಗೊಳಿಸಿಯೇ ಎದ್ದೆ.

ಆದರೆ ಈ ನೂಲೆಲ್ಲವೂ ಗಿರಣಿಯದಾಗಿತ್ತು. ಇದು ಜ್ಞಾನದ ಶೋಧನೆಯಾಗಿತ್ತು, ಕರ್ಮಯೋಗದ ಆರಂಭ. ಮತ್ತೆ ಕೆಲವು ದಿನಗಳ ಬಳಿಕ ನೂಲುವುದನ್ನೂ ಪ್ರಾರಂಭಿಸಬೇಕು ಎಂಬುದು ಲಕ್ಷ್ಯಕ್ಕೆ ಬಂತು. ಮತ್ತೆ ಚರಖಾ ಸಿಕ್ಕಿತು. ಆದರೆ ಹಂಜಿ? ಮೊದಲು ಉದ್ದನೆಯ ಹಂಜಿಯನ್ನು ಗಿರಣಿಯಿಂದ ತರುತ್ತಿದ್ದೆವು. ಅನಂತರ ಹಂಜಿಯನ್ನೂ ಕೈಯಿಂದಲೇ ಮಾಡಿಕೊಳ್ಳಬೇಕೆಂದೆನಿಸಿತು. ಈ ರೀತಿ ಹಂಜಿಯನ್ನೂ ಕೈಯಿಂದಲೇ ಮಾಡತೊಡಗಿದೆವು. ಈ ಬಗೆಯಲ್ಲಿ ಖಾದಿ ಪ್ರಾರಂಭವಾಯಿತು. ಖಾದಿಯ ಮೂಲಕ ಮನಸ್ಸಿನ ತಂತುವನ್ನು ಬಾಪೂಗೆ ಜೋಡಿಸಬೇಕಾಗಿತ್ತು.

ಬಾಪೂ ಮೀರಾಬಾಯಿಯ ಒಂದು ಭಜನೆಯನ್ನು ಅನೇಕಬಾರಿ ಹಾಡುತ್ತಿದ್ದರು: **'ಕಾಚೇ ರೇ ತಾಂತಣೇ ಮನೇ ಹರಿಯೇ ಬಾಂಧೀ, ಜೇಮ್ ತಾಣೇ ತೇಂ ರಹಿಯೇ ರೇ.'**

'ಒಂದು ಕಚ್ಚಾ ತಂತು ಇದೆ. ಅದರಿಂದ ನನ್ನನ್ನು ಕಟ್ಟಿದ್ದಾರೆ. ಭಗವಂತ ಅದರಿಂದ ನನ್ನನ್ನು ಎಳೆಯುವಷ್ಟು ಗಟ್ಟಿ ಇದೆ ಅದು. ನಾನೂ ಆತನನ್ನು ಅದರಿಂದ ಸೆಳೆಯುತ್ತೇನೆ.' ಈ ರೀತಿ ಮೀರಾಬಾಯಿ ಹೇಳುತ್ತಾಳೆ. ಪ್ರೇಮದ ಹಗ್ಗವೆಂಬ ಕಚ್ಚಾ ತಂತುವಿನಿಂದ ಇಡೀ ಜಗತ್ತನ್ನು ಎಳೆಯಬಲ್ಲೆವು. ನಾವೂ ಅವರತ್ತ ಸೆಳೆಯಲ್ಪಡಬಲ್ಲೆವು. ಈ ಭಾವನೆ ಚರಖಾದ ಹಿಂದಿದೆ.

ಬಾಪೂ ತಮ್ಮ ಇಡೀ ಜೀವಮಾನ ಪರ್ಯಂತ ಪ್ರತಿ ದಿನವೂ ಚರಖಾ ನೂತರು. ಸಾಯುವ ದಿನದಂದೂ ಚರಖಾ ನೂತುಬಿಟ್ಟೇ ಹೋದರು. ನ್ಯಾಯಾಲಯದಲ್ಲಿ ಒಮ್ಮೆ ನಿಮ್ಮ ಧಂದೆ ಏನೆಂದು ಕೇಳಿದರು? 'ನೂಲುವುದು ಮತ್ತು ನೇಯುವುದು' ಎಂದು ಉತ್ತರವಿತ್ತರು. ಅದು ಅವರ ತೇಜಸ್ವೀ ಪದ್ಧತಿ. ಈ ರೀತಿ ಹಿಂದೂಸ್ಥಾನದ ಜನತೆಯೊಡನೆ ಅವರು ಏಕರೂಪ ಆಗಲು ಸಾಧ್ಯವಾಯಿತು. ಹೀಗೆ ಚರಖಾದ ಹಿಂದೆ ಉಪಾಸನೆಯ ಮತ್ತು ಸರ್ವಜನರೊಡನೆ ಏಕಾತ್ಮತೆಯನ್ನು ಸಾಧಿಸುವ ಭಾವನೆಯೊಂದಿದೆ. ಆದರೆ ಅದರೊಂದಿಗೆ ಒಂದು ಹೊಸ ಅರ್ಥವ್ಯವಸ್ಥೆಯ ದೃಷ್ಟಿಯೂ ಇದೆ. ಅತ್ಯಧಿಕ ಸಹಾಯದ ಅಗತ್ಯವಿರುವವರಿಗೆ ಎಲ್ಲರಿಗಿಂತ ಮುಂಚಿತವಾಗಿ ನೆರವು

ನೀಡುವ ಉಪಾಯವನ್ನು ಗಾಂಧೀಜೀ ಹುಡುಕುತ್ತಿದ್ದರು. ಅದರಿಂದಲೇ ಈ ಚರಖಾ ಹೊರಟಿತು. ಇದು ಅವರ ಅದ್ಭುತ ಪ್ರತಿಭೆ. ವರ್ಷಗಳ ಮುನ್ನವೇ ಭಾರತಕ್ಕೆ ಗ್ರಾಮೋದ್ಯೋಗದ ಅಗತ್ಯವನ್ನವರು ಕಂಡುಕೊಂಡಿದ್ದರು. ದೂರದರ್ಶಿ ಬಾಪೂಗೆ ಈ ದರ್ಶನವಾಗಿ ಹೋಗಿತ್ತು. ಅವರು ಕ್ರಾಂತದ್ರಷ್ಟಾರರಾಗಿದ್ದರು : **ಕವಿಃ ಕ್ರಾಂತದರ್ಶೀ.** ಆಚೆ ದಡದ ದರ್ಶನವುಳ್ಳವರು ಕವಿ, ಈ ಅರ್ಥದಲ್ಲಿ ಗಾಂಧೀಜಿಯೂ ಕವಿಯೇ.

ಉದ್ಧಾರದಲ್ಲಿ ಉಧರೀಯಿಲ್ಲ

ತುಕಾರಾಮ ಹೇಳಿದ್ದಾನೆ : 'ಉದ್ಧಾರದಲ್ಲಿ ಉಧರಿಯೇಕೆ ?' ಒಬ್ಬ ಮನುಷ್ಯ ಮುಳುಗುತ್ತಿದ್ದರೆ ನಿನ್ನನ್ನು ನಾಳೆ ಉಳಿಸುತ್ತೇನೆ ಎಂದು ಹೇಳುವುದು ಸರಿಯೇ ? ಅವನು ಮುಳುಗುತ್ತಿರುವುದು ಈಗ. ಅವನನ್ನು ಉದ್ಧರಿಸಬೇಕಾದರೆ ಕೂಡಲೇ ಮಾಡಬೇಕು. ಅದರಲ್ಲಿ ಉಧರಿ ನಡೆಯದು.

ಆದರೆ ಸರ್ಕಾರಿ ಯೋಜನೆಗಳದೆಲ್ಲ ಸಾಲದ ಖಾತೆ. ಉತ್ಪಾದನೆ ಹೆಚ್ಚಿದರೆ ಕೆಳಮಟ್ಟದವರಿಗೂ ಸಹ ಅಲ್ಪಸ್ವಲ್ಪ ಸೇರೀತು. ಈ ಕಲ್ಪನೆಗಳು ಯೋಜನೆಗಳ ಆಧಾರ. ಇದರಲ್ಲಿ ಹೇಳುತ್ತೇನೆ: Theory of Percolation ಮೇಲಿಂದ ಹರಿಯುವ ನೀರು ಮೆಲ್ಲಮೆಲ್ಲನೆ ಇಳಿದು ಕೆಳಮಟ್ಟಕ್ಕೂ ತಲುಪುವಂಥ ಸಿದ್ಧಾಂತ. ಈ ಪ್ರಕ್ರಿಯೆಯಲ್ಲಿ ಮಣ್ಣಿನ ಅಡಿಯಲ್ಲಿ ಕಲ್ಲು ಬಂದುಬಿಟ್ಟರೆ ನೀರು ಕೆಳಗಿನತನಕ ಹೇಗೆ ಹೋದೀತು ? ಈ ಸಿದ್ಧಾಂತ ನಿರರ್ಥಕವೆಂಬುದು ಸಿದ್ಧ. ಇಷ್ಟೊಂದು ಯೋಜನೆಗಳು ಆದುವು. ಉತ್ಪಾದನವೂ ಹೆಚ್ಚಿತು, ಜೀವನ ಮಟ್ಟವೂ ಸ್ವಲ್ಪ ಮೇಲೇರಿತು, ಆದರೆ ಕೆಳಮಟ್ಟದ ಜನರಿಗೆ ಈ ಯೋಜನೆಗಳಿಂದ ಯಾವ ವಿಶೇಷ ಲಾಭವೂ ಸಿಕ್ಕಿಲ್ಲ. ಹಾಗೆಂದೇ ಪಂಡಿತ ನೆಹರೂ ತಮ್ಮ ಕೊನೆಯ ದಿನಗಳಲ್ಲಿ ಹೇಳತೊಡಗಿದರು : ಗಾಂಧೀಜೀ ಯೋಚಿಸುತ್ತಿದ್ದ ರೀತಿಯಲ್ಲಿ ನಾವೂ ಯೋಚಿಸಬೇಕಾದೀತು.

ದೇಶದ ಜೀವನಮಟ್ಟ ಒಟ್ಟು ಸೇರಿ ಏರುವುದರಿಂದಲೇ ಕೆಲಸವಾಗದು. ವಿಶೇಷವಾಗಿ ಬಡವರನ್ನು ಗಮನದಲ್ಲಿಟ್ಟುಕೊಂಡು ಯೋಜನೆ ಮಾಡಿದರೆ ನೆರವು ಅವರವರೆಗೆ ಸಿಕ್ಕೀತು. ಅಂತಲೇ ಬಾಪೂ ಹೇಳುತ್ತಿದ್ದರು—ಅಗತ್ಯ

ವುಳ್ಳವರಿಗೆ ಇಂದೇ ಏನಾದರೂ ಸಿಗಬೇಕು, ಯಾವುದೇ ಸಾಧನ, ಉಪಕರಣ ಸಿಕ್ಕಿದರೂ ಅದನ್ನವರಿಗೆ ಕೊಡಬೇಕು. ಬಾಪೂ ಹೇಳಿದರು: "ಚರಖಾ ನಡೆಸಿರಿ, ಚರಖಾ ಇಲ್ಲದಿದ್ದರೆ ತಕಲಿ ನಡೆಸಿರಿ."

ಇಂದೇ ಏನಾದರೂ ಕೆಲಸ

ಇದರಲ್ಲಿ ಅವರು ಮುಂದಿನ ಪ್ರಗತಿಯನ್ನೂ ತಡೆಯುತ್ತಿರಲಿಲ್ಲ, ಒಂದೆಡೆ ತಕಲಿ ತಿರುಗಿಸುತ್ತಿದ್ದರೂ ಮತ್ತೊಂದೆಡೆ ನೂಲುವ ಹೊಸ ಯಂತ್ರದ ಶೋಧನೆಗಾಗಿ ಒಂದು ಲಕ್ಷ ರೂಪಾಯಿನ ಬಹುಮಾನವನ್ನು ಘೋಷಿಸಿದ್ದರು. ಇದರಲ್ಲಿ ಪ್ರಗತಿಯನ್ನು ತಡೆಯುವ ಯಾವ ಮಾತೂ ಇಲ್ಲ. ಇಂದು ಇರುವ ಆಯುಧವನ್ನು ಬಳಸಿ ಇಂದಿನ ಕೆಲಸ ಮಾಡಬೇಕು, ಮತ್ತೆ ಮುಂದೆ ಸಾಗಬೇಕು.

ಹೀಗೆ ಚರಖಾದ ಹಿಂದೆ ಬಾಪೂದೊಂದು ಸಮಗ್ರ ದರ್ಶನವಿತ್ತು. ಅದರಲ್ಲಿ ಕೇವಲ ಸ್ವಲ್ಪ ಪರಿಹಾರ ಸಲ್ಲಿಸುವ ಅಥವಾ ಸೇವೆ ಮಾಡುವ ದೃಷ್ಟಿ ಮಾತ್ರವಲ್ಲ, ತಮ್ಮ ದೇಶದ ಪರಿಸ್ಥಿತಿಗೆ ಅನುಗುಣವಾಗಿ ಹೊಸ ಅಹಿಂಸಕ ಅರ್ಥವ್ಯವಸ್ಥೆಯ ನಿರ್ಮಾಣದ ದೃಷ್ಟಿಯೂ ಇತ್ತು. ಗಾಂಧೀಜೀ ಕೇವಲ ಉಚ್ಚ ವಿಚಾರದವರು ಮಾತ್ರವಲ್ಲ, ನೆಲದ ಮೇಲೆ ನಿಂತು ವಿಚಾರ ಮಾಡುತ್ತಿದ್ದರು. ಹಿಂದೂಸ್ಥಾನದ ಹಳ್ಳಿಗರ, ಅವರ ಪರಿಸ್ಥಿತಿಯ ಮತ್ತು ಸ್ವಭಾವದ ಸೂಕ್ಷ್ಮ ತಿಳಿವಳಿಕೆ ಅವರಿಗಿತ್ತು. ಹಾಗೆಂದೇ ಕೇವಲ Mass Production—ಭಾರಿ ಉತ್ಪಾದನೆಯಿಂದ ಕೆಲಸ ನಡೆಯುವುದಿಲ್ಲ, Production by Masses—ಜನಕೋಟಿಯಿಂದ ಉತ್ಪಾದನೆಯಾಗಬೇಕು ಎಂದು ಹೇಳಿದರು. ಕೋಟಿಗಟ್ಟಲೆ ಕೈಗಳಿಗೆ ಉಪಕರಣ ಹಾಗೂ ಕೆಲಸ ಒದಗಿ ವಿಕೇಂದ್ರಿತ ಪದ್ಧತಿಯಿಂದ ಹಳ್ಳಿ-ಹಳ್ಳಿಯಲ್ಲೂ ಉತ್ಪತ್ತಿ ಹೆಚ್ಚಿಸಬೇಕಾದೀತು. ಆಗಲೇ ಭಾರತದ ಹಳ್ಳಿಗಳು ಎದ್ದುನಿಂತಾವು. ಇದು ಗಾಂಧೀಜಿಯ ವಿಚಾರ.

ನಾನು ಇಡೀ ಹಿಂದೂಸ್ಥಾನ ತಿರುಗಿದ್ದೇನೆ, ಪಾದಯಾತ್ರೆ ಮಾಡುತ್ತಿದ್ದುದರಿಂದ ಹಳ್ಳಿಹಳ್ಳಿಗೂ ಹೋಗುವ ಅವಕಾಶ ನನಗೆ ಸಿಕ್ಕಿತು. ಈ ಸಂದರ್ಭದಲ್ಲಿ ಗಾಂಧೀಜಿಯ ವಿಚಾರದ ತಥ್ಯವನ್ನು ಸಾಕ್ಷಾತ್ ಕಂಡೆ.

ಅನೇಕ ವಿಶೇಷಜ್ಞರೊಡನೆ ಮಾತನಾಡುವ ಅವಕಾಶ ಸಿಕ್ಕಿತು. ಹಳ್ಳಿಗಳ ಏಳಿಗೆಗೆ ಗ್ರಾಮೋದ್ಯೋಗದ ಹೊರತಾಗಿ ಬೇರಾವ ಯೋಜನೆಯೂ ಯಾರಿಂದಲೂ ಕೇಳಿಬರಲಿಲ್ಲ. ಇಷ್ಟೇ, ಗ್ರಾಮೋದ್ಯೋಗದ ಸಾಧನಗಳು ಸುಧಾರಿಸಬೇಕು ಎಂಬ ಮಾತು ಕೇಳಿಬಂತು. ವಿದ್ಯುತ್ತೇ ಏಕೆ, ಅಣು ಶಕ್ತಿಯೂ ಬರಲಿ, ಇದರಲ್ಲಿ ಎರಡು ಅಭಿಪ್ರಾಯವಿಲ್ಲ. ಸಾಧನಗಳನ್ನು ಸುಧಾರಿಸಲು ಬಹಳ ಪ್ರಯತ್ನ ನಡೆದಿದೆ, ಈಗಲೂ ನಡೆದೀತು. ವಿದ್ಯುತ್ ಅಥವಾ ಅಣುಶಕ್ತಿಯ ದೃಷ್ಟಿಯಿಂದ ನಾವು ನಮ್ಮ ಉಪಕರಣಗಳನ್ನು ಸುಧಾರಿಸುತ್ತಾ ಹೋದೇವು. ಇದರಿಂದ ಅಹಿಂಸೆ ಮುರಿದುಬೀಳುತ್ತದೆ ಎಂಬ ಭಯ ನನಗಿಲ್ಲ. ನಾನು ನಿರ್ಭೀತ. ನನ್ನ ಮನಸ್ಸು ತೂಗಾಡುವುದಿಲ್ಲ. ವಿದ್ಯುತ್ತಿನಿಂದ ಚರಖಾ ನಡೆಸಲು ನನ್ನದೇನೂ ಆಕ್ಷೇಪವಿಲ್ಲ. ಪವನಾರಿನ ಬ್ರಹ್ಮವಿದ್ಯಾ ಮಂದಿರದ ಸೋದರಿಯರು ತಮ್ಮ ವಸ್ತ್ರ ಸ್ವಾವಲಂಬನೆಗಾಗಿ ಅಂಬರ್ ಚರಖಾಗೆ ವಿದ್ಯುತ್ ಬಳಸುವುದಕ್ಕೆ ಅನುಮತಿ ಕೊಟ್ಟುಬಿಟ್ಟಿದ್ದೇನೆ. ವಿದ್ಯುತ್ತಿನಿಂದ ಚರಖಾ ನಡೆಸಲು ಒಂದೇ ಷರತ್ತು ನನ್ನದು. ಆ ಖಾದಿಯ ಉಪಯೋಗ ಕ್ಷೇತ್ರ ಸ್ವಾವಲಂಬನದ ಮಟ್ಟಿಗೆ, ಹೊರಗೆ ಮಾರಲು ಕಳುಹಿಸಿ ಶೋಷಣೆ ಮಾಡತಕ್ಕದ್ದಲ್ಲ. ಇದಕ್ಕೆ ವಿದ್ಯುತ್ ಬಳಸಲು ಏನೂ ಅಡ್ಡಿ ಇಲ್ಲ. ಈಗ ಅಣುಶಕ್ತಿ ಬರುತ್ತಿದೆ, ಅದರ ಆಧಾರದಮೇಲೆ ಜೀವನವನ್ನು ಅಧಿಕ ವಿಕೇಂದ್ರಿತ, ಹೆಚ್ಚು ಸುಖೀ ಮತ್ತು ವ್ಯಾಪಕ ಅರ್ಥದಲ್ಲಿ ಸ್ವಾವಲಂಬಿಯಾಗಿ ಮಾಡಬಹುದು. ಅಣುಶಕ್ತಿಯಲ್ಲಿ ವಿದ್ಯುತ್ತಿಗಿಂತ ವಿಕೇಂದ್ರೀಕರಣದ ಶಕ್ಯತೆ ಹೆಚ್ಚು ಅಡಕವಾಗಿದೆ, ಇದು ನನ್ನ ನಿಶ್ಚಿತ ಅಭಿಮತ.

ಯಂತ್ರದ 'ಆತ್ಮದರ್ಶನ'ದ ಸಮಯ

ಸಾಧನಗಳು ಎಷ್ಟು ಸಾಧ್ಯವೋ ಅಷ್ಟು ಸುಧಾರಿಸಬೇಕು ಎಂದು ನಾನು ಹೇಳುತ್ತಿದ್ದೆ, ಇದರಲ್ಲಿ ಎರಡು ಅಭಿಪ್ರಾಯವೇ ಇಲ್ಲ. ಆದರೆ ಯಂತ್ರಗಳ ವಿಷಯದಲ್ಲಿ ಬೇರೆ ರೀತಿ ಯೋಚಿಸುತ್ತೇನೆ. ಯಂತ್ರಗಳು ತಮ್ಮ ಬೆಲೆಗೆ ಸಮನಾಗಿ ಹುಟ್ಟುವಳಿ ಮಾಡಲು ತಗಲುವ ಸಮಯಕ್ಕೆ ಅವುಗಳ 'ಆತ್ಮದರ್ಶನ'ದ ಸಮಯ ಎನ್ನುತ್ತೇನೆ. ತಕಲಿ ಎಂಟು ಗಂಟೆಯಲ್ಲಿ ಆತ್ಮದರ್ಶನ ಮಾಡುತ್ತದೆ. ಅಂಬರ್ ಚರಖಾಕ್ಕೆ ಒಂದು ವರ್ಷ ಹಿಡಿಸಬಹುದು.

ಬಂಡವಾಳವನ್ನು ತಡೆಯುವ ದೃಷ್ಟಿಯಿಂದ ಆತ್ಮದರ್ಶನ ಯಂತ್ರದ ಕಾರ್ಯಕ್ಷಮತೆಯ ಒಂದು ಒರೆಗಲ್ಲು. ಆದುದರಿಂದ ದೇಶ ಕಾಲದ ಪರಿಸ್ಥಿತಿಗೆ ಅನುಸಾರವಾಗಿ ಉಪಯುಕ್ತವಾಗುವ ಸಾಧನ ಯಾವುದೆಂಬುದನ್ನು ವಿವೇಕದಿಂದ ವಿಚಾರ ಮಾಡಬೇಕು.

ಗಾಂಧೀಜಿಯ ಚರಖಾದ ಹಿಂದೆ ಇಂಥದೊಂದು ವಿಚಾರವಿದೆ. ದೇಶದ ಎಲ್ಲರಿಗಿಂತ ಕೆಳಮಟ್ಟದ ಜನರ ಪರವಾಗಿ ಮೊಟ್ಟಮೊದಲು ಗಮನ ಹರಿಸಬೇಕು. ಇದು ಸರ್ವೋದಯದ ದೃಷ್ಟಿ. ನಾನು ಶಾಶ್ವತ ಕಾಲದ ಮಾತನ್ನಾಡುವುದಿಲ್ಲ. ಕನಿಷ್ಠಪಕ್ಷ ಮೂವತ್ತು-ನಲವತ್ತು ವರ್ಷಗಳವರೆಗಾದರೂ ಎಲ್ಲರಿಗಿಂತ ಕೆಳಮಟ್ಟದ ಜನರನ್ನು ಮೇಲೆತ್ತದೆ ಬೇರೆ ದಾರಿಯೇ ಕಾಣಬರದು. ಈ ಮೂವತ್ತು-ನಲವತ್ತು ವರ್ಷದ ನಡುವಿನ ಕಾಲದ ಕಾರ್ಯಕ್ರಮವಾಗಿ ಖಾದೀ ಕೆಲಸವನ್ನು ಎತ್ತಿಕೊಳ್ಳಬೇಕಾದೀತು. ಮುಂದೆ ಮತ್ತಾವುದಾದರೂ ದಾರಿ ತೋರಿಬರಬಹುದು. ಈಗಂತೂ ಇದರ ಹೊರತಾಗಿ ಉಪಾಯವೇ ಕಾಣದು.

ಖಾದೀ : ಗ್ರಾಮ ಸ್ವರಾಜ್ಯದ ಸಮವಸ್ತ್ರ

ಗಾಂಧೀಜೀ ಖಾದಿಯ ಜೊತೆಯಲ್ಲಿ ಇತರ ಗ್ರಾಮೋದ್ಯೋಗಗಳ ಮಾತನ್ನೂ ಆಡಿದ್ದರು. ಕೇವಲ ಬೇಸಾಯವನ್ನು ನಂಬಿ ಹಳ್ಳಿ ಬದುಕಲಾರದು, ಇದು ಗಾಂಧೀಜಿಯ ಮೌಲಿಕ ವಿಚಾರ. ಮೂಲ ಅಗತ್ಯವಸ್ತುಗಳನ್ನು ಹಳ್ಳಿಯೇ ಸ್ವತಃ ತಯಾರಿಸಿಕೊಳ್ಳಬೇಕು. ಸಾಧ್ಯವಿದ್ದಷ್ಟೂ ಕಚ್ಚಾವಸ್ತುವನ್ನು ಪಕ್ಕಾವಸ್ತುವಾಗಿ ಹಳ್ಳಿಯಲ್ಲೇ ತಯಾರಿಸಬೇಕು. ಎಳ್ಳನ್ನು ಮಾರಿ ಎಣ್ಣೆಯನ್ನು ಕೊಳ್ಳುವಂತಾಗಬಾರದು. ಹತ್ತಿ ಮಾರಿ ಬಟ್ಟೆ ಕೊಳ್ಳಬಾರದು. ಕಬ್ಬು ಮಾರಿ ಬೆಲ್ಲ ಕೊಳ್ಳಬಾರದು. ಜೀವನೋಪಯೋಗಿಯಾದ ಮೂಲವಸ್ತುಗಳು ಹಳ್ಳಿಯಲ್ಲೇ ಉತ್ಪತ್ತಿಯಾಗಬೇಕು. ಯಾವ ವಸ್ತುವನ್ನು ಹೊರಗಿನಿಂದ ತರಬೇಕು ಮತ್ತು ಯಾವ ವಸ್ತುವನ್ನು ಹೊರಗೆ ಕಳುಹಿಸಬೇಕು ಎಂಬುದನ್ನು ತೀರ್ಮಾನಿಸುವ ಅಧಿಕಾರ ಪ್ರತಿ ಹಳ್ಳಿಗೂ ಇರಬೇಕು. ಹೀಗಾದರೆ ಮಾತ್ರ ಹಳ್ಳಿಗಳಿಗೆ ಸ್ವರಾಜ್ಯ ಬಂದೀತು.

ಆದುದರಿಂದ ಖಾದೀ-ಗ್ರಾಮೋದ್ಯೋಗದ ವಿಷಯದಲ್ಲಿ ಬೇರೆ ರೀತಿ

ವಿಚಾರ ಮಾಡುವ ಬದಲಾಗಿ ಗ್ರಾಮ ಅರ್ಥತಂತ್ರದ ರೂಪದಲ್ಲಿ ಅದನ್ನು ಕುರಿತು ಯೋಚಿಸಬೇಕು. ಬೇಸಾಯಕ್ಕೆ ಸಹಾಯಕವಾಗಿ ಕೊಡಬಲ್ಲ ಉದ್ಯೋಗಗಳನ್ನೆಲ್ಲಾ ಕೊಡಬೇಕು. ಅದರಲ್ಲಿ ಖಾದಿಯ ಉದ್ಯೋಗವೂ ಒಂದು. ಖಾದಿಯ ವಿಷಯದಲ್ಲಿ ನಾನೊಂದು ಮಾತನ್ನು ಸ್ಪಷ್ಟಪಡಿಸ ಬಯಸುತ್ತೇನೆ. ಖಾದಿಯಲ್ಲದೆ ನಿರುದ್ಯೋಗವನ್ನು ದೂರಮಾಡಬಲ್ಲ ಬೇರಾವ ಉದ್ಯೋಗಗಳಿವೆಯೋ ಅವುಗಳನ್ನು ಮೊದಲು ಅಂದಾಜು ಮಾಡಬೇಕು. ಎಲ್ಲ ಉದ್ಯೋಗಗಳನ್ನು ಕೊಟ್ಟ ಬಳಿಕವೂ ಖಾದೀ ಗ್ರಾಮೋದ್ಯೋಗಗಳ ಅಗತ್ಯ ಉಳಿದಿರುತ್ತದೆ ಎಂದು ನನ್ನ ಎಣಿಕೆ. ಹಳ್ಳಿ ತನ್ನ ಕಾಲಮೇಲೆ ನಿಲ್ಲುವುದು ನಮ್ಮ ದೃಷ್ಟಿ. ಬೇಸಾಯದ ಒಟ್ಟಿಗೆ ಖಾದೀ ಗ್ರಾಮೋದ್ಯೋಗ ನಿಂತರೆ ಹಳ್ಳಿಗಳು ತಮ್ಮ ಕಾಲಮೇಲೆ ನಿಲ್ಲಬಲ್ಲವು.

ಸ್ವರಾಜ್ಯ ಬರುವ ಮೊದಲು ಸ್ವರಾಜ್ಯದ ಆಕಾಂಕ್ಷೆಯ ಸಂಕೇತ ವಾಗಿತ್ತು ಖಾದೀ. ಅದು ಸ್ವಾತಂತ್ರ್ಯದ ಸಮವಸ್ತ್ರ ಎಂದು ತಿಳಿಯಲ್ಪಡು ತ್ತಿತ್ತು. ಸ್ವರಾಜ್ಯ ಬಂದಮೇಲೆ ಖಾದಿಯ ಈ ಭೂಮಿಕೆ ಮುಗಿದು ಹೋಯಿತು. ಅನಂತರ ಖಾದಿ ಅನೇಕ ದಿಕ್ಕುಗಳಲ್ಲಿ ಪ್ರಗತಿ ಸಾಧಿಸಿದೆ. ಕೆಲಸವಿಲ್ಲದವರಿಗೆ ಕೆಲಸ ನೀಡುವುದರಲ್ಲಿ ತನ್ನ ವಿಶೇಷ ಪಾತ್ರ ವಹಿಸಿದೆ. ಅದರದೊಂದು ತಂತ್ರ ಆಗಿದೆ, ಶಾಸ್ತ್ರವೂ ವಿಕಸಿತವಾಗಿದೆ. ಆದರೆ ಅದು ಮುಖ್ಯವಾಗಿ ಗ್ರಾಮ ಸ್ವರಾಜ್ಯದ ಸಮವಸ್ತ್ರವಾಗಿ ರೂಪಗೊಳ್ಳಬೇಕು. ಹಳ್ಳಿಹಳ್ಳಿಗೂ ಹೋಗಿ ಹಳ್ಳಿಯ ಸಂಸ್ಕೃತಿಯನ್ನು ಸ್ಥಾಪಿಸಬೇಕು ಎಂದು ಮತ್ತೆ ಗಾಂಧೀಜೀ ಸದಾ ಹೇಳುತ್ತಿದ್ದರು. ಖಾದಿಯ ಮೂಲಕ ಗ್ರಾಮಶಕ್ತಿ ಯನ್ನು ಎಬ್ಬಿಸಿ ನಿಲ್ಲಿಸುವ ಅಪೇಕ್ಷೆ ಇತ್ತು.

ಬಾಪೂವಿನ ಈ ಆಸೆ ಇದುವರೆಗೆ ಪೂರೈಸಿಲ್ಲ. ಖಾದೀ ಗ್ರಾಮೋ ದ್ಯೋಗ ಮುಂತಾದವುಗಳಿಂದ ಆರ್ಥಿಕ ಕ್ಷೇತ್ರದಲ್ಲಿ ಜನರು ಸ್ವತಃ ಶೋಷಣ ಮುಕ್ತರಾಗುವಂತೆ ಮಾಡುವುದು ಅವರ ಇಚ್ಛೆಯಾಗಿತ್ತು. ಖಾದಿಯಂಥ ವಸ್ತು ಹೇಗೆ ತಿಳಿಯಲ್ಪಟ್ಟಿತೆಂಬುದು ಕೊನೆಯ ದಿನಗಳಲ್ಲಿ ಬಾಪೂಗೆ ದುಃಖ ವನ್ನುಂಟುಮಾಡಿತ್ತು. ಕೊನೆಯ ಬಾರಿ ಕಾರಾಗೃಹವಾಸ ಮಾಡಿ ಬಂದ ಮೇಲೆ ಈ ವಿಷಯದಲ್ಲಿ ಅವರು ಚಿಂತನೆ ಮಾಡುತ್ತಿದ್ದರು. ಖಾದಿಗೆ ನವಸಂಸ್ಕರಣ ಮಾಡಬೇಕಾದೀತು ಎಂದು ಅವರು ಹೇಳುತ್ತಿದ್ದರು.

ಉಪನಿಷತ್ ಮಂತ್ರದಂತೆ ಎರಡು ವಾಕ್ಯವನ್ನವರು ಹೇಳಿದರು. 'ನೂಲುವವರು ತೊಡಲಿ, ತೊಡುವವರೆಲ್ಲಾ ನೂಲಲಿ.' ಹಳ್ಳಿಹಳ್ಳಿಯಲ್ಲೂ ಧಾನ್ಯ ಹುಟ್ಟುವಂತೆ ಹಳ್ಳಿ-ಹಳ್ಳಿಯಲ್ಲೂ ಬಟ್ಟೆ ತಯಾರಾಗಬೇಕು. ಹಾಗಾದರೆ ಭಾರತಕ್ಕೆ ಬಹು ದೊಡ್ಡ ಸಂರಕ್ಷಣೆಯ ಕೆಲಸವಾದಂತೆ.

ಚಾಂಡಿಲ್‌ನಲ್ಲಿ ನನ್ನನ್ನು ನೋಡಲು ಪಂಡಿತ್ ನೆಹರೂ ಬಂದಿದ್ದರು. ಓದುವುದು ಬರೆಯುವುದನ್ನು ಪ್ರತಿಯೊಬ್ಬರಿಗೂ ಕಲಿಸುತ್ತಿರುವಂತೆ ಪ್ರತಿಯೊಬ್ಬರಿಗೂ ನೂಲುವುದನ್ನು ಕಲಿಸುವುದನ್ನು ಸರ್ಕಾರದ ಕರ್ತವ್ಯವೆಂದು ತಿಳಿಯಬೇಕು ಎಂದು ನಾನು ಅವರಿಗೆ ಹೇಳಿದೆ, ಅನಂತರ ಉದಾಹರಣೆ ಕೊಟ್ಟೆ. ಇಂಗ್ಲೆಂಡಿನ ಶಿಕ್ಷಣದಲ್ಲಿ ಈಜುವುದು ಮತ್ತು ನೌಕೆ ನಡೆಸುವುದು ಅನಿವಾರ್ಯ. ಏಕೆ? ಅವರ ದೇಶ, ಸಮುದ್ರದಿಂದ ಸುತ್ತುವರಿಯಲ್ಪಟ್ಟಿದೆ. ಈಜು ಕಲಿಯುವುದು ತಮಗೆ ರಕ್ಷಣೆ ಎಂದು ಅವರು ತಿಳಿಯುತ್ತಾರೆ. ಅದರಲ್ಲಿ ವ್ಯಾಯಾಮವೂ ಆಗುತ್ತದೆ, ಆನಂದವೂ ದೊರೆಯುತ್ತದೆ. ಆದರೆ ಮುಖ್ಯವಾಗಿ ಅವರು ಸಂರಕ್ಷಣೆಯ ಸಾಧನ ಎಂದು ತಿಳಿಯುತ್ತಾರೆ. ಇದೇ ರೀತಿ ನಮ್ಮ ಪ್ರತಿಯೊಂದು ಹಳ್ಳಿಯಲ್ಲಿಯೂ ಖಾದಿ ತಯಾರಿಸುವುದು 'ಸಂರಕ್ಷಣೆಯ ಕ್ರಮ' ಎಂದು ನಾನು ಮೊದಲಿನಿಂದಲೂ ತಿಳಿದಿದ್ದೇನೆ.

ಖಾದಿಯ ನವಸಂಸ್ಕರಣ

ಈ ದೃಷ್ಟಿಯಿಂದ ಇದುವರೆಗೆ ನಡೆದ ಕೆಲಸ ಗೌಣವೇ. ೪೦-೫೦ ವರ್ಷಗಳವರೆಗೆ ಸತತವಾಗಿ ಕೆಲಸ ನಡೆದಿದೆ. ಮಹಾತ್ಮಾ ಗಾಂಧೀಯವರಂಥ ಪುರಸ್ಕರ್ತರು ಸಿಕ್ಕಿದರು ಮತ್ತು ರಾಜಕೀಯ ನೆರವೂ ದೊರಕಿತು. ಆದರೂ ಇಂದು ಖಾದಿ ಎಷ್ಟಿದೆ? ಹಿಂದೂಸ್ಥಾನದ ಒಟ್ಟು ಬಟ್ಟೆಯ ಆವಶ್ಯಕತೆಯಲ್ಲಿ ಶೇಕಡಾ ಒಂದರಷ್ಟನ್ನು ಮಾತ್ರ ಖಾದೀ ಪೂರೈಸುತ್ತದೆಂದು ಹೇಳಲಾಗುತ್ತದೆ. ಇನ್ನೂ ಬಹಳ ಕಷ್ಟಪಟ್ಟರೂ ಐದು-ಹತ್ತು ವರ್ಷಗಳಲ್ಲಿ ಶೇಕಡಾ ಒಂದರ ಬದಲು ಕಾಲು ಅಥವಾ ಅರ್ಧದಷ್ಟು ಹೆಚ್ಚೀತು. ಜನಸಂಖ್ಯೆ ಎಷ್ಟು ವೇಗದಿಂದ ಹೆಚ್ಚುತ್ತಿದೆ ಅಷ್ಟು ವೇಗದಿಂದ ಖಾದಿ ಹೆಚ್ಚುವುದಿಲ್ಲ. ಆದ್ದರಿಂದ ಪ್ರಮಾಣ ಇಳಿಯುತ್ತ ಹೋದೀತು. ಅದಕ್ಕಾಗಿ ಇಂದಿನವರೆಗಿನ ಕಾರ್ಯ ಪದ್ಧತಿಯನ್ನು ವ್ಯತ್ಯಾಸಗೊಳಿಸಬೇಕು. ಇಲ್ಲದಿದ್ದರೆ ಖಾದಿಯ

ಕ್ರಾಂತಿಕಾರಿತನ ಹೋಗಿಬಿಟ್ಟೀತು. ಅದು ಕೇವಲ ಒಂದು ಚಿಂದಿಯಾದೀತು. ಅಲ್ಪ-ಸ್ವಲ್ಪ ಕೂಲಿ ದೊರಕಿಸುವ ಸಾಧನವಾದೀತು. ದುರ್ಬಲರು ಬೇರಾವ ಕೆಲಸವನ್ನೂ ಮಾಡಲಾರದ ಕಾರಣದಿಂದ ನಿರುದ್ಯೋಗ ಭತ್ಯದ ಬದಲು ಇದು ಅವರಿಗೆ ಕೂಲಿ ಕೊಟ್ಟೀತು. ಈ ಖಾದಿಯಲ್ಲಿ ಯಾವ ಕ್ರಾಂತಿಕಾರಿ ತನವೂ ಉಳಿಯಲಾರದು.

ಮತ್ತೆ ಖಾದಿಯ ಕೆಲಸ ಸರಕಾರದ ಸಹಾಯದಿಂದ ದೀರ್ಘಕಾಲ ನಡೆಯಲಾರದು. ಸರ್ಕಾರ ಎಲ್ಲಿಯತನಕ ಸಹಾಯ ಮಾಡೀತು? ಕೆಲಸ ವಿಲ್ಲದವರಿಗೆ ಕೆಲಸ ಕೊಡುವುದಕ್ಕಾಗಿ ಅಲ್ಪಸ್ವಲ್ಪ ಸಹಾಯ ಮಾಡಬಹುದು. ಆದರೆ ಸಹಾಯ ಒಂದು ಸಂಗತಿ, ರಕ್ಷಣೆ ಮತ್ತೊಂದು ಸಂಗತಿ. ಖಾದಿಗೆ ಸರ್ಕಾರ ಸಹಾಯ ಸಲ್ಲಿಸೀತು, ರಕ್ಷಣೆಯನ್ನಲ್ಲ. ಖಾದಿಗೆ ರಕ್ಷಣೆ ಗ್ರಾಮ ಸಂಕಲ್ಪದಿಂದಲೇ ದೊರೆಯುಬಲ್ಲುದು. ಅಂಥ ರಕ್ಷಣೆ ಸಿಕ್ಕರೆ ಮಾತ್ರವೇ ಖಾದಿ ನಿಲ್ಲುವುದು, ಇಡೀ ದೇಶದಲ್ಲಿ ಹಬ್ಬುವುದು. ಹಳ್ಳಿ-ಹಳ್ಳಿಯ ಗ್ರಾಮ ಸಭೆಯ ಮೂಲಕ ಖಾದೀ ಕೆಲಸದ ಆಯೋಜನೆ ಆಗಬೇಕು. ಗ್ರಾಮದ ಅಗತ್ಯಕ್ಕಾಗಿ ಖಾದಿಯನ್ನು ತಯಾರಿಸಬೇಕಾದೀತು. ಹಳ್ಳಿಯ ಸಮಗ್ರ ಅರ್ಥರಚನೆ ಖಾದೀ-ಗ್ರಾಮೋದ್ಯೋಗ ಮೂಲಕ ಆಗಬೇಕು. ಅಂಥ ಗ್ರಾಮಾಭಿಮುಖ ಹಾಗೂ ಗ್ರಾಮನಿಷ್ಠ ಯೋಜನೆಯಾದರೆ ಮಾತ್ರವೇ ಖಾದಿಯ ಮಂತ್ರ ಸಾಕಾರವಾದಂತೆ.

ಇದನ್ನೆಲ್ಲಾ ತಿಳಿದು ಸಮಗ್ರ ದೃಷ್ಟಿಯಿಂದ ಯೋಚಿಸಬೇಕು. ಖಾದೀ ಒಂದು ಮಹಾಮಂತ್ರ. ಅದರ ಮೂಲಭೂತ ವಿಚಾರವೇನು ಎಂಬ ಚಿಂತನ-ಮನನ ಆಗಬೇಕು. ಚರಖಾ ಎಂದರೆ ಅಹಿಂಸೆ, ಅಹಿಂಸೆ ಎಂದರೆ ಚರಖಾ ಎಂಬುದಾಗಿ ಗಾಂಧೀಜೀ ಹೇಳಿ ಹೇಳಿ ಸೋಲುತ್ತಿರಲಿಲ್ಲ. ಈ ಮಾತಿನ ಮರ್ಮವನ್ನರಿಯಬೇಕಾದೀತು.

ಯುದ್ಧ-ಶಕ್ತಿ ಮತ್ತು ಶಾಂತಿ-ಶಕ್ತಿ

ಆದರೆ ಅಹಿಂಸಕ ಸಮಾಜ ರಚನೆಯ ಅಡಿಪಾಯದ ರೂಪದಲ್ಲಿ ಖಾದಿಯ ದರ್ಶನ ನಮಗೆ ಆಗುತ್ತಿಲ್ಲ. ಸ್ವರಾಜ್ಯದ ಬಳಿಕ ಒಂದು ಭಾಷಣ ದಲ್ಲಿ ಸರ್ದಾರ್ ಪಟೇಲ್ ಹೇಳಿದ್ದರು, ನನಗೆ ನೆನಪಿದೆ: "ಇನ್ನು ಖಾದೀ

ನಡೆಯದು, ನಾವು ಯುದ್ಧಸಾಮರ್ಥ್ಯವುಳ್ಳ ಉದ್ಯೋಗ ವ್ಯವಸ್ಥೆಯನ್ನು ನಿರ್ಮಿಸಬೇಕಾದೀತು. ಖಾದೀ ಗ್ರಾಮೋದ್ಯೋಗ ವೃದ್ಧಿಯಾಗುವುದರಿಂದ ಸಮರ ಸಿದ್ಧತೆ ಹೆಚ್ಚುವುದಿಲ್ಲ. ಆದುದರಿಂದ ಸೇನೆಯ ಸಜ್ಜು ಹೆಚ್ಚುವಂಥ ಉದ್ಯೋಗವನ್ನು ಹೆಚ್ಚಿಸಬೇಕು." ಈ ಶಬ್ದಗಳು ಸರ್ದಾರ್ ಪಟೇಲರವು. ಇವನ್ನು ನಾನು ಕಿವಿಯಾರ ಕೇಳಿದ್ದೇನೆ.

ಜಗತ್ತಿನಲ್ಲಿ ಸಮರ ಸಾಮರ್ಥ್ಯದ ಆವಶ್ಯಕತೆಗಿಂತ ಶಾಂತಿ ಸಾಮರ್ಥ್ಯದ ಆವಶ್ಯಕತೆ ಇಂದು ಹೆಚ್ಚಾಗಿದೆಯೆಂದು ನನಗನ್ನಿಸುತ್ತದೆ. ಶಾಂತಿಯ ಪ್ರಸ್ತಾಪ, ಸಂಭಾವನೆ, ಕ್ಷಮತೆ ಇರುವ ಕೆಲಸವನ್ನೇ ನಾವು ಹೆಚ್ಚುಹೆಚ್ಚಾಗಿ ಮಾಡಬೇಕು. ಇಂದಿನ ಜಗತ್ತಿನಲ್ಲಿ ಸರ್ವೋದಯದ ಕೂಗು ನ್ಯಾಯದ ಸ್ಥಾಪನೆಯ ಕೂಗು. ಅನ್ಯಾಯ ಮತ್ತು ಶೋಷಣೆಯನ್ನು ಸಮಾಪ್ತಿಗೊಳಿಸುವ ಕ್ಷಮತೆ ಅದರಲ್ಲಿದೆ. ಅವೆರಡೂ ಸಮಾಪ್ತಿಯಾದಾಗಲೇ ಸ್ಥಿರ ಶಾಂತಿ ಸಾಧ್ಯ.

ಇಂದಿನ ಜಗತ್ತಿಗೆ ತಾರಕ

ಜಗತ್ತು ಇಂದು ಅನ್ಯಾಯ, ಪೀಡನೆ ಮತ್ತು ಶೋಷಣೆಗಳಿಂದ ತ್ರಸ್ತವಾಗಿದೆ. ಸತ್ತೆಯ ಮುಷ್ಟಿಯಲ್ಲಿ ಅದರ ಉಸಿರು ಕಟ್ಟಿಹೋಗುತ್ತಿದೆ. ಯುದ್ಧ ಮತ್ತು ಶಸ್ತ್ರಾಸ್ತ್ರಗಳ ಶಾಪದಿಂದ ಅದು ಪೀಡಿತವಾಗಿದೆ. ಆದಕ್ಕೆ ವರದಾನವಾಗಬೇಕಾಗಿದ್ದ ವಿಜ್ಞಾನ ಇಂದು ಶಾಪವಾಗಿಬಿಟ್ಟಿದೆ. ಏಕೆಂದರೆ ಸತ್ತೆ, ಸಂಪತ್ತು ಹಾಗೂ ಸ್ವಾರ್ಥಗಳಿಗೆ ವಿಜ್ಞಾನ ಮಾರಿಹೋಗಿದೆ.

ಇಂದಿನ ಈ ಭಯಾವಹವಾದ ಸ್ಥಿತಿಯಲ್ಲಿ ಮುಕ್ತವಾಗಲು ಸರ್ವೋದಯ ವಿಚಾರ ದಾರಿ ತೋರಿಸುತ್ತಿದೆ. ಗಾಂಧೀಜೀ ಬಹಳ ಹಿಂದೆಯೇ ಈ ಮಾತನ್ನು ತಿಳಿದುಬಿಟ್ಟಿದ್ದರು. ವಿಜ್ಞಾನ ಮತ್ತು ಯಂತ್ರಶಾಸ್ತ್ರದ ವಿಕಾಸದಿಂದ ಸತ್ತೆ ಮತ್ತು ಸಂಪತ್ತಿಯ ಕೇಂದ್ರೀಕರಣದ ಹಾದಿ ಮುಕ್ತವಾಗುತ್ತದೆ, ಕೇಂದ್ರೀಕೃತವಾದ ಸತ್ತೆ ಮತ್ತು ಸಂಪತ್ತು ಇಡೀ ಮಾನವಕುಲವನ್ನು ತನ್ನ ಗುಲಾಮನನ್ನಾಗಿಸಿಕೊಂಡೀತು ಎಂದು. ಹಾಗೆಂದೇ ಅವರು ಗ್ರಾಮಸ್ವರಾಜ್ಯದ ಘೋಷಣೆ ಮಾಡಿದ್ದರು.

"ಭಾರತ ಅಹಿಂಸೆಯ ಮೂಲಕ ತನ್ನ ವಿಕಾಸಗೊಳಿಸಿಕೊಳ್ಳಬೇಕಾದರೆ

ಅರ್ಥಾತ್ ಅಶೋಷಣೆ ಮತ್ತು ನ್ಯಾಯದ ಹಾದಿಯಲ್ಲಿ ಹೋಗಬೇಕಾದರೆ ಬಹಳಷ್ಟು ವಿಷಯಗಳ ವಿಕೇಂದ್ರೀಕರಣವಾಗಬೇಕಾದೀತು. ಅದರ ಬದಲು ಕೇಂದ್ರೀಕರಣ ಮಾಡಿಬಿಟ್ಟರೆ ಅದನ್ನು ಸ್ಥಿರವಾಗಿಡಲು ಮತ್ತು ರಕ್ಷಿಸಿಕೊಳ್ಳಲು ಹಿಂಸೆಯನ್ನು ಆಶ್ರಯಿಸುವುದು ಅನಿವಾರ್ಯವಾದೀತು. ಅಹಿಂಸಕ ಸಮಾಜರಚನೆಯಾದರೋ ಸ್ವಾವಲಂಬಿಯಾದ ಸಾಶ್ರಯಿಯಾದ ಗ್ರಾಮಗಳ ಆಧಾರದ ಮೇಲೆಯೇ ನಿಲ್ಲಬಲ್ಲದು" ಎಂದು ಅವರು ಹೇಳಿದ್ದರು.

ಈಗ ಗ್ರಾಮದಾನ ಮತ್ತು ಸರ್ವೋದಯ ಆಂದೋಲನ ಅಂಥದೇ ಗ್ರಾಮಸ್ವರಾಜ್ಯವನ್ನು ಸಿದ್ಧಪಡಿಸಲು ಪ್ರಯತ್ನಿಸುತ್ತಿದೆ. ಇಂದಿನ ಪರಿಸ್ಥಿತಿಯನ್ನು ಬದಲಿಸಲು ಸಮಾಜದಲ್ಲಿ ಒಂದು ಕ್ರಾಂತಿಕಾರಿ ಚೇತನವನ್ನು ಜಾಗೃತಗೊಳಿಸಬಯಸುತ್ತದೆ. ಆದರಿಂದ ಸಾಮಾನ್ಯ ಜನತೆ ಎಚ್ಚರಗೊಳ್ಳುತ್ತದೆ. ಅವರು ಸಂಘಟಿತರಾಗಿ ಸಮಾಜದಲ್ಲಿ ನ್ಯಾಯ ಮತ್ತು ಸೋದರತೆಯ ವಾತಾವರಣ ಉಂಟಾಗಬೇಕು. ಕೇಂದ್ರೀಕರಣದ ಅಗತ್ಯ ಸಮಾಪ್ತವಾಗಿ ಹಳ್ಳಿ-ಹಳ್ಳಿಯಲ್ಲೂ ಸತ್ತೆ ಮತ್ತು ಸಂಪತ್ತಿಯ ಹಿಡಿತದಿಂದ ಮುಕ್ತವಾಗುವ ಶಕ್ತಿಯನ್ನು ಹುಟ್ಟಿಸಬೇಕಾಗಿದೆ.

ಮಾನವ ಕುಲಕ್ಕೆ ಅಮೂಲ್ಯ ಕೊಡುಗೆ

ವಿಕೇಂದ್ರೀಕರಣ ಮತ್ತು ಗ್ರಾಮಸ್ವರಾಜ್ಯದ ಈ ವಿಚಾರ ಮಾನವ ಕುಲಕ್ಕೆ ಬಾಪೂವಿನ ಅಮೂಲ್ಯ ಕೊಡುಗೆ. ಸಮಸ್ತ ಮಾನವೀಯ ಆಗು-ಹೋಗುಗಳ ಕೇಂದ್ರೀಕರಣ ವಿಜ್ಞಾನದ ಒಂದು ಅಭಿಶಾಪ. ಅದನ್ನು ಎದುರಿಸುವ ಸಲುವಾಗಿ ಮಹಾತ್ಮಾ ಗಾಂಧಿಯವರ ಈ ಮಾತೇ ಮಾನವ ಕುಲಕ್ಕೆ ಏಕಮಾತ್ರ ಮಾರ್ಗ. ಮಹಾತ್ಮಾ ಗಾಂಧೀ ಒಬ್ಬ ವ್ಯಕ್ತಿಯಾಗಿರಲಿಲ್ಲ, ಅಹಿಂಸಾ ತತ್ವದ ಸಂಕೇತವಾಗಿದ್ದರು. ಅವರ ಮೂಲಕ ಅಹಿಂಸಕ ಸಮಾಜರಚನೆಯ ಸಾಮಾನ್ಯತಃ ಒಂದು ಒಳ್ಳೆಯ ರೂಪರೇಖೆ ಮಾನವ ಕುಲಕ್ಕೆ ಸಿಕ್ಕಿತು.

●

೧೩

ಆಶ್ರಮ ಪರಂಪರೆ

ನಮ್ಮ ದೇಶದಲ್ಲಿ ಹಿಂದಿನ ಕಾಲದಿಂದ ಮೂರು ಸಂಸ್ಥೆಗಳ ವಿಚಾರ ಪೂರ್ವಕ ವಿಕಾಸವಾಗಿದೆ—ಮನೆ, ಮಠ ಮತ್ತು ಆಶ್ರಮ ಇವುಗಳಲ್ಲಿ ಗೃಹ ಸಂಸ್ಥೆ ಉದ್ಯೋಗ ಪ್ರಧಾನ. ವಿವಿಧ ಪ್ರಕಾರದ ಉದ್ಯೋಗಗಳು ಸಮಾಜಕ್ಕೆ ಅಗತ್ಯವಿರುತ್ತದೆ. ಮನೆಯಲ್ಲಿ ಜೀವನಕ್ಕೆ ಉಪಯುಕ್ತವಾದ ಅನೇಕ ಉದ್ಯೋಗಗಳು ನಡೆಯುತ್ತವೆ. ಗೃಹಸ್ಥಾಶ್ರಮದಲ್ಲಿ ಅದೊಂದು ವಿಧಾನ.

ಋಗ್ವೇದದಲ್ಲಿ ಒಂದು ಶಬ್ದ ಬರುತ್ತದೆ: **'ಗೃಹೇ ಗೃಹೇ ದಮೇ ದಮೇ'**—ಮನೆ-ಮನೆಯಲ್ಲಿ ಸಾಧನೆ ನಡೆಯುತ್ತದೆ. 'ದಮ' ಎಂಬುದು ಮನೆಯ ಪರ್ಯಾಯ ಶಬ್ದ. ಮನೆ ಎಂಬುದು ಸ್ವಲ್ಪ ವ್ಯಾಪಕ ಶಬ್ದ. ಅದರೊಳಗೆ ಇರುವ ಸುರಕ್ಷಿತ ಸ್ಥಾನಕ್ಕೆ ದಮ ಎನ್ನುತ್ತಿದ್ದರು, ಎಂದರೆ ಅಂತರ ಗೃಹ. ಗೃಹದಲ್ಲಿ ಎಲ್ಲರ ಗ್ರಹಣವಾಗುತ್ತದೆ. ಹೊರಗೆ ಎಲ್ಲ ಮಂದಿಯ ಸ್ವಾಗತ ಇತ್ಯಾದಿ ನಡೆಯುವ ಸ್ಥಳಕ್ಕೆ ಗೃಹ ಎನ್ನುತ್ತಿದ್ದರು. ಒಳಗಿರುವ ಅಂತರ ವಿಭಾಗಕ್ಕೆ ದಮ ಎನ್ನುತ್ತಿದ್ದರು. ಅಲ್ಲಿ ಇಂದ್ರಿಯಗಳ ದಮನದ ಅಭ್ಯಾಸವಾಗುತ್ತಿತ್ತು. ಜನರಿಗೆ ಅನುಶಾಸನದ ಶಿಕ್ಷಣ ಸಿಗುತ್ತಿತ್ತು. ತಂದೆ-ತಾಯಿ, ಪುತ್ರ-ಪುತ್ರಿ ಒಂದೆಡೆ ಇರುತ್ತಿದ್ದರು. ಅವರಲ್ಲಿ ಒಂದು ಶಿಸ್ತು ಇರಬೇಕಾಗುತ್ತಿತ್ತು. ಅದು ಪ್ರೇಮದ ಆಧಾರದ ಮೇಲೆಯೇ. ಆದರೆ ಜೀವನ ನಿಯಮಯುಕ್ತವಾಗಿರತಕ್ಕದ್ದು. ಅಂಥ ಸಾಧನೆ ಇರುವೆಡೆಗೆ ದಮ ಎನ್ನುತ್ತಿದ್ದರು. ಇಂಗ್ಲೀಷ್‌ನಲ್ಲಿ 'ಮೇಡಮ್' ಶಬ್ದವಿದೆ. ಅದನ್ನು ಫ್ರೆಂಚ್‌ನಲ್ಲಿ 'ಮದಾಂ' ಎನ್ನುತ್ತಾರೆ. ಆಕೆ ಮನೆಯ ಗೃಹಿಣಿ. ಈ ಶಬ್ದ ಲ್ಯಾಟಿನ್‌ನಲ್ಲೂ ಬಂದುಬಿಟ್ಟಿದೆ.

ಉದ್ಯೋಗ ಪ್ರಧಾನ, ಪ್ರಯೋಗ ಪ್ರಧಾನ, ಯೋಗ ಪ್ರಧಾನ

ಮೊದಲಿನ ಸಂಸ್ಥೆ ಗೃಹ ಉದ್ಯೋಗ ಪ್ರಧಾನ. ಎರಡನೆ ಸಂಸ್ಥೆ

ಆಶ್ರಮ ಪ್ರಯೋಗ ಪ್ರಧಾನ. 'ಆಶ್ರಮ' ಶಬ್ದ ಅಪೂರ್ವವಾದುದು. ಎಲ್ಲ ಬಗೆಯ ಪರಿಶ್ರಮಗಳ ಸಾಮಂಜಸ್ಯ ಇರುವ ಸ್ಥಳವೇ ಆಶ್ರಮ. 'ಶ್ರಮ' ಶಬ್ದದಿಂದಲೇ 'ಆಶ್ರಮ' ಶಬ್ದವುಂಟಾಗಿದೆ. 'ಆ' ಎಂಬುದು ವ್ಯಾಪಕತಾ ಸೂಚಕ. ಎಲ್ಲ ಬಗೆಯ ವ್ಯಾಪಕ ಶ್ರಮವನ್ನು ಸಮತ್ವಪೂರ್ವಕವಾಗಿ ನಡೆಸುವ ಸ್ಥಳವೇ ಆಶ್ರಮ. ಆಶ್ರಮದಲ್ಲಿ ಸಾಧಕರು ಇರುತ್ತಿದ್ದರು. ಅಲ್ಲಿ ಅವರು ಜೀವನದ ಅನೇಕ ಪ್ರಯೋಗಗಳನ್ನು ನಡೆಸುತ್ತಿದ್ದರು. ಕೆಲವು ಪ್ರಯೋಗಗಳು ಸಮಾಜದ ಗುಣವರ್ಧನೆಗಾಗಿ, ಮತ್ತೆ ಕೆಲವು ಅಂತಃ ಶೋಧನೆಗಾಗಿ ಹಾಗೂ ಚಿತ್ತಶುದ್ಧಿಗಾಗಿ. ಹೀಗೆ ಆಶ್ರಮಗಳಲ್ಲಿ ಆಧ್ಯಾತ್ಮಿಕ ಹಾಗೂ ಆದಿಭೌತಿಕ ಎರಡೂ ಪ್ರಕಾರದ ಪ್ರಯೋಗಗಳು ನಡೆಯುತ್ತಿದ್ದವು. ನಮ್ಮಲ್ಲಿ ಆಧ್ಯಾತ್ಮಿಕದೊಡನೆಯೇ ಭೌತಿಕ ಪ್ರಯೋಗಗಳೂ ನಡೆಯುತ್ತಿದ್ದವು. ಈ ಶೋಧನೆಗಳಲ್ಲಿ ಕೃಷಿ ಒಂದು ಬಹು ದೊಡ್ಡ ಶೋಧನೆ. ಬಹುಶಃ ಕೃಷಿಯನ್ನು ಮೊಟ್ಟಮೊದಲನೆಯದಾಗಿ ಶೋಧಿಸಿದ ದೇಶ ಹಿಂದೂಸ್ಥಾನವೇ. 'ದೇವತೆಗಳು ಬಂದರು, ಕೈಯಲ್ಲಿ ಕೊಡಲಿ ತಂದರು, ಕಾಡು ಕಡಿದು ಹೊಲ ಮಾಡಿದರು'—ಇಂಥ ವರ್ಣನೆ ವೇದದಲ್ಲಿ ಬರುತ್ತದೆ. ಇದರಿಂದಲೇ ಭಾರತವನ್ನು ಪುಣ್ಯಭೂಮಿಯೆನ್ನುತ್ತಾರೆ. ಕೃಷಿಯ ಶೋಧನೆಯಾದ ಮೇಲೆ ಪಶುವಿನಂತೆ ಜೀವನಮಾಡುವ ಅಗತ್ಯವಿಲ್ಲ. ಬೇಟೆ, ಶಿಕಾರಿ ಮಾಡುವುದಿಲ್ಲ. ಸೃಷ್ಟಿಯ ಸೇವೆ ಮಾಡಿ ಪ್ರಸಾದರೂಪವಾಗಿ ಫಲ ಪಡೆಯುತ್ತೇವೆ. ಇಂಥ ಅನೇಕ ಪ್ರಯೋಗಗಳು ಆಶ್ರಮದಲ್ಲಿ ನಡೆದುವು.

ಮೂರನೆಯ ಸಂಸ್ಥೆ ಮಠ. ಇದು ಯೋಗ ಪ್ರಧಾನ ಸಂಸ್ಥೆ. ಮಠವನ್ನು ವಿಶೇಷವಾಗಿ ಶಂಕರಾಚಾರ್ಯರು ನಡೆಸಿದರು. ಈ ರೀತಿ ಒಂದು ಉದ್ಯೋಗ ಪ್ರಧಾನ ಸಂಸ್ಥೆ, ಎರಡನೆಯದು ಪ್ರಯೋಗ ಪ್ರಧಾನ ಸಂಸ್ಥೆ ಮತ್ತು ಮೂರನೆಯದು ಯೋಗ ಪ್ರಧಾನ ಸಂಸ್ಥೆ ನಮ್ಮ ದೇಶದಲ್ಲಿ ನಡೆದಿದೆ.

ಆಶ್ರಮದ ವಿಶಾಲ ಕಲ್ಪನೆ

ಆಶ್ರಮ ಒಂದು ಕೊಂಡಿ ರೂಪದ ಸಂಸ್ಥೆ. ಅಲ್ಲಿ ನಡೆಯುವ ಆಂತರಿಕ ಪ್ರಯೋಗ ಮತ್ತು ಅದರ ನಿರ್ಣಯ ಕೈಗೆ ಬರುತ್ತಿತ್ತು. ಆ ನಿರ್ಣಯವನ್ನು ಜಾರಿಗೆ ತರುವುದಕ್ಕಾಗಿ ಮಠದ ಸಂಸ್ಥೆ. ಮಠಗಳಿಗೆ ಈ ಆಶ್ರಮಗಳಿಂದ

ಬಹಳ ನೆರವು ಸಿಗುತ್ತಿತ್ತು. ಹೊಸ ಶೋಧನೆ ನಡೆಸುವುದು ಆಶ್ರಮಗಳ ಕೆಲಸವಾಗಿತ್ತು. ಮತ್ತೆ ಅವುಗಳ ಜಾರಿ ಮಠಗಳಲ್ಲಿ ನಡೆಯುತ್ತಿತ್ತು. ಇದೇ ರೀತಿ ಆಶ್ರಮಗಳಲ್ಲಿ ಸಮಾಜಕ್ಕಾಗಿಯೂ ಪ್ರಯೋಗ ನಡೆಯುತ್ತಿತ್ತು. ಅಲ್ಲಿ ಆಗುವ ನಿರ್ಣಯಗಳನ್ನು ಒಪ್ಪಿಕೊಂಡು ಗೃಹ ಸಂಸ್ಥೆಯಲ್ಲಿ ಅದರಂತೆ ನಡೆಯುತ್ತಿದ್ದರು. ಈ ರೀತಿ ಗೃಹ ಮತ್ತು ಮಠ ಇವೆರಡನ್ನೂ ಜೋಡಿಸುವ ಸಂಸ್ಥೆ ಆಶ್ರಮವಾಗಿತ್ತು.

ಇಷ್ಟು ವಿಶಾಲ ಕಲ್ಪನೆ ಆಶ್ರಮದ್ದು. ಅದರಲ್ಲಿ ಪ್ರತಿಯೊಂದು ಸಂಗತಿಯ ತಟಸ್ಥ ದರ್ಶನವಾಗುತ್ತಿತ್ತು. ಆಂತರಿಕ ಭಾವನೆಯ ವಿಕಾಸ ವಾಗುತ್ತಿತ್ತು. ಕರ್ಮಯೋಗ, ಗುಣವಿಕಾಸ, ಇತ್ಯಾದಿ ಬಾಹ್ಯ ಭಾವನೆಗಳ ವಿಕಾಸದ ದೃಷ್ಟಿಯಿಂದ ಪ್ರಯೋಗ ನಡೆಯುತ್ತಿದ್ದವು. ಸಮಾಜಕ್ಕೆ ದಾರಿ ತೋರುತ್ತಿದ್ದರು. ಆಶ್ರಮಗಳ ವರ್ಣನೆ ವೇದದಲ್ಲಿ ಬರುತ್ತದೆ. ಉಪನಿಷತ್ತು ಗಳಲ್ಲಿ ಬರುತ್ತದೆ. ರಾಮಾಯಣ, ಮಹಾಭಾರತ ಮತ್ತು ಭಾಗವತ ಗಳಲ್ಲಿಯೂ ಉಂಟು. ಯೋಗವಾಸಿಷ್ಠ ಇತ್ಯಾದಿ ಪುರಾಣಗಳಲ್ಲೂ ಸಹ ಕಾಳಿದಾಸ, ಭವಭೂತಿ, ಇತ್ಯಾದಿ ಕವಿಗಳೂ ಸಹ ಆಶ್ರಮವನ್ನು ಕುರಿತು ಬರೆದಿದ್ದಾರೆ. ಈ ರೀತಿ ಸಂಸ್ಕೃತದ ಇಡೀ ಸಾಹಿತ್ಯ ಆಶ್ರಮಗಳ ಉಲ್ಲೇಖ ದಿಂದ ತುಂಬಿದೆ.

ಜೀವನದ ಎರಡೂ ವಿಭಾಗ ಪ್ರಾಣವಂತವಾಗಿರಲಿ

ನಮ್ಮ ಕಾಲದಲ್ಲಿ ಗಾಂಧೀಜೀ ಆಶ್ರಮ ಸಂಸ್ಥೆಯನ್ನು ನಡೆಸಿದರು. ದಕ್ಷಿಣ ಆಫ್ರಿಕದಿಂದಲೇ ಆಶ್ರಮವನ್ನು ಪ್ರಾರಂಭಿಸಿದರು. ಭಾರತದಲ್ಲಿ ಸಾಬರ್‌ಮತಿ ಮತ್ತು ಸೇವಾಗ್ರಾಮಗಳಲ್ಲಿ ಆಶ್ರಮವನ್ನು ಸ್ಥಾಪಿಸಿದರು. ಅವರ ಆಶ್ರಮಗಳಲ್ಲಿ ಎರಡೂ ಬಗೆಯ ಪ್ರಯೋಗಗಳು ನಡೆದವು. ಗಾಂಧೀಜಿಯ ಜೀವನದಲ್ಲಿಯೂ ಎರಡೂ ವಿಭಾಗಗಳನ್ನು ನಾವು ನೋಡಬಲ್ಲೆವು. ಜೀವನದ ಎರಡೂ ವಿಭಾಗಗಳ ನಡುವೆ ಪರಸ್ಪರ ಸಂಪರ್ಕವಿಲ್ಲದಿದ್ದರೆ ಅದು ಮುರಿದು ಹೋಗುತ್ತದೆ. ಯಾವುದಾದರೂ ವಸ್ತು ಎರಡು ತುಂಡಾದ ಮೇಲೆ ಒದಗುವ ಪರಿಸ್ಥಿತಿಯೇ ಜೀವನಕ್ಕೂ ಆಗುತ್ತದೆ. ಆತ್ಮಚಿಂತನದ ಸಂಬಂಧ ಸಮಾಜ ದಿಂದ ಕಡಿದುಹೋದರೆ ಅದರಲ್ಲಿ ದೋಷ ಬಂದುಬಿಡುತ್ತದೆ. ಸಮಾಜ

ಕಾರ್ಯ ಬೇರೆಯೇ ಆಗಬಹುದು. ಅದು ಅತ್ಯಂತ ತೀವ್ರವಾಗಿ ಪ್ರವೃತ್ತಿಮಯವೂ ಆಗಿರಬಹುದು. ಆದರೆ ಅದರಲ್ಲಿ ಆತ್ಮಚಿಂತನ ಬರದಿದ್ದರೆ ದೋಷವುಂಟಾಗಿಬಿಡುತ್ತದೆ. ಅಲ್ಲಿ ಆತ್ಮಚಿಂತನ ಸಮಾಜ ಸಂಯುಕ್ತವಾಗಿ ಉಳಿಯದಿದ್ದರೆ ಬರಬರುತ್ತಾ ನಿಷ್ಕ್ರಿಯವಾಗಿ ಹೋದೀತು. ಆತ್ಮಚಿಂತನವಿಲ್ಲದ ಸಮಾಜಕಾರ್ಯ ವಿಕ್ರಿಯ ಆಗುತ್ತದೆ. ಸಮಾಜ ಕಾರ್ಯವಿಲ್ಲದ ಆತ್ಮಚಿಂತನ ನಿಷ್ಕ್ರಿಯ. ಅಲ್ಲಿ ನಡೆಯುವ ಕ್ರಿಯೆ ವಿಕಾರಯುಕ್ತ, ಇಲ್ಲಿಯ ಕ್ರಿಯೆ ಖಂಡವಾದುದು. ಹೀಗೆ ಎರಡು ಭಾಗಗಳು ಬೇರೆ ಬೇರೆಯಾದರೆ ಎರಡೂ ವಿಭಾಗಕ್ಕೆ ಹಾನಿ.

ಗಾಂಧೀಜಿಯ ವಿಚಾರಗಳಿಗೂ ಈ ಭಯವುಂಟು. ಅವರ ವಿಚಾರಗಳಲ್ಲಿ ಎರಡು ಅಂಗ. ಅವೆರಡೂ ಬೇರೆ ಬೇರೆಯಾದರೆ ಹಾನಿ. ಈ ರೀತಿ ಇಂದು ಕೆಲವು ಕಂಡುಬರುತ್ತಿದೆ. ಗಾಂಧೀಜಿಯ ಕೆಲವು ಸಂಗಡಿಗರು ರಾಷ್ಟ್ರರಥ ನಡೆಸಲು ತೊಡಗಿದ್ದಾರೆ. ಮತ್ತೆ ಕೆಲವರು ನಿವೃತ್ತಿ ಪರಾಯಣರು. ಇಬ್ಬರೂ ಬೇರೆ ಬೇರೆ ಉಳಿದರೆ ಏನಾದೀತು? ಕ್ರಿಯಾಶೀಲ ಅಂಗ ವಿಕ್ರಿಯಾಶೀಲ. ಮತ್ತೆ ಸೇನೆ ಹೆಚ್ಚಿಸಿ ತೆರಿಗೆ ಹಾಕಿ ಎಲ್ಲ ಸಂಪತ್ತನ್ನೂ ಸರಕಾರದಲ್ಲಿ ಒಟ್ಟುಗೂಡಿಸಿ ಎಲ್ಲ ಜನರೂ ಸರಕಾರದ ಶಾಸನದಲ್ಲಿ ಬರಲಿ. ಭಾರತ ರಕ್ಷಣಾ ಶಾಸನವಾಗಲಿ—ಅದರಲ್ಲಿ ಎಲ್ಲರೂ ಇರಬೇಕು, ಕಡ್ಡಾಯವಾಗಿ ಎಲ್ಲರಿಗೂ ಸೈನ್ಯಶಿಕ್ಷಣ, ಇತ್ಯಾದಿ ಎಲ್ಲಾ ಆರಂಭವಾದಾವು. ಮತ್ತೊಂದು ಕಡೆ ಈ ಎಲ್ಲ ವಿಷಯಗಳ ಹೊಣೆ ಅರಿವಿಲ್ಲದಿರುವ, ಶೂನ್ಯ ಸಂಶೋಧನೆ ನಡೆಸುವ ಕೆಲವು ಸಾಧಕರು ಹೊರಡುತ್ತಾರೆ. ಹೀಗೆ ಎರಡು ಹೋಳಾಗಿಬಿಟ್ಟರೆ, ಅದರಲ್ಲಿ ಇದೇ ಭಯ ಅಡಕವಾಗಿರುತ್ತದೆ.

ಸಾಮಾಜಿಕ ಕರ್ಮ ಮತ್ತು ಚಿತ್ತ ಶೋಧನೆ

ಗಾಂಧೀಜಿಯ ಸಂಪರ್ಕದಲ್ಲಿದ್ದ ಇನ್ನೂ ಕೆಲಬಗೆಯ ಜನರುಂಟು. ಅವರಲ್ಲಿ ಅನೇಕರು ಗಾಂಧೀಜಿಯೊಡನೆ ಮಾತಾಡಲು ಪರಲೋಕಕ್ಕೆ ಹೋಗುತ್ತಿದ್ದಾರೆ. ಮತ್ತೆ ಉಳಿದ ರಾಜ್ಯಕರ್ತರ ಚಿತ್ತದಲ್ಲಿ ಯಾವ ಪ್ರವಾಹದ ಪ್ರಭಾವವಿದೆಯೋ ನಾ ಹೇಳಲಾರೆ. ಇಲ್ಲಿ ಚಿಂತನ ಪ್ರಧಾನರಾದ ಮತ್ತೆ ಕೆಲವರು ಇದ್ದಾರೆ. ಅವರ ಚಿಂತನದಲ್ಲಿಯೂ ಸಮಾಜದ ಹೊಣೆಯ

ಭಾಸವಿರುತ್ತದೆ. ಈ ಜನರೂ ಕೆಲ ದಿನಗಳಲ್ಲಿ ಹೊರಟುಹೋದಾರು. ಅನಂತರ ಉಳಿಯುವವರು ಗಾಂಧೀಜಿಯ ವಿಚಾರ ಸ್ರೋತದೊಡನೆ ನೇರ ಸಂಪರ್ಕವಿಲ್ಲದವರು. ಅವರು ಶೂನ್ಯ ಸಂಶೋಧನೆಯಲ್ಲೇ ಲೀನವಾಗಿ ಹೋಗುವುದು ಸಂಭವ. ಆಗ ಭಾರತಕ್ಕೆ ಹಿಂದಿನ ಕಾಲದಲ್ಲಿ ಉಂಟಾದ ಸ್ಥಿತಿಯೇ ಒದಗೀತು.

ಶಂಕರಾಚಾರ್ಯರು ಅತ್ಯಂತ ಪ್ರವೃತ್ತಿ ಶೀಲರಾಗಿದ್ದರು. ಜೊತೆಗೆ ಒಳಗಿನಿಂದ ನಿವೃತ್ತಿ ಪರಾಯಣರಾಗಿದ್ದರು. ಆದರೆ ಅವರ ಶಿಷ್ಯರಲ್ಲಿ ಬರಬರುತ್ತಾ ಸಮಾಜದ ಹೊಣೆಗಾರಿಕೆಯ ಪರಿವೆ ಕಡಿಮೆಯಾಗುತ್ತಾ ಬಂತು. ಜನ ಸಂಪರ್ಕ ಕಡಿಯುತ್ತಾ ಹೋಯಿತು. ಶಂಕರಾಚಾರ್ಯರ ಭಾಷ್ಯವನ್ನು ಅವರು ಅಧ್ಯಯನ ಮಾಡುತ್ತಿದ್ದರು. ಸ್ವಲ್ಪ ಪುಣ್ಯಪ್ರಭಾವ ಸೇರುತ್ತಿತ್ತು. ಆದರೆ ಶಂಕರಾಚಾರ್ಯರಲ್ಲಿದ್ದ ಕ್ರಾಂತಿಕಾರೀ ಪುಣ್ಯಪ್ರಭಾವ ಅವರ ಶಿಷ್ಯರಲ್ಲಿ ಉಳಿಯಲಿಲ್ಲ.

ಇದೇ ಸ್ಥಿತಿ ಗೌತಮ ಬುದ್ಧನ ವಿಷಯದಲ್ಲಿಯೂ ಉಂಟಾಯಿತು. ಆತನಲ್ಲಿ ಕರುಣೆಯ ತೀವ್ರ ಸಂವೇಗವಿತ್ತು. ಆ ಕಾರಣದಿಂದ ಅವರು ವಾಸನೆಗಳನ್ನೆಲ್ಲಾ ಸಮಾಪ್ತಿಗೊಳಿಸಿದರು. ಆದರೆ ಅವರ ಶಿಷ್ಯರು ಕರುಣೆಯನ್ನು ಬಿಟ್ಟುಕೊಟ್ಟು ವಾಸನಾಮುಕ್ತಿಯ ಶೋಧ ನಡೆಸಿದರು. ಈ ಶೋಧ ಕರುಣಾ ಮೂಲಕವಲ್ಲದೆ ಅದರಿಂದ ಪ್ರತ್ಯೇಕವಾಗಿ ನಡೆಯಿತು. ಇವರ ಸಾಧನೆಯೇನೋ ನಡೆಯಿತು. ಆದರೆ ಬುದ್ಧನ ಮೂಲ ಮೈತ್ರಿ, ಕರುಣೆಯ ಪ್ರೇರಣಾ ಪ್ರವಾಹ ಕತ್ತರಿಸಿಹೋಯಿತು.

ಅದಕ್ಕಾಗಿಯೇ ಜೀವನದ ಎರಡು ಮುಖ್ಯ ಅಂಗಗಳಾದ ಸಾಮಾಜಿಕ ಕ್ರಿಯೆ ಮತ್ತು ಚಿತ್ತಶೋಧನೆಗಳು ಬೇರೆ ಬೇರೆ ಆಗಬಾರದು. ಅವುಗಳ ಪರಸ್ಪರ ಸಂಪರ್ಕ ಸ್ಥಿರವಾಗಿರಬೇಕು. ಗಾಂಧೀಜಿಯ ಆಶ್ರಮಗಳು ಈ ಕೆಲಸ ಮಾಡಿದುವು. ಈಗಲೂ ಯಾವುದಾದರೂ ರೀತಿಯಲ್ಲಿ ಈ ಸಂಪರ್ಕ ಇದ್ದೇ ಇರಬೇಕು. ಗಾಂಧೀಜಿಯ ವಿಚಾರಧಾರೆಯ ವಿಕಾಸಕ್ಕೂ ಇದು ಅತ್ಯಂತ ಅಗತ್ಯ.

●

೧೪

ಸ್ವಾಧ್ಯಾಯಪ್ರವಚನಾಭ್ಯಾಂ ನ ಪ್ರಮದಿತವ್ಯಂ

ಗಾಂಧೀಜಿಯ ಕಾಲದಿಂದ ಕಾರ್ಯಕರ್ತರ ವಿಷಯದಲ್ಲಿ ನನ್ನ ಒಂದು ದೂರಿದೆ. ಇಂದಿಗೂ ಹೆಚ್ಚು ಕಡಿಮೆ ಅದಿದೆ. ಉತ್ತಮ ಕೆಲಸದಲ್ಲಿ ತೊಡಗಿರುವ ನಮ್ಮ ಜನ ವಿಚಾರಗಳ ಅಧ್ಯಯನವನ್ನು ಕಡಿಮೆಮಾಡುತ್ತಾರೆ. ನಮ್ಮ ಜನರಲ್ಲಿ ಅದರ ಅಭಿರುಚಿಯೇ ಕಡಮೆ. ನಮ್ಮ ಸಂಸ್ಥೆ ಕರ್ಮಪ್ರಧಾನವಾದುದರಿಂದ ಅಧಿಕಾಂಶ ವೇಳೆಯು ಕೆಲಸದಲ್ಲೇ ಹೋಗಿಬಿಡುತ್ತದೆ. ಹೀಗಾಗಿ ಓದುವುದಕ್ಕೆ ತಿಲಾಂಜಲಿ.

ಮೊದಲು ನಾನು ಕಾರ್ಯಕರ್ತರನ್ನು ಕೇಳುತ್ತಿದ್ದೆ. "ಗಾಂಧೀಜಿ ಈಚೆಗೆ ಬರೆದ ಲೇಖನವನ್ನು ಓದಿದ್ದೀರಾ?" ತಟ್ಟನೆ ಜವಾಬು ಸಿಕ್ಕುತ್ತಿತ್ತು. "ನಾವು ಕೆಲಸದಲ್ಲಿ ತೊಡಗಿದ್ದೇವೆ, ಇನ್ನು ಅವರ ಲೇಖನ ಓದುವ ಜಂಜಡದಲ್ಲೇಕೆ ಬೀಳೋಣ. ಕಡೆಗವರು ಇಷ್ಟೇ ಹೇಳಿರುತ್ತಾರೆ, ಚರಖಾ ನಡೆಸಿ, ಇಲ್ಲವೇ ಹರಿಜನ ಸೇವೆ ಮಾಡಿ. ನಮ್ಮ ಈ ಎಲ್ಲ ಕೆಲಸವೂ ಚೆನ್ನಾಗಿ ಸಾಗುತ್ತಿದೆ. ಲೇಖನದಲ್ಲಿ ಮತ್ತಿನ್ನೇನು ಓದುವುದಿರುತ್ತದೆ?"

ಅಧ್ಯಯನದ ಇಷ್ಟೊಂದು ಕೊರತೆ

ಇವರೆಲ್ಲಾ ಗಾಂಧಿಯನ್ನು ಅರೆದು ಕುಡಿದುಬಿಟ್ಟಿದ್ದರು. ನಾನವರಿಗೆ ತಿಳಿಸುತ್ತಿದ್ದೆ: "ಓದುವುದಕ್ಕೆ ನಿಮಗೆ ಚಿಂತೆ ಇಲ್ಲವಾದರೆ ಗಾಂಧೀಜಿಯೇಕೆ ಪ್ರತಿವಾರವೂ ಬರೆಯುವ ಚಿಂತೆ ಮಾಡಬೇಕು. ಅವರೇಕೆ ಬರೆಯುತ್ತಾರೆ? ಅವರು ಹಗಲು-ರಾತ್ರಿಯೆನ್ನದೆ ಬರೆಯುತ್ತಿರುತ್ತಾರೆ. ಇಷ್ಟನ್ನು ನೋಡುವುದಿಲ್ಲವೇ?" ಎಂದರೆ ಹೇಳುತ್ತಿದ್ದರು: "ಅದೆಲ್ಲ ಬೇರೆಯವರಿಗಾಗಿ ಬರೆಯುತ್ತಾರೆ. ಯಾರಿಗೆ ಗೊತ್ತಿಲ್ಲವೋ ಅವರಿಗಾಗಿ. ನಾವೆಲ್ಲಾ ತಿಳಿದುಕೊಂಡುಬಿಟ್ಟಿದ್ದೇವೆ. ಅವರ ಕೆಲಸ ಮಾಡಲೆಂದೇ ಇಲ್ಲಿ ಕುಳಿತಿದ್ದೇವೆ."

ಈ ರೀತಿ ನಮ್ಮ ಕಾರ್ಯಕರ್ತರಲ್ಲಿ ಅಧ್ಯಯನದ ದೊಡ್ಡದೊಂದು ಕೊರತೆ ಇದೆ. ಅಧ್ಯಯನ ನಡೆಸಲು ಭಾರೀ ಕಳ್ಳರು. ಆ ಸಮಯದಿಂದ ಇಂದಿನವರೆಗೆ ಈ ವಿಷಯವಾಗಿ ಎಷ್ಟು ಸಾಧ್ಯವೋ ಅಷ್ಟೂ ಒತ್ತಾಯ ಮಾಡುತ್ತಿದ್ದೇನೆ. ನಾವು ಸದಾ ಅಧ್ಯಯನ ಮಾಡುತ್ತಿರಬೇಕು, ಅದಿಲ್ಲದೆ ನಡೆಯಲಾರದು ಎಂದು.

ನಾನು ಸ್ವತಃ ಗಾಂಧೀಜಿಯ ಹತ್ತಿರ ಬಹಳ ಇರಲಿಲ್ಲ. ದೂರ ಇದ್ದು ಕೊಂಡೇ ಕೆಲಸ ಮಾಡುತ್ತಾ ಬಂದೆ. ಅವರ ಲೇಖನಗಳನ್ನು ಸೂಕ್ಷ್ಮವಾಗಿ ಓದುತ್ತಿದ್ದೆ. ಪ್ರಶ್ನೋತ್ತರ ಬಂದರೆ ಮೊದಲು ಪ್ರಶ್ನೆ ಓದುತ್ತಿದ್ದೆ. ನನ್ನ ಮನಸ್ಸಿನಲ್ಲೇ ಅದಕ್ಕೆ ಉತ್ತರ ಕೊಟ್ಟುಕೊಳ್ಳುತ್ತಿದ್ದೆ. ಆಮೇಲೆ ಬಾಪೂ ಕೊಟ್ಟಿದ್ದ ಉತ್ತರ ಓದುತ್ತಿದ್ದೆ. ಎಲ್ಲಿ ಅಂತರ ಬೀಳುವುದೋ ನೋಡುತ್ತಿದ್ದೆ. ಅವರ ಚಿಂತನದಲ್ಲಿ ಏನು ವೈಶಿಷ್ಟ್ಯ ಎಂದು ತಿಳಿಯುತ್ತಿದ್ದೆ. ಈ ರೀತಿ ಪ್ರಶ್ನೋತ್ತರ ವಿಭಾಗವನ್ನು ಬರೀ ಓದುವುದೆಂದಲ್ಲ, ಅಧ್ಯಯನ ಸಾಧನವಾಗಿ ತಿಳಿದಿದ್ದೆ.

ಕೆಲಸದೊಂದಿಗೆ ಮೂಲ ತತ್ವದ ವಿಕಾಸ

ಕೆಲಸವನ್ನಂತೂ ಸತತವಾಗಿ ಮಾಡಲೇಬೇಕು. ನಮ್ಮ ವಿಚಾರಗಳ ಅಧ್ಯಯನವೂ ನಡೆಯುತ್ತಲಿರಬೇಕು. ಕೆಲಸ ಮಾತ್ರ ಹೆಚ್ಚುತ್ತಿದ್ದರೆ ನಡೆಯಲಾರದು. ಇದು ತಿಳಿದಿರಬೇಕಾದ ಮಾತು. ಕೆಲಸದ ವಿಕಾಸ ನಡೆಯುತ್ತಿರುತ್ತದೆ. ಅದರ ಮೂಲ-ತತ್ವದ ವಿಕಾಸ ನಡೆಯುತ್ತಿದೆಯೋ ಇಲ್ಲವೋ ಎಂಬುದನ್ನು ನೋಡುತ್ತಿರಬೇಕು. ಎಷ್ಟೋ ವೇಳೆ ಕೆಲಸದ ಅಂತರಾತ್ಮ ಸಂಕುಚಿತಗೊಳ್ಳುತ್ತಿರುತ್ತದೆ. ಹೊರಗಿನ ಆಕಾರ ಹೆಚ್ಚು ತ್ತಿರುತ್ತದೆ. ಆದುದರಿಂದ ಒಳಗಿನ ಆತ್ಮ-ತತ್ವ ಪ್ರಜ್ವಲಿತವಾಗಿರಬೇಕೆಂಬ ಚಿಂತೆ ಇರಬೇಕು. ನಮ್ಮ ಕೆಲಸದ ಅಡಿಪಾಯವಾಗಿರುವ ವಿಚಾರಗಳೇ ಅದರ ಆತ್ಮ-ತತ್ವ. ಈ ತತ್ವ ಅನುದಿನವೂ ವಿಕಾಸ ಹೊಂದುತ್ತಿರುತ್ತದೆ. ಅದರ ಮೇಲೆ ಯಾವ ರೀತಿಯೂ ಆಪತ್ತು ಬರಬಾರದು.

ಈ ರೀತಿ ವಿಚಾರ ಮತ್ತು ಅಧ್ಯಯನದ ಆಳದತ್ತ ಸಾಕಷ್ಟು ಗಮನ

ಕೊಡದಿದ್ದರೆ ಕೆಲಸ ಪ್ರಾಣ ರಹಿತವಾಗುತ್ತದೆ. ನಿರ್ಮಿತವಾದ ಸಂಸ್ಥೆಗಳು ಎಷ್ಟೇ ದೊಡ್ಡವಾಗಿದ್ದರೂ ಜೀವವಿಲ್ಲದ ದೇಹದಂತಾಗುತ್ತದೆ.

ಪ್ರಾಣವಿಲ್ಲದ ದೇಹದಂಥ ಸಂಸ್ಥೆಗಳು

ಇಂಥ ಉದಾಹರಣೆಗಳು ನಮಗೆ ಬಹಳ ಸಿಗುತ್ತವೆ. ರವೀಂದ್ರನಾಥ ಟಾಗೂರರು ಶಾಂತಿನಿಕೇತನ ಆರಂಭ ಮಾಡಿದರು. ಆಗ ಅದರಲ್ಲಿ ಒಂದು ಉಚ್ಚಧ್ಯೇಯ ಮತ್ತು ಉತ್ಸಾಹ ಇತ್ತು. ಆದರೆ ಈಗ ಅದಕ್ಕೂ ಒಂದು ಸಾಧಾರಣ ವಿಶ್ವವಿದ್ಯಾನಿಲಯಕ್ಕೂ ಏನು ಅಂತರ? ನಾನು ನನ್ನ ಪಾದ ಯಾತ್ರೆಯಲ್ಲಿ ಶಾಂತಿನಿಕೇತನಕ್ಕೆ ಹೋಗಿದ್ದೆ. ಅಲ್ಲಿ ನಾನು 'ನಿಕೇತನ' ನೋಡಿದೆ, 'ಶಾಂತಿ'ಯನ್ನಲ್ಲ. ಸಾಧಾರಣ ಕಾಲೇಜು ಮತ್ತು ವಿಶ್ವವಿದ್ಯಾ ನಿಲಯದಲ್ಲಿ ನಡೆಯುವ ಜಗಳವೇ ಅಲ್ಲೂ ಇತ್ತು. ರವೀಂದ್ರನಾಥರು ತೀರಿಕೊಂಡು 25 ವರ್ಷವಾಗಿರಬಹುದು, ಆದರೆ ಈ ಇಪ್ಪತ್ತೈದು ವರ್ಷಗಳಲ್ಲಿ ಅವರ ಮುಖ್ಯ ಸ್ಥಾನ ಈ ರೀತಿ ಸ್ಫೂರ್ತಿಹೀನವಾಗಿ ಹೋಗಿದೆ.

ಪಂಡಿತ್ ಮಾಲವೀಯಜೀ ಕಾಶೀ ಹಿಂದೂ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡಿದರು. ಅದರ ಸ್ಥಿತಿಯಾದರೂ ಇಂದು ಏನು?

ಮತ್ತೆ ನಾನು ವಿವೇಕಾನಂದರ ಸ್ಥಾನಕ್ಕೆ ಹೋದೆ. ಅಲ್ಲಿ ಸರ್ಕಾರದ ಸಹಾಯದಿಂದ ಮಾಮೂಲೀ ಕೆಲಸ ನಡೆಯುತ್ತಿದೆ. ಯಾವ ರಾಮಕೃಷ್ಣ ಪರಮಹಂಸರ ಬೆರಳುಗಳಿಗೆ ಹಣದ ಸ್ಪರ್ಶವಾದರೆ ಚೇಳು ಕುಟುಕಿದಂತಾಗು ತ್ತಿತ್ತೋ, ಅವರ ಸ್ಥಾನದಲ್ಲಿ ನಿರ್ಮಾಣವಾಗಿರುವುದೆಲ್ಲಾ ದ್ರವ್ಯಮಯ, ಅದೂ ಸರಕಾರೀ ಸಹಾಯದಿಂದ. ಎಷ್ಟೋ ವೇಳೆ ಆರ್ಯ ಸಮಾಜದ ಗುರು ಕುಲಗಳಿಗೆ ಹೋಗುವ ಅವಕಾಶ ನನಗೆ ಸಿಕ್ಕಿದೆ. ಅದೂ ತನ್ನ ಸ್ವತಂತ್ರ ಸಂಸ್ಥೆಗಳನ್ನು ನಡೆಸುತ್ತಿದೆ. ಸ್ವತಂತ್ರ ಪದವಿಗಳನ್ನೂ ನೀಡುತ್ತದೆ. ಅವೆಲ್ಲಾ ಸರ್ಕಾರೀ ಸಹಾಯವನ್ನು ಅವಲಂಬಿಸಿವೆ. ಅವುಗಳ ಶಿಕ್ಷಣ ದಲ್ಲಿಯೂ ಯಾವುದೇ ವಿಶೇಷ ಸಂಗತಿಯಿಲ್ಲ. ಅಲ್ಪ-ಸ್ವಲ್ಪ ಹೋಮ-ಹವನ ನಡೆಯುತ್ತದೆ.

ಪೂರ್ವ ಪಾಕಿಸ್ಥಾನದಲ್ಲಿ ಸ್ವಲ್ಪ ತಿರುಗಾಡುವ ಅವಕಾಶ ಸಿಕ್ಕಿತ್ತು. ಅಲ್ಲಿಯ ಜನರಿಗೆ ಬಾಪೂವಿನ ನವಾಖಾಲಿ ಯಾತ್ರೆಯ ನೆನಪಾಯಿತು.

ಅಲ್ಲಿದ್ದ ಬಾಪೂವಿನ ಸಂಗಡಿಗರೆಲ್ಲಾ ನನ್ನ ಯಾತ್ರೆಯಲ್ಲಿಯೂ ಸೇರಿದರು. ಅವರ ಹೇಳಿಕೆಯಿಂದ ತಿಳಿಯಿತು, ಗಾಂಧೀಜೀ ಒಂದು ದೀಕ್ಷೆಯಾಗಿ ಕೈಗೊಂಡುದು ಅಲ್ಲಿ ಯಾವುದೂ ಉಳಿದೇ ಇಲ್ಲ. ಬಾಪೂವಿನ ಇತರ ಕೆಲಸಗಳಲ್ಲಿಯೂ ಮೂಲರಸ ಮೆಲ್ಲಮೆಲ್ಲನೆ ಬತ್ತಿಹೋಗುತ್ತಿದೆ. ಇದರಿಂದ ನನಗೆ ಬಹಳ ವೇದನೆಯಾಗುತ್ತದೆ.

ಈ ಸ್ಫೂರ್ತಿ-ಕ್ಷಯ ಕಾಲಕ್ರಮದಲ್ಲಿ ಆಗುತ್ತಲೇ ಇರುತ್ತದೆಯೋ ಎಂದು ನನ್ನ ಮುಂದೆ ಪ್ರಶ್ನೆ ಏಳುತ್ತದೆ. ವೇಗ ಕ್ಷಯಗೊಳಿಸುವ ಸಾಮರ್ಥ್ಯ ಕಾಲದಲ್ಲಿರುತ್ತದೆ ಎಂಬುದರಲ್ಲಿ ಸಂದೇಹವೇ ಇಲ್ಲ. ಆದಕಾರಣ ಮತ್ತೆ-ಮತ್ತೆ ವೇಗ ಕೊಡಬೇಕಾಗುತ್ತದೆ. ಮತ್ತೆ ಮತ್ತೆ ಚೈತನ್ಯದ ಸ್ಪರ್ಶವಾದರೆ ವೇಗ ಸಿಕ್ಕುತ್ತದೆ. ಗಡಿಯಾರಕ್ಕೆ ಆಗಾಗ ಕೀಲಿಕೊಡಬೇಕಾಗುತ್ತದೆ. ಕಾಲಕ್ರಮದಲ್ಲಿ ಸ್ಫೂರ್ತಿಯೂ ಕ್ಷೀಣಿಸುತ್ತಾ ಹೋಗುತ್ತದೆ ಎಂಬುದನ್ನು ಇದರಿಂದ ಅರಿಯಬಹುದು. ಆದರೆ ಅದು ಇಷ್ಟು ಬೇಗ ಅಪೇಕ್ಷಿತವಾಗಿರಲಿಲ್ಲ. ಈ 15-20 ವರ್ಷಗಳಲ್ಲೇ ಮೊದಲಿನ ಸ್ಫೂರ್ತಿ ಇದ್ದಕ್ಕಿದ್ದಂತೆ ಕಾಣೆಯಾಗಿ ಹೋಗಿದೆ.

ಇದರ ಕಾರಣಗಳನ್ನು ಕುರಿತು ವಿಚಾರ ಮಾಡಿದಾಗ ಎರಡು ಮೂರು ಸಂಗತಿ ಗಮನಕ್ಕೆ ಬರುತ್ತದೆ. ನೋಡ-ನೋಡುತ್ತಿರುವಂತೆಯೇ ನಮ್ಮ ಸಂಸ್ಥೆಗಳ ಜೀವನ ರಸ ಹಾರಿಹೋಗುತ್ತಿದೆ. ಇದಕ್ಕೆ ಕಾರಣ ಅಧ್ಯಯನದ ಅಭಾವ. ನಾವು ಕರ್ಮಯೋಗದಲ್ಲಿ ಬಿದ್ದಿದ್ದೇವೆ. ಕರ್ಮಯೋಗದಲ್ಲಿ ಅದರ ಲಾಭದೊಂದಿಗೆ ಹಾನಿಯೂ ಇರುತ್ತದೆ. ಶಂಕರಾಚಾರ್ಯ, ರಾಮಾನುಜ, ಬುದ್ಧ, ಮಹಾವೀರ ಇತ್ಯಾದಿಯವರ ಅನುಯಾಯಿಗಳಲ್ಲಿ ಇದ್ದ ಕೆಲವು ದೋಷಗಳನ್ನು ನಾವು ಸುಧಾರಿಸಿಕೊಂಡೆವು ಎಂಬುದು ನಿಜ. ಕರ್ಮಯೋಗದ ಮೇಲೆ ಹೆಚ್ಚು ಭಾರ ಹಾಕಿದೆವು. ಈ ಸುಧಾರಣೆ ಅಗತ್ಯವಾಗಿತ್ತು. ಅವರು ಆತ್ಮಜ್ಞಾನದಲ್ಲಿ ಎಷ್ಟು ಆಳವಾಗಿ ಇಳಿದಿದ್ದರೋ ಅಷ್ಟು ಆಳಕ್ಕೆ ನಾವು ಇಳಿಯುವುದಿಲ್ಲ. ಇದರಿಂದ ಕೆಲಸದ ವಿಕಾಸದೊಂದಿಗೆ ನಮ್ಮ ವಿಚಾರ ನಿಷ್ಠೆ ಮತ್ತು ತತ್ವ ನಿಷ್ಠೆ ಇಳಿಯುತ್ತ ಹೋಗುತ್ತದೆ, ನಮ್ಮ ಕೆಲಸಗಳ ಗಂಟು ಭಾರಿಯಾಗುತ್ತಾ ಹೋಗುತ್ತದೆ, ಆದರೆ ಅದರ ತತ್ವ ಹಾರಿ ಹೋಗುತ್ತಿದೆ. ಮನುಷ್ಯ ಹೊರಟು ಹೋಗುತ್ತಾನೆ, ಸಂಸ್ಥೆ ಉಳಿಯುತ್ತದೆ. ಅದು ನಿಸ್ತೇಜವಾಗಿಬಿಡುತ್ತದೆ, ದೃಷ್ಟಿ ಮಂದವಾಗುತ್ತಾ ಹೋಗುತ್ತದೆ.

ಶಂಕರಾಚಾರ್ಯರ ಮಠಗಳ ಪರಂಪರೆ

ಈಗ ನೋಡಿ, ಶಂಕರಾಚಾರ್ಯರ ಜ್ಞಾನದ ಪರಂಪರೆ ಹಾಗೂ ಅವರ ಮಠಗಳ ಪರಂಪರೆ ಸಾವಿರದ ಇನ್ನೂರು ವರ್ಷಗಳಿಂದ ನಡೆಯುತ್ತ ಬಂದಿದೆ. ಈಚೆಗೆ ಎಷ್ಟೋ ವಿಶ್ವವಿದ್ಯಾನಿಲಯಗಳ ಶತಾಬ್ದಿಯನ್ನು ಆಚರಿಸಲಾಗುತ್ತದೆ. ಶಂಕರಾಚಾರ್ಯರ ಮಠಕ್ಕೆ ಇಂದು ಹನ್ನೆರಡು ಶತಾಬ್ದಿಗಳಾಗಿವೆ. ಹಿಂದಿನ ಕಾಲದಲ್ಲಿ ಈ ಮಠಗಳಿಂದ ಜನರಿಗೆ ಸಿಕ್ಕುತ್ತಿದ್ದ ಪ್ರೇರಣೆ ಇಂದು ಸಿಗುತ್ತಿಲ್ಲ ಎಂಬುದು ನಿಜ. ಆದರೂ ಇಷ್ಟು ಸಮಯವಾಗಿ ಹೋದರೂ ಸಹ ಇಂದಿಗೂ ಅವು ಏನಾದರೂ ಕೆಲಸ ಮಾಡುತ್ತಿರುತ್ತವೆ. ಈಗಲೂ ಜನರಿಗೆ ಅವುಗಳಲ್ಲಿ ಶ್ರದ್ಧೆ ಇದೆ. ಇದಕ್ಕೆ ಕಾರಣವೇನು? ಹತ್ತಿಪ್ಪತ್ತು ವರ್ಷಗಳಲ್ಲೇ ನಮ್ಮ ಎಲ್ಲ ಸಂಸ್ಥೆಗಳ ಪ್ರವೃತ್ತಿಯೂ ಮಂದವಾಗಿ ಹೋಗುತ್ತದೆ ಎಂಬುದನ್ನು ನಾವು ನೋಡಬೇಕು. ಎಷ್ಟೋ ಆಶ್ರಮಗಳು ಹತ್ತಿಪ್ಪತ್ತು ವರ್ಷ ಪ್ರವೃತ್ತಿಮಯವಾಗಿದ್ದು ಆಮೇಲೆ ಅವುಗಳ ಪ್ರವೃತ್ತಿ ಕಡಿಮೆಯಾಗಿ ಹೋಗುತ್ತದೆ. ಅಂಥ ಹಲವು ಉದಾಹರಣೆಗಳಿವೆ. ಎಂದ ಮೇಲೆ ಶಂಕರಾಚಾರ್ಯರ ಮಠಗಳ ಪರಂಪರೆ ನೂರಾರು ವರ್ಷಗಳಿಂದ ಹೇಗೆ ನಡೆಯುತ್ತಾ ಬರುತ್ತಿದೆ? ಅವುಗಳ ಸ್ಫೂರ್ತಿ ಕಡಿಮೆಯಾಗಿರ ಬಹುದು, ಆದರೂ ನಡೆಯುತ್ತಿವೆ. ಅವು ಸ್ಥಿರವೂ ಚಿರಂಜೀವಿಯೂ ಆಗಿರಲು ಈ ಸಂಸ್ಥೆಯಲ್ಲಿ ಏನಾದರೂ ಅಂಥ ಶಕ್ತಿ ಇರಬೇಕು. ಅದು ಯಾವ ಶಕ್ತಿ?

ಒಂದು ಮಾತು ಸ್ಪಷ್ಟ. ಈ ಮಠಗಳನ್ನು ಸ್ಥಾಪಿಸಿದವರ ಜೀವನದಲ್ಲಿ ಒಂದು ವಿಶೇಷ ದರ್ಶನವಾಯಿತು. ದರ್ಶನವಿಲ್ಲದೆಯೇ ಒಳ್ಳೊಳ್ಳೆ ಕೆಲಸ ನಡೆಯುತ್ತಿರುತ್ತದೆ. ಸೇವೆಯ ಕೆಲಸವೂ ನಡೆಯುತ್ತದೆ. ಆದರೆ ಒಳ್ಳೆಯ ಕೆಲಸ ಮತ್ತು ಸೇವೆ ಆಯಾ ಕಾಲಕ್ಕೆ ಮಾತ್ರ. ಯಾವುದರಲ್ಲಿ ಸಮಗ್ರ ಜೀವನದ ದರ್ಶನವಿರುತ್ತದೆಯೋ ಅಥವಾ ಅದರ ಆಧಾರದ ಮೇಲೆ ನಿಂತಿರುವ ರಚನೆ ಕಾಲಕ್ಕೆ ಪ್ರತೀಕಾರ ಮಾಡುತ್ತದೆ ಮತ್ತು ಸ್ಥಾಯಿಯಾಗುತ್ತದೆ.

ಶಂಕರಾಚಾರ್ಯರ ಬಳಿ ಅಂಥದೊಂದು ಅದ್ವೈತ ದರ್ಶನವಿತ್ತು. ಅವರು ಶಿಷ್ಯರಿಗೆ ಅಧ್ಯಯನದ ಪ್ರೇರಣೆ ಇತ್ತಿದ್ದರು. ಜೊತೆಗೆ ಅಧ್ಯಯನಕ್ಕೆ

ಅಧಿಕಾರ ಗಳಿಸುವ ಪ್ರಕಾರವನ್ನೂ ಅದರ ಸಾಧನ ಚತುಷ್ಟಯವನ್ನೂ ನಿರ್ದೇಶಿಸಿದ್ದರು.

ಅಧ್ಯಯನದ ಜೊತೆಗೆ ನಮ್ಮ ಅನುಭವೀ ಪುರುಷರು 'ವ್ರತ-ನಿಷ್ಠೆ' ಯನ್ನು ಜೋಡಿಸಿದರು. ವಿದ್ಯಾ-ಸ್ನಾತ ಮತ್ತು ವ್ರತ-ಸ್ನಾತ ಎಂಬ ಎರಡು ಪ್ರಕಾರದಿಂದ ಮನುಷ್ಯ ವಿದ್ಯಾಸಂಪನ್ನ ಆಗುತ್ತಾನೆ. ವಿದ್ಯಾರ್ಥಿಯೊಬ್ಬ ಹನ್ನೆರಡು ವರ್ಷ ಗುರುಗಳ ಮನೆಯಲ್ಲಿದ್ದು ವಿದ್ಯೆ ಗಳಿಸಬಹುದು. ಆದರೆ ಅವನು ವ್ರತವನ್ನು ಎಂದರೆ ಅದರ ಆಚರಣೆಯನ್ನು ಮಾಡದಿದ್ದರೆ ಅವನನ್ನು ಪೂರ್ಣ ಸ್ನಾತಕನೆಂದು ಪರಿಗಣಿಸುತ್ತಿರಲಿಲ್ಲ. ಇಷ್ಟಾಗಿಯೂ ಅವನು ವ್ರತ ಪೂರ್ಣಗೊಳಿಸಿ ವಿದ್ಯೆ ಪೂರಾ ಕಲಿಯದಿದ್ದರೆ, ಆಗಲೂ ಅವನನ್ನು ಪೂರ್ಣ ಸ್ನಾತಕನೆಂದು ಗಣಿಸುತ್ತಿರಲಿಲ್ಲ. ವಿದ್ಯೆ ಮತ್ತು ವ್ರತಗಳ ಕೂಡಿಕೆ ನಮ್ಮ ವಿಶಿಷ್ಟ ಪರಂಪರೆ. ಶಂಕರರೂ ಇವೆರಡಕ್ಕೂ ಮಹತ್ವ ಕೊಟ್ಟರು.

ಗಾಂಧೀಜಿಯ ಜೀವನ ಕಾರ್ಯದಲ್ಲಿ ಇಷ್ಟೊಂದು ನವೀನತೆ

ಸರ್ವೋದಯ ವಿಚಾರವು ಜೀವನವ್ಯಾಪಿಯಾದ ಒಂದು ಗಂಭೀರ ವಿಚಾರ. ಅದಕ್ಕೂ ವ್ರತಯುಕ್ತ ಅಧ್ಯಯನದ ಅಗತ್ಯವಿದೆ. ಸತ್ಯ, ಅಹಿಂಸೆ, ಅಪರಿಗ್ರಹ ಇತ್ಯಾದಿ ಹನ್ನೊಂದು ವ್ರತಗಳ ಬಗೆಗೆ ಗಾಂಧೀಜೀ ಬಹಳ ಒತ್ತಿ ಹೇಳಿದರು. ಇವುಗಳನ್ನು ಕುರಿತು ಅವರು ಪದೇ ಪದೇ ಹೇಳುತ್ತಿದ್ದರು. ತಮ್ಮ ಜೀವನವನ್ನು ಅವುಗಳ ಮೇಲೆಯೇ ರಚಿಸಿಕೊಂಡಿದ್ದರು. ಆದರೆ ಅಧ್ಯಯನದ ವಿಷಯದಲ್ಲಿ ಒತ್ತಿ ಹೇಳುವ ಅವಕಾಶ ಅವರಿಗೆ ಸರಿಯಾಗಿ ಸಿಗಲಿಲ್ಲ. ಸ್ವತಃ ಅವರು ಅಧ್ಯಯನದ ಮಹತ್ವ ತಿಳಿದುಕೊಂಡಿದ್ದರು. ತಮ್ಮ ನಿಕಟವರ್ತಿಗಳಿಗೆ ಈ ವಿಷಯವಾಗಿ ಹೇಳುತ್ತಿದ್ದರು. ಆದರೆ ಅವರು ದೊಡ್ಡದೊಂದು ಜನ-ಆಂದೋಲನ ನಡೆಸಿದರು. ಅದರೊಟ್ಟಿಗೆ ಅವರು ಕೆಲಸ ಮಾಡಿದರು. ಈ ಕಾರಣದಿಂದಾಗಿ ವ್ರತಗಳಿಗೆ ಅವರು ಕೊಟ್ಟಷ್ಟು ಬೆಲೆಯನ್ನು ವಿದ್ಯೆಗೆ ಕೊಡಲಿಲ್ಲ. ಗಾಂಧೀಜಿಯ ಜೀವನ ಕಾರ್ಯದಲ್ಲಿ ತೀವ್ರ ಅಧ್ಯಯನದ ಪ್ರೇರಣೆಯ ಕೊರತೆ ನಮಗೆ ಅರಿವಾಗುತ್ತದೆ. ಈ ವಿಶ್ಲೇಷಣೆಯನ್ನು ನಾನು ಏಕೆ ಮಾಡುತ್ತಿರುವೆನೆಂದರೆ, ನಾವು ಒಂದು ಪರಿಪೂರ್ಣವಾದ, ಸರ್ವವ್ಯಾಪೀ ದರ್ಶನವನ್ನು ನೀಡಬೇಕಾದರೆ, ಅದನ್ನು ಪೋಷಿಸಿ

ಬೆಳೆಸಬೇಕಾದರೆ ಕಂಡುಬರುವ ಕೊರತೆಗಳನ್ನು ನಾವು ದೂರಮಾಡಬೇಕು. ಸರ್ವೋದಯ ದರ್ಶನದ ಅಂತಃಶಕ್ತಿಯನ್ನು ಸ್ಥಿರವಾಗಿ ಇಡಬಯಸುವುದಾದರೆ ಅದರ ಕೊರತೆಗಳನ್ನು ನಾವು ದೂರಮಾಡಬೇಕು.

ಬುದ್ಧನೂ ಸಹ ತನ್ನ ಶಿಷ್ಯರಿಗೆ ಆಡಬಾರದ ವಿಚಾರಕ್ಕೆ ಹೋಗಗೊಡಲಿಲ್ಲ. ಶಂಕರಾಚಾರ್ಯರು ವಿಚಾರದ ಆಳಕ್ಕೆ ತಾವೂ ಇಳಿಯುತ್ತಿದ್ದರು, ಶಿಷ್ಯರನ್ನೂ ಇಳಿಸುತ್ತಿದ್ದರು. ಆದುದರಿಂದ ಬೌದ್ಧದರ್ಶನದಲ್ಲಿ ಆಮೇಲೆ ಉದ್ಭವಿಸಿದ ಮತಭೇದ ಅವರ ಶಿಷ್ಯರಲ್ಲಿ ಅನೇಕ ವಿಧವಾದ ತಪ್ಪು ವಿಚಾರವನ್ನು ಹರಡಿತು. ಬೇರೆ ಬೇರೆ ಸಂಪ್ರದಾಯಗಳಾದುವು. ಶಂಕರಾಚಾರ್ಯರ ವಿಚಾರದಲ್ಲಿ ಹಾಗಾಗಲಿಲ್ಲ.

ಗಾಂಧೀಜಿಯ ವ್ರತನಿಷ್ಠೆಯ ಅನಾದರ

ಅಂಥದೇ ಭಯ ಗಾಂಧೀಜಿಯ ವಿಚಾರಗಳ ಬಗೆಗೂ ಇದೆ. ವಿಚಾರ ಮತ್ತು ಅಧ್ಯಯನದ ಆಳದ ಕಡೆ ಎಷ್ಟು ಗಮನಕೊಡಬೇಕೋ ಅಷ್ಟು ಕೊಡಲಾಗುತ್ತಿಲ್ಲ. ವ್ರತನಿಷ್ಠೆಯ ಕಡೆ ಗಮನ ಸೆಳೆದಿದೆ. ಗಾಂಧೀಜೀ ಒತ್ತಿ ಹೇಳಿದ ವ್ರತನಿಷ್ಠೆಯ ಬಗೆಗೂ ಸಾಕಷ್ಟು ಸರಿಯಾಗಿ ಧ್ಯಾನ ಇಡಲಾಗುತ್ತಿಲ್ಲ. ಏಕೆಂದರೆ, ಗಾಂಧೀಜಿಯ ಕೆಲಸದಲ್ಲಿ ರಾಜನೀತಿಯ ಭಾಸವಿದೆ. ಮತ್ತು ಅವರ ಅನುಯಾಯಿಗಳ ಮೇಲೆ ಈ ರಾಜಕೀಯ ದೃಷ್ಟಿಯ ತುಂಬಾ ಪರಿಣಾಮವುಂಟಾಗಿದೆ. ತತ್ಫಲವಾಗಿ ಗಾಂಧೀಜೀ ವ್ರತನಿಷ್ಠೆಯ ಕಡೆಗೆ ಸೆಳೆದ ಗಮನವು ಮೆಲ್ಲಮೆಲ್ಲನೆ ಸಡಿಲವಾಗುತ್ತಾ ಹೋಗಿದೆ.

ಅದಕ್ಕಾಗಿಯೇ ಮತ್ತೆ ಮತ್ತೆ ಜನರ ಗಮನವನ್ನೂ ಲೋಕನೀತಿಯ ಕಡೆಗೆ ಸೆಳೆಯುವ ಪ್ರಯತ್ನವನ್ನೂ ನಾನು ಮಾಡುತ್ತಿದ್ದೇನೆ. ಗಾಂಧೀಜೀ ಏನು ಮಾಡಿದರು, ಏನೆಲ್ಲಾ ಮಾಡಿದರು. ಅದು ರಾಜನೀತಿಯಲ್ಲ, ಲೋಕನೀತಿ ಎಂದು ಹೇಳುತ್ತೇನೆ. ಆದುದರಿಂದ ಅವರು ವ್ರತನಿಷ್ಠೆಗೆ ಕೊಟ್ಟ ಮಹತ್ವವನ್ನು ಅನಾದರ ಮಾಡತಕ್ಕದ್ದಲ್ಲ. ವಿಚಾರದ ಆಳಕ್ಕೆ ನಾವು ಇಳಿಯಬೇಕು ಎಂಬುದು ಎರಡನೆಯ ಮಾತು. ಅಧ್ಯಯನ ನಿಷ್ಠರಾಗಬೇಕು. ಈ ಎರಡು ವಸ್ತುಗಳ ಅಭಾವದ ಕಾರಣದಿಂದ ನಮ್ಮ ಪರಂಪರೆ ನಿಲ್ಲಲಾರದಾಗಿದೆ, ಮೆಲ್ಲ ಮೆಲ್ಲನೆ ಮುರಿಯುವುದು ಕಂಡುಬರುತ್ತಿದೆ. ಆದರೆ

ಈ ವಿಷಯದ ಕಡೆ ನಮ್ಮ ವಿಶೇಷ ಗಮನವಿಲ್ಲ. ನಮಗೆ ಕೆಲಸ, ಸತತ ಕೆಲಸ, ಇಷ್ಟೇ ಸಾಕು! ಗೀತೆಯೂ ಕರ್ಮದ ಮಹಿಮೆಯನ್ನು ಹಾಡಿದೆ. ಕರ್ಮವಿಲ್ಲದೆ ಯಾವ ಮನುಷ್ಯನೂ ಒಂದು ಕ್ಷಣವೂ ಇರಲಾರ. ಎಲ್ಲರೂ ಕೆಲಸ ಮಾಡುತ್ತಾರೆ. ನಾವು ರಚನಾತ್ಮಕ ಕೆಲಸ ಮಾಡುತ್ತೇವೆ ಎಂದು ತಿಳಿಯುತ್ತೇವೆ. ನಾನು ಕೇಳುತ್ತೇನೆ, ಯಾರು ರಚನಾತ್ಮಕ ಕೆಲಸ ಮಾಡುವುದಿಲ್ಲ. ಲಕ್ಷಾಂತರ ರೈತರು, ಮೋಚಿಗಳು, ನೇಕಾರರು, ಕಮ್ಮಾರರು ಎಲ್ಲರೂ ರಚನಾತ್ಮಕ ಕೆಲಸ ಮಾಡುವರಲ್ಲವೇ? ಇವರಿಂದಲೇ ಜಗತ್ತು ನಡೆಯುತ್ತದೆ. ಆದುದರಿಂದ ನಾವು ರಚನಾತ್ಮಕ ಕೆಲಸ ಮಾಡುತ್ತೇವೆ ಎನ್ನುವುದು ವಿಶೇಷ ಸಂಗತಿಯೇನೂ ಅಲ್ಲ. ಇದೇ ರೀತಿ ರಚನಾತ್ಮಕ ಕೆಲಸ ಮಾಡುತ್ತಲೇ ಇದ್ದರೆ ಇಷ್ಟರಿಂದಲೇ ಸರ್ವೋದಯ ವಿಚಾರ ಜಗತ್ತಿನಲ್ಲಿ ಸ್ಥಿರವಾಗುತ್ತದೆ, ಆ ಮೂಲಕ ನಮ್ಮ ವಿಚಾರವನ್ನು ಜಗತ್ತಿಗೆಲ್ಲಾ ಹರಡುತ್ತೇವೆ ಎಂಬ ಆಸೆ ವ್ಯರ್ಥ.

ಅನ್ಯಥಾ ಪ್ರಾಣಸಂಚಾರ ಶಾಶ್ವತವಾಗಿರದು

ಸರ್ವೋದಯ ವಿಚಾರದ ಭೂಮಿಕೆಯಲ್ಲಿ ಅಡಕವಾಗಿರುವ ಮೂಲ ತತ್ವಗಳ ಅಧ್ಯಯನ ನಡೆಯುತ್ತಲಿರದೆ ಹೋದರೆ ಮೇಲುಮೇಲಿಂದ ಒಳ್ಳೆಯ ಕೆಲಸ ಮಾಡುತ್ತಲಿದ್ದರೆ ನಡೆಯದು. ಗಾಂಧೀಜಿಯ ಜೊತೆಯಲ್ಲಿ ಕೆಲಸ ಮಾಡಿದ ಕಾರ್ಯಕರ್ತರು ಇನ್ನು ಕೆಲವು ದಿನಗಳಲ್ಲಿ ಅಗಲಿ ಹೋದಾರು. ಮತ್ತೆ ಅಧ್ಯಯನ ನಡೆಯದಿದ್ದರೆ ಮೂಲ ಪ್ರೇರಣೆಗೆ ಯಾವುದೇ ಆಧಾರ ಉಳಿಯದು. ಈ ಸಂಗಾತಿಗಳೂ ಸಹ ವಿಶೇಷ ಅಧ್ಯಯನ ಮಾಡಿರಲಿಲ್ಲ. ಮೊದಲಿನಿಂದಲೂ ನಮ್ಮಲ್ಲಿ ಅಧ್ಯಯನದ ಕೊರತೆ ಇತ್ತು. ಗಾಂಧೀಜಿಯಂಥ ಮಹಾಪುರುಷರ ಸಹವಾಸ ಅದನ್ನು ತುಂಬಿಕೊಡುತ್ತಿತ್ತು. ಈಗ ಗಾಂಧೀಜಿಯ ಸಹವಾಸ ಉಳಿದಿಲ್ಲ. ಆ ಸಹವಾಸ ಸಿಕ್ಕಿದ್ದವರು ಒಬ್ಬರಾದ ಮೇಲೆ ಒಬ್ಬರಂತೆ ಈ ಜಗತ್ತನ್ನು ಬಿಟ್ಟು ಹೋಗುತ್ತಿದ್ದಾರೆ. ಈಗ ಮೂಲ ಭೂತ ವಿಚಾರಗಳ ಅಧ್ಯಯನವಾಗದಿದ್ದರೆ ಜಗತ್ತಿನ ಪ್ರವಾಹದಲ್ಲಿ ನಾವು ಕೊಚ್ಚಿಹೋದೇವು. ಸ್ವಲ್ಪ ದಿನಗಳಲ್ಲಿ ಈ ವಿಚಾರ ಮರೆತುಹೋಗುವುದನ್ನು ನೀವು ನೋಡೀರಿ. ಆಳವಾಗಿ ಅಧ್ಯಯನ ನಡೆಯುತ್ತಲಿದ್ದರೆ ವಿಚಾರ ಪ್ರವಾಹ ಹರಿಯುತ್ತಿರುತ್ತದೆ. ನಮ್ಮ ಕೆಲಸದಲ್ಲಿ ಪ್ರಾಣಸಂಚಾರ ಸ್ಥಿರವಾಗಿರುತ್ತದೆ. ●

೧೫

ಸ್ಥೂಲ ಬಿಡಿ, ಸೂಕ್ಷ್ಮ ಹಿಡಿಯಿರಿ

ನಾನು ಒಮ್ಮೆ ಮಾವಳಣಕರರಿಗೆ ಪತ್ರ ಬರೆದು ಗಾಂಧೀ ಸ್ಮಾರಕ ನಿಧಿ ಮತ್ತು ಕಸ್ತೂರಿ ಬಾ ನಿಧಿಗಳ ಬಡ್ಡಿ ತೆಗೆದುಕೊಳ್ಳುವುದು ಉಚಿತವೇ ಎಂದು ಕೇಳಿದ್ದೆ. ಅವರು ನನಗೆ ಲಿಖಿತ ಉತ್ತರವಿತ್ತು, "ಎಲ್ಲಿ ಅತ್ಯಧಿಕ ಬಡ್ಡಿ ಸಿಗುವುದೋ ಮತ್ತು ಹಣ ಸುರಕ್ಷಿತವಿರುವುದೋ ಅಂಥ ಸ್ಥಳದಲ್ಲಿಡಬೇಕೆಂದು ಗಾಂಧೀಜೀ ನಮಗೆ ಕಲಿಸಿದ್ದಾರೆ" ಎಂದು ಹೇಳಿದ್ದರು.

ಈಗ ಏನು ಹೇಳೋಣ? ನಾನು ತೆಪ್ಪಗಾಗಿಬಿಟ್ಟೆ. ಗಾಂಧೀಜೀ ಇದ್ದಿದ್ದರೆ ಅವರು ಇದರಲ್ಲಿ ಪರಿವರ್ತನೆ ಮಾಡುತ್ತಿದ್ದರೋ ಇಲ್ಲವೋ ಅದು ಅವರ ಫಜೀತಿಯಾಗುತ್ತಿತ್ತು. ನಿಧಿ ಕೂಡಿಸುವುದು, ಬಡ್ಡಿಗೆ ಹಾಕಿ ಬೆಳೆಸುವುದು ಮತ್ತು ಕೆಲಸಕ್ಕೆ ತಂದು ಇಳಿಸುವುದು ಈ ಎಲ್ಲ ಸಂದುಹೋದ ಕಾಲದ ಮಾತುಗಳು. ಗಾಂಧೀಜೀ ಇಂದು ಇದ್ದಿದ್ದರೆ ಈ ವಿಜ್ಞಾನಯುಗದಲ್ಲಿ ಈ ಎಲ್ಲ ವಿಷಯುಗಳ ಸ್ವರೂಪ ಹೇಗಿರುತ್ತಿತ್ತು ಎಂಬುದಕ್ಕೆ ಉತ್ತರ ಅವರು ಕೊಡಬೇಕಾಗುತ್ತಿತ್ತು. ಆದರೆ ಈಶ್ವರ ಅವರನ್ನು ನಡುವೆಯೇ ಹಾರಿಸಿಕೊಂಡು ಹೋಗಿಬಿಟ್ಟ. ಹೊಸ ಕಾಲದ ಈ ವಿಕಟ ಪ್ರಶ್ನೆ ಗಾಂಧೀಜಿಯ ಎದುರು ಬರಲಿಲ್ಲ. ಈ ಭಕ್ತನ ಗೌರವವನ್ನು ಜ್ವಲಂತ ಉಳಿಸಬೇಕು ಮತ್ತು ನವೀನ ಯುಗದ ಪ್ರಶ್ನೆಗಳನ್ನು ಹೊಸ ಮನುಷ್ಯರಿಗೆ ಒಪ್ಪಿಸಬೇಕು ಎಂದು ಈಶ್ವರನಿಗೆ ಅನ್ನಿಸಿತು.

ಇದೆಲ್ಲಾ ಈಗ ಹಳೆಯ ಮಾತುಗಳಾಗಿಹೋದವು

ಶ್ರೀ ಘನಶ್ಯಾಮದಾಸ ಬಿರ್ಲಾ ಬಾಪೂವಿನ ಸಂಸ್ಮರಣಗಳ ಬಹಳ ಸುಂದರ ಪುಸ್ತಕ ಬರೆದಿದ್ದಾರೆ. ಅದರಲ್ಲಿ ಅವರು ಬಾಪೂವಿನ ವ್ಯವಹಾರ ಕುಶಲತೆಯನ್ನು ತೋರುವ ಒಂದು ಪ್ರಸಂಗ ನೀಡಿದ್ದಾರೆ: "ಅನೇಕ ಕೆಲಸ

ಗಳ ನಡುವೆಯೂ ಸಮಯ ತೆಗೆದುಕೊಂಡು ಬಾಪೂ ಕೇಳಿದರು : ಇಂಥ ನಿಧಿಯನ್ನು ಒಳ್ಳೆ ಬ್ಯಾಂಕಿನಲ್ಲಿ ಇಟ್ಟದ್ದಿಯಲ್ಲವೇ ? ಅದಕ್ಕೆ ಒಳ್ಳೆ ಬಡ್ಡಿ ಸಿಕ್ಕುತ್ತದೆಯಲ್ಲವೇ ? " ಈ ಪ್ರಸಂಗವನ್ನು ಕೊಟ್ಟು ಬಾಪೂ ಚತುರ ಬನಿಯಾ ಆಗಿದ್ದರು, ಮೂರ್ಖರಾಗಿರಲಿಲ್ಲ ಎಂದು ಬಿರ್ಲಾಜೀ ಬರೆಯುತ್ತಾರೆ. ಇಲ್ಲವಾದರೆ ಸಾಧಾರಣವಾಗಿ ಭಕ್ತಜನರನ್ನು ವ್ಯವಹಾರದಲ್ಲಿ ಮೂರ್ಖರೆಂದೇ ತಿಳಿಯಬೇಕಾಗುತ್ತದೆ. ಅಂಥ ಮೂರ್ಖತನ ಗಾಂಧೀಜಿಯಲ್ಲಿ ಸ್ವಲ್ಪವೂ ಇರಲಿಲ್ಲ ಎಂಬುದನ್ನು ತೋರಿಸಲು ಈ ಬಡ್ಡಿಯ ಪ್ರಸಂಗವನ್ನು ಬರೆಯಲಾಗಿದೆ.

ಇದೆಲ್ಲಾ ಮಾತೂ ಹಳೆಯದಾಗಿ ಹೋದವು ಎಂದು ಅತ್ಯಂತ ನಮ್ರತಾಪೂರ್ವಕವಾಗಿ ಹೇಳಬಯಸುತ್ತೇನೆ. ಇಂದು ಮಹಾತ್ಮರಿದ್ದು ಬಡ್ಡಿಯ ಚಿಂತೆ ಮಾಡಿದ್ದರೆ ಅವರ ಈ ಮಾತು ಹಿಂದುಳಿದುದು ಎಂದು ಎಣಿಸಲ್ಪಡುತ್ತಿತ್ತು. ಬಡ್ಡಿ ತೆಗೆದುಕೊಳ್ಳದೆ ಬದಲಾಗಿ ಎದುರಿರುವವನಿಗೆ ಕೊಟ್ಟುಬಿಡಬೇಕು ಎಂದು ಇಂದು ಹೊಳೆಯಬೇಕು. ಬಂಡವಾಳವನ್ನು ಬೆಳೆಸುವ ಮಾತೇ ಇಲ್ಲ, ಅದನ್ನು ಇಳಿಸುವ ಮಾತುಂಟು. ಯಾರಿಗೆ ನಾವು ಹಣ ಕೊಟ್ಟದ್ದೇವೆಯೋ ಅವರು ಅದನ್ನು ಸರಿಯಾಗಿ ಉಪಯೋಗ ಮಾಡಿದ್ದರೆ ವಾಪಸು ತೆಗೆದುಕೊಳ್ಳುವ ಸಮಯದಲ್ಲಿ ಅವರು ಅದರ ವೆಚ್ಚ ಹಿಡಿದು ಕೊಂಡು ಕೊಡಬೇಕಾದೀತು. ಹೀಗೆ ಯಾರಿಗೆ ಹೊಳೆಯುವುದೋ ಅವರು ಇಂದಿನ ಕಾಲಕ್ಕೆ ತಕ್ಕವರು ಎಂದು ತಿಳಿಯಲಾದೀತು. ಯಾರೂ ಗಾಂಧೀಜಿಯ ಸ್ಥೂಲ ಚರಿತ್ರದ ಆಕಾರದ ಬಾಲವನ್ನು ಹಿಡಿದುಕೊಳ್ಳ ತಕ್ಕದ್ದಲ್ಲ. ಅವರು ಯಾವುದೋ ಹಳೆಯ ಪುಸ್ತಕದ ನಕಲು ಇಳಿಸುವ ಮನುಷ್ಯರಾಗಿರಲಿಲ್ಲ. ಅವರಾದರೋ ನಿತ್ಯ ನೂತನವಾದ ಹೊಸ ವಿಚಾರ ಮಾಡುತ್ತಿದ್ದರು. ಆಗಲೂ ನಾವು ಅವರ ಸ್ಥೂಲಸಂಗತಿಗಳನ್ನು ಹಿಡಿದು ಕೊಳ್ಳುವ ತಪ್ಪು ಮಾಡುತ್ತೇವೆ ಎನ್ನುತ್ತಿದ್ದರು. ವಿಜ್ಞಾನ ಯುಗದಲ್ಲಿ ಇದು ನಡೆಯಲಾರದು.

ಗಾಂಧೀಜೀಯಾದರೋ ಧರ್ಮದರ್ಶಿತ್ವದ ಮಾತಾಡಿದ್ದರು

ಈ ಸೃಷ್ಟಿ ಪರಮೇಶ್ವರನದು ಮತ್ತು ಇದು ಪರಮೇಶ್ವರನ ನಿವಾಸ. ಆದುದರಿಂದ ಇದನ್ನು ಭೋಗಿಸಬೇಕಾದವರು ಸಮಾಜರೂಪೀ ಪರಮೇಶ್ವರ

ನಿಗೆ ಅದನ್ನು ಸಮರ್ಪಿಸಬೇಕು. ಪ್ರಸಾದರೂಪವಾಗಿ ಏನು ಸಿಗುವುದೋ ಅದನ್ನು ಪಡೆದು ಉಪಭೋಗಿಸಬೇಕು. ಗಾಂಧೀಜಿಯ ಮೂಲಭೂತ ಮಾತು ಇದು. ಈ ದೃಷ್ಟಿಯಿಂದ ಅವರು ಈಶಾವಾಸ್ಯ ಉಪನಿಷತ್ತಿನ ಮೊದಲನೆಯ ಮಂತ್ರವನ್ನು ಬಾರಿಬಾರಿಗೂ ನೆನಪು ಮಾಡುತ್ತಿದ್ದರು. ನಮ್ಮ ವಸ್ತು ಎಂಬುದಕ್ಕೆ ನಾವು ಮಾಲಿಕರಲ್ಲ ಧರ್ಮದರ್ಶಿಗಳು ಎಂದು ಹೇಳುತ್ತಿದ್ದರು. ಮನುಷ್ಯ ಸಂಗ್ರಹವೃತ್ತಿಯನ್ನು ಬಿಡಬೇಕು ಎಂದು ಹೇಳುತ್ತಿದ್ದರು. ಸಕಲ ಶಕ್ತಿಯನ್ನೂ ಸಂಪತ್ತನ್ನೂ ಸೇವೆಗಾಗಿ ವೆಚ್ಚ ಮಾಡಬೇಕೆಂದು ಸಂಪತ್ತುಳ್ಳವರಿಂದ ನಿರೀಕ್ಷಿಸುತ್ತಿದ್ದರು. ಸಂಪತ್ತುಳ್ಳವರಿಂದ ಧರ್ಮದರ್ಶಿತ್ವದ ಆಸೆ ಅವರದಾಗಿತ್ತು. ಹಿಂದೂಸ್ಥಾನದ ಶ್ರೀಮಂತರು ತಮ್ಮ ಸಂಪತ್ತನ್ನು ಒಬ್ಬ ಧರ್ಮದರ್ಶಿಯಂತೆ ಉಪಯೋಗಿಸಲು ಒಪ್ಪಿಕೊಂಡಾರೆಂದು ಅವರಿಗೆ ಆಸೆ ಇತ್ತು.

ಪ್ಯಾರೇಲಾಲಜೀ 'ದಿ ಲಾಸ್ಟ್ ಫೇಸ್'ನಲ್ಲಿ ಬರೆದಿದ್ದಾರೆ. ಮಹಾದೇವಭಾಯೀ ಮತ್ತು ಕಿಶೋರಲಾಲಭಾಯೀ ಧರ್ಮದರ್ಶಿತ್ವ ಕುರಿತು ಒಂದು ಟಿಪ್ಪಣಿ ತಯಾರು ಮಾಡಿದ್ದರು. ವಿಚಾರ ವಿಮರ್ಶೆಯ ಬಳಿಕ ಬಾಪೂ ಅದನ್ನು ಒಪ್ಪಿಯೂ ಇದ್ದರು. ಈ ಟಿಪ್ಪಣಿಯನ್ನು ಬಿರ್ಲಾಜೀ ಹತ್ತಿರ ಕಳುಹಿಸಲಾಗಿತ್ತು. ಅವರು ಈ ಟಿಪ್ಪಣಿಯನ್ನು ವ್ಯಾಪಾರಿಗಳ ಮುಂದೆ ಇಡಬೇಕು. ಹಾಗೂ ಆ ನಿಟ್ಟಿನಲ್ಲಿ ಕೆಲಸ ಮುಂದುವರಿಯಬೇಕು ಎಂಬ ಕಲ್ಪನೆಯಾಗಿತ್ತು. ಆಮೇಲೆ ಈ ಟಿಪ್ಪಣಿ ಏನಾಗಿತ್ತು ಎಂದೇ ಪತ್ತೆ ಸಿಗಲಿಲ್ಲ ಎಂಬುದಾಗಿ ಪ್ಯಾರೇಲಾಲರು ಬರೆಯುತ್ತಾರೆ. ಈ ಮಾತು ಒಪ್ಪಿಗೆಯಾಗಲಿಲ್ಲ, ಶ್ರೀಮಂತರಿಂದ ನಿರೀಕ್ಷಿಸಿದ ಆಸೆ ಪೂರೈಸಲಿಲ್ಲ ಎಂದೇ ಇದರ ಅರ್ಥ.

ದಾಸ್ಯ-ಭಕ್ತಿಯಲ್ಲ, ಸಖ್ಯ-ಭಕ್ತಿಯ ಯುಗ

ಹಿಂದಿನ ಕಾಲದಲ್ಲಿ ಒಡೆತನದ ಹಂಚಿಕೆ ಇತ್ತು. ಕೆಲವರು ಒಡೆಯರಾದರೆ ಕೆಲವರು ಸೇವಕರು. ಆ ಕಾಲದಲ್ಲಿ ದಾಸ್ಯಭಕ್ತಿ ಪ್ರಚಾರದಲ್ಲಿತ್ತು. ಒಡೆಯರು ಪ್ರೇಮಪೂರ್ವಕವಾಗಿ ತಮ್ಮ ಸೇವಕರನ್ನು ಪೋಷಿಸಬೇಕು ಮತ್ತು ಸೇವಕರು ಪ್ರೇಮಪೂರ್ವಕವಾಗಿ ಒಡೆಯರ ಸೇವೆ ಮಾಡಬೇಕು,

ಇದೇ ಆ ಜನರ ನಿಷ್ಠೆ ಎಂದು ತಿಳಿಯಲ್ಪಡುತ್ತಿತ್ತು. ಆಗ ಸಮಾಜವೂ ಸರಿಯಾಗಿ ನಡೆಯುತ್ತಿತ್ತು. ಸಮಾಜದಲ್ಲಿ ಯಾರಿಗೂ ಅಸಂತೋಷ ಇರಲಿಲ್ಲ. ಅದರಲ್ಲಿ ಯಾವ ದೋಷವೂ ಇರಲಿಲ್ಲ ಎಂದು ನಾನು ಹೇಳುವುದಿಲ್ಲ; ಆದರೆ ಇಂದು ಈ ಮಾತು ಉಳಿಯಲಾರದು. ಈಗ ಸಮಾಜ ಸ್ವಲ್ಪ ಮೇಲೆ ಎದ್ದಿದೆ. ಇಂದಿನ ಸಮಾಜಕ್ಕೆ ದಾಸ್ಯಭಕ್ತಿಯ ಬದಲು ಸಖ್ಯಭಕ್ತಿ ಬೇಕಾಗಿದೆ. ಎಂದರೆ ಸ್ವಾಮಿತ್ವ ಮತ್ತು ಸೇವಕತ್ವದ ಭಾವನೆಗಳು ಸರಿಯಾದ ಅರ್ಥದಲ್ಲಿ ಇಂದಿನ ಸಮಾಜಕ್ಕೆ ರುಚಿಕರವಲ್ಲ. ಈಗ ಪ್ರಪಂಚದಿಂದ ಒಡೆತನ ನಷ್ಟವಾಗಬೇಕು ಎಂಬುದೇ ನನ್ನ ಹೇಳಿಕೆ.

ಆದರೆ ಒಡೆತನವನ್ನು ಬಿಟ್ಟುಕೊಡುವ ಪ್ರಶ್ನೆ ಬಂದಾಗ ಕೆಲವರು ಹೇಳುತ್ತಾರೆ, ಇದು ಗಾಂಧೀ ವಿಚಾರಕ್ಕೆ ಪ್ರತಿಕೂಲವಾಗದಿರಲಿ, ಭಿನ್ನ ಅಥವಾ ಅಸಂಗತವಾಗದಿರಲಿ ಎಂದು. ಗಾಂಧೀಜೀ ಎಂದೂ ಹೇಳುತ್ತಿರಲಿಲ್ಲ ಎಂದೇ ಇವರ ಅಭಿಪ್ರಾಯ. ಅವರು ಕೇವಲ ಧರ್ಮದರ್ಶಿತ್ವದ ಮಾತನ್ನು ಮಾತ್ರ ಹೇಳುತ್ತಿದ್ದರು ಎಂದು.

ಸಾಧಾರಣವಾಗಿ ನಾನು ಇಂಥ ಚರ್ಚೆಗೆ ಇಳಿಯುವುದಿಲ್ಲ. ನಾನೂ ಗಾಂಧೀಜೀ ಸಂಗಡ ಇದ್ದೆ. ಅವರ ಪುಸ್ತಕಗಳನ್ನೂ ಓದಿದ್ದೇನೆ. ಅವರೊಡನೆ ಚರ್ಚೆ ಮಾಡುವ ಅವಕಾಶ ನನಗೂ ದೊರೆತಿದೆ. ಅದೇ ರೀತಿ ಇನ್ನೂ ಅನೇಕರು ಗಾಂಧೀಜೀ ಸಂಗಡ ಇದ್ದರು. ಆದುದರಿಂದ ಪ್ರತಿಯೊಬ್ಬರೂ ಗಾಂಧೀಜಿಯ ಹೆಸರೆತ್ತಿಕೊಂಡು ಮಾತನಾಡುವುದರಲ್ಲಿ ಸಾರವಿಲ್ಲ. ನಾವು ಹೊಸ ಯುಗದಲ್ಲಿದ್ದೇವೆ. ನಮ್ಮೆದುರು ಹೊಸ ಕೆಲಸವಿದೆ. ಗಾಂಧೀಜೀ ಬಾರಿಸಿದ ಕೊಳಲನ್ನೇ ನಾವೂ ಬಾರಿಸಬೇಕು ಎಂದೇನೂ ಇಲ್ಲ. ಇಂದಿನ ಪರಿಸ್ಥಿತಿಯಲ್ಲಿ ಯಾವುದು ಸೂಕ್ತವೋ ವಿಚಾರಮಾಡಿ ಆ ಕೆಲಸವನ್ನು ಮಾಡಬೇಕು. ಪರಿಸ್ಥಿತಿಗೆ ಅನುಸಾರವಾಗಿ ಬದಲಾಗುತ್ತಾ ಹೋಗುತ್ತಿದ್ದುದು ಗಾಂಧೀಜಿಯ ವೈಶಿಷ್ಟ್ಯ ಎಂದು ನನ್ನ ಭಾವನೆ. ಹೌದು, ಪ್ರತಿ ಸಮಯದಲ್ಲೂ ಅಹಿಂಸೆಯ ದೃಷ್ಟಿಯನ್ನು ಸ್ಥಿರವಾಗಿಟ್ಟುಕೊಂಡು ಅವರು ಯೋಚಿಸುತ್ತಿದ್ದರು. ಆಗಲೂ ಅವರನ್ನು ಧರ್ಮದರ್ಶಿತ್ವ ಎಂದರೆ ಏನೆಂದು ಕೇಳುತ್ತೇನೆ.

ಧರ್ಮದರ್ಶಿಯ ಎರಡು ಮುಖ್ಯ ಲಕ್ಷಣ

ಗಾಂಧೀಜಿ 'ಟ್ರಸ್ಟೀಷಿಪ್' ಎಂಬ ಶಬ್ದ ಉಪಯೋಗಿಸಿದ್ದರು. ಇಂಥ ಶಬ್ದಗಳಿಂದ ಲಾಭವಿದ್ದಂತೆಯೇ ಸ್ವಲ್ಪ ಹಾನಿಯೂ ಆಗುತ್ತದೆ. 'ಟ್ರಸ್ಟೀಷಿಪ್' ಶಬ್ದದ ಇಡೀ ಸಹಚಾರೀಭಾವ ಸರಿಯಲ್ಲ. ಇಂದು ಎಷ್ಟೊಂದು ಕೆಟ್ಟ ಸಹಚಾರೀಭಾವ ಅದರಲ್ಲಿ ಸೇರಿಕೊಂಡುಬಿಟ್ಟದೆ. 'ಟ್ರಸ್ಟೀಷಿಪ್'ನ ಪರಿಭಾಷೆಯನ್ನು ನಾವು ಆಡುತ್ತೇವೆ. ಆದರೆ ಅದರ ಹಿಂದಿರುವ ವಿಚಾರವನ್ನು ಜಾರಿಗೆ ತರುವ ಬಾಧ್ಯತೆಯನ್ನು ಒಪ್ಪುವುದಿಲ್ಲ. ಇದೇ ಸ್ಥಿತಿ ಉಳಿದುದಾದರೆ ಹಿಂಸೆ ಎಂದೂ ನಿವಾರಣೆಯಾಗಲಾರದು ಎಂಬ ಭಯ ನನಗೆ. ನಮ್ಮಲ್ಲಿ ಬಡಜನತೆ ಇತರ ರೀತಿಯಲ್ಲಿ ಎದ್ದೇಳುವುದು ಬಹಳ ಸುಲಭವಾಗಿ ಹೋಗಿಬಿಟ್ಟಿದೆ. ಆ ಹದ್ದಿನವರಿಗೆ ಬಡತನ ಹೋಗಿಬಿಟ್ಟಿದೆ. ಮತ್ತೆ ಅವರು ಅಹಿಂಸೆಯಿಂದಲೇ ಕೆಲಸ ನಡೆಸಿಯಾರೆಂದು ಹೇಳಲಿಕ್ಕಾಗದು. ಆದುದರಿಂದ ನಾವು ಧರ್ಮದರ್ಶಿತ್ವ ಸಿದ್ಧಾಂತವನ್ನು ಜಾರಿಗೆ ತರಲು ಪೂರಾ ಪ್ರಯತ್ನಿಸುತ್ತೇವೆ ಮತ್ತು ಹೆಚ್ಚು ಸಂಪತ್ತು ಇಟ್ಟುಕೊಳ್ಳುವುದಿಲ್ಲ ಎಂಬ ನಿಶ್ಚಯ ಮಾಡಬೇಕು. ಇಷ್ಟು ಒಡೆತನ ಸಾಕು ಮತ್ತು ಇಷ್ಟು ಅನುಚಿತ ಎಂಬ ರೇಖೆಯನ್ನು ಎಳೆಯಲು ಸಾಧ್ಯವಿಲ್ಲ—ಎಂದು ಮಾತನ್ನು ಹಾರಿಸಿಕೊಂಡರೆ ಮುಂದೆ ಬರುವ ಅಪಾಯ ನಿವಾರಣೆಯಾಗಲಾರದು. 'ಟ್ರಸ್ಟೀಷಿಪ್' ಶಬ್ದದ ಪಾವನತೆಯ ಆಧಾರ ಪಡೆದು ನಮ್ಮ ಜೀವನ ಕ್ರಮವನ್ನು ಇದ್ದಕ್ಕಿದ್ದಂತೆಯೇ ನಡೆಸುವುದಾದರೆ ಈ ಉತ್ತಮ ಶಬ್ದವು ಹಾಳಾಗಿ ಹೋದೀತು.

ನನ್ನ ವಿಚಾರದಂತೆ 'ಟ್ರಸ್ಟೀಷಿಪ್'ಗೆ ತಾಯಿ-ತಂದೆ ಮತ್ತು ಮಕ್ಕಳ ಸಂಬಂಧಕ್ಕಿಂತ ಉತ್ತಮವಾದ ಉಪಮಾನ ಬಹುಶಃ ಇನ್ನೊಂದು ಸಿಗಲಿಕ್ಕಿಲ್ಲ. ಇದರ ಲಕ್ಷಣವೇನು? ಇದರ ಮೊದಲ ಲಕ್ಷಣ : ಹುಡುಗ ತನ್ನ ಕೆಲಸವನ್ನು ಆದಷ್ಟು ಬೇಗ ಎತ್ತಿಕೊಳ್ಳಲಿ, ತಂದೆ-ತಾಯಿಯ ಪ್ರಯತ್ನ ಇದು. ಸದಾ ಸರ್ವದಾ ಹುಡುಗನ ಚಿಂತೆ ಮಾಡುವುದು ಅಥವಾ ಯಾವಾಗಲೂ ಅವನು ಅವರ ಮೇಲೆ ಅವಲಂಬಿತನಾಗಿರುವುದು ತಂದೆ-ತಾಯಿಗಳಿಗೆ ಇಷ್ಟವಿರುವುದಿಲ್ಲ. ಆದಷ್ಟು ಬೇಗ ಅವನನ್ನು ಯೋಗ್ಯನನ್ನಾಗಿ ಮಾಡಲು ಪ್ರಯತ್ನಿಸುತ್ತಿರುತ್ತಾರೆ. ಅವನ ಕೈಗೆ ಎಲ್ಲ ಕಾರುಬಾರನ್ನೂ ಒಪ್ಪಿಸುವುದಕ್ಕಾಗಿ.

ಇದು ಧರ್ಮದರ್ಶಿಯ ಒಂದು ಲಕ್ಷಣ. ಹುಡುಗ ಭಾರ ಹೊರಲು ಸಮರ್ಥನಿಲ್ಲದವರೆಗೆ ತಂದೆ-ತಾಯಿ ತಮಗಿಂತ ಹೆಚ್ಚಾಗಿ ಅವನ ಚಿಂತೆ ಮಾಡುತ್ತಾರೆ. ಇದು ಎರಡನೆಯ ಲಕ್ಷಣ. ಧರ್ಮದರ್ಶಿತ್ವದಲ್ಲಿ ಇವೆರಡೂ ಮುಖ್ಯ ಲಕ್ಷಣಗಳು. ಕಾರ್ಮಿಕರಿಗೆ ಸ್ವಲ್ಪ ಹೆಚ್ಚು ಕೂಲಿ ಕೊಡುವುದರಿಂದ ಮಾತ್ರವೇ 'ಟ್ರಸ್ಟೀಷಿಪ್' ಆಗುವುದಿಲ್ಲ. ಅವರ ಮೂಲದಲ್ಲಿ ಸದಾ ಕಾಲಕ್ಕೂ ಧರ್ಮದರ್ಶಿಯ ಅಗತ್ಯವಿರಬೇಕು ಎಂಬ ಮಾತಿಲ್ಲ. ಅದರ ಪೂರ್ಣ ಪ್ರಯತ್ನ ಮಾಡಬೇಕು. 'ಟಿಬೆಟ್ಟಿನ ಟ್ರಸ್ಟೀ' ತಾನೆಂದು ಚೀನವೂ ಇಂದು ಹೇಳುತ್ತಿದೆ. ನೂರು-ನೂರೈವತ್ತು ವರ್ಷಗಳ ಕಾಲ ಬ್ರಿಟಿಷರು ಭಾರತದ ಟ್ರಸ್ಟೀಗಳೆಂದು ಹೇಳಿಕೊಳ್ಳುತ್ತಿದ್ದರು. ಗಾಂಧೀಜಿಯ ಧರ್ಮ-ದರ್ಶಿತ್ವದ ಅರ್ಥ ಇದಲ್ಲ.

ಗಾಂಧೀಜೀ ಒಬ್ಬ ಯುಗಪ್ರವರ್ತಕ ಮಹಾಪುರುಷರಾಗಿದ್ದರು. ಹೊಸ ಜೀವನ ವಿಚಾರವನ್ನು ಅವರು ಇತ್ತರು. ಇಂದಿನ ಯುಗದಲ್ಲಿಯೂ ದಾಸ್ಯ ಭಕ್ತಿ ನಡೆದು ಬರುತ್ತಿದೆ. ಸಮಾಜದಲ್ಲಿ ಸ್ವಾಮಿತ್ವ ಮತ್ತು ಸೇವಕತ್ವದ ಒಡಕು ಇದೆ. ಈ ಮಾತುಗಳು ಇವರ ವಿಚಾರದೊಂದಿಗೆ ಹೊಂದುವುದಿಲ್ಲ. ನಮ್ಮ ಸಮಾಜದಲ್ಲಿ ಬಿಟ್ಟಿರುವ ಬಿರುಕಿನ ವಿರುದ್ಧ ಅವರು ತಮ್ಮ ವಾಣಿ ಮೊಳಗಿಸಿದರು. ಬ್ರಾಹ್ಮಣರಲ್ಲಿ ಇಂಥ ಗುಣವಿರಬೇಕು ಮತ್ತು ಶೂದ್ರರಲ್ಲಿ ಇಂಥ ಗುಣ ಎಂದು ನಮ್ಮಲ್ಲಿ ನಡೆಯುತ್ತಾ ಬಂದಿದೆ. ಪ್ರತಿಯೊಬ್ಬನ ಧರ್ಮವೂ ಬೇರೆ ಎಂದು ತಿಳಿಯುತ್ತೇವೆ. ಹೀಗೆ ಗುಣಗಳಿಗೂ ಬಂಡವಾಳ ಶಾಹಿ ನುಗ್ಗಿಬಿಟ್ಟಿದೆ. ಸತ್ಯ, ಅಹಿಂಸೆ, ಪ್ರೇಮ, ಮುಂತಾದವು ಸಂತರ ಬಂಡವಾಳ ಎಂದು ತಿಳಿಯಲ್ಪಟ್ಟಿದೆ. ಉಳಿದ ಎಲ್ಲ ಜನರೂ ಸಂತರನ್ನು ಆದರಿಸುತ್ತಾರೆ, ಪೂಜಿಸುತ್ತಾರೆ, ಆದರೆ ಅವರನ್ನು ಅನುಸರಿಸುವುದಿಲ್ಲ. ಗಾಂಧೀಜೀ ಸತ್ಯ, ಅಹಿಂಸೆ, ಪ್ರೇಮ, ಇತ್ಯಾದಿ ಗುಣಗಳು ಸನ್ಯಾಸಿಗೆ ಅನ್ವಯಿಸುವಷ್ಟೇ ಗೃಹಸ್ಥರಿಗೂ ಮತ್ತಿತರರಿಗೂ ಅನ್ವಯಿಸುತ್ತದೆ ಎಂಬು ದನ್ನು ತಿಳಿಸಿದರು. ತಮ್ಮ ಸರ್ವಶಕ್ತಿಯನ್ನೂ ಸಮಾಜಕ್ಕೆ ಅರ್ಪಿಸಬೇಕು ಮತ್ತು ಸಮಾಜ ಕೊಟ್ಟುದನ್ನು ಸಂತೋಷದಿಂದ ಸ್ವೀಕರಿಸಬೇಕು. ಇಂದಿನ ಭಾಷೆಯಲ್ಲಿ ಹೇಳುವುದಾದರೆ 'ಸದ್ಗುಣ' ಸಾಮಾಜಿಕ ಉಪಯೋಗಕ್ಕೆ ಇರುತ್ತದೆ ಎಂದು ಗಾಂಧೀಜೀ ತಿಳಿಯಹೇಳಿದರು.

ಗಾಂಧೀಜಿಯ ಈ ಶಿಕ್ಷಣದಿಂದ ಪೂರಾ ಜೀವನದೃಷ್ಟಿ ಬದಲಾಗುತ್ತದೆ. ಈ ಯುಗದಲ್ಲಿ ಯಾವನಾದರೂ ಒಡೆಯ ತನ್ನ ಸೇವಕನನ್ನು ಚೆನ್ನಾಗಿ ಪಾಲನೆ ಪೋಷಣೆ ಮಾಡಿದರೆ, ಒಳ್ಳೆ ಊಟ-ತಿಂಡಿ ಕೊಟ್ಟರೆ ಆಗಲೂ ನಮ್ಮ ಮನ ಒಪ್ಪುವುದಿಲ್ಲ. ತಿಂದು ಕುಡಿದು ಸುಖವಾಗಿದ್ದಾನೆ, ಪೂರ್ಣ ವಿಕಾಸ ವೆಲ್ಲಿ ಎನ್ನುತ್ತೇವೆ. ಅದೇ ರೀತಿ ಒಡೆಯ, ಒಡೆತನದ ಭಾವನೆಯಿಂದ ದಯಾಬುದ್ಧಿಪೂರ್ವಕವಾಗಿ ಸೇವಕನನ್ನು ಪೋಷಿಸಿದರೆ ಅವನಲ್ಲಿ ಕೆಲವು ಗುಣಗಳ ವಿಕಾಸ ಮಾತ್ರವಾಗುತ್ತದೆ, ಪೂರ್ಣ ವಿಕಾಸ ಹೇಗಾದೀತು? ಗಂಡ ಹೆಂಡತಿಯನ್ನು ಚೆನ್ನಾಗಿ ಪಾಲನೆ ಮಾಡುತ್ತಾನೆ, ಹೆಂಡತಿ ಹೇಳಿದಂತೆ ಕೇಳುವವಳಾಗಿರುತ್ತಾಳೆ. ಹೀಗೆ ಇಬ್ಬರೂ ತಮ್ಮ ತಮ್ಮ ಕರ್ತವ್ಯವನ್ನು ಪೂರಾ-ಪೂರಾ ಪಾಲನೆ ಮಾಡುತ್ತಾರೆ. ಆದರೂ ಇಬ್ಬರ ವಿಕಾಸವೂ ಪೂರ್ಣ ವಾಯಿತೆಂದು ಹೇಳುವಹಾಗಿಲ್ಲ. ಪತಿಯು ಪತ್ನಿಯೂ ಮತ್ತು ಪತ್ನಿಯು ಪತಿಯೂ ಆಗಬೇಕಾದೀತು. ಎಂದರೆ ಸ್ತ್ರೀ, ಸ್ತ್ರೀ ಮತ್ತು ಪುರುಷ ಎರಡೂ ಆಗಬೇಕು ಮತ್ತು ಪುರುಷ ಪುರುಷ ಮತ್ತು ಸ್ತ್ರೀ ಎರಡೂ ಆಗಬೇಕು. ಆಗಲೇ ಇಬ್ಬರ ಪೂರ್ಣ ವಿಕಾಸ.

ಗಾಂಧೀಜಿಯ ಜೀವನ ವಿಚಾರ ಹೀಗಿತ್ತು. ಇದು ತೀರಾ ಹೊಸ ದೃಷ್ಟಿ. ತತ್ಫಲವಾಗಿ ಉತ್ತಮೋತ್ತಮವಾದ ಹಳೆಯ ಸಮಾಜ ರಚನೆ ಇಂದು ನಮಗೆ ಸ್ವಲ್ಪವೂ ಸರಿಯೆನಿಸುವುದಿಲ್ಲ. ಪುರಾಣಕಾಲದ ಚಾತುರ್ವರ್ಣ್ಯ ಆ ಕಾಲದಲ್ಲಿ ಉತ್ತಮವಾಗಿದ್ದೀತು. ಆದರೆ ಇಂದಿನ ಕಾಲಕ್ಕೆ ಅದು ಸ್ವಲ್ಪವೂ ಅನುಕೂಲವಲ್ಲ. ಪ್ರತಿಯೊಂದು ವರ್ಣದಲ್ಲಿಯೂ ನಾಲ್ಕು ವರ್ಣಗಳಿರಬೇಕು. ಬ್ರಾಹ್ಮಣನ ಶಾಂತಿ ಮತ್ತು ಜ್ಞಾನ, ಕ್ಷತ್ರಿಯನ ತೇಜಸ್ಸು ಮತ್ತು ಶೌರ್ಯ, ವೈಶ್ಯನ ದಕ್ಷತೆ ಮತ್ತು ಕಾರ್ಯ ಕುಶಲತೆ, ಶೂದ್ರನ ನಮ್ರತೆ ಮತ್ತು ಸೇವಾವೃತ್ತಿ ಇಂದು ಪ್ರತಿ ಮನುಷ್ಯನಲ್ಲೂ ಇರಬೇಕು. ಆಗಲೇ ಅವನ ಪೂರ್ಣ ವಿಕಾಸ. ಸ್ಥಿತಪ್ರಜ್ಞನ ಲಕ್ಷಣಗಳು ಸಂಪೂರ್ಣವಾಗಿ ಸಾಮಾನ್ಯ ಜನತೆಗಾಗಿ ಎಂದು ಗಾಂಧೀಜೀ ಹೇಳಿದರು. ಎಂತಲೇ ಅದನ್ನು ದಿನದ ಪ್ರಾರ್ಥನೆಯಲ್ಲಿ ಸೇರಿಸಿದರು.

ಗಾಂಧೀಜಿಯ ಸಮಗ್ರ ಕೆಲಸದ ಒಳತತ್ವ

ನಾವೆಲ್ಲರೂ ಭಗವಂತನ ಅಂಶ—ಇದೇ ಎಲ್ಲ ಮಾತುಗಳ ಸಾರ. ಯಾರೂ ದೊಡ್ಡವರಲ್ಲ, ಯಾರೂ ಚಿಕ್ಕವರಲ್ಲ. ಆದುದರಿಂದ ಯಾರನ್ನೂ ತುಳಿಯಬಾರದು, ಯಾರೂ ತುಳಿಯಲ್ಪಡಬಾರದು. ಕುಟುಂಬದಲ್ಲಿರುವಂತೆ ಸಮಾಜದಲ್ಲಿಯೂ ಒಗ್ಗಟ್ಟಿನಿಂದ ಇರಬೇಕು. ಈ ಜನ್ಮದಲ್ಲಿಯೇ ನಾವು ಭಗವಂತನನ್ನು ಪಡೆಯಬೇಕಾಗಿದೆ. ಪರಮೇಶ್ವರ ಎಂದರೆ ಸಂಪೂರ್ಣತೆ. ಈ ಸಂಪೂರ್ಣತೆಯನ್ನು ನಾವು ಪಡೆಯಬೇಕು, ಸಮಾಜವನ್ನೂ ನಾವು ಪೋಷಿಸಬೇಕು. ಅದಕ್ಕೆ ನಮ್ಮೆಲ್ಲರ ಜೀವನ ಸಮರ್ಪಿತವಾಗಬೇಕು. ಈ ಭಾವನೆಯಿಂದ ಕೆಲಸ ಮಾಡಿದರೆ ಗಾಂಧೀಜಿಯ ಹೆಸರನ್ನು ಮುಂದುವರಿಸಿಯೇವು. ಅವರ ಎಲ್ಲ ಕೆಲಸದ ಒಳತತ್ವ ಇದೇ ಆಗಿತ್ತು. ಅದನ್ನು ಹಿಡಿದುಕೊಂಡು ಇಂದಿನ ಪರಿಸ್ಥಿತಿಯಲ್ಲಿ ವಿಕಾಸಗೊಳಿಸುತ್ತಾ ಇರಬೇಕು. ಅದರ ಬದಲು ಸ್ಥೂಲ ಚರಿತ್ರದ ಆಕಾರದ ಚುಂಗು ಹಿಡಿಯುವುದಾದರೆ ಅವರಿಗೂ ಮತ್ತು ನಮಗೂ ಅನ್ಯಾಯ ಎಸಗಿದಂತೆ. ●

೧೬

ರಾಮನಾಮ ಶುಂ ತಾಳೀ ಲಾಗೀ!

ಬಹಳ ವರ್ಷಗಳ ಹಿಂದಿನ ಮಾತು. ಆಗ ನಾನು ಸಾಬರ್‌ಮತಿ ಆಶ್ರಮದಲ್ಲಿದ್ದೆ. **'ವೈಷ್ಣವ ಜನ ತೋ ತೇನೇ ಕಹಿಯೇ'**—ಭಜನೆಯನ್ನು ಆಗಾಗ ಹಾಡುತ್ತಿದ್ದೆವು. ಅದರಲ್ಲಿ ಭಕ್ತನ ಲಕ್ಷಣಗಳನ್ನು ತಿಳಿಸಿದ್ದಾರೆ. ಅದರಲ್ಲಿ ಯಾವ ಯಾವ ಲಕ್ಷಣಗಳು ಎಷ್ಟು ಮಟ್ಟಿಗೆ ನನಗೆ ಅನ್ವಯವಾಗುತ್ತದೋ ನಾನು ಮನಸ್ಸಿನಲ್ಲೇ ವಿಚಾರಮಾಡುತ್ತಿದ್ದೆ. ಮತ್ತೆ ನನ್ನ ಕಣ್ಣೆದುರು ಬಾಪೂ ಜೀವನವಿತ್ತು. ಅವರ ಜೀವನದಲ್ಲಿ ಈ ಲಕ್ಷಣಗಳು, ಹೇಗೆ, ಎಲ್ಲಿ ಕಂಡುಬರುತ್ತವೆ ಎಂಬ ವಿಚಾರವೂ ನನ್ನ ಮನಸ್ಸಿನಲ್ಲಿ ನಡೆಯುತ್ತಿತ್ತು. ಇನ್ನೊಬ್ಬರ ಮನಸ್ಸಿನ ಪರೀಕ್ಷೆ ನಡೆಸಬಾರದು. ಸ್ವಂತ ಮನಸ್ಸಿನ ಪರೀಕ್ಷೆಯೇ ಉನ್ನತಿಗೆ ಸಹಾಯಕ. ಆದರೆ ಬಾಪೂ ನನ್ನ ಪಾಲಿಗೆ ಭಿನ್ನವಾಗಿರಲಿಲ್ಲ, ಪರಕೀಯನೂ ಆಗಿರಲಿಲ್ಲ. ಆದುದರಿಂದ ಈ ಲಕ್ಷಣಗಳು ಅವರಲ್ಲಿ ಹೇಗಿವೆ ಎಂಬುದನ್ನು ನೋಡುವ ಅಧಿಕಾರ ನನಗಿಲ್ಲದಿದ್ದರೂ ನನ್ನ ಮನಸ್ಸಿನೊಳಗೇ ಪ್ರಯತ್ನ ಮಾಡುತ್ತಿದ್ದೆ. ಆಗ ನನಗನಿಸಿತು, ಸರಿಸುಮಾರು ಎಲ್ಲ ಲಕ್ಷಣಗಳೂ ಬಾಪೂಗೆ ಅನ್ವಯವಾಗುತ್ತಿದ್ದವು. ಆದರೆ 'ರಾಮನಾಮ್ ಶುಂ ತಾಳೀ ಲಾಗೀ.' ಈ ಲಕ್ಷಣ ಸ್ವಲ್ಪ ಕಡಿಮೆ ಅನ್ವಯವಾದಂತೆ ಅನಿಸಿತು.

ಅಂತಿಮ ದಿನದ ಮಹಾ ವ್ಯಾಖ್ಯಾನ!

1920ರ ಸುಮಾರಿನ ಮಾತು. ಅದರ ಬಳಿಕ ಅವರು ಬಹಳ ವೇಗದಿಂದ ಮುಂದುವರಿದು ನೋಡನೋಡುತ್ತಿರುವಂತೆಯೇ ರಾಮನಾಮದಲ್ಲಿ ತನ್ಮಯರಾಗಿ ಹೋದರು. ರಾಮನಾಮವನ್ನು ಜಪಿಸಲೇ ತೊಡಗಿದರೆಂದು ತಿಳಿಯಿರಿ. ಮುನ್ನೂರು-ಮುನ್ನೂರೈವತ್ತು ವರ್ಷಗಳ ಹಿಂದೆ ತುಲಸೀದಾಸರು ಹಾಗೂ ತುಕಾರಾಮರು ಮಗ್ನರಾಗಿದ್ದಂತೆ ಕಡೆಗೆ ಇದೇ ಹೆಸರನ್ನಿತ್ತಿಕೊಂಡು ಅವರು ಹೊರಟುಹೋದರು. ಆಗ ದಿಲ್ಲಿಯಲ್ಲಿ ಅವರ ಪ್ರವಚನಗಳು ಪತ್ರಿಕೆ

ಗಳಲ್ಲಿ ಬರುತ್ತಿದ್ದವು. ಕೊನೆಯ ದಿನದ ವ್ಯಾಖ್ಯಾನವನ್ನು ಪತ್ರಿಕೆಯುವರು ಕೇವಲ 'ಹೇ ರಾಮ್!' ಇಷ್ಟೇ ಮುದ್ರಿಸಿದ್ದರು. ಅವರ ಎಲ್ಲ ಪ್ರವಚನ ಗಳಿಗಿಂತಲೂ ಈ ಕೊನೆಯದು ಮಹಾನ್ ಪ್ರವಚನ. ರಾಮನಾಮದ ಈ ಆಕರ್ಷಣೆಯನ್ನು ಅವರು ಬೇರೆಯವರಿಗೂ ಉಂಟುಮಾಡಿದರು. ಬಾಳಿನಲ್ಲಿ ಇಳಿದು ಬರುವಂತೆ ಅದರ ಪ್ರಯತ್ನವನ್ನೂ ಮಾಡಿದರು. ಬಾಪೂವಿನ ದೊಂದು ವೈಶಿಷ್ಟ್ಯ. ವಿಶಿಷ್ಟ ಚಿಂತನದೊಂದಿಗೆ ಅವರು ತಮ್ಮ ಆಚರಣೆ ಯನ್ನೂ ಜೋಡಿಸುತ್ತಿದ್ದರು. ಇತರರಲ್ಲಿಯೂ ಅಂಥ ಗುಣವನ್ನೇ ನಿರೀಕ್ಷಿಸು ತ್ತಿದ್ದರು. ಗೀತೆಯದೂ ಇದೇ ಸೊಗಸು. ಸ್ವಲ್ಪ ದರ್ಶನ ತಿಳಿಸಿ ಕೂಡಲೇ ಆಚರಣೆಯನ್ನು ಸೂಚಿಸುತ್ತದೆ. ಸಾಂಖ್ಯಬುದ್ಧಿಯ ಜೊತೆಗೆ ಯೋಗ ಬುದ್ಧಿಯೂ ಬರುತ್ತದೆ. ಈ ಸೊಗಸು ಬಾಪೂ ಜೀವನದಲ್ಲೂ ಕಂಡುಬರುತ್ತದೆ. ಮಂತ್ರದ ಮನನ ಆಗುತ್ತದೆ. ಆದರೆ ಅದರ ಕಣ-ಕಣವೂ ಒಳಗೆ ಸೇರುವಂಥ ತಂತ್ರದ ಅಗತ್ಯವೂ ಬೀಳುತ್ತದೆ. ಇವೆರಡೂ ಸೇರಿ ಸಾಕ್ಷಾತ್ಕಾರವಾಗುತ್ತದೆ. ಈ ರೀತಿ ಬಾಪೂ ರಾಮನಾಮದ ಜೊತೆಗೆ ಅನುದಿನದ ವ್ಯವಹಾರವನ್ನು ಜೋಡಿಸಿದರು. ಅವರು ಪದೇ-ಪದೇ ಹೇಳುತ್ತಿದ್ದರು; 'ರಾಮನಾಮ ಸ್ಮರಿಸಿದರೆ ರೋಗಬರುವುದಿಲ್ಲ, ಬಂದರೂ ಕಳೆದುಹೋದೀತು.' ಅವರದು ಹೀಗೆ ಅಚಲವಾದ ಶ್ರದ್ಧೆಯಾಗಿತ್ತು. ಈ ಶ್ರದ್ಧೆಯನ್ನು ಅವರು ಇತರರಲ್ಲೂ ತುಂಬಬಲ್ಲವರಾಗಿದ್ದರು.

ಇಷ್ಟೊಂದು ಪ್ರತಿಭೆ ಎಲ್ಲಿಂದ ಬಂತು?

ವೃದ್ಧಾಪ್ಯದಲ್ಲಿ ಮನುಷ್ಯ ಸೋತುಹೋಗುತ್ತಾನೆಂದು ಜನ ಹೇಳು ತ್ತಾರೆ. ಆದರೆ ಹಾಗಿಲ್ಲ. ಬಾಪೂ ಜೀವನವನ್ನು ದೇಶ ನೋಡಿದೆ. ನವಾಖಾಲಿಗೆ ಹೋದಾಗ ಅವರ ವಯಸ್ಸು ಎಷ್ಟಿತ್ತು? ಆದರೂ ಅವರು ಆಗ ಒಂಟಿಯಾಗಿ ಹೋಗುವುದಾಗಿ ಹೇಳಿದರು. ತಮ್ಮ ಸಂಗಡಿಗರನ್ನೆಲ್ಲಾ ವಾಪಸ್ಸು ಕಳುಹಿಸಿದರು. ಆ ವಯಸ್ಸಿನಲ್ಲಿ ಈ ಮುದುಕ ಒಬ್ಬರೇ ನವಾಖಾಲಿಗೆ ಹೋದರು. ಈ ಉತ್ಸಾಹ ಎಲ್ಲಿಂದ ಬಂತು? ಈ ರೀತಿ ನಮಗೆ ಅವರ ಉಜ್ವಲ ಪ್ರತಿಭೆಯ ದರ್ಶನವಾಯಿತು. ಒಂದಾದಮೇಲೊಂದರಂತೆ ಹೊಸ ಕಲ್ಪನೆ ಗಳು ಅವರಿಗೆ ಹೊಳೆಯುತ್ತಾ ಬಂದವು. ಅದೂ ಒಂದಕ್ಕೊಂದು ತೇಜಸ್ವಿ.

ಕಡೆಯ ಗಳಿಗೆಯವರೆಗೆ ಆ ಪ್ರತಿಭೆ ಉಜ್ವಲವಾಗುತ್ತಲೇ ಹೋಯಿತು. ಕೊನೆಕೊನೆಗೆ ಅವರೊಂದು ಇಷ್ಟಪತ್ರ ಬರೆದರು: ಕಾಂಗ್ರೆಸ್ ಲೋಕಸೇವಕ ಸಂಘವಾಗಿ ಪರಿವರ್ತನೆ ಹೊಂದಬೇಕೆಂದು ಅದರಲ್ಲಿ ಬರೆದಿದ್ದರು. ಇದು ಬರಿಯ ಪತ್ರವಾಗಿರಲಿಲ್ಲ, ಅದರಲ್ಲಿ ಅವರ ಪ್ರತಿಭೆ ಕಂಡುಬರುತ್ತದೆ.

ಇಷ್ಟು ಉತ್ಸಾಹ, ಇಷ್ಟು ವೀರ್ಯ, ಪ್ರೇರಣೆ, ಇಷ್ಟು ಪುರುಷಾರ್ಥ, ಇಷ್ಟು ನವನವೋನ್ಮೇಷಶಾಲಿನಿಯಾದ ಪ್ರತಿಭೆ ಎಲ್ಲಿಂದ ಬಂತು? ಇವೆಲ್ಲಾ ಅವರ ಈಶ್ವರ ನಿಷ್ಠೆಯಿಂದ, ಅವರ ಬ್ರಹ್ಮಚರ್ಯದ ಸಾಧನೆಯಿಂದ, ಹಾಗೆ ಅವರು ಗೃಹಸ್ಥರಾಗಿಯೇ ಇದ್ದರು. ಆದರೂ ಹಿಂದಿನಿಂದ ಬ್ರಹ್ಮಚರ್ಯದ ವ್ರತವನ್ನು ತೊಟ್ಟಿದ್ದರು. ಜೀವನದ ಕೊನೆಯತನಕ ಅವರು ಇದರ ಅಭ್ಯಾಸ ಮಾಡಿದರು ಮತ್ತು ನಮ್ಮಂಥ ಬಾಲಕರಿಗೂ ಅಭ್ಯಾಸ ಮಾಡಿಸಿದರು. ಗೃಹಸ್ಥರಾಗಿದ್ದೂ ಗಾಂಧೀಜಿಯ ಪ್ರೇರಣೆಯಿಂದ ಬ್ರಹ್ಮಚರ್ಯದ ಪಾಲನೆ ಮಾಡುವ ನೂರಾರು ವ್ಯಕ್ತಿಗಳನ್ನು ನಾನು ನೋಡಿದ್ದೇನೆ. ಸಾಧಾರಣ ವಾಗಿ ಬ್ರಹ್ಮಚರ್ಯದ ಅಭ್ಯಾಸವನ್ನು ಬಾಲಬ್ರಹ್ಮಚಾರಿಗಳು, ಸನ್ಯಾಸಿಗಳು ಅಥವಾ ವಾನಪ್ರಸ್ಥರು ಮಾಡುತ್ತಾರೆ. ಆದರೆ ಗಾಂಧೀಜೀ ಗೃಹಸ್ಥಾಶ್ರಮ ಗಳು, ಬ್ರಹ್ಮಚರ್ಯಪಾಲನ ಮಾಡುವ ವಿಶೇಷ ಕೊಡುಗೆ ಇತ್ತರು.

ಇತರರಿಗೆ ಈ ಪ್ರೇರಣೆಯನ್ನು ನೀಡುವಂತಾಗಲು ಕಾರಣವೆಂದರೆ ಅವರು ಕೇವಲ ನುಡಿಯುವವರು ಆಗಿರಲಿಲ್ಲ, ನಡೆಯುವವರೂ ಆಗಿದ್ದರು. ಅವರು ಏನನ್ನು ಹೇಳುತ್ತಿದ್ದರೋ ಅದರಂತೆ ಸ್ವತಃ ನಡೆಯುತ್ತಿದ್ದರು, ಇತರರೂ ಜೀವನದಲ್ಲಿ ಜಾರಿಗೆ ತರುವಂತೆ ತಿಳಿಸುತ್ತಿದ್ದರು. ಸತ್ಯ, ಅಹಿಂಸೆ, ಬ್ರಹ್ಮಚರ್ಯ, ಇತ್ಯಾದಿಗಳ ಆಚರಣೆ ಸಮಾಜ ಸೇವೆ, ರಚನಾತ್ಮಕ ಕಾರ್ಯಕ್ರಮಗಳಿಗೆ ಅಗತ್ಯ ಎಂದು ಗಾಂಧೀಜೀ ಮೊಟ್ಟಮೊದಲೇ ಹೇಳಿದರು.

ಸೇವಾಚರ್ಯೆ—ಶಾಂತಿಚರ್ಯೆ—ಬ್ರಹ್ಮಚರ್ಯೆ

ಉರುಳೀ ಕಾಂಚನದ ಪ್ರಕೃತಿ ಚಿಕಿತ್ಸಾ ಕೇಂದ್ರದ ಮಾತು ಬಂದಾಗ ಗಾಂಧೀಜೀ ಒಬ್ಬೊಬ್ಬರನ್ನೂ ಕರೆದು ಪ್ರಕೃತಿ ಚಿಕಿತ್ಸೆಯ ಕೆಲಸ ಮಾಡ ಲಿಚ್ಛಿಸುವುದಾದರೆ ಆಜನ್ಮ ಬ್ರಹ್ಮಚರ್ಯೆ ಪಾಲಿಸಬೇಕು; ಆಗಲೇ ನಿಮ್ಮ ಕೈಯಿಂದ ಕೆಲಸ ನಡೆದೀತು ಎಂದು ಹೇಳಿದರು. ಇದೇ ರೀತಿ ಅವರು

ಮಣಿಭಾಯಿಯನ್ನು ಕರೆದು ನೀನು ಗೋ ಸೇವೆ ಮಾಡು, ಆದರೆ ಅದಕ್ಕೂ ಬ್ರಹ್ಮಚರ್ಯ ಪಾಲಿಸಬೇಕಾದೀತು ಎಂದು ಹೇಳಿದರು. ಇದುವರೆಗೂ ಗೋ ಸೇವೆಗೆ ಆದರ್ಶ ಬ್ರಹ್ಮಚಾರಿ ಬೇಕೆಂದು ಯಾರೂ ಹೇಳಿರಲಿಲ್ಲ, ಇದರ ಹೊರತಾಗಿ ಯಾವ ಗೋಸೇವೆ ಆಗಬಲ್ಲದು. ಇದರ ಅರ್ಥ ಸೇವಕ ಬ್ರಹ್ಮಚಾರಿಯಾಗಿದ್ದರೆ ಬೇರೆ ಜಂಜಡವಿಲ್ಲದಿದ್ದರೆ ಅವನು ಚೆನ್ನಾಗಿ ಸೇವೆ ಮಾಡಬಲ್ಲ ಎಂದು. ಆಗ ನಾನು ಮಣಿಭಾಯಿಗೆ ಹೇಳಿದೆ, ಇದರ ವೈಜ್ಞಾನಿಕ ಅರ್ಥವನ್ನು ನಾನು ನಿನಗೆ ತಿಳಿಸುವೆನೆಂದು. ಆಕಳನ್ನು ನಮ್ಮ ಪರಿವಾರ ದಲ್ಲಿ ಸೇರಿಸಿಕೊಂಡಿದ್ದೇವೆ. ಆದರೆ ಮನುಷ್ಯರ ಸಂಖ್ಯೆ ಮಿತಿಯಿಲ್ಲದಷ್ಟು ಹೆಚ್ಚಿಬಿಟ್ಟರೆ ಯಾರು ಬದುಕಬೇಕೆಂಬ ಬಗ್ಗೆ ಆಕಳಿಗೂ ಮನುಷ್ಯನಿಗೂ ಸ್ಪರ್ಧೆ ಹುಟ್ಟುತ್ತದೆ. ಅಂಥ ಪರಿಸ್ಥಿತಿಯಲ್ಲಿ ಮನುಷ್ಯ ಆಕಳನ್ನು ಕಳೆದು ಕೊಂಡುಬಿಡುತ್ತಾನೆ. ಈ ಗೋಭಕ್ಷಣೆಯಿಂದ ಪಾರಾಗಿ ಗೋ ರಕ್ಷಣೆ ಮಾಡಬೇಕಾಗಿದ್ದರೆ ಮನುಷ್ಯ ಬುದ್ಧಿಪೂರ್ವಕವಾಗಿ ಸಂಯಮಪೂರ್ವಕವಾಗಿ ತನ್ನ ಸಂಖ್ಯೆಯನ್ನು ಮಿತಿಯಲ್ಲಿಟ್ಟುಕೊಳ್ಳಬೇಕಾದೀತು. ಅದಕ್ಕಾಗಿಯೇ ಬ್ರಹ್ಮಚರ್ಯ. ಈ ರೀತಿ ನಾನು ಆಗ ಮಣಿಭಾಯಿಗೆ ತಿಳಿಸಿ ಹೇಳಿದೆ.

ಬ್ರಹ್ಮಚರ್ಯ ಕೇವಲ ನಿಷೇಧಾತ್ಮಕ ವಸ್ತುವಲ್ಲ. ವಿಷಯವಾಸನೆ ಯಿಂದ ದೂರವಿರುವುದು ಎಂದಷ್ಟೇ ಅದರ ಅರ್ಥವಲ್ಲ. ತದ್ವಿರುದ್ಧವಾಗಿ ಅದು ಭಾವಾತ್ಮಕ ವಿಷಯ. ಅದರಲ್ಲಿ ಬ್ರಹ್ಮನಲ್ಲಿ ಲೀನವಾಗಿ ಹೋಗುವ ಮಾತಿದೆ. ಬ್ರಹ್ಮಚರ್ಯೆಯ ಪರಮಧ್ಯೇಯ ಇದು. ಈ ವಿಶಾಲಧ್ಯೇಯ ವನ್ನು ಗಮನದಲ್ಲಿಟ್ಟು, ಅದರ ಆಚರಣೆಗೆ ಮಾತು, ಕೃತಿ ಮತ್ತು ಮನಸ್ಸಿನ ಮೇಲೆ ಸಂಯಮವಿಟ್ಟು ನಡೆಯಬೇಕು. ಇದರಿಂದ ದೊರೆಯುವ ಚಿತ್ತಶಕ್ತಿ ಯನ್ನು ಈ ಧ್ಯೇಯಕ್ಕಾಗಿ ಉಪಯೋಗಿಸಬೇಕು. ಇದರ ಹೆಸರು ಬ್ರಹ್ಮಚರ್ಯ. ಬ್ರಹ್ಮನನ್ನು ಪಡೆಯಲು ನಡೆಸಬೇಕಾದ ಚರ್ಯೆಯೇ ಬ್ರಹ್ಮಚರ್ಯ.

ಈ ರೀತಿ ನೋಡಿದರೆ ಭೀಷ್ಮನ ಬ್ರಹ್ಮಚರ್ಯವೂ ಬ್ರಹ್ಮಚರ್ಯ ಆಗಿರಲಿಲ್ಲ. ಅದು ಪಿತೃಚರ್ಯೆ ಆಗಿತ್ತು. ತಂದೆಗೋಸ್ಕರವಾಗಿ ಪಾಲಿಸಿದ ಬ್ರಹ್ಮಚರ್ಯ ವಾಗಿತ್ತು. ಇದೇ ರೀತಿ ಪ್ರಾರಂಭದಲ್ಲಿ ಬಾಪೂವಿನದೂ ಬ್ರಹ್ಮಚರ್ಯ ಆಗಿರಲಿಲ್ಲ, ಶಾಂತಿಚರ್ಯೆ ಆಗಿತ್ತು. 1907ರಲ್ಲಿ ಜುಲೂ ಯುದ್ಧದ

ಸಮಯದಲ್ಲಿ ದಕ್ಷಿಣ ಆಫ್ರಿಕಾದಲ್ಲಿ ತುಂಬಾ ಕೆಲಸ ಮಾಡುತ್ತಿದ್ದಾಗ ಇದೆಲ್ಲ ಕೆಲಸ ಮಾಡಬೇಕು, ಮತ್ತೊಂದು ಕಡೆ ಕುಟುಂಬ ಹೆಚ್ಚಿಸುತ್ತ ಹೋಗುವುದು ಸರಿಯಲ್ಲ. ಅದರಿಂದ ಅವರಿಗೆ ಸಂಯಮದ ಪ್ರೇರಣೆ ಉಂಟಾಯಿತು ; ಆದಕಾರಣ ಆರಂಭದಲ್ಲಿ ಅದು ಶಾಂತಿಚರ್ಯೆ ಆಗಿತ್ತು. ಮತ್ತೆ ಕ್ರಮವಾಗಿ ಅದರ ಪರಿಣತಿ ಬ್ರಹ್ಮಚರ್ಯದಲ್ಲಿ ಆಯಿತು ಎಂದು ನಾನು ತಿಳಿಯುತ್ತೇನೆ. ಅವರು ಮೂವತ್ತು-ಮೂವತ್ತೆರಡನೆಯ ವರ್ಷದಲ್ಲಿ ಬ್ರಹ್ಮಚರ್ಯ ವ್ರತದ ಆರಂಭ ಮಾಡಿದರು. ಕಡೆತನಕ ಅದನ್ನು ಪಾಲಿಸಿದರು. ಅವರ ಈಶ್ವರ ನಿಷ್ಠೆ ಹೆಚ್ಚುತ್ತಾ ಹೋದಂತೆಲ್ಲಾ ಅದರ ಯಥಾ ಸ್ವರೂಪ ಬ್ರಹ್ಮನ ಚರ್ಯೆಯಾಯಿತು.

ಆಧ್ಯಾತ್ಮಿಕ ಪ್ರಶ್ನೆಗಳನ್ನು ಮೊದಲು ಪರಿಹರಿಸಬೇಕು

ಬಾಪೂ ಮತ್ತಿತರ ಜೀವನವನ್ನು ನೋಡಿದರೆ ಅವರೊಂದಿಗೆ ಎಷ್ಟು ಆಧ್ಯಾತ್ಮಿಕ ಪ್ರಶ್ನೆಗಳು ಇದ್ದವು ಎಂಬುದು ತಿಳಿಯುತ್ತದೆ. ಈ ಪ್ರಶ್ನೆಗಳು ಪರಿಹಾರವಾಗದೆ ಅವರು ಮುಂದುವರಿಯುತ್ತಿರಲಿಲ್ಲ. ಯೇಸು ಬದುಕಿದ್ದು 33 ವರ್ಷ. ಮೂರೇ ವರ್ಷ ಅವರು ಸಂಚರಿಸಿದ್ದು ಎಂದು ತಿಳಿದುಬರುತ್ತದೆ. ಮೊದಲಿನ ಮೂವತ್ತು ವರ್ಷಗಳಲ್ಲಿ ಯೇಸು ಏನು ಮಾಡಿದರೆಂಬುದು ಯಾರಿಗೂ ಗೊತ್ತಿಲ್ಲ. ಮೊದಲು ಅವರು ಬೆಳಗ್ಗಿಯೇ ಕೆಲಸ ಮಾಡಿದರು ಎಂದು ಹೇಳುತ್ತಾರೆ. ಆದರೆ ಈ ಮಧ್ಯೆ ಒಂದಂತೂ ಉಪವಾಸ ಮಾಡಿದ್ದರು. ಸೈತಾನನೊಡನೆ ಅವರ ಸೆಣಸಾಟ ನಡೆದಿತ್ತು. ಇಷ್ಟರ ಹೊರತಾಗಿ ಮತ್ತೇನೂ ಗೊತ್ತಿಲ್ಲ. ಅವರು ಟಿಬೆಟ್‌ವರೆಗೆ ಬಂದಿದ್ದರು ಎಂದು ಹೇಳುತ್ತಾರೆ.

ಮೂಲಭೂತವಾದ ಆಧ್ಯಾತ್ಮಿಕ ಪ್ರಶ್ನೆಗಳನ್ನು ಪರಿಹರಿಸಿದ ನಂತರವೇ ಅವರು ಸಂಚಾರಕ್ಕೆ ಹೊರಟರೆಂದು ನಾವು ಹೇಳಬಯಸುತ್ತೇವೆ. ನಿನ್ನ ನೆರೆಯವನನ್ನೂ ನಿನ್ನಂತೆಯೇ ಪ್ರೀತಿಸು—ಆಂತರಿಕ ಅನುಭವವಿಲ್ಲದೆ ಈ ಮಾತನ್ನು ಹೇಳಲು ಸಾಧ್ಯವಿಲ್ಲ. ಶತ್ರುವನ್ನೂ ಪ್ರೀತಿಸುವ ಪ್ರಬಲ ಮಾತನ್ನು ಅವರು ಆಡಿದರು. ಅದನ್ನೂ ಸಹ ಆಂತರಿಕ ಅನುಭವವಿಲ್ಲದೆ ಹೇಳಲು ಸಾಧ್ಯವಿಲ್ಲ.

ಇದೇ ರೀತಿ ಬುದ್ಧನು 'ಯಜ್ಞದಲ್ಲಿ ಹಿಂಸೆಯಾಗಬಾರದು' ಎಂಬ

ಪ್ರಶ್ನೆಯನ್ನು ಎತ್ತಿ ಸಂಚರಿಸಿದರು. ಇದೂ ತಿಳಿದುಬರುತ್ತದೆ. ಆದರೆ ಅವರು ತಪಸ್ಸು ಮಾಡಿದರೂ ಆಗ ಏನೇನು ಮಾಡಿದರು ಎಂಬುದು ತಿಳಿದು ಬಂದಿಲ್ಲ. ಅವರು ಎಷ್ಟು ಮಂಡಲಗಳಲ್ಲಿ ಹೋದರು? ಧ್ಯಾನದ ಎಷ್ಟು ಪ್ರಕಾರಗಳನ್ನು ಅನುಷ್ಠಾನಕ್ಕೆ ತಂದರು? ಇದು ನಮಗೆ ಗೊತ್ತಾಗಿಲ್ಲ. ಇವೆಲ್ಲದರ ಪರಿಣಾಮವಾಗಿಯೇ ಅವರಿಗೆ ಚಿತ್ತಶಾಂತಿ ದೊರೆಯಿತು. ಅವರ ನಿಶ್ಚಯ ಪಕ್ವವಾಯಿತು. ಜಗತ್ತಿನಲ್ಲಿ ಮೈತ್ರಿ ಮತ್ತು ಕರುಣೆ ಇವೆರಡೂ ಮಹತ್ವದ ಸಂಗತಿಗಳು ಎಂದು ಸಿದ್ಧವಾದವು. ಇವೆಲ್ಲ ಹೇಗಾದವು ಎಂದು ನಮಗೆ ತಿಳಿದುಬಂದಿಲ್ಲ.

ಇದೇ ರೀತಿ ಬಾಪೂವಿನ ಆತ್ಮಕಥೆ ಓದಿದರೆ ಕೆಲವು ಇಣಕು ನೋಟ ಸಿಗುತ್ತದೆ. ಶ್ರೀಮದ್ರಾಮಚಂದ್ರಜೀ ಅವರೊಡನೆ ಅವರು ನಡೆಸಿದ ಚರ್ಚೆ ನಮಗೆ ಗೊತ್ತು. ಇಷ್ಟೇ ಅಲ್ಲದೆ ಅವರ ಮನಸ್ಸಿನಲ್ಲಿ ಎಷ್ಟೋ ಆಧ್ಯಾತ್ಮಿಕ ಶಂಕೆಗಳಿದ್ದವು. ಆ ಶಂಕೆಗಳು ನಿವಾರಣೆಯಾಗುವವರೆಗೆ, ಮೂಢ ಅನುಭವ ವಾಗುವವರೆಗೆ ಅವರು ಕಾರ್ಯಮಗ್ನರಾಗಲಿಲ್ಲ.

ಈಶ್ವರ-ಸಂಬಂಧೀ ಅನುಭವ

ಸತ್ಯವೇ ದೇವರು ಎಂದು ಬಾಪೂ ಹೇಳುತ್ತಿದ್ದರು. ಇಷ್ಟರಿಂದಲೇ ಇದು ವೈಜ್ಞಾನಿಕ ಮಾತು ಎಂದು ಜನ ತಿಳಿದರು. ಆದರೆ ನಾವೆಲ್ಲರೂ ತಿಳಿದಿರು ವಂತೆ ಇದು ವೈಜ್ಞಾನಿಕ ಮಾತು ಮಾತ್ರವಲ್ಲ. ಖಾನ್ ಅಬ್ದುಲ್ ಗಫಾರ್ ಖಾನರ ಬೆಂಬಲಕ್ಕೆ ಹೋಗುವ ಮಾತು ನಡೆದಿತ್ತು. ಆಗ ವಾಪಸ್ಸು ಬರಲಾರೆವೇನೋ ಎನ್ನಿಸಿತ್ತು ಅವರಿಗೆ. ಆಗ ನನ್ನನ್ನು ಚರ್ಚೆಗೆ ಕರೆದರು. ಹದಿನೈದು ದಿನಗಳವರೆಗೆ ನಮ್ಮ ಮಾತು ನಡೆಯಿತು. ಎರಡು-ಮೂರು ದಿನವಂತೂ ಅವರು ಪ್ರಶ್ನೆ ಕೇಳುತ್ತಲೇ ಇದ್ದರು, ನಾನು ಉತ್ತರಿಸುತ್ತಲೇ ಹೋದೆ. ಮತ್ತೆ ಒಂದು ದಿನ ನಾನು ಈಶ್ವರ ವಿಷಯವಾದ ಅನುಭವ ಕುರಿತು ಕೆಣಕಿದೆ.

ನಾನೆಂದೆ: "ನೀವು ಸತ್ಯವೇ ದೇವರು ಎನ್ನುತ್ತೀರಿ ಸರಿ, ಆದರೆ ಉಪವಾಸದ ಸಮಯದಲ್ಲಿ ನಿಮ್ಮ ಅಂತರ್ವಾಣಿ ಕೇಳಿಸಿತು ಎನ್ನುವಿರಲ್ಲ, ಇದೇನು? ಇದರಲ್ಲೇನಾದರೂ ರಹಸ್ಯವಿದೆಯೇ?"

ಅವರು ಉತ್ತರವಿತ್ತರು: "ಹೌದು, ಹಾಗಂತೂ ಸ್ವಲ್ಪ ಇದ್ದೇ ಇದೆ. ಇದು ತೀರಾ ಸಾಧಾರಣ ಮಾತಲ್ಲ. ನನಗೆ ವಾಣಿ ಸ್ಪಷ್ಟವಾಗಿ ಕೇಳಿಸಿತು, ನಾನೇನು ಮಾಡಬೇಕು? ಎಂದು ಕೇಳಿದೆ. ಅದು ಉತ್ತರ ಹೇಳಿತು—ಉಪವಾಸ ಮಾಡಬೇಕು. ನಾ ಮತ್ತೆ ಕೇಳಿದೆ—ಎಷ್ಟು ಉಪವಾಸ ಮಾಡಬೇಕು? ಅದು ಹೇಳಿತು: "ಇಪ್ಪತ್ತೊಂದು ದಿನ."

ಇದರಲ್ಲಿ ಒಬ್ಬಾತ ಕೇಳುವವನು, ಮತ್ತೊಬ್ಬಾತ ಉತ್ತರಿಸುವವನು. ಪೂರಾ ಕೃಷ್ಣ ಅರ್ಜುನ ಸಂವಾದದಂತೆ. ಬಾಪುವಾದರೋ ಸತ್ಯವಾದಿ. ಆದುದರಿಂದ ಇದೇನು ಭ್ರಮೆಯಾಗುವುದು ಸಾಧ್ಯವಿಲ್ಲ. ಸಾಕ್ಷಾತ್ ಈಶ್ವರನೇ ನನ್ನೊಡನೆ ಮಾತನಾಡಿದ ಎಂದು ಅವರು ಹೇಳಿದರು. ಮತ್ತೆ ನಾನು ಕೇಳಿದೆ: "ಈಶ್ವರನಿಗೇನಾದರೂ ರೂಪ ಇರುವುದು ಸಾಧ್ಯವೇ?"

ಕೇಳಬಹುದಾದರೆ ನೋಡಲೂ ಬಹುದು

ಅವರು ಹೇಳಿದರು: "ರೂಪವಂತೂ ಸಾಧ್ಯವಿಲ್ಲ, ನನಗೆ ವಾಣಿ ಕೇಳಿಸಿತು."

ನಾನು ಹೇಳಿದೆ: "ರೂಪ ಅನಿತ್ಯವಾದರೆ ವಾಣಿಯೂ ಅನಿತ್ಯ. ಆದರೂ ವಾಣಿ ಕೇಳಿಸುತ್ತದೆ, ಹಾಗಾದರೆ ರೂಪವೇಕೆ ಕಾಣಿಸುವುದಿಲ್ಲ?"

ಆಮೇಲೆ ಜಗತ್ತಿನಲ್ಲಿ ಬೇರೆಯವರಿಗೆ ಆಗಿರುವ ಇಂಥ ಗೂಢ ಅನುಭವಗಳ ಮಾತನ್ನು ಹೇಳಿದೆ. ನನ್ನದೇ ಕೆಲವು ಅನುಭವ ಹೇಳಿದೆ. ಈಶ್ವರ-ದರ್ಶನ ಏಕೆ ಆಗುವುದಿಲ್ಲ, ಈ ವಿಷಯದಲ್ಲೂ ಮಾತು ನಡೆಯಿತು. ಮತ್ತೆ ನಾನು ಹೇಳಿದೆ: "ನಿಮ್ಮ ಮನಸ್ಸಿನಲ್ಲಿ ಪ್ರಶ್ನೆ-ಉತ್ತರ ಆದುವು. ಅದರ ಸಂಬಂಧ ಈಶ್ವರನೊಡನೆ ತಾನೆ?"

ಅವರು ಹೇಳಿದರು: "ಹೌದು, ಅವರೊಡನೆಯೇ ಸಂಬಂಧ; ಆದರೆ ವಾಣಿ ಕೇಳಿಸಿತು, ದರ್ಶನವಾಗಲಿಲ್ಲ. ರೂಪ ಕಾಣಿಸಲಿಲ್ಲ, ದನಿ ಕೇಳಿದೆ. ಅದಕ್ಕೆ ರೂಪವಿರುತ್ತದೆ ಎಂಬ ಅನುಭವ ನನಗಾಗಲಿಲ್ಲ. ಸಾಕ್ಷಾತ್ ದರ್ಶನವಾಗಲಿಲ್ಲ, ಆದರೆ ಖಂಡಿತ ಆಗಬಹುದು. ಈ ರೀತಿ ಅಂತ್ಯದಲ್ಲಿ ಬಾಪೂ ಈಶ್ವರನ ಮಾತು ಕೇಳಿಸಬಹುದಾದರೆ ಆತನ ದರ್ಶನವೂ ಸಾಧ್ಯ ಎಂಬುದನ್ನು

ಒಪ್ಪಿದರು. ಕೆಲವರಿಗೆ ಶ್ರವಣದ ಅನುಭವವಾಗುತ್ತದೆ, ಕೆಲವರಿಗೆ ದರ್ಶನ. ಈಶ್ವರನ ದರ್ಶನವಾದೀತು, ಆತನ ಸಾಕ್ಷಾತ್ಕಾರವಾಗುತ್ತದೆ, ಆತನ ಸ್ಪರ್ಶವೂ ಆಗಬಹುದು ಎಂದು ನಾನು ಹೇಳಬೇಕಾಗುತ್ತದೆ. ಇದರ ಹೊರತಾಗಿ ಯಾವುದೇ ರೀತಿಯ ವಿಕಾರಗಳ ನಾಶವಾಗುವುದಿಲ್ಲ. ಇಂಥ ಯಾವುದೇ ಅನುಭವವನ್ನು ಭ್ರಮೆ ಅಥವಾ ಹುಸಿ ಎಂದು ಹೇಳಲಾರೆವು. ಪರಮೇಶ್ವರ ಯಾವ ಭೂಮಿಕೆಯಲ್ಲಿ ಅಶಬ್ದನೋ ಅದೇ ಭೂಮಿಕೆಯಲ್ಲಿ ಅರೂಪನೂ ಹೌದು, ಮತ್ತು ಯಾವ ಭೂಮಿಕೆಯಲ್ಲಿ ಸಶಬ್ದನೋ ಆ ಭೂಮಿಕೆಯಲ್ಲಿ ಸಸ್ವರೂಪನೂ ಹೌದು.

ಬಾಪೂವಿನ ನಿಜವಾದ ಪರಿಚಯ

ಇರಲಿ, ನಾವು ಮೇಲೆ ಮೇಲೆ ಕೆಲಸಮಾಡುತ್ತೇವೆ, ಜೀವನದ ಆಳಕ್ಕೆ ಇಳಿಯುವುದಿಲ್ಲ, ಎಂಬುದರ ಕಡೆಗೆ ನಿಮ್ಮ ದೃಷ್ಟಿ ಹೋಗಲೆಂದು ಈ ಮಾತುಗಳನ್ನೆಲ್ಲ ನಿಮ್ಮ ಮುಂದೆ ಇಡುತ್ತಿದ್ದೇನೆ. ಬಾಪೂವನ್ನು ನಾವು ಮೇಲೆ ಮೇಲೆಯೇ ತಿಳಿದುಕೊಂಡೆವು. ಅವರ ಬಾಹ್ಯ ಪ್ರವೃತ್ತಿಗಳಿಗೇ ಮಹತ್ವ ಕೊಟ್ಟೆವು. ರಾಜಕೀಯವೇ ಮುಂತಾದುದರಲ್ಲಿ ಅಥವಾ ರಚನಾತ್ಮಕ ಕೆಲಸಗಳಲ್ಲಿ ಇಡೀ ಸಮಯ ಮುಳುಗಿರುವುದನ್ನು ನೋಡಿದೆವು. ಇದು ಬಾಪೂವಿನ ನಿಜವಾದ ಪರಿಚಯವಲ್ಲ. ಅವರ ವ್ಯಕ್ತಿತ್ವದ ಮೂಲಭೂತ ಸ್ವರೂಪ ಆಧ್ಯಾತ್ಮಿಕ. ಬಾಪೂ ನಮ್ಮೆದುರು ಕೇವಲ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಮಾತ್ರ ಬರುವ, ಇತರ ಯಾವ ಕ್ಷೇತ್ರದಲ್ಲಿಯೂ ಬಾರದಿರುವ ಎಷ್ಟೋ ಸಂಗತಿಗಳನ್ನು ಇಟ್ಟರು. ಆದುದರಿಂದ ಬಾಪೂವನ್ನು ತಿಳಿದುಕೊಳ್ಳಲು ಅವರ ವ್ಯಕ್ತಿತ್ವದ ಈ ಆಧ್ಯಾತ್ಮಿಕ ಭೂಮಿಕೆಯನ್ನು ಗುರುತಿಸಿಕೊಳ್ಳಬೇಕಾದೀತು. ಅವರು ನಮ್ಮೆಲ್ಲರಲ್ಲಿಯೂ ಉಂಟುಮಾಡಬಯಸಿದ ಸಂಲಗ್ನತೆ ಅಧ್ಯಾತ್ಮದ್ದು. ಅವರ ಸೀದಾ-ಸರಳ ಸಾಮಾನ್ಯ ಜನರ ಭಾಷೆಯಲ್ಲಿ ಹೇಳುವುದಾದರೆ ಅದು ರಾಮನಾಮದ ಸೆಳೆತ.

೧೭

ಕೆಲ ಸ್ಪಷ್ಟನೆ

ಅಲ್ಪಾತ್ಮನನ್ನು ಅಳೆಯುವ ಸತ್ಯದ ಗಜವೂ ಸಣ್ಣದಾಗಿಲ್ಲದಿರಲಿ ಎಂದು ಗಾಂಧೀಜೀ ಹೇಳಿದರು. ಇದರ ಅರ್ಥವೇನು?

ಗಾಂಧೀಜೀ ಅಥವಾ ಇತರ ಯಾವುದೇ ಮಹಾನ್‌ವ್ಯಕ್ತಿಯ ಚರಿತ್ರದಿಂದ ಅವರ ಜೀವನವೇ ಸತ್ಯದ ಪೂರಾ ಅಳತೆಗೋಲು ಎಂದು ತಿಳಿಯಬಾರದು. ಇದೇ ಈ ಮಾತಿನ ಸಾರಾಂಶ. ಯಾವನೇ ಮಹಾತ್ಮನ ಜೀವನದಲ್ಲೂ ಸತ್ಯದ ಪೂರ್ಣ ಪ್ರಕಾಶದ ಬದಲು ಆಂಶಿಕ ಪ್ರಕಾಶದ ಆವಿರ್ಭಾವ ಆಗಿರಬಹುದು. ಇದೂ ಸಾಧ್ಯ. ಆದುದರಿಂದ ವ್ಯಕ್ತಿಯ ಜೀವನದಲ್ಲಿ ಆದ ದರ್ಶನವನ್ನು ಅಂಶದರ್ಶನವೆಂದು ತಿಳಿಯಬೇಕು ಎಂಬುದಾಗಿ ಬಾಪೂ ಹೇಳಿದರು. ಇಲ್ಲವಾದರೆ ಅಲ್ಪವನ್ನು ಪೂರ್ಣವೆಂದು ತಿಳಿದು ಕುಳಿತರೂ ದೊಡ್ಡ ವಸ್ತು ನಮ್ಮಿಂದ ದೂರವೇ ಉಳಿದುಹೋದೀತು. ಮಹಾತ್ಮಾಜೀ ಹೇಳಿದ್ದಾರೆ, ಆದುದರಿಂದ ಇದು ಪ್ರಮಾಣ ಎಂದು ತಿಳಿದು ನಡೆಯಬೇಡ. ನೀನು ಸ್ವತಃ ವಿಚಾರಮಾಡು, ವಿಚಾರಮಾಡಿ ನಿರ್ಣಯಿಸು.

*   *   *

ಆತ್ಮನ, ಈಶ್ವರನ ಗೆಳೆತನ ಬಯಸುವವನು ಏಕಾಕಿ ಆಗಿರಬೇಕು ಅಥವಾ ಸಮಸ್ತ ಜಗತ್ತಿನೊಡನೆ ಗೆಳೆತನ ಇಟ್ಟುಕೊಂಡಿರಬೇಕು ಎಂದು ಗಾಂಧೀಜೀ ಹೇಳಿದ್ದಾರೆ. ಮತ್ತೊಂದು ಕಡೆ ಸಾಧನಾಪಕ್ಷದಲ್ಲಿ ಏಕಮಾತ್ರ ಸತ್ಸಂಗ ಅಥವಾ ಸದ್ಗ್ರಂಥವೂ ಸಹಾಯಕವಾಗುತ್ತದೆ ಎಂದು ಹೇಳಲಾಗುತ್ತದೆ. ಇದರಲ್ಲಿ ನಿಜ ಯಾವುದು?

"ಇಲ್ಲವೇ ಏಕಾಕಿಯಾಗಿರಬೇಕು, ಇಲ್ಲವೇ ಸಮಸ್ತ ಜಗತ್ತಿನೊಡನೆ ಮೈತ್ರಿಯಿಟ್ಟುಕೊಳ್ಳಬೇಕು"—ಬಾಪೂವಿನ ಈ ವಾಕ್ಯಕ್ಕೆ ನಮಗೆ ಯಾರೂ

ಆತ್ಮೀಯ ಮಿತ್ರರೇ ಇರುವುದಿಲ್ಲ ಎಂಬ ಅರ್ಥವಲ್ಲ. ಯಾರಾದರೊಬ್ಬ ವಿಶಿಷ್ಟ ವ್ಯಕ್ತಿಯೊಡನೆ ಆಸಕ್ತಿಯುಕ್ತ ಮೈತ್ರಿ ವಿಶ್ವಮೈತ್ರಿಗೆ ಬಾಧಕವಾದೀತು. ವಿಶ್ವದೊಡನೆ ಮೈತ್ರಿ ಅರ್ಥ ನಿರ್ವೈರ. ಆದರೆ ಸಹಯೋಗೀ ಮನುಷ್ಯರ ಜೊತೆ ಆಧ್ಯಾತ್ಮಿಕ ಆಂತರಿಕ ಮಂಡಲ ರಚಿಸಲೇಬೇಕು. ಹಾಗಾಗದಿದ್ದರೆ ಅಷ್ಟು ನಮ್ಮ ಕೊರತೆ. ಅನ್ಯೋನ್ಯ ಅನುರಾಗದಿಂದ ನಾವು ಒಂದುಗೂಡಿದ್ದರೆ ಅದೂ ನಮ್ಮ ಶಕ್ತಿಯೇ ಆಗಬಲ್ಲುದು.

ಪವನಾರದಲ್ಲಿ ಸೋದರಿಯರ ಬ್ರಹ್ಮವಿದ್ಯಾ ಮಂದಿರವಿದೆ. ಅಲ್ಲಿಯ ಒಬ್ಬ ಸೋದರಿ ಸರ್ವೋದಯ ಕೆಲಸಕ್ಕಾಗಿ ತನ್ನ ಪ್ರಾಂತಕ್ಕೆ ವಾಪಸ್ಸು ಹೋದಳು. ಆಗ ಬ್ರಹ್ಮವಿದ್ಯಾ ಮಂದಿರದ ಮತ್ತೊಬ್ಬ ಸಹೋದರಿ ನನಗೆ ಬರೆದಳು: "ನಾನು ಆ ಸಹೋದರಿಯ ವಿರಹವನ್ನು ಅನುಭವಿಸುತ್ತಿದ್ದೇನೆ. ಇದು ಎಷ್ಟು ಉಚಿತವೋ, ಅಥವಾ ಬ್ರಹ್ಮವಿದ್ಯೆಗೆ ಎಷ್ಟು ಸಮಂಜಸವೋ ನಾನರಿಯೆ" ಎಂದು. ನಾನು ಉತ್ತರ ಬರೆದೆ: ಇದೇ ಬ್ರಹ್ಮವಿದ್ಯೆ. **ಹೇರೀ ಅಹ್‌ರಹ್ ತೊಮಾರಿ ವಿರಹ್ ಭುವನೇ-ಭುವನೇ ರಾಜೇ ಹೇ—** ಹೇ ಭಗವಂತ, ಈ ಸೃಷ್ಟಿಯಲ್ಲಿ ನೀನು ಎಲ್ಲಿ ವಿರಾಜಮಾನ? ನಿನ್ನ ವಿಯೋಗವೇ ವಿಶ್ವರೂಪಧಾರಣಮಾಡಿ ಎದುರಿಗೆ ಪ್ರಕಟವಾಗಿದೆ. ವಿಶ್ವವನ್ನಲ್ಲ, ನಿನ್ನ ವಿರಹವನ್ನೇ ನಾವು ಹಗಲೂ ರಾತ್ರಿ ನೋಡುತ್ತಿದ್ದೇವೆ, ಭಗವಂತ ಸೃಷ್ಟಿಯಲ್ಲಿ ಅಡಗಿದ್ದಾನೆ, ಇರುವನೋ ಇಲ್ಲವೋ ಎನ್ನುವಷ್ಟು ಕುಶಲತೆಯಿಂದ ಅಡಗಿಕೊಂಡಿದ್ದಾನೆ. ಇಷ್ಟು ದೂರ ಹೇಳುವವರೂ ತಿಳಿಯುವವರೂ ಹೊರಡುತ್ತಾರೆ. ಇದು ಭಗವಂತನ ವಿರಹದ ಮಹಿಮೆ. ಆದುದರಿಂದಲೇ ನಾನು ಆ ಸಹೋದರಿಗೆ ಬರೆದೆ, ನೀನು ವಿರಹ ಅನುಭವ ಮಾಡುತ್ತಿರುವುದೇ ಸಾಕ್ಷಾತ್ ಬ್ರಹ್ಮವಿದ್ಯೆ. ಈ ವಿರಹ ಯಾವ ಸ್ಥೂಲ ಸಂಬಂಧವೂ ಇಲ್ಲದ ಸಹೋದರಿಯದು. ಆಕೆಯ ವಿರಹವನ್ನು ನೀನು ಅನುಭವಿಸುತ್ತಿದ್ದೀಯೇ. ಇದಕ್ಕೇ ನಾವು 'ಭಕ್ತಿ' ಎನ್ನುತ್ತೇವೆ. ಆದುದರಿಂದ ನಾವು ಎಲ್ಲರೂ ಅನ್ಯೋನ್ಯ ಅನುರಾಗದಿಂದ ಬಂಧಿತರಾಗಿ ಅಕಾರಣವಾಗಿ ವಿರಹವನ್ನು ಅನುಭವಿಸುತ್ತಿರುತ್ತೇವೆ.

ಇಂಥ ಏಕತೆಯಲ್ಲಿ ಬ್ರಹ್ಮವಿದ್ಯೆ ಅಡಗಿರುತ್ತದೆ. ಎಲ್ಲರೊಡನೆಯೂ ಆಧ್ಯಾತ್ಮಿಕ ಸ್ನೇಹವನ್ನು ಸಾಧಿಸಬಹುದು. ಆದರೆ ವ್ಯಕ್ತಿಗತ ಪರಿಚಯ-

ಹಾಗೂ ಆ ಮೂಲಕ ಸ್ನೇಹದ ಅನುಬಂಧ ಹಾಗೂ ಆ ವಿಷಯಕ ಕರ್ತವ್ಯ ಭಾವನೆ ಮರ್ಯಾದಿತವೇ ಆಗಿ ಉಳಿಯಬಲ್ಲದು.

* * *

ಗಾಂಧೀಜಿಯ ಒಂದು ಪ್ರಸಿದ್ಧ ವಾಕ್ಯ ಬಾರಿಬಾರಿಗೂ ನೆನಪು ಬರುತ್ತದೆ: Organisation is the test of non-violence — 'ಸಂಘಟನೆಯೇ ಅಹಿಂಸೆಯ ಒರೆಗಲ್ಲು' — ಇದರ ಅರ್ಥವನ್ನು ಸ್ಪಷ್ಟವಾಗಿ ತಿಳಿಸಿಕೊಡಿ.

ಸಂಘಟನೆಯಲ್ಲಿ ಹಿಂಸೆಯವರು ಕುಶಲತೆ ತೋರಿಸುತ್ತಾರೆ. ಪಕ್ಕಾ, ಬಲಶಾಲಿ ಸಂಘಟನೆ ಮಾಡಬಲ್ಲರು. ಅದರಲ್ಲಿ ಶಾಸನ, ನಿಯಮ-ಬಂಧನ, ಆದೇಶ ಹಾಗೂ ಅಪ್ಪಣೆ ಇರುತ್ತವೆ. ಅವರ ಸಂಘಟನೆ ಯೋಜನಾಪೂರ್ವಕ ವಾಗಿ ಆಗುತ್ತದೆ. ಹಾಗೆ ಹಿಂಸೆಯಲ್ಲಿ ರಕ್ಷಣಾಶಕ್ತಿಯೇ ಇಲ್ಲ. ಹಿಂಸೆ ಎಂದರೆ ಹೊಡೆಯುವುದು, ಕತ್ತರಿಸುವುದು ; ಹೊಡೆತ-ಕತ್ತರಿಸುವಿಕೆಯಲ್ಲಿ ರಕ್ಷಣೆ ಲೇಶಮಾತ್ರವೂ ಇಲ್ಲ. ಸಂಘಟನೆಯ ಕಾರಣದಿಂದ ಈ ಶಕ್ತಿ ಅದರಲ್ಲಿ ಬರುತ್ತದೆ.

ಹಿಂಸೆಯಲ್ಲಿ ಸಂಘಟನಾಶಕ್ತಿ ಎಷ್ಟೊಂದು ಹೆಚ್ಚಾಗಿದೆ? ಇಂಥ ಸ್ಥಳಕ್ಕೆ ಐವತ್ತು ಮಂದಿಯ ಅಗತ್ಯವಿದೆ ಎಂದು ಅನಿಸಿದರೆ ಅಷ್ಟು ಜನ ಅಲ್ಲಿ ಸೇರಿ ದರೇ ತೆರಿಗೆ ತೆಗೆದುಕೊಳ್ಳುತ್ತಾರೆ, ದಂಡು ಸಜ್ಜುಗೊಳಿಸುತ್ತಾರೆ. ಸೈನಿಕರಿಗೆ ಮತ್ತೆಲ್ಲೂ ಸಿಗದಿದ್ದಷ್ಟು ಸಂಬಳ ಕೊಡುತ್ತಾರೆ. ಅವರಿಗೆ ಇತರ ಸಾಧನ ಸೌಲಭ್ಯಗಳನ್ನೂ ಕೊಡುತ್ತಾರೆ. ಇಂದಿನ ಯುದ್ಧಗಳಿಂದ ಸೈನಿಕರು ಓಡಿಹೋಗುವುದೂ ಸಾಧ್ಯವಿಲ್ಲ. ಓಡಿಹೋಗುವವರನ್ನು ಹಿಡಿದು ಅವರ ಮೇಲೆ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿ ಗಲ್ಲಿನ ಶಿಕ್ಷೆಯನ್ನೂ ಕೊಡು ತ್ತಾರೆ. ಆದುದರಿಂದ ಮುಂದೆ ಹೋಗಿ ಅವನು ಸಾಯಬಹುದು, ಹಿಂದೆ ಓಡಿದರೂ ಸತ್ತಾನು. ಈ ರೀತಿ ಇವರ ಸಂಘಟನೆ ಪಕ್ಕಾ. ಈ ಕಾರಣ ದಿಂದಾಗಿ ಹಿಂಸೆಯಲ್ಲಿ ಮೂಲಭೂತ ರೂಪದಲ್ಲಿ ಇಲ್ಲದ ಶಕ್ತಿ, ಆ ರಕ್ಷಣ ಶಕ್ತಿಯ ಪ್ರವೇಶ ಅದರಲ್ಲಿ ಆಗುತ್ತದೆ.

ಅಹಿಂಸೆಯಲ್ಲಿ ನಾವು ಇದನ್ನೆಲ್ಲ ಮಾಡಲಾರೆವು. ಅಹಿಂಸೆಯಲ್ಲಿ ಹುಕುಂ ಹೊರಡಿಸಲಾಗುವುದಿಲ್ಲ, ಸಜಾ ಕೊಡಲು ಸಾಧ್ಯವಿಲ್ಲ, ಆಸೆ

ತೋರಿಸಲಾಗುವುದಿಲ್ಲ, ಕೀರ್ತಿಯ ಲಾಲಸೆಯೂ ಇಲ್ಲ, ಸತ್ತ ಮೇಲೆ ಸ್ವರ್ಗದ ಭರವಸೆಯೂ ಇಲ್ಲ. ಇವುಗಳಲ್ಲಿ ಒಂದನ್ನೂ ನಾವು ಮಾಡುವುದು ಸಾಧ್ಯವಿಲ್ಲ. ಹಿಂಸೆಯಲ್ಲಿ ಎಂದೂ ಆಗಲಾರದಷ್ಟು ಬಲಿಷ್ಠವಾದ ಸಂಘಟನೆಯನ್ನು ಅಹಿಂಸೆಯಲ್ಲಿ ಮಾಡಲು ಸಾಧ್ಯವಿದೆ. ಅಹಿಂಸಾತ್ಮಕ ಸಂಘಟನೆ ಹಿಂಸಾತ್ಮಕ ಸಂಘಟನೆಯ ಸಮಕ್ಕಂತೂ ಬರಬಲ್ಲದು. ಅಷ್ಟೇ ಅಲ್ಲ, ಅದರಲ್ಲಿ ನಾಲ್ಕು ಚಂದ್ರಮ ಏರುವಷ್ಟೂ ಮಾಡೀತು. ಇದನ್ನು ಸಿದ್ಧಮಾಡಿ ತೋರಿಸುವುದರಲ್ಲೇ ಅಹಿಂಸೆಯ ಒರೆಗಲ್ಲು ಪರೀಕ್ಷೆ.

ಹುಕುಂ ಕೊಡದಿದ್ದರೂ, ಸಜಾ ನೀಡುವ ಹೆದರಿಕೆ ಇಲ್ಲದಿದ್ದರೂ ಅಹಿಂಸೆ ಹೆಚ್ಚು ಪ್ರಭಾವಕಾರಕವೆಂದು ಸಿದ್ಧವಾದರೆ ಅಹಿಂಸೆ ಸಫಲವಾದೀತು. ಅಪ್ಪಣೆ ಮಾಡುವುದಕ್ಕಿಂತ ನೀವು ನನಗೆ ಕೊಡುವ ಸಲಹೆಯೇ ಹೆಚ್ಚು ಪರಿಣಾಮಕಾರಿ. ಆದರೆ ಅದು ಹೆಚ್ಚು ಸಫಲ. ಬಲಾತ್ಕಾರದ ಆಜ್ಞೆಯನ್ನು ಜನರು ಪಾಲಿಸುತ್ತಾರೆ, ಆದರೆ ಪಾಲನೆ ಭಾವಪೂರ್ವಕ ಆಗುವುದಿಲ್ಲ. ಪ್ರೇಮಪೂರ್ಣ ಸಲಹೆಯಷ್ಟು ಹಿಂಸಾಯುಕ್ತ ಆಜ್ಞೆಯ ಪರಿಣಾಮ ಆಗುವುದಿಲ್ಲ. ನಮ್ಮ ಭಾವನೆ ಶುದ್ಧ ಆಗಿರಬೇಕು, ಮನಶುದ್ಧ, ವಾಣಿ ಶುದ್ಧ ಆಗಿದ್ದರೆ ನಮ್ರತಾಪೂರ್ವಕವಾಗಿ ನಾವು ನೀಡುವ ಸಲಹೆ ಸಹಜವಾಗಿ ಇದಿರಾಳಿಯ ಹೃದಯಕ್ಕೆ ಇಳಿದೀತು. ಇದರಿಂದ ಅವನಿಗೆ ಅಧಿಕ ಪ್ರೇರಣೆ ಸಿಕ್ಕೀತು.

ಹೀಗೆ ಅಹಿಂಸೆಯ ಬಳಿ ಇರುವ ಯುಕ್ತಿ ಹಿಂಸೆಗಿಂತ ಹೆಚ್ಚು ಸಫಲವಾಗಬಲ್ಲದು. ಸಂಘಟನೆ ಮಾಡುವಾಗ ಇದನ್ನು ಮಾಡಿ ನೋಡಿದರೆ ಅಹಿಂಸೆ ಸತ್ವಪರೀಕ್ಷೆಯಲ್ಲಿ ಪಾರಾದೀತು, ಇದು ಹೇಗೆ ಆದೀತು?

ಇದನ್ನು ಕುರಿತು ವಿಚಾರ ಮಾಡಿದಾಗ ನನಗೆ ಅನಿಸಿತು: ಯಾವುದೇ ಹುಕುಂಗೆ ಅಧೀನವಾಗದೆ, ಒಮ್ಮತದಿಂದ ಒತ್ತಟ್ಟಿಗೆ ಕುಳಿತು ಚರ್ಚೆ ಮಾಡಿದರೆ ಆಗ ಆಗುವ ನಿರ್ಣಯ ಆಜ್ಞೆಗಿಂತ ನಮಗೆ ಶಿರೋಧಾರ್ಯವೆನಿಸೀತು. ಇದು ಹೇಗೆ ಸಂಭವ ಎಂದು ವಿಚಾರಮಾಡಿದಾಗ ನನಗೆ ಏಸುವಿನ ವಚನ ನೆನಪಿಗೆ ಬಂದಿತು; Agree with thy adversary quickly—ನಿನ್ನ ಇದಿರಾಳಿಯೊಡನೆ ಬೇಗ ಸಹಮತಕ್ಕೆ ಬಂದುಬಿಡು. ಎದುರಿನವನೊಡನೆ ಸೇರಿಹೋಗುವ, ಒಂದಾಗುವ ಕೌಶಲ ಅಹಿಂಸೆಯಲ್ಲಿ ಬರಬೇಕು.

ಬಾಪೂವಿನ ಮೊದಲಿನ ವಾಕ್ಯದ ಅರ್ಥವನ್ನು ತಿಳಿಯಲು ನಾನು ಪ್ರಯತ್ನಿಸಿದಾಗ ನನಗೆ ಈ ಅರ್ಥ ಸಿಕ್ಕಿತು. ನನ್ನೊಡನೆ ಯಾರು ಏನೇ ಮಾತಾಡಲಿ ಅವರು ಹಾಗೆಯೇ ಮಾಡುತ್ತಾರೆ. ಅಹಿಂಸೆ ಯಾರಮೇಲೂ ಯಾವ ಬಗೆಯ ಒತ್ತಾಯವನ್ನೂ ಹೇರುವುದಿಲ್ಲ. ಈ ಕಾರಣದಿಂದ ಅದನ್ನು ಸಂಘಟಿಸುವುದು ಸಾಧ್ಯವಿಲ್ಲವೆನ್ನುವುದಾದರೆ ಅದು ಸಹಜಭಾವದಿಂದ ಆದೀತು. ಆದರೂ ಅದು ದಂಡಿನ ಸಂಘಟನೆಗಿಂತ ಹೆಚ್ಚು ಬಲಶಾಲಿ ಆದೀತು.

ಸಂಘಟನೆ ಎರಡು ಬಗೆಯದಿರುತ್ತದೆ. ಒಂದು ಶಿಸ್ತು ಹೇರುವಿಕೆಯಿಂದ ಮತ್ತೊಂದು ಪ್ರೇಮದಿಂದ. ಪ್ರೇಮದಿಂದ ಆಗುವ ಸಂಘಟನೆ ಸಹಜ ಭಾವದಿಂದ ಆಗುತ್ತದೆ. ಶಿಸ್ತು ಹೇರುವ ಸಂಘಟನೆ ಸಹಜಭಾವದಿಂದ ಆಗುವುದಿಲ್ಲ, ಅದು ಆಗುಮಾಡಿಸಲ್ಪಡುತ್ತದೆ. ಈ ಸಂಘಟನೆ ಸಾಮೂಹಿಕ ವಾಗಿ ಕೆಲಸಮಾಡುವಂತೆಯೇ ಪ್ರೇಮವೂ ಸಾಮೂಹಿಕವಾಗಿ ಕೆಲಸ ಮಾಡ ಬಲ್ಲುದೇ ಎಂಬುದು ಪ್ರಶ್ನೆ. ಇದರಲ್ಲಿ ಪ್ರೇಮದ ಪರೀಕ್ಷೆ ಇದೆ. ಗಣಸೇವ ಕತ್ವದಲ್ಲಿ ಮುಖ್ಯ ಆಧಾರ ಪ್ರೇಮದ್ದು. ಇದರಲ್ಲಿ ನಾಯಕತ್ವಕ್ಕಿಂತ ಬಹಳ ಹೆಚ್ಚುಶಕ್ತಿ ಬರುತ್ತದೆ.

ಇದೇ ಅಹಿಂಸೆಯ ಒರೆಗಲ್ಲು, ನಮ್ಮಲ್ಲಿ ಅಹಿಂಸೆ ಎಷ್ಟು ಆತ್ಮಸಾತ್ ಆಗಿದೆ ಎಂಬುದರ ಪರೀಕ್ಷೆ.

* * *

ಗಾಂಧೀಜೀ ಸದಾ ‘ಸತ್ಯ ಮತ್ತು ಅಹಿಂಸೆ’ ಶಬ್ದ ಪ್ರಯೋಗ ಮಾಡುತ್ತಿದ್ದರು. ನೀವು ಇದರ ಬದಲಾಗಿ ‘ಸತ್ಯ, ಪ್ರೇಮ ಮತ್ತು ಕರುಣೆ’ ಈ ಶಬ್ದ ಹೇಗೆ ಉಪಯೋಗಿಸುತ್ತೀರಿ?

ಸ್ವಲ್ಪ ವಿಸ್ತಾರವಾಗಿ ಇದರ ಕಾರಣವನ್ನು ತಿಳಿಸಬೇಕಾದೀತು. ಯಾರಿಗೂ ದುಃಖ ಕೊಡದಿರುವುದು ಎಂಬುದು ‘ಅಹಿಂಸೆ’ ಶಬ್ದದ ನೇರಾದ ಅರ್ಥ. ಆದರೆ ಇದರ ಉಪಯೋಗವನ್ನು ಕೇವಲ ಇಷ್ಟು ಅರ್ಥದಲ್ಲೇ ಬಾಪೂ ಮಾಡುತ್ತಿರಲಿಲ್ಲ. ಇದರ ಆತ್ಮದ ಒಂದು ಗುಣದ ರೂಪದಲ್ಲಿ ವರ್ಣಿಸುತ್ತಿದ್ದರು. ಆತ್ಮದ ಗುಣದ ವರ್ಣನೆಯನ್ನು ಸಕಾರಾತ್ಮಕವಾಗಿ

ಮಾಡುವುದಕ್ಕಿಂತ ನಕಾರಾತ್ಮಕವಾಗಿ ಮಾಡುವುದು ಸುಲಭ. ಅಸ್ತೇಯ, ಅಪರಿಗ್ರಹ, ಇತ್ಯಾದಿಗಳಂತೆ ಯಾರಿಗಾದರೂ ಉಪಕಾರಮಾಡುವುದು ಇತ್ಯಾದಿ ಶಬ್ದಗಳಲ್ಲಿ ವರ್ಣಿಸುವುದರಲ್ಲಿ ಅಹಂಕಾರ ಬಂದುಬಿಡುವ ಸಂಭವ ಇರುತ್ತದೆ. ಆದುದರಿಂದ ಒಡನೆಯೇ 'ಅಹಂಕಾರಪಡುವುದಿಲ್ಲ' ಎಂದೂ ಹೇಳಬೇಕಾಗುತ್ತದೆ. ಹಾಗೆಂದೇ **'ಪರದುಃಖೇ ಉಪಕಾರ ಕರೇ ತೋಯೇ ಮನ ಅಭಿಮಾನ್ ನ ಆಣೇ ರೇ'** ಎಂದು ವರ್ಣಿಸಬೇಕಾದೀತು. ಇದಕ್ಕೆ ಬದಲಾಗಿ ಅಹಿಂಸೆ ಎಂಬ ಶಬ್ದ ಸರಳ. ಆದರೆ ಇಂದು ಆತ್ಮನ ಗುಣಗಳನ್ನು ಸ್ಪಷ್ಟವಾಗಿ ವರ್ಣಿಸುವುದು ಅಗತ್ಯ. ಹಾಗೆಂದು ಅನಿಸಿದ್ದರಿಂದ ನಾನು ಪ್ರೇಮ ಮತ್ತು ಕರುಣೆ ಶಬ್ದಗಳನ್ನು ಉಪಯೋಗಿಸಿದೆ. ಅದು ಸಕಾರಾತ್ಮಕ ವರ್ಣನೆ.

ಆದರೆ ಪ್ರೇಮ ಮತ್ತು ಕರುಣೆಯಲ್ಲಿ ಇಷ್ಟು ಅಂತರವೇಕೆ? ತಿಳಿಯುವುದಿಲ್ಲವಲ್ಲ.

ಪರರ ಸುಖದಲ್ಲಿ ಸುಖಿಯಾಗುವುದು ಪ್ರೇಮ. ಇತರರ ದುಃಖದಲ್ಲಿ ದುಃಖಿ ಆಗುವುದು ಕರುಣೆ. ಎರಡೂ ಸೇರಿಯೇ ಪೂರ್ಣ ಗುಣವಿಕಾಸ.

ಸರ್ವಧರ್ಮ ಸಮನ್ವಯದ ದೃಷ್ಟಿಯೂ ಈ ಶಬ್ದಗಳಲ್ಲಿ ಬರುತ್ತದೆ. ಇಸ್ಲಾಂ ಧರ್ಮದ ಬಗೆಗೆ ಜನರ ಕಲ್ಪನೆ ಬೇರೆಯದೇ ಆಗಿರಲೊಲ್ಲದೇಕೆ? ಅದರಲ್ಲಿ ಮುಖ್ಯ ವಿಚಾರ ಕರುಣೆಯದು. ಕ್ರೈಸ್ತಧರ್ಮದ ಮುಖ್ಯ ವಿಚಾರ ಪ್ರೇಮ. ಹಿಂದೂ ಮತ್ತು ಜೈನಧರ್ಮಗಳ ಮುಖ್ಯ ವಿಚಾರವಾದರೋ ಸತ್ಯ.

ಭಾರತದ ಇತಿಹಾಸದ ದೃಷ್ಟಿಯಿಂದಲೂ ಈ ಮೂರು ಶಬ್ದಗಳಲ್ಲಿ ಮೂರು ಮಹಾಪುರುಷರ ಚಿಂತನ ಸೇರುತ್ತದೆ. ಭಗವಾನ್ ರಾಮಚಂದ್ರನನ್ನು ನಾವು ಸತ್ಯದ ಅವತಾರ ಎಂದು ತಿಳಿಯುತ್ತೇವೆ. ಶ್ರೀಕೃಷ್ಣ ಪ್ರೇಮದ ಹಾಗೂ ಬುದ್ಧ ಕರುಣೆಯ ಅವತಾರಗಳು.

'ಸತ್ಯವೇ ಪರಮೇಶ್ವರ' ಎಂದು ಗಾಂಧೀಜೀ ಹೇಳುತ್ತಿದ್ದರು. ಇದನ್ನು ತಿಳಿಸಿ ಹೇಳಿ.

ಇದು ಗಂಭೀರ ವಿಷಯ. 'ಸತ್ಯವೇ ದೇವರು' ಎಂಬುದು ತಿಳಿಯದಿದ್ದರೂ ಸತ್ಯವಂತೂ ಸತ್ಯವೇ. ಜೀವನದಲ್ಲಿ ಸತ್ಯ ಬಹು ಅಗತ್ಯ. ಸತ್ಯದ

ಹೊರತಾಗಿ ಜೀವನ ಶುಷ್ಕವಾಗಿಹೋಗುತ್ತದೆ. ಸತ್ಯವನ್ನು ತಿಳಿಯಬಹುದಾದಂಥ ಆಚರಣೆಯ ಪ್ರಯತ್ನ ಮಾಡಬೇಕು. ತಪ್ಪಾಗಿಯೂ ಅಸತ್ಯದ ಮಾರ್ಗ ಹಿಡಿಯತಕ್ಕದ್ದಲ್ಲ. ಇಷ್ಟು ಎಚ್ಚರ ವಹಿಸಿದರೆ ಸತ್ಯವೇ ದೇವರು ಎಂಬುದು ಕ್ರಮಶಃ ತಿಳಿದೀತು.

ಭಾಗವತದಲ್ಲಿ ಓದಿದ್ದೇವೆ: ಕೃಷ್ಣನ ಸಂಗಡ ಇದ್ದ ಗೋಪಿಯರು ಮುಕ್ತರಾಗಿಹೋಗಿದ್ದರು ಎಂದು. ಗಾಂಧೀಜೀ ಮತ್ತು ನಿಮ್ಮ ಸಂಗಡ ಇರುವ ಸೋದರಿಯರಲ್ಲಿ ಸಂಸಾರವಾಸನೆ ಹೇಗೆ ಹುಟ್ಟುತ್ತದೆ ?

ಬಾಪೂ ಮಹಾತ್ಮಾ ಆಗಿದ್ದರು. ನಾನೊಬ್ಬ ಅರೆಬರೆ ಸಾಧಕ. ಇದಕ್ಕೂ ಹೆಚ್ಚು ಏನೂ ಆಗಬಯಸೆ? ಬಾಪೂವಿನ ಬ್ರಹ್ಮಚರ್ಯದ ಅನುಭವ ಅವರದೇ ರೀತಿಯದಾಗಿತ್ತು, ನನ್ನದು ನನ್ನ ರೀತಿ ಎಂಬ ಮಾತೂ ನಿಜ. ಇಬ್ಬರಿಗೂ ಬ್ರಹ್ಮಚರ್ಯದ ವಿಷಯದಲ್ಲಿ ಬಹು ಆದರವುಂಟು. ಬಾಪೂ ಸತ್ಯಕ್ಕೆ ಪ್ರಧಾನ ಸ್ಥಾನ ಕೊಡುತ್ತಿದ್ದರು, ನಾನೂ ಇದೇ ಗುಣವನ್ನೇ ಪ್ರಧಾನವೆಂದೆಣಿಸುತ್ತೇನೆ. ಸತ್ಯನಿಷ್ಠೆಯು ಸ್ವಲ್ಪ ಅಂಶ ನಮ್ಮಲ್ಲೇ ನಿಳಿದಿರಬಹುದೋ ಅದರ ಪ್ರಭಾವ ನಮ್ಮ ಸುತ್ತಮುತ್ತಲಿನವರ ಮೇಲೆ ಬಿದ್ದೀತು. ಎಂದು ನನ್ನ ನಂಬಿಕೆ.

ಆದರೆ ಭಗವಾನ್ ಕೃಷ್ಣನೆಲ್ಲಿ ನಾವೆಲ್ಲಿ? **‘ಕೃಷ್ಣಸ್ತು ಭಗವಾನ್ ಸ್ವಯಂ’** ಎಂದು ಭಾಗವತದಲ್ಲಿ ಹಾಡಲಾಗಿದೆ. ಆದುದರಿಂದ ಭಗವಂತನೊಡನೆ ಯಾರನ್ನೂ ಹೋಲಿಸುವುದು ಉಚಿತವಲ್ಲ. ಬಾಪೂವನ್ನು ಏಸುವಿಗೆ ಹೋಲಿಸುತ್ತಿದ್ದರು. ನನಗೆ ಇದು ಇಷ್ಟವಿಲ್ಲ. ಏಸು ತಮ್ಮದೇ ಆದ ರೀತಿಯಲ್ಲಿ ಅದ್ವಿತೀಯರು. ಅವರಿಗೆ ಸರಿಜೋಡಿ ಇಲ್ಲ. ಕೋಟಿಗಟ್ಟಲೆ ಭಕ್ತರು ಅವರ ಹೆಸರಿನಲ್ಲಿ ಪಾರಾಗಿಹೋಗಿದ್ದಾರೆ.

ಇದೇ ಸ್ಥಾನ ಭಾರತದಲ್ಲಿ ಭಗವಾನ್ ಶ್ರೀಕೃಷ್ಣನದು. ಅದೇ ರೀತಿ ರಾಮನಾಮವೂ ನಡೆಯುತ್ತದೆ. ಆದಕಾರಣ ಅವರೊಂದಿಗೆ ಮತ್ತೆ ಯಾರನ್ನೂ ಹೋಲಿಸಲಾಗುವುದಿಲ್ಲ, ನಾವು ಅವರನ್ನು ದೈವಸ್ವರೂಪವೆಂದು ತಿಳಿದಿದ್ದೇವೆ. ಅವರೊಡನೆ ಯಾವನೇ ಮನುಷ್ಯನನ್ನು ಹೋಲಿಸುವುದು ಶೋಭೆಯ ಮಾತಲ್ಲ.

ಈ ವಿಷಯದಲ್ಲಿ ಇಸ್ಲಾಂನ ವಿಚಾರ ಬಹು ಉತ್ತಮ. ಅಲ್ಲಾದೊಂದಿಗೆ ಯಾರ ಹೆಸರನ್ನೂ ಜೋಡಿಸತಕ್ಕದ್ದಲ್ಲ ಎಂದು ಅದರಲ್ಲಿ ಸ್ಪಷ್ಟವಾಗಿ ಹೇಳಿಬಿಟ್ಟಿದ್ದಾರೆ. ಅಲ್ಲಾನ ಹೊರತಾಗಿ ಮತ್ತಾರೂ ಪೂಜ್ಯರಲ್ಲ. ಮಹಮ್ಮದ್ ಕೇವಲ ಪೈಗಂಬರರು, ಪ್ರವಾದಿ. ಅಲ್ಲಾನ ಸಂದೇಶವನ್ನು ತರುವವರು. ಅವರು ಅಲ್ಲಾನ ಸ್ಥಾನ ತೆಗೆದುಕೊಳ್ಳಲಾರರು.

ಗಾಂಧೀಜೀ ಉಪ್ಪಿನ ಸತ್ಯಾಗ್ರಹ ಮಾಡಿದರು. ಉಪ್ಪು ಗಾಂಧೀಜಿಗೆ ಪ್ರತೀಕ ಆಗಿತ್ತು. ಇದೇ ರೀತಿ ಭೂದಾನ-ಗ್ರಾಮದಾನವೂ ಪ್ರತೀಕವೇ ಹೌದೇ ?

ಬಾಪೂಗೆ ಉಪ್ಪು ಕೇವಲ ಸಂಕೇತವಾಗಿತ್ತು. ಭೂದಾನ-ಗ್ರಾಮದಾನ ಪ್ರತೀಕಕ್ಕಿಂತ ವಿಶೇಷ. ಇದು ಗ್ರಾಮಸ್ವರಾಜ್ಯದ ಅಡಿಪಾಯ.

* * *

ಸಮಸ್ತ ರಚನಾತ್ಮಕ ಕೆಲಸದ ಮಧ್ಯಬಿಂದು ಚರಖಾ ಎಂದು ಗಾಂಧೀಜೀ ಹೇಳಿದ್ದರು. ಗ್ರಾಮದಾನವನ್ನೇ ಅಡಿಪಾಯ ಎಂದು ತಿಳಿಯಿರೆಂದು ಈಗ ನೀವು ಹೇಳುತ್ತಿದ್ದೀರಿ. ಈ ರೀತಿ ನೀವು ಬಾಪೂವಿನ ಮಧ್ಯಬಿಂದುವನ್ನೇ ಬದಲಾಯಿಸಿಬಿಟ್ಟಿದ್ದೀರಲ್ಲ ?

ಬಾಪೂವಿನ ಮಧ್ಯಬಿಂದು ಮತ್ತು ಬಾಪೂವಿನ ಚರಖಾ, ನನ್ನ ಮಧ್ಯಬಿಂದು ಮತ್ತು ನನ್ನ ಚರಖಾ ಎಂದು ಯಾರೂ ಹೇಳರು ! ಬಾಪೂವಿನ ಚರಖಾ ಬಾಪೂವಿನ ವ್ರತ ಬಾಪೂವಿನ ಅಹಿಂಸೆ ! ಇವೆಲ್ಲವೂ ಬಾಪೂವಿನದೇ ಆಗಿ ಉಳಿಯುವುವೋ, ಇವೆಲ್ಲ ಗಾಳಿಯಲ್ಲೇ ಉಳಿದಾವು. ಹೇಳುವವರು ನನ್ನ ಅಹಿಂಸೆ, ನನ್ನ ವ್ರತ ಎಂದು ಹೇಳುತ್ತಿದ್ದರೆ ಆಗ ಅರ್ಥಮಾಡಿಕೊಳ್ಳಬಹುದು. ಆದರೆ ಮಧ್ಯಬಿಂದುವಿನ ರೂಪದಲ್ಲಿ ಚರಖಾವನ್ನು ಬಾಪೂ ಕೊಟ್ಟಿದ್ದರು. ನೀವು ಗ್ರಾಮದಾನಕ್ಕೆ ಮಹತ್ವ ಕೊಡುತ್ತೀರಿ. ಇದರಿಂದ ಸಂಪ್ರದಾಯ ಭೇದವಾಗುತ್ತದೆ.

ನಮ್ಮ ಭಾರತದಲ್ಲಿ ಈ ಸಂಪ್ರದಾಯಭೇದ ಬಹಳವಿದೆ. ಸ್ವಲ್ಪವೇನಾದರೂ ವ್ಯತ್ಯಾಸವಿದ್ದರೆ ಸಾಕು ನಮ್ಮ ಸಂಪ್ರದಾಯ ಇನ್ನು ಹೊರಟು

ಹೋಗುತ್ತದೆ ಎಂದು ಸಾಂಪ್ರದಾಯಿಕರಿಗೆ ಅನಿಸುತ್ತದೆ. ಇದೇ ಮಾತು ಗಾಂಧೀ ಸಂಪ್ರದಾಯದಲ್ಲೂ ಸ್ವಲ್ಪ ವ್ಯತ್ಯಾಸವನ್ನೂ ಸಹಿಸುವುದಿಲ್ಲ. ಬಾಪೂ ತಮ್ಮದೊಂದು ಸಂಪ್ರದಾಯವಾಗುವುದಕ್ಕೆ ತೀರಾ ವಿರೋಧಿಯಾಗಿದ್ದರು.

ಗೀತೆಯ ಹದಿನೈದನೆಯ ಅಧ್ಯಾಯದಲ್ಲಿ ಸಂಸಾರವೃಕ್ಷ ತಲೆಕೆಳಗಾಗಿರುವ ವರ್ಣನೆಯಿದೆ. ಬೇರು ಮೇಲೆ, ಶಾಖೆಗಳು ಕೆಳಗೆ. ಸಮಾಜದಲ್ಲಿಯೂ ಜ್ಞಾನದ ಶೋಧ ನಡೆದಾಗಲೆಲ್ಲ ಅದು ವಿರುದ್ಧ ದಿಕ್ಕಿನಲ್ಲಿ ಸಾಗುವುದನ್ನು ನಾವು ಎಷ್ಟೋ ಬಾರಿ ನೋಡಬಹುದು. ಆದರೆ ಕರ್ಮಯೋಗದ ಆರಂಭವಾದಾಗ ಅದು ನೇರಾದ ಹಾದಿಯಲ್ಲಿ ಹೋಗುತ್ತದೆ. ನಮ್ಮ ರಚನಾತ್ಮಕ ಕಾರ್ಯದಲ್ಲಿಯೂ ಆರಂಭದಲ್ಲಿ ಜ್ಞಾನದ ಶೋಧ ನಡೆಯಿತು. ಈಗ ಸ್ವರಾಜ್ಯದ ಬಳಿಕ ಕರ್ಮಯೋಗ ಆರಂಭವಾಗಿದೆ. ಜನಜಾಗೃತಿಯಿಲ್ಲದೆ ಸ್ವರಾಜ್ಯ ಅಸಂಭವವಾಗಿತ್ತು. ಆದಕಾರಣ ಜನಜಾಗೃತಿಯ ಮಾರ್ಗಗಳನ್ನು ಹುಡುಕಲಾಯಿತು.

ಬಾಪೂಗೆ ಮೊದಲು ಚರಖಾ ಹೊಳೆಯಲಿಲ್ಲ, ಹೊಳೆದಿದ್ದು ಮಗ್ಗ. ಆಗಿನಿಂದ ಕೆಲಸ ಆರಂಭವಾಯಿತು. 1916ರಲ್ಲಿ ಕೊಚರಬ್‌ನಲ್ಲಿ ಬಟ್ಟೆ ನೇಯುತ್ತಿದ್ದೆವು. ನೂಲೆಲ್ಲವೂ ಗಿರಣಿಯದು. ಇದು ಜ್ಞಾನದ ಶೋಧವಾಗಿತ್ತು. ಕರ್ಮಯೋಗದ ಆರಂಭವಾಗಿರಲಿಲ್ಲ. ಆಮೇಲೆ ನೂಲಲು ಆರಂಭಿಸಬೇಕೆಂಬುದು ತಿಳಿಯಿತು. ಆಗ ಚರಖಾ ದೊರೆಯಿತು. ಆದರೆ ಹಂಜಿಯನ್ನು ಗಿರಣಿಯಿಂದ ತರುತ್ತಿದ್ದೆವು. ಅನಂತರ ಹಂಜಿಯನ್ನೂ ಮಾಡತೊಡಗಿದೆವು. ರೈತರಿಂದ ನೇರಾಗಿ ಉತ್ತಮ ಹತ್ತಿ ತರಬೇಕೆಂದು ಆಮೇಲೆ ಅರಿವಾಯಿತು.

ಈ ರೀತಿ ಎಲ್ಲ ಶೋಧವೂ ನೇಯುವುದರಿಂದ ಹಿಡಿದು ವಿರುದ್ಧ ದಿಕ್ಕಿನಲ್ಲೇ ನಡೆಯಿತು. ಕ್ರಮಕ್ರಮವಾಗಿ ಹತ್ತಿಯವರೆಗೆ ಬಂದು ಮುಟ್ಟಿದೆವು. ಅನಂತರ ಬೇಸಾಯದೊಡನೆ ಸಂಬಂಧ ಬಂತು. ಅಷ್ಟರಲ್ಲಿ ಸ್ವರಾಜ್ಯ ಬಂತು. ಬಳಿಕ ಭೂಮಿಯ ಮಾತು ಬಂತು. ಭೂದಾನ ಹುಟ್ಟಿತು. '**ಊರ್ಧ್ವ-ಮೂಲಂ ಅಧಃ ಶಾಖಮ್**' ರೀತಿಯಲ್ಲಿ ನಾವು ಹೇಗೆ ಸಾಗಿಬಂದೆವು ಎಂಬುದು ತಿಳಿಯುತ್ತದೆ. ಮೊದಲು ಭೂದಾನವೂ ಸ್ವಲ್ಪ ಮೇಲೆಯೇ ಇತ್ತು. ತೀರಾ ಅಡಿಯಲ್ಲಿ ಇರಲಿಲ್ಲ. ಕಡೆಗೆ ಗ್ರಾಮದಾನದವರೆಗೆ ಮುಟ್ಟಿದ

ಮೇಲೆ ತೀರಾ ತಳಹದಿ, ಆಧಾರ ಸಿಕ್ಕಿತು. ಈ ಅಡಿಪಾಯದ ಮೇಲೆಯೇ ಈಗ ನಮ್ಮ ಸಮಗ್ರ ಕರ್ಮಯೋಗದ ಆರಂಭ ಆಗಬಲ್ಲದು. ಪಾಯವನ್ನೇ ಮರೆತುಬಿಟ್ಟರೆ ಚರಖಾ ಎಲ್ಲಿ ನಿಂತೀತು? ಗಾಳಿಯಲ್ಲಿ ನೂಲುವಿರಾ? ಈ ಪಾಯದ ಕಡೆ ಗಮನ ಕೊಡದೆ ಹೋದರೆ ನಮ್ಮ ಚರಖಾವನ್ನೂ ಯಾರೂ ಕೇಳರು. ಅದರದೊಂದು ಬರಿಯ ಸಂಪ್ರದಾಯ ಆಗಿಹೋದೀತು. ಸಮಗ್ರ ರಚನಾತ್ಮಕ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕೆಂದು ಬಾಪೂ ಬಯಸಿದ್ದರು. ಗ್ರಾಮದಾನದ ಅಡಿಗಲ್ಲಿನ ಮೇಲೆಯೇ ಇದು ಸಂಭವ.

* * *

ನೀವು ಗಾಂಧೀಜಿಯ ಕೆಲಸವನ್ನು ಯಾವ ಅರ್ಥದಲ್ಲಿ ಮುಂದುವರಿಸುತ್ತಿದ್ದೀರಿ? ನಿಮಗೇನನ್ನಿಸುತ್ತದೆ?

ಸ್ವರಾಜ್ಯದ ಬಳಿಕ ಸ್ವಾಭಾವಿಕವಾಗಿಯೇ ಭೂದಾನ-ಗ್ರಾಮದಾನದ ಕೆಲಸ ಮುಂದೆ ಬರುತ್ತದೆ. ಗಾಂಧೀಜೀ ಇದ್ದಿದ್ದರೆ ಅವರೂ ಈ ಪ್ರಶ್ನೆಯ ಕಡೆ ಗಮನ ಕೊಡುತ್ತಿದ್ದರು ಎಂದು ನನಗನಿಸುತ್ತದೆ. ಯಾವುದೇ ಸಮಸ್ಯೆಯ ಪರಿಹಾರಕ್ಕಿಂತ ಪರಿಹಾರದ ರೀತಿಗೆ ನಾನು ಹೆಚ್ಚು ಗಮನ ಕೊಡುತ್ತೇನೆ. ಈ ಪದ್ಧತಿಗೆ ಸಂಬಂಧಿಸಿರುವವರೆಗೆ ಗಾಂಧೀಜಿಯ ವಿಚಾರಗಳ ಸಾರವನ್ನು ಜಾರಿಗೆ ತರಲು ಪ್ರಯತ್ನಿಸುತ್ತಿರುವೆನೆಂದು ನನ್ನ ತಿಳಿವಳಿಕೆ.

* * *

ಗಾಂಧೀಜಿಯ ಧರ್ಮದರ್ಶಿತ್ವ ಸಿದ್ಧಾಂತ ಆಧ್ಯಾತ್ಮಿಕವೇ ಅಥವಾ ಒಂದು ಆಧ್ಯಾತ್ಮಿಕ ಯುಕ್ತಿ ಮಾತ್ರವೇ?

ನಾನು ಅದನ್ನು ಆಧ್ಯಾತ್ಮಿಕ ಎಂದು ತಿಳಿಯುತ್ತೇನೆ. ಇದು ಕೇವಲ ವ್ಯಾವಹಾರಿಕ ಯುಕ್ತಿಯಲ್ಲ. ಎಲವಾಲದಲ್ಲಿ ದೇಶದ ಎಲ್ಲೆಡೆಯ ನಾಯಕರು ಬಂದಿದ್ದರು. ಅವರಿಗೆ ವಿದ್ಯಾರ್ಥಿಗಳ ರೀತಿಯಲ್ಲಿ ನಾನು ಈ ವಿಷಯ ತಿಳಿಸಿದೆ. ಧರ್ಮದರ್ಶಿತ್ವಕ್ಕೆ ಎರಡು ಪರೀಕ್ಷೆಗಳನ್ನು ನಾ ಅವರಿಗೆ ತಿಳಿಸಿದೆ: (೧) ಯಾರು ಪಾಲಿಸುವರೋ ಅವರು ತಮಗಿಂತ ಹೆಚ್ಚು ಚಿಂತೆಮಾಡಬೇಕು. ಆದಷ್ಟು ಬೇಗ ಸಿದ್ಧತೆ ನಡೆಸಿ ತಮ್ಮ ಅಧಿಕಾರ ಒಪ್ಪಿಸಿಕೊಟ್ಟು ಬಿಡಬೇಕು. ಈ ಎರಡೂ ಪರೀಕ್ಷೆಗಳಲ್ಲಿ ಉತ್ತೀರ್ಣವಾದ ಮೇಲೆ ಯಾರದೇ

ಧರ್ಮದರ್ಶಿತ್ವದ ಹೇಳಿಕೆ ನಿಜವೇ ಅಥವಾ ಸುಳ್ಳೇ ಎಂಬುದು ಸಿದ್ಧವಾಗುತ್ತದೆ.

* * *

ಸಾಮ್ಯವಾದ, ಗಾಂಧೀವಾದ ಮತ್ತು ನಿಮ್ಮ ಮತವಾದಗಳಲ್ಲಿ ಏನು ವ್ಯತ್ಯಾಸ?

ನನ್ನ ಯಾವ ವಾದವೂ ಇಲ್ಲ. 'ಸರ್ವೋದಯ' ಶಬ್ದವನ್ನು ಗಾಂಧೀಜೀ ಕೊಟ್ಟರು. ಅದನ್ನೆತ್ತಿಕೊಂಡು ತಿರುಗುತ್ತಿದೇನೆ. ನಾವು 'ವಾದಿ'ಗಳಲ್ಲ, 'ಕರ್ತಾ'—ಕೆಲಸ ಮಾಡುವವರು. ಉತ್ತರ ಧ್ರುವದತ್ತ ನೋಡುತ್ತಿದ್ದರೆ ಮಾತ್ರವೇ ಸಾಲದು, ಆ ದಿಕ್ಕಿನಲ್ಲಿ ಹೋಗಬೇಕಾದೀತು.

* * *

ಬಾಪೂ ಸದಾ ದಿನಚರಿ ಬರೆಯಲು ಹೇಳುತ್ತಿದ್ದರು. ನೀವೇಕೆ ಅಂಥ ಯಾವ ಆಗ್ರಹವನ್ನೂ ಮಾಡುವುದಿಲ್ಲ?

ಹೌದು, ಬಾಪೂ ಹೇಳುತ್ತಿದ್ದರು. ಆಗಲೂ ಅದು ನನಗೆ ರುಚಿಸುತ್ತಿರಲಿಲ್ಲ. ಇಂದಿಗೂ ರುಚಿಸುವುದಿಲ್ಲ. ವರ್ತಮಾನದಲ್ಲಿದ್ದು ಭೂತಕಾಲದ ಹೊರೆಯನ್ನೇಕೆ ಹೊತ್ತು ತಿರುಗಬೇಕು? 'ಆರು ಗಂಟೆ ಎರಡು ನಿಮಿಷಕ್ಕೆ ಎದ್ದೆ. ಏಳಲು ಎರಡು ನಿಮಿಷ ತಡವಾಯಿತು, ತಪ್ಪಾಯಿತು'—ಏನು ಒಲೆಯ ತಪ್ಪೇ? ಇಂಥ ದಿನಚರಿ ಬರೆಯುವ ಯಾವ ಅಗತ್ಯವೂ ಇಲ್ಲ. ತಲೆಯನ್ನು ತಾಜಾ ಹಾಗೂ ನಿತ್ಯನೂತನವಾಗಿ ಇಟ್ಟುಕೊಳ್ಳಲು ವ್ಯರ್ಥವಿವರವನ್ನು ಬರೆದಿಡುವ ಯಾವ ಅಗತ್ಯವೂ ಇಲ್ಲ. ಯಾವುದಾದರೂ ಅನುಭವ ಇದ್ದರೆ, ದರ್ಶನ, ಚಿಂತನ, ಬೋಧೆ ಇದ್ದರೆ ಅದನ್ನು ಬರೆದಿಟ್ಟರೆ ದಿನಚರಿ ಉಪಯುಕ್ತ, ಅಂಥದನ್ನು ಬರೆಯಲೂಬೇಕು.

* * *

ಗಾಂಧೀಜಿಯ ನಿಧನದ ಸುದ್ದಿ ಕೇಳಿ ಎಲ್ಲಕ್ಕಿಂತ ಮೊದಲು ನಿಮಗೆ ಏನನಿಸಿತು?

ಗಾಂಧೀಜೀ ಸಾಯಲೇ ಇಲ್ಲ ಎಂದು ನನಗನಿಸಿತು. ಇಂದಿನವರೆಗೂ ನನ್ನ ಮನದಲ್ಲಿ ಅವರು ಜೀವಿತರಿದ್ದಾರೆಂದೇ ಅಭಿಪ್ರಾಯವಿದೆ. ಸಜ್ಜನರು ಸಾಯುವುದಿಲ್ಲ. ಅವರು ಸದಾ ಬದುಕಿರುತ್ತಾರೆ. ದುರ್ಜನರು ಯಾವಾಗಲೂ ಬದುಕಿಯೇ ಇರುವುದಿಲ್ಲ, ಅವರು ಕಲ್ಪನೆಯ ಜಗತ್ತಿನಲ್ಲಿ ಬದುಕಿರುತ್ತಾರೆ. ●

೧೮

ಗಾಂಧೀ-ವಿಶ್ವಾಸ ಅಥವಾ ಆತ್ಮ-ವಿಶ್ವಾಸ?

ಗಾಂಧೀಜೀ ತೀರಿಕೊಂಡಮೇಲೆ ಭಾರತದಲ್ಲಿ ಬಹಳ ಅನವಸ್ಥೆ ಕಂಡು ಬರುತ್ತದೆ. ಆದರೆ ಇದರಿಂದ ನಿರಾಶರಾಗಲು ಯಾವ ಕಾರಣವೂ ಇಲ್ಲ. ಗಾಂಧೀಜಿಯಂತಹ ಮನುಷ್ಯರ ವಿಷಯದಲ್ಲಿ ದೀರ್ಘಕಾಲದ ದೃಷ್ಟಿಯಿಂದ ಯೋಚಿಸಬೇಕು. ಅವರಂಥ ಶಕ್ತಿಶಾಲಿ ಮನುಷ್ಯರ ಕೆಲಸದ ಪರಿಣಾಮ ತೀರಾ ನಿಕಟ ಕ್ಷೇತ್ರದಲ್ಲಿ ಮತ್ತು ನಿಕಟ ಕಾಲದಲ್ಲಿ ಕಡಿಮೆ ಅಪೇಕ್ಷೆಯುಳ್ಳದ್ದು. ವ್ಯಾಪಕ ಕಾಲದಲ್ಲಿ ಮತ್ತು ವ್ಯಾಪಕ ಕ್ಷೇತ್ರದಲ್ಲಿ ಅಧಿಕ ಅಪೇಕ್ಷೆ ಹೊಂದಿರತಕ್ಕದು. ಇದರಲ್ಲಿ ನಿರಾಶೆಗೆ ಏನೂ ಕಾರಣವಿಲ್ಲ.

ಒಮ್ಮೆ ಒಬ್ಬ ವಿದೇಶೀ ಸಜ್ಜನ ನನ್ನನ್ನು ಕಾಣಲು ಬಂದಿದ್ದರು. ನನ್ನನ್ನು ಕೇಳಿದರು: "ಭಾರತ ಗಾಂಧೀಜಿಯ ಅಪೇಕ್ಷೆಗಳಿಗೆ ಅನುಸಾರವಾಗಿ ಮುಂದೆ ನಡೆಯುತ್ತಿದೆ ಎಂದು ನೀವು ತಿಳಿಯುವಿರಾ?"

ನಾನು ಉತ್ತರ ಕೊಟ್ಟೆ: "ಈ ಪ್ರಶ್ನೆಗೆ ಉತ್ತರ ಕೊಡುವುದು ಸ್ವಲ್ಪ ಕಷ್ಟ, ಎಷ್ಟೇ ಅಡ್ಡಿಗಳಿದ್ದರೂ ಭಾರತ ಗಾಂಧೀಜಿಯ ಮಾರ್ಗದಲ್ಲಿ ನಡೆಯಲು ಪ್ರಯತ್ನಿಸುತ್ತಿದೆ ಎಂದು ಮಾತ್ರ ಹೇಳಬಲ್ಲೆ. ಗಾಂಧೀಜಿಯ ಮಾರ್ಗ ಬುದ್ಧ ಮತ್ತು ಏಸುವಿನ ಮಾರ್ಗ. ಏಸುಕ್ರಿಸ್ತ ಇಂದು ಭೂಮಿಗೆ ಬಂದರೆ ಆತ ಏನು ನೋಡಿಯಾನು? ಜಗತ್ತಿನಲ್ಲಿ ಪ್ರತಿವರ್ಷ ಹತ್ತು ಲಕ್ಷಕ್ಕೂ ಹೆಚ್ಚು ಪ್ರತಿ ಬೈಬಲ್ ಖರ್ಚಾಗುತ್ತದೆ. ನಾವೆಲ್ಲಾ ಏಸುವಿನ ಮಾರ್ಗದಲ್ಲಿ ನಡೆಯುತ್ತಿದ್ದೇವೆ ಎಂದು ಇದರ ಅರ್ಥವೇ? ಇದರಿಂದ ಏಸುವಿಗೆ ಸಂತೋಷವಾಗುತ್ತದೆಯೇ? ಏಸುವಿನ ಜನ್ಮದಿನದಂದು ವಿಯಟ್ನಾಂನಲ್ಲಿ ಯುದ್ಧವನ್ನು ನಿಲ್ಲಿಸಿದ್ದರು. ಹೌದು, ಪ್ರಭು ಏಸು ನಮ್ಮ ಮೇಲೆ ದಯವಿಟ್ಟು ಅಗತ್ಯವಾಗಿ ಹೇಳಿಯಾರು—ನನ್ನ ಮಕ್ಕಳು ಯಥಾಶಕ್ತಿ ಪ್ರಯತ್ನಿಸುತ್ತಿದ್ದಾರೆ ಎಂದು. ಹೊರಗಿನಿಂದ ಹೀಗೆ ತೋರಿದರೂ ಜಗತ್ತಿನಲ್ಲಿ ಶಸ್ತ್ರಸ್ಪರ್ಧೆ

ನಡೆಯುತ್ತಿದೆ. ಆದರೆ ಅದು ಮಿಥ್ಯೆ, ವಾಸ್ತವಿಕವಲ್ಲ. ವಾಸ್ತವಿಕತೆ ಎಂದರೆ ಇಂದು ಜಗತ್ತಿನಲ್ಲಿ ಶಾಂತಿಯ ಶಕ್ತಿಗಳು ಬಲವಾಗಿರುವಷ್ಟು ಹಿಂದೆ ಎಂದೂ ಇರಲಿಲ್ಲ."

ಇದೇರೀತಿ ಕೆಲವು ಸಮಯದ ಹಿಂದೆ ಅಮೆರಿಕದ 'ನ್ಯೂಯಾರ್ಕ್ ಟೈಮ್ಸ್' ದಿನಪತ್ರಿಕೆಯ ಸುದ್ದಿಗಾರ ನನ್ನನ್ನು ಕೇಳಿದ್ದ, "ಇಂದು ಗಾಂಧಿ ಮತ್ತೆ ಬಂದರೆ ಭಾರತ ಅವರ ಬಗೆಗೆ ಆದರಭಾವವನ್ನು ತೋರಿಸಲು ಮಾಡುತ್ತಿರುವುದನ್ನೆಲ್ಲಾ ನೋಡಿ ಅವರಿಗೆ ಏನನ್ನಿಸೀತು?" (ವಿಗ್ರಹಗಳನ್ನು ಸ್ಥಾಪಿಸುತ್ತಿರುವುದು, ಪ್ರದರ್ಶನಗಳನ್ನು ನಡೆಸುತ್ತಿರುವುದು, ರಸ್ತೆಗಳಿಗೂ ಉದ್ಯಾನವನಗಳಿಗೂ ಗಾಂಧಿಯವರ ಹೆಸರನ್ನಿಡುತ್ತಿರುವುದು.)

ಮಹಾಪುರುಷರ ಪ್ರಭಾವ ದೂರಗಾಮೀ ಮತ್ತು ವ್ಯಾಪಕ

ಆತನಿಗೆ ನಾನು ಹೇಳಿದೆ: "ಗಾಂಧಿಯಂಥ ಮಹಾಪುರುಷರು ಕಾಲಾತೀತರಾಗಿರುತ್ತಾರೆ ಎಂದು ನನ್ನ ಭಾವನೆ. ಅವರು ಅಲ್ಪಕಾಲದ ದೃಷ್ಟಿಯಿಂದ ಕೆಲಸ ಮಾಡುವುದಿಲ್ಲ. ದೀರ್ಘದೃಷ್ಟಿಯಿಂದ ಕೆಲಸ ಮಾಡುತ್ತಾರೆ. ಇಪ್ಪತ್ತು ವರ್ಷದ ಸಮಯ ಅಷ್ಟು ದೀರ್ಘವೇನಲ್ಲ, ಇದು ಸ್ವಲ್ಪ ಸಮಯ. ಸ್ವಲ್ಪ ನಿಲ್ಲುವಷ್ಟು ತಾಳ್ಮೆ ಗಾಂಧೀಗೆ ಉಂಟು. ಅವರಂತೂ ಈ ದೇಶದ ರಾಷ್ಟ್ರಪಿತ ಎಂದು ಕರೆಸಿಕೊಳ್ಳುತ್ತಾರೆ. ಈ ಕಾರಣದಿಂದ ನಾವೆಲ್ಲಾ ಅವರ ಬಾಲಕರು. ಇದುವರೆಗೆ ನಾವೆಲ್ಲಾ ಬಾಲಕರಂತೆಯೇ ನಡೆದುಕೊಂಡಿದ್ದೇವೆ. ನೀವು ಆ ಮಹಾದಿನಗಳ ರಜೆಯಂದು ಕುಣಿಯುತ್ತ ನೆಗೆಯುತ್ತಾ ಮನೋರಂಜನ ಮಾಡುವಂತೆ."

ಗಾಂಧೀಜಿಯಂಥ ಮಹಾಪುರುಷರ ಪ್ರಭಾವ ನಾಲ್ಕಾರು ಅಥವಾ ಹದಿನೈದು ಇಪ್ಪತ್ತು ವರ್ಷಗಳ ಅವಧಿಯಲ್ಲಿ ಅಳಿಯಲಾಗುವುದಿಲ್ಲ ಎಂದು ನನ್ನ ನಂಬಿಕೆ. ಇದಂತೂ ಅತ್ಯಂತ ದೂರಗಾಮಿ ಮತ್ತು ವ್ಯಾಪಕ. ಅವರು ಕೊಟ್ಟಿರುವ ವಿಚಾರ ಅಮರ. ಲಕ್ಷಾಂತರ ಪ್ರಹಾರವಾದಮೇಲೂ ಅದು ಜೀವಿಸಿರುತ್ತದೆ. ಭಾರತದಲ್ಲಿ ಜೀವಿತರಾಗಿಲ್ಲದಿದ್ದರೂ ಪ್ಯಾಲೆಸ್ಟೈನ್‌ನಲ್ಲಿ, ಇಂಗ್ಲೆಂಡಿನಲ್ಲಿ ಅಥವಾ ಅಮೆರಿಕದಲ್ಲಿ ಬದುಕಿರುತ್ತದೆ. ಇಷ್ಟು ಪ್ರಾಣವಂತವಾದ ವಿಚಾರ ಅದು.

ಗಾಂಧೀ-ವಿಚಾರ ಅಮರ

ಚೀಣಾದಲ್ಲಿ ಇಡೀ ದೇಶದಾದ್ಯಂತ ಒಂದು ಬಗೆಯ ವಿದ್ಯಾಲಯ ನಡೆಯುವುದಂತೆ. 'ಅರ್ಧ-ಅರ್ಧ ವಿದ್ಯಾಲಯ'—(half-half school) ಎಂದು ಕರೆಯುತ್ತಾರೆ. ಎಲ್ಲ ವಿದ್ಯಾರ್ಥಿಗಳೂ ಅರ್ಧ ಸಮಯ ಶರೀರಶ್ರಮ ಮಾಡಬೇಕು ಎಂದು ಇದರ ಅರ್ಥ. ಇದು ಸಂಕೇತರೂಪವಾಗಿ ಅಲ್ಲ, ಒಂದು ಸ್ವಲ್ಪ ನೂಲು ನೂತೆ ಅಲ್ಲಿಗೆ ಮುಗಿಯಿತು ಎಂದಲ್ಲ. ರೈತ ಶ್ರಮಿಸುವಂತೆ ಇವರೂ ಶ್ರಮಿಸಿ ತಮ್ಮ ಕೂಲಿ ಪಡೆಯಬೇಕಾದೀತು. ಉಳಿದ ಅರ್ಧ ಸಮಯದಲ್ಲಿ ವ್ಯಾಸಂಗ. ಇದನ್ನು ಓದಿದಾಗ ಕಡೆಗೆ ಮಹಾತ್ಮಾ ಗಾಂಧಿಯವರ ಮಾತನ್ನು ಕೇಳುವ ದೇಶವು ಒಂದಾದರೂ ಹೊರಟಿತು ಎಂದು ನನಗೆ ಅನಿಸಿತು. ಚೀಣ ಗಾಂಧೀಜಿಯ ಮಾತನ್ನು ಕೇಳಿತು. ಭಾರತವೂ ಕೇಳೀತು ಎಂದು ಆಶೆಯಿಟ್ಟುಕೊಳ್ಳಬೇಕು. ಕೇಳಲಿಲ್ಲ, ಹಾಗೂ ಹಳೆಯ ಶಿಕ್ಷಣ ಪದ್ಧತಿಯನ್ನೇ ನಡೆಸಿತಾದರೆ ಪೆಟ್ಟು ತಿಂದೀತು. ನೂತನ ಶಿಕ್ಷಣದ ಸರಳವಾದ ವಿಚಾರವಿದೇ—ಜೀವನದಲ್ಲಿ ಜ್ಞಾನ ಮತ್ತು ಕರ್ಮದ ಸಮನ್ವಯವಾಗಬೇಕು.

ಇದೇರೀತಿ ಸ್ವರಾಜ್ಯ ಸಿಕ್ಕಮೇಲೆ ಆಹಾರಧಾನ್ಯ ಕಡಿಮೆ ಬಿದ್ದರೆ ಸ್ವರಾಜ್ಯ ಕುಂದೀತು ಎಂದು ಗಾಂಧೀಜಿ ಹೇಳಿದ್ದರು. ಅದಕ್ಕಾಗಿ ಪ್ರತಿ ಮನೆಯಲ್ಲೂ ಆಹಾರ ಉತ್ಪಾದನೆಯಾಗಬೇಕು. ಗಾಂಧೀಜಿಯಲ್ಲಿ ಪರಿವೆಯಿತ್ತು. ಎಲ್ಲೆಲ್ಲಿ ಜಮೀನಿದೆಯೋ ಅಲ್ಲೆಲ್ಲಾ ಸಣ್ಣ ತುಣುಕುಮಾಡಿ ತರಕಾರಿ ಬೆಳೆಯಬೇಕು ಎಂದು ಹೇಳಿದರು. ಪಟ್ಟಣವಾಸಿಗಳನ್ನು ಕುರಿತು ಖಾಲಿ ಜಮೀನಿಲ್ಲದಿದ್ದರೆ ಕುಂಡಗಳಲ್ಲಿ ತರಕಾರಿ ಬಿತ್ತಿ ಎಂದು ಹೇಳಿದರು. ಕುಂಡಗಳಲ್ಲಿ ಎಷ್ಟು ಬೆಳೆಯಬಹುದು ಯೋಚಿಸಿ. ಏನೂ ಇಲ್ಲದಿದ್ದುದಕ್ಕಿಂತ ಸ್ವಲ್ಪವಾದರೂ ವಾಸಿ. ಕೋಟಿಗಟ್ಟಲೆ ಜನ ಮಾಡುವುದು ಸಣ್ಣ ಕೆಲಸವಾಗಿ ಉಳಿಯುವುದಿಲ್ಲ. ಅದರ ಗುಣಾಕಾರ ಬಹಳ ಭಾರಿ. ಮಳೆ ಹನಿಹನಿ ಬೀಳುತ್ತದೆ, ಆದರೆ ಎಲ್ಲ ಕಡೆ ಬೀಳುತ್ತದೆ. ಅದರಿಂದ ಇಡೀ ಜಮೀನು ತರಿಯಾಗಿಹೋಗುತ್ತದೆ. ಪ್ರತಿಯೊಬ್ಬ ಮನುಷ್ಯನೂ ಸ್ವಲ್ಪ ಉತ್ಪಾದನೆ ಮಾಡಬೇಕು. ಒಂದೊಂದು ಮನೆಯಲ್ಲೂ ಸ್ವಲ್ಪಸ್ವಲ್ಪ ಉತ್ಪತ್ತಿಯಾದರೆ ಬಹು ಹೆಚ್ಚು ಕೆಲಸ ಆದೀತು. ಅದರಿಂದ ದೇಶದ ಉತ್ಪಾದನೆಗಾಗಿ ಪ್ರತಿ

ಯೊಬ್ಬರೂ ಏನಾದರೂ ಮಾಡಬೇಕು ಎಂಬ ಶಿಕ್ಷಣ ಎಲ್ಲರಿಗೂ ಸಿಕ್ಕೀತು. ಅದಿಲ್ಲದೆ ನಮಗ್ಯಾರಿಗೂ ತಿನ್ನುವ ಹಕ್ಕಿಲ್ಲ. ಜಪಾನಿನಲ್ಲಿ ಗಾಂಧೀಜಿಯ ಈ ಮಾತು ಜಾರಿಯಲ್ಲಿದೆ. ಅಲ್ಲಿ ಒಂದು ಅಡಿ ಭೂಮಿಯೂ ಖಾಲಿ ಕಾಣದು. ಕಾಗಾವಾ ಅವರು ಅದನ್ನು ಕುರಿತು ಒಂದು ದೊಡ್ಡ ಕಾದಂಬರಿ ಬರೆದಿದ್ದಾರೆ. ಕಾಗಾವಾ ಜಪಾನಿನ ಒಬ್ಬ ಬಹು ದೊಡ್ಡ ಜ್ಞಾನೀ ಮಿಷನರಿಯಾಗಿದ್ದರು. ಈ ರೀತಿ ಗಾಂಧೀಜಿಯ ಮಾತು ಜಪಾನಿನಲ್ಲಿ ಜಾರಿಯಲ್ಲಿದೆ. ಇಲ್ಲಿ ನಮ್ಮಲ್ಲಾದರೋ ಬಹಳ ಜಮೀನು ಬೀಳು ಬಿದ್ದಿರುವುದನ್ನು ನೋಡಬಹುದು. ಈ ವಿಷಯವಾಗಿ ಇಂದಲ್ಲದಿದ್ದರೂ ನಾಳೆಯಾದರೂ ಗಾಂಧೀಜಿಯ ಮಾತನ್ನು ಕಿವಿಯರಳಿಸಿ ಕೇಳಬೇಕಾದೀತು.

ಗಾಂಧೀ ಜನ ಅವರು ಕಲಿಸಿದ್ದನ್ನು ಬೇಗ ಮರೆತರು

ಆದುದರಿಂದ ಗಾಂಧೀ ವಿಚಾರ ಅಮರವೇ ಮತ್ತು ಅದರ ಪ್ರಭಾವ ಬಹು ವ್ಯಾಪಕ ಮತ್ತು ದೂರಗಾಮಿ ಎಂದು ನಾನು ಹೇಳುತ್ತಿದ್ದೆ. ಮಧ್ಯೆ ಈ ವಿಚಾರ ಸ್ವಲ್ಪ ಮಂದವಾಯಿತೆಂದೆನ್ನಿಸಬಹುದು, ಆದರೆ ಪುನಃ ಚೇತನ ತಳೆದೇ ತಳೆಯುತ್ತದೆ. ಇದರಲ್ಲಿ ನನಗೆ ಸ್ವಲ್ಪವೂ ಸಂದೇಹವಿಲ್ಲ.

ಗೀತೆಯಲ್ಲಿ ಭಗವಂತ ಹೇಳಿದ್ದಾನೆ, ತನ್ನ ಯೋಗವನ್ನು ವರ್ಣಿಸುತ್ತಾ ಮಧ್ಯೆ ಈ ಯೋಗ ನಷ್ಟವಾಗಿಹೋಗಿತ್ತು ಎನ್ನುತ್ತಾನೆ. ಮರಾಠಿಯಲ್ಲಿ ಅನುವಾದ ಮಾಡುತ್ತಾ ನಾನದರಲ್ಲಿ ಸ್ವಲ್ಪ ಬದಲಾಯಿಸಿದೆ. 'ಯೋಗ ಲುಪ್ತವಾಗಿ ಹೋಗಿತ್ತು' ಎಂದು ನಾನು ಮಾಡಿದೆ. ಏಕೆಂದರೆ ಮುಂದೆ ಅದು ಚೈತನ್ಯಶಾಲಿ ಆಗುವುದಿತ್ತು ಎಂದಮೇಲೆ ನಷ್ಟ ಹೇಗಾಗಬಲ್ಲದು? ಆದರೆ ಮಧ್ಯದಲ್ಲಿ ಭಾರತದಲ್ಲಿ ಯೋಗ ಲುಪ್ತವಾಗಿ ಹೋಗಿತ್ತು. ವಾಸನೆಯ ಜೋರು ಹೆಚ್ಚಾಗಿತ್ತು. ದೇಹಾಸಕ್ತಿ ಹೆಚ್ಚಾಗಿತ್ತು, ಆದಕಾರಣ ಆತ್ಮಬೋಧೆ ಯನ್ನು ಜನ ಮರೆತರು ಎಂದು ಜ್ಞಾನದೇವ ಮಹಾರಾಜರು ಹೇಳುತ್ತಾರೆ. ಆದರೆ ಈ ವಿಚಾರ ಅಮರವಾದುದರಿಂದ ಮತ್ತೆ ಅವತಾರವಾಯಿತು, ಪುನಃ ಪ್ರಾರಂಭವಾಯಿತು.

ಹೀಗೆ ಗಾಂಧೀ ವಿಚಾರವೂ ಅಮರ. ಇದು ಕೇವಲ ಭಾರತಕ್ಕೆ ಮಾತ್ರವಲ್ಲ, ಸಮಸ್ತ ಜಗತ್ತಿಗೆ ಅನ್ವಯವಾಗುತ್ತದೆ. ದೇಶ ಕಾಲಕ್ಕೆ

ಅನುಗುಣವಾಗಿ ಬಾಹ್ಯಸ್ವರೂಪದಲ್ಲಿ ಅಲ್ಪಸ್ವಲ್ಪ ಅಂತರವಾದೀತು. ಆದರೆ ಒಳತತ್ವ ಅಮರ. ಆದುದರಿಂದ ಗಾಂಧೀ ವಿಚಾರದ ಬಗೆಗೆ ಚಿಂತೆ ಇಲ್ಲ. ಆದರೆ ಅವರ ಜೊತೆಯಲ್ಲಿ ಅನೇಕ ವರ್ಷಗಳ ಕಾಲ ಕೆಲಸ ಮಾಡಿದವರು ಅವರ ಬೋಧೆಯನ್ನು ಬಹಳ ಬೇಗ ಮರೆತರು ಎಂದು ಯಾರಾದರೂ ಹೇಳಿಯಾರು.

ಆತ್ಮವಿಶ್ವಾಸ ಏಕೆ ಇರುವುದಿಲ್ಲ?

ಇದರ ಕಾರಣಗಳಿಗೂ ಆಳವಾಗಿ ಹೋಗಬೇಕಾದ ಅಗತ್ಯವಿದೆ. ಅಧ್ಯಯನದ ಅಭಾವವೇ ಕಾರಣ. ಗಾಂಧೀ ಜನರು ಕೆಲಸದಲ್ಲಿ ಎಷ್ಟು ಮಗ್ನರಾಗಿರುವರೋ ಅಷ್ಟೂ ವಿಚಾರದ ಆಳಕ್ಕೆ ಇಳಿಯುವುದಿಲ್ಲ. ಇದರಿಂದಲೇ ಮತ್ತೊಂದು ಕಾರಣವೂ ಹೊರಡುತ್ತದೆ. ವಿಚಾರವು ಗಾಂಧೀ ವಿಚಾರವಾಗಿ ಉಳಿಯಿತು, ಅದು ನಮ್ಮ ವಿಚಾರ ಆಗಲಿಲ್ಲ. ಇಡೀ ಗಾಂಧೀ ಜನರಲ್ಲಿ ಉತ್ಸಾಹವಿಲ್ಲ, ಶ್ರದ್ಧೆ ಕಂಡುಬರುವುದಿಲ್ಲ. ಆತ್ಮವಿಶ್ವಾಸ ಗೋಚರವಾಗುವುದಿಲ್ಲ. ಇಂದು ನಾವು ಇದನ್ನು ನೋಡಬಹುದು. ನಾವು ಇಂದು ಮಾಡುತ್ತಾ ಕುಳಿತಿರುವ ಕೆಲಸ ಒಂದು ಅಮರ ವಿಚಾರ ಎಂದು ನಮಗೆ ಅನಿಸುವುದಿಲ್ಲ.

ಒಮ್ಮೆ ಬುದ್ಧಗಯೆಯಲ್ಲಿ ದೇಶದ ಅಗ್ರಗಣ್ಯ ರಚನಾತ್ಮಕ ಕಾರ್ಯಕರ್ತರು ಸೇರಿದ್ದರು. ಅಲ್ಲಿ ಢೇಬರ್ ಭಾಯಿ ನನ್ನೆದುರು ಒಂದು ಪ್ರಶ್ನೆ ಇಟ್ಟರು: "ಗಾಂಧೀಜಿಯ ಕಾಲದಲ್ಲಿ ನಾವು ಆತ್ಮವಿಶ್ವಾಸದಿಂದ ಕೆಲಸ ಮಾಡುತ್ತಿದ್ದೆವು. ಆದರೆ ಅಂಥ ಆತ್ಮಶ್ರದ್ಧೆ ಇಂದು ನಮ್ಮಲ್ಲಿಲ್ಲ. ಈ ಕಾರಣದಿಂದ ನಿರಾಶೆಯ ಅನುಭವವಾಗುತ್ತಿದೆ. ಈ ಪ್ರವೃತ್ತಿಯನ್ನು ತಡೆಯುವುದು ಹೇಗೆ?"

ನನ್ನ ಅನುಭವದ ಪ್ರಕಾರ ಈ ಮಾತು ನಿಜ. ಗಾಂಧೀಜಿಯ ಕಾಲದಲ್ಲಿ ನಾವು ಆತ್ಮವಿಶ್ವಾಸದಿಂದಲ್ಲ, ಗಾಂಧೀ ವಿಶ್ವಾಸದಿಂದ ಕೆಲಸಮಾಡುತ್ತಿದ್ದೆವು. ಗಾಂಧೀ ವಿಶ್ವಾಸದ ಬದಲು ನಾವು ಆತ್ಮವಿಶ್ವಾಸದ ಅಗತ್ಯವನ್ನು ಮನಗಾಣಬೇಕೆಂದೇ ಭಗವಂತ ಗಾಂಧೀಜಿಯನ್ನು ನಮ್ಮ ನಡುವಿನಿಂದ ಎತ್ತಿಕೊಂಡು ಹೋಗಿಬಿಟ್ಟ. ಮತ್ತೆ ನಾಲ್ಕೈದು ವರ್ಷ ಗಾಂಧೀಜೀ ಇದ್ದಿದ್ದರೆ

ಆ ನಾಲ್ಕೈದು ವರ್ಷವೂ ಆತ್ಮವಿಶ್ವಾಸದ ಅಗತ್ಯ ನಮಗೆ ಅನಿಸುತ್ತಿರಲೇ ಇಲ್ಲ. ಅವರ ಮೇಲಿನ ನಮ್ಮ ಶ್ರದ್ಧೆ ಆಕರ ಗ್ರಂಥದಂತೆ ಕುಳಿತುಬಿಟ್ಟಿತ್ತು. ಅಂತಲೇ ನಾವು ಅವರ ಹಿಂದೆ ಹಿಂದೆ ಹೋದೆವು. ನಮ್ಮೆಲ್ಲರಲ್ಲೂ ಆಗ ಸ್ವತಂತ್ರ ಆತ್ಮವಿಶ್ವಾಸವಿರಲಿಲ್ಲ ಎಂದೇನೂ ಅಲ್ಲ. ಬಹುತೇಕ ಜನರು ಚಿಂತನವನ್ನೂ ಮಾಡುತ್ತಿರಲಿಲ್ಲ. ಆದುದರಿಂದ ಇದುವರೆಗೆ ನಾವು ಆತ್ಮವಿಶ್ವಾಸಿಗಳಾಗಿರಲಿಲ್ಲ, ಗಾಂಧೀ ವಿಶ್ವಾಸಿಗಳಾಗಿದ್ದೆವು.

ಶ್ರದ್ಧೆಯಿಂದ ಯಾವಾಗಲೂ ಹಾನಿಯಾಗುತ್ತದೆ ಎಂದು ನಾನು ತಿಳಿಯುವುದಿಲ್ಲ. ಅದರಿಂದ ಲಾಭವೂ ಆಗುತ್ತದೆ. ಆದರೆ ಆತ್ಮಶ್ರದ್ಧೆ ಎಂಬುದು ಇದಕ್ಕಿಂತ ಭಿನ್ನ. ಗಾಂಧೀಜೀ ಹೊರಟುಹೋದಮೇಲೆ ಆತ್ಮವಿಶ್ವಾಸದ ಅಗತ್ಯ ಅನುಭವವಾಗುತ್ತಿರುವುದು ಒಂದು ಒಳ್ಳೆಯ ಲಕ್ಷಣ. ಭಗವಂತನೂ ಇದಕ್ಕಾಗಿಯೇ ಗಾಂಧೀಜಿಯನ್ನು ನಮ್ಮಿಂದ ಎತ್ತಿಕೊಂಡು ಹೋಗಿಬಿಟ್ಟ.

ನಾವು ಚಿಕ್ಕವರು ಮಹಾಪುರುಷರ ಹೆಗಲ ಮೇಲಿದ್ದೇವೆ

ಮಹಾಪುರುಷರ ತಪ್ಪುಗಳನ್ನು ನೋಡುವುದು ಬಹು ವಿಚಿತ್ರವೆನಿಸೀತು. ನಾವು ಚಿಕ್ಕವರಿದ್ದೇವೆ, ಆದರೂ ಅವರ ಹೆಗಲಮೇಲೆ ನಿಂತಿದ್ದೇವೆ. ಅವರು ಎಷ್ಟು ದೂರ ನೋಡುವರೋ ಅದಕ್ಕಿಂತ ಹೆಚ್ಚು ದೂರ ನಾವು ನೋಡಬಲ್ಲೆವು. ನಮ್ಮ ಎತ್ತರ ಎಷ್ಟೇ ಕಡಿಮೆ ಇದ್ದರೂ ಸಹ ನಾನು ಹೇಳುವುದು ಕೇವಲ ಗಾಂಧೀಜಿಯ ಮಟ್ಟಿಗೆ ಮಾತ್ರವಲ್ಲ, ಇತರ ಮಹಾಪುರುಷರ ಬಗೆಗೂ ಮತ್ತು ವಿಶೇಷವಾಗಿ ಗೌತಮಬುದ್ಧನ ವಿಷಯದಲ್ಲಿಯೂ ಸಹ.

ತಮ್ಮ ಕಾರ್ಯಕರ್ತರಲ್ಲಿ ಸಾಮೂಹಿಕ ವಿಚಾರ ವಿಮರ್ಶೆಯ ಮೂಲಕ ಕೆಲಸಮಾಡುವ ಪರಂಪರೆ ಇರುವಂತೆ, ಅದರ ಆತ್ಮವಿಶ್ವಾಸ ಹೆಚ್ಚಿ ಸಂಘಭಾವನೆ ಬೆಳೆಯುವಂತೆ ಪ್ರತಿಯೊಬ್ಬ ಮಹಾಪುರುಷನೂ ಪ್ರಯತ್ನ ಮಾಡಬೇಕು. ಬುದ್ಧ **ಸಂಘಂ ಶರಣಂ ಗಚ್ಛಾಮಿ**—ಎಂದು ಖಂಡಿತ ಹೇಳಿದ. ಆದರೆ ಅದು ಯಾವಾಗ? ಬುದ್ಧ ಇಲ್ಲದಿದ್ದಾಗ. ಬುದ್ಧ ಜೀವಂತವಿದ್ದಾಗ ಎಲ್ಲವೂ ಆತನ ಮಾರ್ಗದರ್ಶನದಲ್ಲೇ ನಡೆಯುತ್ತಿತ್ತು. ಕಡೆಯುವರೆಗೂ ಆತನೇ ಮಾರ್ಗದರ್ಶನ ಮಾಡುತ್ತಿದ್ದ. ಇದಕ್ಕೆ ಬದಲಾಗಿ ಅವರು ಬದುಕಿರು

ವಾಗಲೇ " ಈಗ ನೀವೊಂದು ಸಮುದಾಯ ರಚಿಸಿಕೊಳ್ಳಿ, ವಿಚಾರ ಮಾಡಿ. ಯಾವ ವಿಷಯದಲ್ಲಿ ಏಕಮತ ಇರುವುದೋ ಹಾಗೆ ಮಾಡಿ. ನಾನು ಕೇವಲ ಸಾಕ್ಷೀರೂಪವಾಗಿ ಇರುತ್ತೇನೆ. ನನ್ನ ಸಲಹೆ ಕೇಳಿದಾಗ ಅವಶ್ಯವಾಗಿ ಕೊಡುತ್ತೇನೆ. ಅದು ಬಂಧನಕಾರಕವಾಗಿರದು. ನೀವೆಲ್ಲರೂ ಒಟ್ಟಾಗಿಯೇ ನಿರ್ಣಯ ಕೈಗೊಳ್ಳಬೇಕಾದೀತು" ಎಂದು ಹೇಳಬೇಕಾಗಿತ್ತು. ಹಾಗೆ ಹೇಳಿದ್ದರೆ ಅವನಾದ ಬಳಿಕ ಆತನ ನಾಲ್ವರು ಶಿಷ್ಯರು ಬುದ್ಧನ ಹೆಸರಿನಲ್ಲಿಯೇ ಪೂರಾ ಭಿನ್ನಭಿನ್ನವಾದ ನಾಲ್ಕು ಸಂಪ್ರದಾಯಗಳಲ್ಲಿ ಹಂಚಿಹೋದರೋ ಹಾಗೆ ಬಹುಶಃ ಒಡೆಯುತ್ತಿರಲಿಲ್ಲವೇನೋ.

ಬುದ್ಧ ಹಾಗೆ ಮಾಡಲಿಲ್ಲ. ಆದುದರಿಂದ ಆತನ ನಿರ್ವಾಣದ ತರುವಾಯ ಆತನ ಶಿಷ್ಯರಲ್ಲಿ ತೀವ್ರ ಮತಭೇದ ತಲೆದೋರಿತು, ನಾಲ್ಕು ಪಂಥಗಳು ಎದ್ದು ನಿಂತವು. ನಾಲ್ಕು ಪಂಥಗಳವರು ಹೇಳುತ್ತಾರೆ: 'ಬುದ್ಧ ಭಗವಾನ್ ನಮಗೆ ಹೀಗೆ ಕಲಿಸಿದ' ಎಂದು. ಒಂದು ಪಂಥ ಹೇಳುತ್ತದೆ: 'ಜಗತ್ತು ಪೂರ್ಣ ಸತ್ಯ', ಎರಡನೆಯದು ಹೇಳುತ್ತದೆ: 'ಇಲ್ಲ, ಅದು ಶೂನ್ಯ', ಮೂರನೆಯದು ಹೇಳುತ್ತದೆ: 'ವಿಜ್ಞಾನವುಂಟು' ದರ್ಶನ ಜಂಜಡವೆಲ್ಲ ಬುದ್ಧನ ಹೆಸರಿನಲ್ಲೇ ನಡೆಯುತ್ತದೆ. ಸಾವಿರ ವರ್ಷಗಳವರೆಗೆ ಅವರ ನಡುವೆ ಜಗಳ ನಡೆಯಿತು. ಹಾಗಾಗಿ ದೌರ್ಬಲ್ಯ ಬಂತು. ಅನಂತರ ಶಂಕರಾಚಾರ್ಯರ ಪ್ರಹಾರದಿಂದ ಎಲ್ಲವೂ ಇದ್ದಕ್ಕಿದ್ದಂತೆ ಮುರಿದುಬಿತ್ತು.

ಬುದ್ಧನಂತೆಯೇ ಗಾಂಧೀಯದೂ

ಬುದ್ಧನದಾದಂತೆಯೇ ಗಾಂಧೀಜಿಯದೂ ಆಯಿತು. ಗಾಂಧೀಜಿಯಲ್ಲಿ ಒಂದು ಅಪಾರ ಕರುಣೆ ಕೆಲಸ ಮಾಡುತ್ತಿತ್ತು. ಈ ಕರುಣೆಯ ಪ್ರೇರಣೆಯ ದೆಸೆಯಿಂದ ಅವರು ಎಲ್ಲರಿಗೂ ನಿರಂತರ ತಿಳಿಯಹೇಳುತ್ತ ನಡೆದರು. ತೀರಾ ಕಡೆ ಗಂಟೆಯವರೆಗೂ ಯಾರು ಬಂದರೂ ಅವರ ಮಾತನ್ನು ಕೇಳಿ ವ್ಯಕ್ತಿಗತ ಸಲಹೆ ಕೊಡುತ್ತಲೇ ಇದ್ದರು. ಪರಿಣಾಮವೇನಾಯಿತು? ಅವರಿರುವವರೆಗೆ ಕೆಲಸ ಮಾಡುತ್ತಲಿದ್ದರು. ಅವರು ಹೋದ ಬಳಿಕ ನಾವೆಲ್ಲ ಚದುರಿದೆವು. ಬುದ್ಧನ ಬಳಿಕ ಅವನ ಶಿಷ್ಯರಲ್ಲಿ ತೀವ್ರ ಮತಭೇದ ಉಂಟಾದಂತೆಯೇ ಗಾಂಧೀಜಿಯ ಬಳಿಕವೂ ಅವರ ಉತ್ತಮದಲ್ಲಿ

ಉತ್ತಮ ಸಂಗಡಿಗರು ತೀರಾ ಒಬ್ಬರ ವಿರುದ್ಧ ಇನ್ನೊಬ್ಬರು ನಿಂತುಬಿಟ್ಟರು. ಅಲ್ಪ-ಸ್ವಲ್ಪ ಮತಭೇದ ಉಂಟಾಗುವುದು ಸ್ವಾಭಾವಿಕ. ಅಂಥ ವಿಚಾರ ಭೇದಕ್ಕೆಂದೇ ಪರಮಾತ್ಮ ಅನೇಕ ಮನುಷ್ಯರನ್ನು ಸೃಷ್ಟಿಸಿದ್ದಾನೆ. ಎಲ್ಲರೂ ಸೇರಿ ಪರಿಪೂರ್ಣ ವಿಚಾರವಾಗಲಿ ಎಂದು. ಮತಭೇದ ಏಳುವುದು ಒಂದು ಮಾತು, ಆದರೆ ಈಗ ಅಭಿಪ್ರಾಯಗಳ ಹೋರಾಟವೇ ನಡೆದಿರುವುದು. ಸ್ವಾಮಿ ರಾಮತೀರ್ಥರ ಒಂದು ವಚನವಿದೆ: **ಲಡತೇ ಹೈ ವೀರ್ ಮುರ್-ಮುರ್ ಮುರ್ಝುಮೇ, ಮುರ್ಝುಮೇ, ಮುರ್ಝುಮೇ.** ಇದೇ ರೀತಿ **ಲಡ್‌ರಹೇ ವೀರ್ ಮುರ್-ಮುರ್ ಗಾಂಧೀಜೀ ಮೇ, ಗಾಂಧೀಜೀ ಮೇ.** ಪ್ರತಿಯೊಬ್ಬನೂ ಗಾಂಧೀಜಿಯ ಹೆಸರೆತ್ತಿಕೊಳ್ಳುತ್ತಾನೆ, ಅವರ ಹೆಸರಿನಲ್ಲೇ ಒಳಗೊಳಗೇ ಕಾದಾಡುತ್ತಾನೆ.

ಗಾಂಧೀಜೀ ಇದ್ದಾಗ ಒಂದು ಸರ್ಕಸ್ ನಡೆಯುತ್ತಿತ್ತು. ಸರ್ಕಸ್ಸಿನಲ್ಲಿ ಬಗೆಬಗೆಯ, ತೀರಾ ವಿರುದ್ಧ ಸ್ವಭಾವದ ಪ್ರಾಣಿಗಳು ಸೇರಿರುತ್ತವೆ. ರಿಂಗ್ ಮಾಸ್ತರನ ಅನುಗ್ರಹದಿಂದ ಅಥವಾ ನಿಗ್ರಹದಿಂದ ಒಳಗೆ ತಮ್ಮ ತಮ್ಮ ಪಾತ್ರವನ್ನು ನಿರ್ವಹಿಸುತ್ತವೆ. ಎಲ್ಲವೂ ಸೇರಿ ಸರ್ಕಸ್ ಸುಶೋಭಿತವಾಗಿರುತ್ತದೆ. ಅದೇ ಸ್ಥಿತಿ ಆಗ ಇತ್ತು. ಗಾಂಧೀಜಿಯ ದೃಷ್ಟಿ ತುಂಬ ವ್ಯಾಪಕ ಆಗಿತ್ತು. ವಿಶ್ವರೂಪದರ್ಶನದಲ್ಲಿ ಭಗವಂತ ಎಲ್ಲವನ್ನೂ ಏಕತ್ರಗೊಳಿಸಿದಂತೆಯೇ ಅವರದೂ ವಿಶ್ವರೂಪದರ್ಶನ ಆಗಿತ್ತು. ಅವರಿರುವವರೆಗೆ ಈ ಸರ್ಕಸ್ ನಡೆಯಿತು. ಅವರು ಹೋಗುತ್ತಿದ್ದಂತೆಯೇ ವಿರೋಧೀ ಸ್ವಭಾವದವರೆಲ್ಲ ಒಬ್ಬರ ಎದುರು ಇನ್ನೊಬ್ಬರು ಬಂದುಬಿಟ್ಟರು. ಬುದ್ಧನ ತರುವಾಯದ ಸ್ಥಿತಿಯಂತೆಯೇ ತದ್ವತ್ ಆಯಿತು. ಗಾಂಧೀಜಿಯ ಬಳಿಕವೂ ಹಾಗೆಯೇ ಆಯಿತು.

ಬುದ್ಧನ ಶಿಷ್ಯರ ನಡುವಣ ಮತಭೇದ ದಾರ್ಶನಿಕವಾಗಿತ್ತು, ದರ್ಶನದ ಕ್ಷೇತ್ರದ್ದು. ಗಾಂಧೀಜಿಯ ಶಿಷ್ಯರಲ್ಲಿ ಹುಟ್ಟಿದ ಮತಭೇದ ವ್ಯವಹಾರದ್ದು. ಇನ್ನೊಬ್ಬ ನಾಯಕ ಹೇಳಿದಂತೆ ದೇಶ ನಡೆದರೆ ದೇಶದ ಸರ್ವನಾಶ ಎಂದು ಒಬ್ಬ ನಾಯಕ ಹೇಳುತ್ತಾನೆ. ನೆಹರೂ, ಸರದಾರ್, ರಾಜೇಂದ್ರಬಾಬು, ರಾಜಾಜೀ, ಕೃಪಲಾನೀ, ಜಯಪ್ರಕಾಶ್ ಇವರೆಲ್ಲ ಸತತವಾಗಿ ವರ್ಷಗಟ್ಟಲೆ ಗಾಂಧೀಜಿಯ ಜೊತೆಗೆ ಕೆಲಸಮಾಡಿದ್ದರು. ಅವರಲ್ಲಿಯೂ ಇಷ್ಟೊಂದು

ತೀವ್ರ ಮತಭೇದ ತಲೆದೋರಿಬಿಟ್ಟಿತು! ಮತ್ತೆ ಇವರೆಲ್ಲರೂ ಮೇಲಾಗಿ ತಾವು ಹೇಳುವುದು ಗಾಂಧೀಜಿಗೆ ಅನುಸಾರವೇ ಇದೆ ಎಂದು ಹೇಳಿಕೊಂಡರೆ! ಗಾಂಧೀಜಿಯ ಹೆಸರಿನಲ್ಲಿ ದೇಶದಲ್ಲಿ ಅತ್ಯಂತ ತೀವ್ರ ಮತಭೇದ ಉಂಟಾಯಿತು. ನಮ್ಮ ಚಿಂತನದಲ್ಲಿ ಇಂದು ಕಾಣುವ ಅರಾಜಕತೆ, ಅವ್ಯವಸ್ಥೆಯ ಮೂಲಕಾರಣ.

ಐಕಮತ್ಯದಿಂದ ಕೆಲಸ ಮಾಡುವ ರೂಢಿ ಬಿದ್ದಿದ್ದರೆ....

ಗಾಂಧೀಜೀ ತಮ್ಮ ಕಾರುಣ್ಯ ಮೋಹವನ್ನು ಸ್ವಲ್ಪ ದೂರವಿಟ್ಟಿದ್ದರೆ, ಕಾರುಣ್ಯ ಮೋಹವನ್ನು ದೂರವಿಡುವ ಅನುಕೂಲವನ್ನು ಪರಿಸ್ಥಿತಿ ಒದಗಿಸಿದ್ದರೆ ಅವರು ತಮ್ಮ ಸಂಗಾತಿಗಳಿಗೆ ಹೇಳುತ್ತಿದ್ದರು: "ಸೋದರರೇ, ಪ್ರತ್ಯಕ್ಷ ಮಾರ್ಗದರ್ಶನದಿಂದ ದೂರವಾಗುತ್ತಿದ್ದೇನೆ. ಪ್ರತಿ ವಿಷಯ ಕುರಿತೂ ನೀವೆಲ್ಲ ಒಟ್ಟಾಗಿ ಕಲೆತು ವಿಚಾರಮಾಡಿ. ಮಾಡಬೇಕಾದುದನ್ನು ಐಕಮತ್ಯದಿಂದ ಮಾಡಿ. ಎಷ್ಟು ವಿಷಯಗಳಲ್ಲಿ ಸರ್ವಸಮ್ಮತಿ ಇದೆಯೋ ಅಷ್ಟೇ ಕಾರ್ಯಕ್ರಮವನ್ನು ಎತ್ತಿಕೊಂಡು ಮುಂದೆ ಸಾಗಿ. ಯಾವ ವಿಷಯದಲ್ಲಿ ಒಮ್ಮತ ಇಲ್ಲವೋ ಅದನ್ನು ಸದ್ಯಕ್ಕಂತೂ ಬಿಟ್ಟುಬಿಡಿ"—ಎಂದು. ಕೊನೆಯ ಐದಾರು ವರ್ಷ ಈ ಆಗ್ರಹವನ್ನು ಅವರು ತೊಟ್ಟಿದ್ದರೆ ಪರಿಣಾಮ ವೇನಾಗುತ್ತಿತ್ತು? ಅವರ ಸಂಗಾತಿಗಳಲ್ಲಿ ಏಕತ್ರ ಚಿಂತನ ಮಾಡುವ, ಏಕಮತದಿಂದ ಕೆಲಸ ಮಾಡುವ ರೂಢಿ ಸ್ವಲ್ಪ ಬೀಳುತ್ತಿತ್ತು. ದೇಶಕ್ಕೂ ಲಾಭ ಆಗುತ್ತಿತ್ತು.

ಆದರೆ ಬಾಪೂ ಹಾಗೆ ಮಾಡಲಾಗಲಿಲ್ಲ. ಏಕೆಂದರೆ, ಅವರಲ್ಲಿ ಒಂದು ಅಪಾರ ಕರುಣೆ ಕೆಲಸ ಮಾಡುತ್ತಿತ್ತು. ಆ ಕಾರಣದಿಂದ ಅವರು ಅಂತಿಮ ಗಳಿಗೆಯವರೆಗೂ ವ್ಯಕ್ತಿಗತ ಮಾರ್ಗದರ್ಶನ ಮಾಡುತ್ತಿದ್ದರು. ಈ ಕರುಣೆಯ ದೆಸೆಯಿಂದಲೇ ಕೊನೆಕೊನೆಯವರೆಗೂ ಕಾಂಗ್ರೆಸ್ ಹಾಗೂ ತಮ್ಮ ಸಂಗಡಿಗರೊಡನೆ ಒಳ್ಳೆ ಸಂಬಂಧ ಇಟ್ಟುಕೊಳ್ಳಲು ಪ್ರಯತ್ನಿಸಿದರು. ಅಂತಿಮ ದಿನಗಳಲ್ಲಿ ಗಾಂಧೀಜಿಯ ಒಡನಾಡಿಗಳು ಅವರಿಗೆ ವಿರುದ್ಧವಾಗಿ ಹೋದುದನ್ನು ನೀವು ನೋಡೀರಿ, ಆಗಲೂ ಅವರೊಡನೆ ಕೂಡಿಕೊಂಡೇ ಇದ್ದರು. ಇದರಲ್ಲಿ ಅವರು ಸತ್ಯಕ್ಕಿಂತ ಕರುಣೆಗೆ ಹೆಚ್ಚು ಮಹತ್ವ ಕೊಟ್ಟರು.

ಕರುಣಾಸಕ್ತಿಯ ಬೆಸೆಯಿಂದ ಕಡೆಯ ಗಳಿಗೆಯಲ್ಲೂ ಅವರು ಸಂಗಾತಿಗಳ ವಿರುದ್ಧವಾಗಲಿಲ್ಲ. ಅವರ ಮಾತಿಗೇ ತಮ್ಮ ಸಮ್ಮತಿ ನೀಡಿದರು. ಇಂಗ್ಲಿಷ್ ಭಾಷೆಯಲ್ಲಿ Acquiescence ಎಂಬೊಂದು ಶಬ್ದವಿದೆ, ಹಾಗೆ ಆಗಿ ಹೋಯಿತು, ಎಂದರೆ ತಮ್ಮ ಸಮ್ಮತಿ ಕೊಟ್ಟುಬಿಡುವುದು ಎಂದರ್ಥ.

ಹಿಂದೂಸ್ಥಾನ-ಪಾಕಿಸ್ಥಾನ ಎಂದು ವಿಭಜಿಸುವುದು ಭಾರತದ ಛೇದನ ಮಾಡಿದಂತೆ ಎಂದು ಬಾಪೂ ಎಷ್ಟೋ ಸಲ ಹೇಳಿದ್ದರು. ಜೀವಂತ ವ್ಯಕ್ತಿಯನ್ನು ಹೋಳು ಮಾಡಿದಂತೆ ಎಂದಿದ್ದರು. ಅವರು ಇಂಗ್ಲಿಷ್‌ನಲ್ಲಿ Vivisection ಎಂಬ ಪದ ಪ್ರಯೋಗಿಸಿದ್ದರು. ಆದರೂ ಕೊನೆಗೆ ಈ ಮಾತಿಗೆ ಸಮ್ಮತಿ ಕೊಟ್ಟುಬಿಟ್ಟರು. ವಿಚಾರ ಬಿಟ್ಟುಕೊಟ್ಟರು ಎಂದೇನೂ ಅಲ್ಲ, ಈ ವಿಷಯದಲ್ಲಿ ಇಂದು ಒತ್ತಾಯ ಮಾಡಿದರೆ ಸ್ಥಿತಿ ಕೆಟ್ಟುಹೋದೀತು ಎಂದು ಅವರು ಯೋಚಿಸಿದರು. ಈ ಕಾರಣಕ್ಕಾಗಿ ವಿಭಜನೆಯನ್ನು ಅಂಗೀಕರಿಸಿದರು. ಇದೂ ತಮ್ಮ ಅಪಾರ ಕರುಣೆಯ ಕಾರಣದಿಂದಲೇ.

ಸತ್ಯನಿಷ್ಠ ಮನುಷ್ಯ ಅಂತ್ಯದಲ್ಲಿ ಕರುಣಾನಿಷ್ಠನಾದ

ಈ ರೀತಿ ಸತ್ಯನಿಷ್ಠ ಮನುಷ್ಯ ಕಡೆಗೆ ಕರುಣಾನಿಷ್ಠ ಆಗಿಹೋದ. ಸತ್ಯ ಇಷ್ಟುಮಟ್ಟಿಗೆ ಮುರಿಯಿತು. ಬಾಪೂ ಜೀವನದ ಶೋಕಾಂತ ಇದು—ಗುಂಡಿನ ಏಟು ಬಿದ್ದುದು ಅಂಥ ದೊಡ್ಡ ದುರಂತವಲ್ಲ. ಸತ್ಯಕ್ಕೇ ಅಂಟಿಕೊಂಡು ಕುಳಿತಿದ್ದರೆ ಏನಾಗುತ್ತಿತ್ತು ಎಂಬುದನ್ನು ಇಂದು ಹೇಳಲು ಸಾಧ್ಯವಿಲ್ಲ. ಆಗಲೂ ಬಹುಶಃ ಅವರ ಕೊಲೆ ಆಗಿಯೇ ಆಗುತ್ತಿತ್ತೇನೋ. ಈಗ ಈ ಸ್ಥಿತಿಯಲ್ಲಿ ವಿಭಜನೆಯನ್ನು ನಾನು ಮಾನ್ಯಮಾಡದಿದ್ದರೆ ನನ್ನ ನಿಸ್ಸಹಾಯಕ ಸಂಗಾತಿಗಳು ಕೊಲೆಯಾದಾರು ಎಂದು ಬಾಪೂಗೆ ಅನಿಸಿತು. ಒಂದು ಕಡೆ ಬ್ರಿಟಿಷ್ ಸರಕಾರ ಮತ್ತೊಂದು ಕಡೆ ಗಾಂಧೀ, ಈ ಇಬ್ಬರ ನಡುವೆ ನಿಷ್ಪಾಪಿಗಳು ಹಿಟ್ಟಾಗಿಹೋದರು. ಈ ಕರುಣಾದೃಷ್ಟಿಯಿಂದ ಅಂತ್ಯದಲ್ಲಿ ವಿಭಜನೆಯ ವಿಷಯದಲ್ಲಿ ಸಹಮತರಾಗಿ ಹೋದರು. ವಿಚಾರ ಮಾಡಿದ ಬಳಿಕ ನನಗೆ ಹೀಗನಿಸುತ್ತದೆ.

ಇರಲಿ, ಇದೆಲ್ಲ ತಿಳಿಯಬೇಕಾದ ಸಂಗತಿ. ಇದನ್ನು ತಿಳಿದರೆ ಹಿಂದಿನ ಅನುಭವದಿಂದ ಸ್ವಲ್ಪ ಕಲಿತುಕೊಂಡೇವು. ವಿಚಾರಗಳನ್ನು ಯಾವಾಗಲೂ

ಪರೀಕ್ಷಿಸುತ್ತಲಿರಬೇಕು. ಎಲ್ಲ ಪ್ರೇರಕ ವಿಚಾರಗಳ ಅಧ್ಯಯನವಾಗಬೇಕು. ಅದರಲ್ಲಿರುವ ಅವಿಚಾರ ಹಾಗೂ ದುರ್ವಿಚಾರದ ಅಂಶಗಳನ್ನು ನಿವಾರಿಸಬೇಕು. ಈ ರೀತಿ ವಿಚಾರಗಳ ಅಧ್ಯಯನ ನಡೆದರೆ ತೋರಿಬರುವ ಸ್ಫೂರ್ತಿಕ್ಷಯ ಕಂಡುಬಾರದು.

ಸ್ವಸ್ಥವಾಗಿ ಒಮ್ಮೆ ಒಂದು ವಿಚಾರವನ್ನು ಸ್ವೀಕರಿಸಿದಮೇಲೆ ಅದು ನಮ್ಮದಾಗಿಬಿಡಬೇಕು, ಇನ್ನೊಬ್ಬರದಲ್ಲ. ಆಮೇಲೆ ಅದು ಗಾಂಧೀ ವಿಚಾರವೇ ಆಗಿರಬಾರದು, ನಮ್ಮ ವಿಚಾರವೇ ಆಗಿಬಿಡಬೇಕು. ಹಾಗಾದಾಗಲೇ ಈ ವಿಚಾರಗಳನ್ನು ಆತ್ಮವಿಶ್ವಾಸದಿಂದ ಅನುಸರಿಸಬಲ್ಲೆವು, ಪರಿಶೀಲಿಸಬಲ್ಲೆವು. ಈ ವಿಚಾರ ಗಾಂಧೀ ಮೂಲಕವಾಗಿ ಬಂದಿರಲೊಲ್ಲದೇಕೆ, ಒಮ್ಮೆ ನಿಮಗೆ ಇಷ್ಟವಾಗಿಬಿಟ್ಟರೆ, ನೀವು ಅಂಗೀಕರಿಸಿಬಿಟ್ಟರೆ ಆ ಕಾರಣದಿಂದ ಅದು ನಿಮ್ಮದೇ ಆದೀತು. ಒಬ್ಬ ತಂದೆ ಕನ್ಯೆಯನ್ನು ಇಷ್ಟಪಟ್ಟ, ಸ್ವೀಕರಿಸಿದ, ಆ ಕಾರಣದಿಂದ ಅದು ನಿನ್ನದಾಗಿಬಿಟ್ಟಿತು. ಅನಂತರ ಅದರ ಜವಾಬ್ದಾರಿ ನನ್ನದಲ್ಲ, ತಂದೆಯದು ಎಂದರೆ ಅದು ತೀರಾ ಬೇಜವಾಬುದಾರಿತನ. ಆದುದರಿಂದ ಗಾಂಧೀಜಿಯ ಕಡೆಯಿಂದ ನಮಗೆ ಸಿಕ್ಕಿರುವ ವಿಚಾರ ನಮ್ಮದೇ ಆಗಿಹೋಗಬೇಕು. ಅದನ್ನು ಆತ್ಮಸಾತ್ ಮಾಡಿಕೊಳ್ಳಬೇಕು. ಹಾಗಾದರೆ ನಮಗೆಂದೂ ನಿರಾಶೆ ಉಂಟಾಗದು, ಪ್ರೇರಣೆಯ ಅಭಾವ ಇರದು, ನಾವು ನಿರಂತರವಾಗಿ ಪೂರ್ಣ ಆತ್ಮವಿಶ್ವಾಸದಿಂದ ಕೆಲಸಮಾಡಬಲ್ಲೆವು. ●

೧೯

ಗಾಂಧೀ-ವಿಚಾರದ ಪ್ರಾಣಕಾರ್ಯ

1945ರಲ್ಲಿ ಅಂತಿಮ ಬಾರಿ ಸೆರೆಮನೆಯಿಂದ ಬಂದಮೇಲೆ 'ಸಮಗ್ರ ಚಿಂತನ' ಎಂಬ ಶಬ್ದವನ್ನು ಪದೇಪದೇ ಹೇಳತೊಡಗಿದರು. 'ಸಮಗ್ರ ಆಗಿರಬೇಕು, ಸಮಗ್ರ ಆಗಿರಬೇಕು' ಎಂದು ಹೇಳುತ್ತಿದ್ದರು. ನಾಲ್ಕೈದು ತುಣುಕುಗಳನ್ನು ಒಟ್ಟಿಗೆ ಸೇರಿಸಿ ಹೊಲಿಯುವುದು ಎಂದು ಈ ಸಮಗ್ರದ ಅರ್ಥವಲ್ಲ, ಸಮಗ್ರ ಹೊಲಿಗೆ ಅಲ್ಲ, ನೇಯಿಗೆ. "ಎಲ್ಲ ರಚನಾತ್ಮಕ ಕಾರ್ಯಕ್ರಮಗಳೂ ಹಾಸುಹೊಕ್ಕಾಗಿ ಓತಪ್ರೋತ ಆಗಿಬಿಡಬೇಕು. ಆಗಲೇ ಶಕ್ತಿಯ ಉದ್ಭವ"—ಎಂದು ಕೊನೆಕೊನೆಗೆ ಮತ್ತೆ ಮತ್ತೆ ಹೇಳುತ್ತಿದ್ದರು.

ಸ್ವರಾಜ್ಯ ಬಂತು. ಅದರಿಂದ ಗಾಂಧೀಜಿಗೆ ಸಂತೋಷವಿರಲಿಲ್ಲ. ಏನೋ ಸರಿ, ಸ್ವರಾಜ್ಯ ಸಿಕ್ಕಿತು, ಅದರಿಂದ ಅವರ ಆಶೆಗಳು ಫಲಿಸಲಿಲ್ಲ. ಖಾದಿ ಗ್ರಾಮೋದ್ಯೋಗ ವಿಷಯದ ಅವರ ಆಶೆಗಳು ಫಲಿಸಲಿಲ್ಲ, ಶಾಂತಿ ಸ್ಥಾಪನೆಯದು ಅಥವಾ ಅಹಿಂಸೆಯ ವಿಚಾರದ್ದೂ ಫಲಿಸಲಿಲ್ಲ. ಅವರ ಜೀವನದ ಮುಖ್ಯ ಅಂಶಗಳಾಗಿದ್ದವು ಫಲಿಸಲಿಲ್ಲ. ಖಾದಿ ಗ್ರಾಮೋದ್ಯೋಗ ಗಳಿಂದ ಆರ್ಥಿಕ ಕ್ಷೇತ್ರದಲ್ಲಿ ಜನರು ತಾವೇ ಶೋಷಣದಿಂದ ಮುಕ್ತರಾಗಬೇಕು. ಅಹಿಂಸೆ ಮತ್ತು ಸತ್ಯಾಗ್ರಹಗಳಿಂದ ಜನರು ಸ್ವತಃ ಶಾಸನದಿಂದ ಮುಕ್ತರಾಗಿ ಸ್ವರಾಜ್ಯ ಪಡೆಯಬೇಕು. ಇವುಗಳ ವಿಷಯದಲ್ಲಿ ಅವರ ಮನಸ್ಸಿನಲ್ಲಿ ಅಸಂತೋಷ ಉಳಿಯಿತು. ಇದರ ವರ್ಣನೆಯನ್ನು ಪ್ಯಾರೇಲಾಲ್‌ಜೀ ತಮ್ಮ ಅದ್ಭುತಗ್ರಂಥ 'ದಿ ಲಾಸ್ಟ್ ಫೇಜ್' (ಪೂರ್ಣಾಹುತಿ) ನಲ್ಲಿ ಕೊಟ್ಟಿದ್ದಾರೆ. ಕೊನೆಯಲ್ಲಿ ಅವರ ತೀವ್ರ ಚಿಂತನೆ ನಡೆಯುತ್ತಿತ್ತು. ತಮ್ಮ ಎಲ್ಲ ಕೆಲಸದಲ್ಲೂ ಸ್ವಲ್ಪ ನವಸಂಸ್ಕರಣ ಮಾಡಲು ಯೋಚಿಸುತ್ತಿದ್ದರು.

ನವಸಂಸ್ಕರಣಕ್ಕೆ ಅವಕಾಶ ಸಿಗಲಿಲ್ಲ

ಆದರೆ ಈ ಅಂಶಗಳನ್ನು ಜಾರಿಗೆ ತರಲು ಅವಕಾಶ ಸಿಗಲಿಲ್ಲ. ಕಡೆಗೆ

ಸೇವಾಗ್ರಾಮದಲ್ಲಿ ಒಂದು ಸಮ್ಮೇಳನವನ್ನು ಅವರು ಕರೆದಿದ್ದರು. ತಮ್ಮ ಎಲ್ಲ ಸಂಗಡಿಗರನ್ನೂ ಅಲ್ಲಿ ಕರೆದು ಆ ವಿಚಾರ ತಿಳಿಸಬೇಕೆಂದಿದ್ದರು. ಆದರೆ ಇದು ಸಾಧ್ಯವಾಗಲೇ ಇಲ್ಲ. ಸಮ್ಮೇಳನವಂತೂ ಆಯಿತು. ಆದರೆ, ಬಾಪೂವಿನ ಮೃತ್ಯುವಾದ ಬಳಿಕ. ಅವರು ತೀರಿಕೊಂಡಮೇಲೆ ಅವರ ಎಲ್ಲ ಸಂಗಡಿಗರೂ ಸೇವಾಗ್ರಾಮದಲ್ಲಿ ಸಮಾವೇಶಗೊಂಡರು. ಆಗ ಮಾರ್ಗದರ್ಶನ ಮಾಡಲು ಬಾಪೂವನ್ನು ನಮ್ಮ ನಡುವೆ ಉಳಿಯಗೊಟ್ಟೇ ಇರಲಿಲ್ಲ.

ಬಾಪೂ ಹೋದಮೇಲೆ ನಾನು ನನ್ನ ಕರ್ತವ್ಯವೇನೆಂದು ಯೋಚಿಸ ತೊಡಗಿದೆ. ಆಗ ನಾನು ನನ್ನ ಸ್ಥಾನವನ್ನು ಬಿಡಬೇಕು ಎಂದು ಅನಿಸಿತು. ಸೇವಾಗ್ರಾಮದ ಸಮ್ಮೇಲನದಲ್ಲಿ ಪಂಡಿತ ನೆಹರೂ ಅವರ ಸ್ಥಿತಿ ನೋಡಿ, ಅವರ ಬೇಡಿಕೆಯಂತೆ ಪ್ರಯೋಗಾರ್ಥವಾಗಿ ನಿರಾಶ್ರಿತರ ಸೇವೆಗಾಗಿ ಆರು ತಿಂಗಳು ಕಾಲ ಕೊಡುವೆನೆಂದು ಪ್ರಕಟಿಸಿದೆ. ಆ ಸಮಯದಲ್ಲಿ ಕೆಲವು ಮಂದಿ ರಚನಾತ್ಮಕ ಕಾರ್ಯಕರ್ತರು ರಚನಾತ್ಮಕ ಕೆಲಸಕ್ಕೆ ಸರಕಾರಿ ಸಹಾಯಕ್ಕಾಗಿ ಪಂಡಿತ ನೆಹರೂ ಮತ್ತಿತರ ರಾಜಕೀಯ ನಾಯಕರನ್ನೂ ಕೇಳಿದ್ದರು. ನಾನಾದರೋ ವಿಶೇಷತಃ ಪಂಡಿತ ನೆಹರೂ ಅವರನ್ನೇ ಸಂಬೋಧಿಸಿ ನಿಮ್ಮಿಂದ ನಾನು ಯಾವ ವಿಶೇಷ ಸಹಾಯವನ್ನೂ ಅಪೇಕ್ಷಿಸುವುದಿಲ್ಲ, ಹಾಗಾದರೆ ನನಗೆ ಸಂತೋಷ ಎಂದು ಹೇಳಿದೆ.

ನಾರದಮುನಿಯಾಗಿ ಸರ್ವೋದಯ ತರುವುದು ಸಾಧ್ಯವಿಲ್ಲ

ಇದಕ್ಕಾಗಿ ನಾನು ಕೆಲವು ಸಂಗಡಿಗರೊಡಗೂಡಿ ನಿರಾಶ್ರಿತರ ಪುನರ್ವಸತಿಯ ಕೆಲಸವನ್ನು ಮಾಡಿದೆ. ಈ ಆರು ತಿಂಗಳಲ್ಲಿ ನಾವು ಕಂಡ ಸ್ವಾರಸ್ಯವನ್ನು ಸಮಗ್ರವಾಗಿ ವರ್ಣಿಸಬೇಕಾದರೆ ಒಂದು ಗ್ರಂಥವನ್ನೇ ಬರೆಯಬೇಕಾದೀತು. ನಾನು ಸಂಪರ್ಕ (Liason) ಸಾಧಿಸುವ ಕೆಲಸ ಮಾಡಬೇಕಾಗಿತ್ತು. ನಮ್ಮ ಭಾಷೆಯಲ್ಲಿ ಇದನ್ನು 'ನಾರದಮುನಿ' ಎಂದು ಹೇಳಬಹುದು. ಇಲ್ಲಿಯದು ಅಲ್ಲಿಗೆ ತಲಪಿಸುವುದು, ಅಲ್ಲಿಯದು ಇಲ್ಲಿಗೆ— ಈ ಕೆಲಸ ಮಾಡಬೇಕಾಗಿತ್ತು. ಪಂಡಿತ್‌ಜೀ ಹೇಳುತ್ತಿದ್ದ ಒಂದು ಮಾತು, ಆ ಮೂಲಕ ಅದನ್ನು ಆಗಮಾಡಿಸಬೇಕಾಗಿದ್ದುದು, ಅವರ ವಿಚಾರವೇ ಭಿನ್ನವಾಗಿತ್ತು. ಆದ ಕಾರಣ ಇದು ನಡೆಯಲಾರದಂಥದಾಗಿತ್ತು.

ನಾನೇನಾದರೂ ಹೇಳಿದರೆ ಪಂಡಿತ್‌ಜೀ ಹೇಳುತ್ತಿದ್ದರು: ಈ ವಿಷಯ ನನಗೆ ಒಪ್ಪಿಗೆ ಇದೆ, ಮೂರು ತಿಂಗಳ ಮುನ್ನವೇ ಆದೇಶ ಹೊರಡಿಸಲಾಗಿದೆ— ಎಂದು. ಆದರೂ ಅದು ಜಾರಿಯಾಗುತ್ತಿರಲಿಲ್ಲ, ಹಾಗಿತ್ತು ಅಂಧಾಧುಂಧ ಕಾರುಬಾರು.

ಆಗ ನಾನು ಬಹಳ ಪರಿಶ್ರಮ ಮಾಡಿದೆ. ಆರು ತಿಂಗಳ ಅನುಭವದಲ್ಲಿ ಈ ಕೆಲಸದಿಂದ ನಮ್ಮ ಉದ್ದೇಶ ಸಿದ್ಧಿಸುವುದಿಲ್ಲ ಎಂದು ಕಂಡುಬಂತು. ಈ ಕೆಲಸ ಬಿಟ್ಟು ಹೊರಬಂದೆ.

ಮತ್ತೆ ಏನುಮಾಡುವುದು ಎಂದು ಯೋಚಿಸತೊಡಗಿದೆ. ಬಾಪೂ ಹೊರಟುಹೋದಮೇಲೆ ಭಾರತದಲ್ಲಿ ಎಲ್ಲೆಡೆ ಎಲ್ಲೆಗಾಣದ ನಿರಾಶೆ ಹಬ್ಬಿತ್ತು. ಎಲ್ಲ ರಚನಾತ್ಮಕ ಕಾರ್ಯಕರ್ತರು ಧೈರ್ಯ ಕಳೆದುಕೊಂಡು ಕುಳಿತುಬಿಟ್ಟಿದ್ದರು. ತಮ್ಮ ಯಾವ ಬೇಳೆಯೂ ಬೇಯುವ ಯಾವ ಆಶೆಯೂ ಅವರಿಗೆ ಇರಲಿಲ್ಲ. ನಮ್ಮ ವಿಚಾರಕ್ಕೆ ಕೊನೆ ಬಂದುಬಿಟ್ಟಿತು ಈಗ ಎಂದು ತಿಳಿಯತೊಡಗಿದರು. ನಮ್ಮದೇನೂ ನಡೆಯುವುದಿಲ್ಲ. ಒಂದು ಯುಗ ಮುಗಿದು ಮತ್ತೊಂದು ಪ್ರಾರಂಭವಾಗಿದೆ. ಅದರಲ್ಲಿ ಅಹಿಂಸೆಯ ವಿಚಾರ ಹೂತು ಹಣ್ಣಾಗದು. ಸರ್ದಾರ್ ಪಟೇಲರು ಒಂದು ಭಾಷಣ ಮಾಡಿದ್ದರು. ಅದರಲ್ಲಿ ಅವರು ಹೇಳಿದ್ದರು: "ಜನರು ಗಾಂಧೀಜಿಯ ಮಾತನ್ನೇ ಕೇಳದಿದ್ದಮೇಲೆ ನಮ್ಮ ಮಾತನ್ನು ಯಾರು ಕೇಳುತ್ತಾರೆ? ಈಗ ದೇಶ ಸ್ವತಂತ್ರವಾಗಿದೆ. ಯುದ್ಧ ಸಾಮರ್ಥ್ಯವುಳ್ಳ ಉದ್ಯೋಗಗಳ ವಿಕಾಸವಾಗಬೇಕು."

ಆದರೆ ನಾನು ಮನಸ್ಸಿನಲ್ಲೇ ಯೋಚನೆ ಮಾಡಿಕೊಳ್ಳುತ್ತಿದ್ದೆ: ಜಗತ್ತಿನಲ್ಲಿ ಯುದ್ಧಸಾಮರ್ಥ್ಯಕ್ಕೆ ಇರುವ ಅಗತ್ಯಕ್ಕಿಂತ ಹೆಚ್ಚು ಶಾಂತಿಸಾಮರ್ಥ್ಯದ ಆವಶ್ಯಕತೆ ಇದೆ ಎಂದು. ಶಾಂತಿಯ ಪ್ರವೇಶವಿರುವ, ಅದಕ್ಕೆ ಕ್ಷಮತೆ ಉಳ್ಳ ಕೆಲಸಗಳನ್ನು ಆವಿರ್ಭಾವಗೊಳಿಸಬೇಕು. ಈ ರೀತಿ ಶಾಂತಿಯ ಪ್ರಸ್ತಾಪವಿರುವ ಕೆಲಸಗಳ ವಿಷಯವಾಗಿ ಯೋಚಿಸತೊಡಗಿದೆ.

ಕಡೆಯಲ್ಲಿ ಬಂತು ಬೆಳಕು

ಬೆಳಕನ್ನು ಹುಡುಕುತ್ತ ಹುಡುಕುತ್ತ ನಾನು ತೆಲಂಗಾಣಕ್ಕೆ ಬಂದೆ. ಬೆಳಕಂತೂ ಇದ್ದೇ ಇದೆ ಎಂದು ನಾನು ತಿಳಿದಿದ್ದೆ. ಅದು ನನಗೆ ಕಾಣುತ್ತಿರ

ಲಿಲ್ಲ, ಅಷ್ಟೆ. ಕಡೆಗೆ ನನಗೆ ಅದು ಅಲ್ಲಿ ಸಿಕ್ಕಿತು. ಅದನ್ನು ನಾನು ಈಶ್ವರನ ಸಂಕೇತ ಎಂದು ತಿಳಿದೆ. ಯಾರೋ ಒಳಗಿನಿಂದ ಹೇಳುತ್ತಿದ್ದಾನೆಂದು ತಿಳಿಯಿರಿ: "ನಿನಗೆ ಅಹಿಂಸೆಯಲ್ಲಿ ಶ್ರದ್ಧೆ ಇದೆಯಲ್ಲವೇ? ಇದರಲ್ಲಿ ಅಂಜುವುದಾದರೆ ಅಥವಾ ಶಂಕೆಪಡುವುದಾದರೆ ಅಹಿಂಸೆ ಮುಂದಾಗುವುದರಿಂದ ನಿನ್ನ ನಂಬಿಕೆಯನ್ನು ಬಿಡಬೇಕಾದೀತು."

ಸರಿ, ಆಗಿನಿಂದ ಈ ಭೂದಾನದ ಕೆಲಸ ಆರಂಭವಾಯಿತು. ಒಂದು ಹೊಸ ಪ್ರಕ್ರಿಯೆ ಪ್ರಾರಂಭವಾಯಿತು. ಇದು ಭಾರತೀಯ ಮಾನಸವನ್ನು ಮುಟ್ಟಿಬಿಟ್ಟಿತು. ಸಾವಿರಾರು, ಲಕ್ಷಗಟ್ಟಲೆ ಎಕರೆ ಭೂಮಿ ದಾನವಾಗಿ ಸಿಕ್ಕಿತು. 12 ಲಕ್ಷ ಎಕರೆಗಳು ಭೂಮಿಹೀನ ಕುಟುಂಬಗಳಲ್ಲಿ ಹಂಚಿ ಆಯಿತು. ಭೂ ಹಿಡುವಳಿ ಪರಿಮಿತಿ ಇತ್ಯಾದಿ ಕಾನೂನುಗಳ ಮೂಲಕ ಒತ್ತಾಯಪಡಿಸಿದರೂ ಭೂದಾನಕ್ಕಿಂತ ಕಡಿಮೆ ಭೂಮಿಹೀನರಿಗೆ ಸಿಕ್ಕಿದೆ.

ಆಂದೋಲನವಲ್ಲ, ಆರೋಹಣ

ಭೂದಾನದಿಂದ ಗ್ರಾಮದಾನ ಪ್ರಕಟವಾಯಿತು. ಹೊಸ ಅಡಿಪಾಯದ ಮೇಲೆ ಹಳ್ಳಿಯ ಸಮಗ್ರ ಆಯೋಜನೆ! ಕೇವಲ ವ್ಯಕ್ತಿಗತ ದಾನವಲ್ಲ, ಸಾಮೂಹಿಕ ಸಂಕಲ್ಪ ಹಾಗೂ ಪುರುಷಾರ್ಥದಿಂದ ಗ್ರಾಮಸಮಾಜದ ಹೊಸ ರಚನೆ! ಗ್ರಾಮ ಸ್ವರಾಜ್ಯದ ದಿಸೆಯಲ್ಲಿ ಸಮಗ್ರ ಕಾರ್ಯಕ್ರಮ! ಕ್ರಮ ಕ್ರಮವಾಗಿ ಹರಡುತ್ತ ಹೋಯಿತು. ಇಂದು ಈ ಗ್ರಾಮದಾನ ಪ್ರಖಂಡ ದಾನ, ಜಿಲ್ಲಾ ದಾನ, ಮತ್ತು ಪ್ರಾಂತ ದಾನದವರೆಗೆ ಬಂದು ಮುಟ್ಟಿದೆ. ನಾನು ಇದನ್ನು 'ಆಂದೋಲನ' ಅಲ್ಲ, 'ಆರೋಹಣ' ಎನ್ನುತ್ತೇನೆ. ಮೇಲೆ ಹತ್ತುತ್ತಾ ಹೋದಂತೆಲ್ಲಾ ದರ್ಶನ ವ್ಯಾಪಕವಾಗುತ್ತದೆ. ಹೊಸ ಹೊಸ ಪರ್ವ ದೃಷ್ಟಿಗೋಚರವಾಗುತ್ತಾ ಹೋಗುತ್ತದೆ. ಜೊತೆಗೆ ರಸ್ತೆ ಹೆಚ್ಚು ಹೆಚ್ಚು ಕಠಿಣವಾಗುತ್ತಾ ಹೋಗುತ್ತದೆ.

ಇಷ್ಟೆಲ್ಲಾ ಕೆಲಸ 18–19 ವರ್ಷಗಳಲ್ಲಿ ನಡೆಯಿತು. ಇದು ಸಣ್ಣ ಸಂಗತಿಯಲ್ಲ. ಸ್ವರಾಜ್ಯದ ಆಂದೋಲನವನ್ನು ನೋಡಿ ಕಾಂಗ್ರೆಸ್ಸಿನ ಕೆಲಸ 1885ರಲ್ಲಿ ಆರಂಭವಾಯಿತು. 'ಸ್ವರಾಜ್ಯ' 1906ರಲ್ಲಿ ಸಿಕ್ಕಿತು. ಅಲ್ಲಿಯ ತನಕ ದುಃಖಿತರ ಸೇವೆ ಮಾಡುವುದು, ಸರಕಾರದ ಟೀಕೆ ಮಾಡುವುದು,

ಇತ್ಯಾದಿ ಕೆಲಸ ನಡೆಯುತ್ತಿತ್ತು. 1906ರಲ್ಲಿ ಕಲ್ಕತ್ತ ಅಧಿವೇಶನದಲ್ಲಿ ದಾದಾಭಾಯಿ ನವರೋಜಿ ಹೇಳಿದರು : "ಸ್ವರಾಜ್ಯವಿಲ್ಲದೆ ಹಿಂದೂಸ್ಥಾನದಲ್ಲಿ ದುಃಖಗಳ ನಿವಾರಣೆ ಆಗಲಾರದು." ಈ ರೀತಿ 21 ವರ್ಷ 'ಸ್ವರಾಜ್ಯ' ಶಬ್ದ ಬರಲು ಹೋಯಿತು. ಮತ್ತೆ ಗೋಖಲೆ, ತಿಲಕ್ ಮುಂತಾದವರು ಈ ಶಬ್ದ ವನ್ನು ಜಪಿಸಿದರು. ಆಮೇಲೆ ಗಾಂಧೀಜೀ ಬಂದರು. ಸ್ವರಾಜ್ಯಕ್ಕಾಗಿ ಪ್ರಬಲ ಆಂದೋಲನ ನಡೆಸಿದರು. 1921ರಲ್ಲಿ ಅವರು ಹೇಳಿದರು : "ಒಂದು ವರ್ಷದಲ್ಲಿ ಸ್ವರಾಜ್ಯ ಸಾಧಿಸುವೆವು." ಒಂದು ವರ್ಷದಲ್ಲಂತೂ ಸಿಗಲಿಲ್ಲ, ಆದರೆ ಒಂದು ಭಾವನೆ ನಿರ್ಮಾಣವಾಯಿತು. ಕಡೆಗೆ ಸ್ವರಾಜ್ಯ ಸಿಕ್ಕಿತು 1947ರಲ್ಲಿ, ಕಾಂಗ್ರೆಸ್ ಪ್ರಾರಂಭವಾಗಿ 62 ವರ್ಷಗಳ ಬಳಿಕ ! ಈ ರೀತಿ ನೋಡಿದರೆ ಈ 18–19 ವರ್ಷಗಳಲ್ಲಿ ನಡೆದಿರುವ ಕೆಲಸ ಸಣ್ಣದಲ್ಲ. ಅಹಿಂಸಕ ಸಮಾಜ ರಚನೆಯ ವಿಚಾರ ತುಂಬಾ ವಿಕಾಸಗೊಂಡಿದೆ. ಅದಕ್ಕೆ ಲೋಕಸಮ್ಮತಿ ಸಿಕ್ಕಿದೆ. ಹಳ್ಳಿಹಳ್ಳಿಗೂ ಹೋಗಿ ಗ್ರಾಮದಾನದ ಪತ್ರದ ಮೇಲೆ ಲಕ್ಷಾಂತರ ಜನರ ಸಹಿ ತೆಗೆದುಕೊಳ್ಳಲಾಗಿದೆ. ಗಾಂಧೀಜಿಯ ಕಾಲ ದಲ್ಲಿ ಗ್ರಾಮ ಪ್ರದೇಶದಲ್ಲಿ ಇಷ್ಟು ವ್ಯಾಪಕವಾಗಿ ಕೆಲಸ ನಡೆಯಲಿಲ್ಲ ಎಂದು ಧೀರೇಂದ್ರಭಾಯಿ ಹೇಳುತ್ತಾರೆ.

ಈ ರೀತಿ ಸರ್ವೋದಯದ ವಿಚಾರ ಒಂದು ಘಟ್ಟವನ್ನು ಬಂದು ತಲುಪಿದೆ. ಕಡೆಯ ಘಟ್ಟ ಇನ್ನೂ ದೂರವಿದೆ. ದೇವರು ಬಯಸುವುದಾದರೆ ಇದು ನಮ್ಮ ಮೂಲ ವಿಚಾರವನ್ನು ಎತ್ತರಿಸಬೇಕು. ಬಾಪೂವಿನ ಗ್ರಾಮ ಸ್ವರಾಜ್ಯದ ಕನಸನ್ನು ನನಸಾಗಿಸಲು ಇದರಿಂದ ಆಧಾರ ಸಿಕ್ಕೀತು. ಒಂದು ಭೂಮಿಕೆ ಸಿದ್ಧವಾದೀತು. ಇದರಿಂದ ಬಾಪೂವಿನ ಅಪೂರ್ಣ ಆಸೆಗಳು ಫಲಿಸಿಯಾವು. ಅಂಥ ಸಂಭವ ಉಂಟಾಗಿದೆ. ಅಹಿಂಸಕ ಸಮಾಜದ ರಚನೆ ಯನ್ನು ಆಗುಮಾಡಿಸಲು ಮೂಲದಿಂದ ಪ್ರಾರಂಭಿಸುವ ಒಂದು ಅನುಪಮ ಅವಕಾಶ ನಮ್ಮ ಮುಂದೆ ಬಂದಿದೆ. ಸರ್ವೋದಯ ವಿಚಾರವನ್ನು ಒಪ್ಪುವವರ ಎದುರು ಇದು ಒಂದು ಸವಾಲು.

ಸಂಘಾತ, ಚೇತನಾ, ಧೃತಿ

ಗೀತೆಯಲ್ಲಿ ಭಗವಂತ ಸಂಘಾತ, ಚೇತನಾ ಮತ್ತು ಧೃತಿಯ

ಮಾತನ್ನು ಹೇಳಿದ್ದಾನೆ. ಕ್ಷೇತ್ರ-ಶರೀರದ ವರ್ಣನೆಯನ್ನೂ ಮಾಡಿದ್ದಾನೆ. ಅದರಲ್ಲಿ ರೂಪವಿದೆ, ಇಂದ್ರಿಯಗಳಿವೆ, ಮನಸ್ಸಿದೆ. ಹೀಗೆ ಬೇರೆ ಬೇರೆ ತತ್ವಗಳನ್ನು ತಿಳಿಸಲಾಗಿದೆ. ಆದರೂ ಶರೀರದ ವರ್ಣನೆ ಪೂರ್ಣವಾಯಿತು ಎಂದು ಭಗವಂತನಿಗೆ ಅನಿಸಲಿಲ್ಲ. ಆದುದರಿಂದ ಸಂಘಾತ ಎಂಬ ಹೆಸರಿನ ತತ್ವವೊಂದಿದೆ ಎಂದು ಹೇಳಿದ್ದಾನೆ. ಸಂಘಾತ ಎಂದರೆ ಒಂದೆಡೆ ಇರುವುದು.

ಬಾಪೂ ಅನೇಕ ರಚನಾತ್ಮಕ ಸಂಸ್ಥೆಗಳನ್ನು ನಿರ್ಮಿಸಿದರು. ಅವೆಲ್ಲದರಲ್ಲೂ ಪೂರಾ ಪೂರಾ ಒಗ್ಗಟ್ಟು ಇತ್ತು ಎಂದೇನೂ ಅಲ್ಲ. ವಿವಿಧ ರಚನಾತ್ಮಕ ಕೆಲಸಗಳು ಬೇರೆ ಬೇರೆಯಾಗಿ ನಡೆಯುತ್ತಿದ್ದುವು. ಹೇಗೆ ಬೇಕೋ ಹಾಗೆ ಸಮನ್ವಯವಾಗಿರಲಿಲ್ಲ. ಅದಕ್ಕಾಗಿಯೇ ಬಾಪು ಕೊನೆ ಕೊನೆಯಲ್ಲಿ 'ಸಮಗ್ರ' ಎಂಬ ಶಬ್ದವನ್ನು ಹೇಳುತ್ತಿದ್ದರು. 'ಸಂಘಾತ'ದ ಹೊರತಾಗಿ ಕೆಲಸ ನಡೆಯಲಾರದು ಎಂಬ ಸಂಗತಿ ಅವರ ಮನಸ್ಸಿಗೆ ಬಂದಿತ್ತು. ಆದುದರಿಂದ ಎಲ್ಲ ಸಂಸ್ಥೆಗಳನ್ನೂ ಸೇರಿಸಿ ಒಂದು ಸಂಘ ಆಗಲಿ ಎಂದು ಅವರು ಹೇಳಿದ್ದರು. ನಾಲಗೆಯನ್ನು ಕಿತ್ತು ಮೇಜಿನ ಮೇಲಿಟ್ಟರೆ ಅದು ಮಾತಾಡಬಲ್ಲದೇ? ಕಿವಿ ಕತ್ತರಿಸಿ ಇಟ್ಟರೆ ಅದು ಕೇಳೀತೇ? ಆದುದರಿಂದ ಪ್ರತಿಯೊಂದು ಅವಯವವೂ ಶರೀರದೊಡನೆ ಸೇರಿಕೊಂಡಿರಬೇಕು. ಇದೇ ರೀತಿ ಎಲ್ಲ ಕೆಲಸವೂ ಏಕಸೂತ್ರದಲ್ಲಿ ಪೋಣಿಸಿದ್ದಾಗಿರಬೇಕು. ಗ್ರಾಮದಾನದ ಮೂಲಕ ನಮಗೆ ಗ್ರಾಮದ ಒಂದು ಘಟಕ ಸಿಕ್ಕುತ್ತದೆ. ಅಲ್ಲಿ ಬಾಪೂವಿನ ಎಲ್ಲ ರಚನಾತ್ಮಕ ಪ್ರವೃತ್ತಿಗಳನ್ನೂ ನಿರ್ಮಿಸಬಹುದು.

ಗೀತೆಯಲ್ಲಿ ಭಗವಂತ ಮುಂದೆ ಸ್ಪಷ್ಟಪಡಿಸಿದ್ದಾನೆ. ಆಮೇಲೆ 'ಚೇತನಾ' ಬೇಕು. ಎಲ್ಲವೂ ಏಕತ್ರವಾದ ಮೇಲೆ ಚೇತನಾ ಇಲ್ಲದಿದ್ದರೆ ಏನು ಪ್ರಯೋಜನ? ಎಲ್ಲ ರಚನಾತ್ಮಕ ಸಂಸ್ಥೆಗಳು ಒಟ್ಟುಗೂಡಿದವು. ಆದರೆ ಆ ಸಂಘದಲ್ಲಿ ಪ್ರಚಲಿತ ಸಮಾಜ ವ್ಯವಸ್ಥೆಯನ್ನು ಬದಲಿಸುವ ಪ್ರೇರಣೆಯೇ ಇಲ್ಲದಿದ್ದರೆ ಏನು ಲಾಭ? ಇಂಥ ಸಮಯದಲ್ಲಿ ಗ್ರಾಮದಾನ ಆಂದೋಲನ ಒಂದು ಕ್ರಾಂತಿಯ ಪಂಜನ್ನು ಹಿಡಿದುಬರುತ್ತಿದೆ. ಅದರಿಂದ ನಮ್ಮ ಕೆಲಸಗಳಲ್ಲಿ ಚೇತನಾ ಸಂಚಾರವಾಗುತ್ತದೆ.

ಸಂಘಾತ ಆಯಿತು, ಚೇತನಾ ಬಂತು, ಆದರೆ ವರ್ಣನೆ ಪೂರ್ಣವಾಗುವುದಿಲ್ಲ. ಭಗವಂತ ಅದಕ್ಕೆ ಧೃತಿಯನ್ನು ಸೇರಿಸಿದ. ಧೃತಿಯಿಂದ

ಸಾತತ್ಯ ಪೂರ್ವಕವಾಗಿ ಕೆಲಸ ಮಾಡುತ್ತಾ ಇರಬೇಕು. ಸಾತತ್ಯವಿಲ್ಲದೆ ಕ್ರಾಂತಿಯಾಗದು. ಲೆನಿನ್ ಮತ್ತು ಗಾಂಧಿ ಕ್ರಾಂತಿ ಮಾಡಿದರು. ಲೆನಿನ್ ಕ್ರಾಂತಿಗಾಗಿ ಎರಡು ದಿನದ ಸಮಯ ಕೊಟ್ಟರೇ? ಗಾಂಧಿ ಕ್ರಾಂತಿಗಾಗಿ ಎರಡು ದಿನದ ಸಮಯ ಕೊಟ್ಟರೇ? 1908ರಲ್ಲಿ ಅವರು 'ಹಿಂದ್ ಸ್ವರಾಜ್ಯ' ಪುಸ್ತಕ ಬರೆದರು. 'ನನ್ನ ಕನಸನ್ನು ನನಸಾಗಿಸಲು ನನ್ನ ಪ್ರಾಣ ಅರ್ಪಿತ' ಎಂದು ಅದರಲ್ಲಿ ಹೇಳಿದ್ದಾರೆ. ಒಂದೇ ಸಮನೆ 40 ವರ್ಷಕಾಲ ಈ ಕೆಲಸ ದಲ್ಲಿ ತೊಡಗಿದ್ದರು. ಈ ರೀತಿ ನಾವು ಗ್ರಾಮದಾನದ ಆಧಾರವನ್ನು ಚೇತನಾವಾನ್, ಧೈರ್ಯಶಾಲಿ ಸಮ್ಮಿಲಿತ ಕಾರ್ಯಕ್ರಮವಾಗಿ ನಡೆಸ ಬೇಕು. ಆಗ ಮಾತ್ರವೇ ಅಹಿಂಸಕ ಸಮಾಜರಚನೆ ಮಾಡಬಲ್ಲೆವು.

ನಮ್ಮ ಕೆಲಸಕ್ಕಾಗಿ ಜನರ ಮತ

ಇಂದಿಗೂ ಹೇಳುತ್ತಾರೆ. ಈ ಎಲ್ಲ ಗ್ರಾಮದಾನ ಮತ್ತು ಬಿಹಾರ-ದಾನ ಕಾಗದದ ಮೇಲೆ ಮಾತ್ರ ಅಲ್ಲವೇ? ಎಂದು ಸರಿ ಈ ಸಂಕಲ್ಪ ಪತ್ರಗಳನ್ನು ವ್ಯವಹಾರಕ್ಕೆ ಇಳಿಸಬೇಕು. ಮತ ಸಿಕ್ಕಿತು ಎಂದರೆ ಸರಕಾರಗಳು ನಡೆಯು ತ್ತವೆ. ಇದು ಏನು ಎಂದು ನಾನು ಕೇಳುತ್ತೇನೆ. ಕಾಗದದ ಮೇಲೆ ಅಲ್ಲವೇ? ಜನತಂತ್ರದ ನಾಟಕ ನಡೆಯುತ್ತದೆ. ವೋಟರುಗಳಲ್ಲಿ ತುಂಬಿ ತುಂಬಿ ಕರೆದುಕೊಂಡು ಹೋಗುತ್ತಾರೆ. ಒಂದು ದಿನ ಉಣಿಸುತ್ತಾರೆ, ಕುಡಿಸು ತ್ತಾರೆ. ಮತದ ಪೆಟ್ಟಿಗೆಯಲ್ಲಿ ಚೀಟಿ ಹಾಕಲು ಹೇಳುತ್ತಾರೆ. ಆದರೂ ಅದರಿಂದ ಕೆಲಸ ಆಗುವುದನ್ನು ನೀವು ನೋಡುತ್ತೀರಿ.

ಗ್ರಾಮದಲ್ಲಿಯಾದರೋ ಜನರು ತಾವೇ ಸಂಕಲ್ಪ ಮಾಡುತ್ತಾರೆ. ಈಗ ಅಂಥದೊಂದು ವ್ಯಾಪಕ ಸಾಮೂಹಿಕ ಸಂಕಲ್ಪವಾಗಿದೆ. ಈ ಸಂಕಲ್ಪ ವನ್ನು ಜಾರಿಗೆ ತರಬೇಕಾಗಿದೆ. ಗ್ರಾಮ ಸಭೆಯನ್ನು ರಚಿಸಿ ಸರ್ವಾನುಮತ ದಿಂದ ಕೆಲಸ ಮಾಡಬೇಕಾಗಿದೆ. ಒಟ್ಟು ಭೂಮಿಯ ಇಪ್ಪತ್ತರಲ್ಲಿ ಒಂದು ಪಾಲನ್ನು ಭೂಮಿಯಿಲ್ಲದವರಿಗೆ ದಾನವಾಗಿ ಕೊಡಬೇಕು. ಭೂಮಿಯ ಒಡೆತನದ ಖಾತೆಯನ್ನು ಗ್ರಾಮ ಸಭೆಯ ಹೆಸರಿನಲ್ಲಿ ಮಾಡಬೇಕು. ಹಳ್ಳಿ ಯಲ್ಲಿ ದುರ್ವ್ಯಸನ, ಮುಕ್ತಿ, ಪೋಲೀಸ್-ಕೋರ್ಟಿನಿಂದ ಬಿಡುಗಡೆಗಾಗಿ ಚಳವಳಿ ನಡೆಸಬೇಕು. ಹಳ್ಳಿಯಲ್ಲಿ ಶಾಂತಿಸೇನೆ ನಿರ್ಮಿಸಬೇಕು. ಹಳ್ಳಿಯಲ್ಲಿ

ಶಾಂತಿಯಿದ್ದು ಜಗಳವಿಲ್ಲದಂತಾಗಲು ಮತ್ತು ಸಾಧ್ಯವಾದರೆ ಹಳ್ಳಿಯಲ್ಲೇ ಕುಳಿತು ಆಗುಗಳನ್ನು ಇತ್ಯರ್ಥಪಡಿಸುವ ವ್ಯವಸ್ಥೆ ಮಾಡಬೇಕು. ಇವೆಲ್ಲ ಕೂಡಲೆ ಆಗಬೇಕು. ಇಂಥ ಸಮಗ್ರ ಆಯೋಜನೆಯನ್ನು ಮಾಡಬಲ್ಲೆವಾದರೆ ಬಹಳ ಭಾರಿ ಶಕ್ತಿಯೊಂದು ಹುಟ್ಟೀತು. ಕಾಗದದ ಗ್ರಾಮದಾನಗಳಲ್ಲಿ ಇಷ್ಟು ಹೆಚ್ಚು ಸಂಭವಗಳು ತುಂಬಿವೆ. ಓಟಿನ ಚೀಟಿಗಳಿಂದ ಇಂಥ ಯಾವ ಜನಶಕ್ತಿಯೂ ಹುಟ್ಟುವುದಿಲ್ಲ.

'ಯೂನಿಯನ್ ಆಫ್ ಸರ್ವೋದಯ ರಿಪಬ್ಲಿಕ್ಸ್'

ಗ್ರಾಮದಾನ ಆಗದವರೆಗೆ ಹಳ್ಳಿಹಳ್ಳಿಯಲ್ಲೂ ಗ್ರಾಮ ಪರಿವಾರ ಉಂಟಾಗುವುದಿಲ್ಲ. ನಮ್ಮ ಸಮಗ್ರ ಕೆಲಸಕ್ಕೆ ಯಾವ ಆಧಾರವೂ ಸಿಗುವುದಿಲ್ಲ. ಹೊಸ ಯುಗವಾದರೋ ವಿಶ್ವ-ರಾಷ್ಟ್ರದ ಯುಗ. ಅದರಲ್ಲಿ ಭಾರತ ಒಂದು ಪ್ರಾಂತವಾಗಿದ್ದೀತು. ಗುಜರಾತ್ ಒಂದು ಜಿಲ್ಲೆಯಾದೀತು. ಅದರ ಒಂದು ಜಿಲ್ಲೆ ಮತ್ತು ಗ್ರಾಮ ಒಂದು ಪರಿವಾರ. ಇಂದು ಕುಟುಂಬ ಸಣ್ಣದಾಗಿದೆ. ಅದನ್ನು ಹಳ್ಳಿಯವರಿಗೆ ಹಬ್ಬಿಸಬೇಕು. ಅದಕ್ಕಾಗಿ ಮೊದಲು ಗ್ರಾಮದಾನ ಮಾಡಿ ಗ್ರಾಮವನ್ನು ಒಂದು ಕುಟುಂಬವನ್ನಾಗಿ ಮಾಡಬೇಕು. ಆಗಲೇ ವಿಶ್ವಶಾಂತಿಯ ಮಾತನ್ನಾಡಬಲ್ಲೆವು ಮತ್ತು ಇಂದಿನ ಯುಗಕ್ಕೆ ತಕ್ಕವರಾಗಬಲ್ಲೆವು. ಗ್ರಾಮಶಾಂತಿಯಾದರೆ ಅದು ವಿಶ್ವಶಾಂತಿಯಲ್ಲಿ ಸಹಕಾರ ನೀಡಬಲ್ಲದು. ಆದುದರಿಂದ ಒಂದು ಕಡೆ 'ಜೈ ಜಗತ್' ಮತ್ತೊಂದು ಕಡೆ 'ಗ್ರಾಮದಾನ'—ಈ ದೃಷ್ಟಿಯಿಂದ ವಿಚಾರಮಾಡಬೇಕಾದೀತು. ಗ್ರಾಮಸಮಾಜದ ಭೂಮಿಕೆಯಿಲ್ಲದೆ ಯಾವುದೂ ನಡೆಯುವುದಿಲ್ಲ. ಯು.ಎಸ್.ಎಸ್.ಆರ್. (Union of Soviet Socialist Republics) ಇರುವ ಹಾಗೆಯೇ ಹಳ್ಳಿಹಳ್ಳಿಯಲ್ಲಿಯೂ 'ಸರ್ವೋದಯ ರಿಪಬ್ಲಿಕ್ಸ್' ನಿರ್ಮಿಸಬೇಕಾದೀತು. ಮತ್ತೆ 'ಯೂನಿಯನ್ ಆಫ್ ಸರ್ವೋದಯ ರಿಪಬ್ಲಿಕ್ಸ್' (ಸರ್ವೋದಯ ಗಣರಾಜ್ಯಗಳ ಸಂಘ ರಾಜ್ಯ) ಆದರೆ ಆಗ ಶಾಂತಿ ಸಾಮರ್ಥ್ಯ ಅಥವಾ ಶಾಂತಿಯ ಸಂಭವ ಅದರಿಂದ ಪ್ರಕಟವಾದೀತು.

ಇಂದು ಜಗತ್ತಿನಲ್ಲಿ ಕಲ್ಯಾಣ ರಾಜ್ಯವಾದೀ, ಸಮಾಜವಾದೀ, ಸೌಮ್ಯವಾದೀ, ಇತ್ಯಾದಿಗಳೆಲ್ಲದರ ಕಡೆಯ ಶಕ್ತಿಪ್ರೇರಣೆ ಸೇವೆಯೇ ಅವೆಲ್ಲ

ಏಕವಾದೀ. ಇಡೀ ಜಗತ್ತನ್ನು ಅವರೆಲ್ಲಾ ಮುದುಕ ಎಂದು ತಿಳಿದು ಕುಳಿತಿದ್ದಾರೆ. ಅವರೆಲ್ಲರ ಕಾರುಬಾರು ಸೇನೆಯದೇ. ಹೊರಗಿನ ಆಕ್ರಮಣದ ಹೆದರಿಕೆಯ ದೆಸೆಯಿಂದಾಗಿ ಮತ್ತು ಆಂತರಿಕ ಬಂಡಾಯದ ಹೆದರಿಕೆಯಿಂದಾಗಿ ಇಂದು ಜನತಂತ್ರದ ಆಧಾರವೂ ಸೇನೆಯೇ. ಈ ಜನತಂತ್ರ ಜನತಂತ್ರವಲ್ಲ. ಜನತಂತ್ರದ ಆಧಾರ ಸೇನೆ ಆಗಿರುವವರೆಗೆ ಅದೂ ಸಹ ಸಾಮ್ಯವಾದ ಮತ್ತು ಬಂಡವಾಳಶಾಹಿ ಮಾಡಬೇಕಾದ್ದನ್ನೇ ಮಾಡಬೇಕಾಗುತ್ತದೆ. ಇಡೀ ಅಧಿಕಾರವನ್ನು ಜನತಂತ್ರವು ತನ್ನ ಕೈಯಲ್ಲೇ ಇಟ್ಟುಕೊಳ್ಳಬೇಕಾಗುತ್ತದೆ. ಎಲ್ಲ ಕಾರುಬಾರನ್ನೂ ಸೇನೆಯನ್ನವಲಂಬಿಸಿಯೇ ಇಡಬೇಕಾಗುತ್ತದೆ. ಈ ರೀತಿ ದುಷ್ಟ ಚಕ್ರ ಸಾಗುತ್ತಿರುತ್ತದೆ. ಇಂದು ಎಲ್ಲರ ಅಂತಿಮ ಆಧಾರವೂ ಸೇನೆ ಮತ್ತು ಶಸ್ತ್ರ. ಇದರಿಂದ ಜಗತ್ತನ್ನು ಪಾರುಮಾಡಬೇಕಾಗಿದೆ. ಗ್ರಾಮದಾನದ ಈ ದಾನಪತ್ರ ನಮ್ಮ ವಿಚಾರಕ್ಕೆ ಒಂದು ಬಹು ದೊಡ್ಡ ಶಕ್ತಿ. ಅದರಲ್ಲಿ ಭಾರಿ ಶಾಂತಿ ಸಾಮರ್ಥ್ಯ—ಶಾಂತಿ ಸಂಭವ ತುಂಬಿದೆ.

ಬಾಪೂವಿನ ಆತ್ಮ ಸ್ಥಿರದೃಷ್ಟಿಯಿಟ್ಟು ಕುಳಿತಿದೆ

ಬಾಪೂವಿನ ಆತ್ಮ ಸ್ಥಿರದೃಷ್ಟಿಯಿಟ್ಟು ಕುಳಿತಿರುವಂತೆ ನನಗನಿಸುತ್ತದೆ. ಅವರ ಆತ್ಮ ಜಗತ್ತಿನ ಯಾವ ಮೂಲೆಯಲ್ಲಿ ಬಿದ್ದಿದೆಯೋ ನನಗೆ ಗೊತ್ತಿಲ್ಲ. ಮುಕ್ತ ಪುರುಷರ ಆತ್ಮ ಈಶ್ವರನಲ್ಲಿ ಲೀನವಾಗಿ ಹೋಗುತ್ತಿವೆ. ಬಾಪೂವಿನ ಆತ್ಮವೂ ಈಶ್ವರನಲ್ಲಿ ಲೀನವಾಗಿರಬಹುದು. ಹಾಗಾದರೆ ಈಶ್ವರನೇ ನಮ್ಮೆದುರು ದೃಷ್ಟಿ ನೆಟ್ಟು ಕುಳಿತಿರಬಹುದು ಎಂದರೆ ಈಶ್ವರನ ಒಳಗಿಂದ ಬಾಪೂವಿನ ಆತ್ಮ ನಮ್ಮನ್ನು ನೋಡುತ್ತಿರುತ್ತಿದೆ. ಅವರು ಈಶ್ವರನಲ್ಲಿ ಲೀನವಾಗಿಲ್ಲದಿದ್ದರೆ, ವಾಸನಾ ಕಾರಣದಿಂದ ಮತ್ತೆಲ್ಲಾದರೂ ಇದ್ದರೆ ಅವರ ಆತ್ಮ ನಮ್ಮ ಕಡೆಯೇ ನೋಡುತ್ತಿರುತ್ತದೆ. ಈಶ್ವರ ನಮ್ಮೊಡನಿದ್ದಾನೆ ಎಂದು ನನಗೆ ಸದಾ ಅನಿಸುತ್ತಿರುತ್ತದೆ. ಭಾರತ ವಿಶ್ವಕ್ಕೆ ಶಾಂತಿಯ ಹಾದಿಯನ್ನು ತೋರಿಸಲಿ ಎಂದು ಆತ ಬಯಸುತ್ತಾನೆ.

ಹೌದು, ಸತ್ತೆಯನ್ನು ಅಗತ್ಯವಾಗಿ ಬದಲಿಸಬೇಕಾಗಿದೆ

ಇದಕ್ಕಾಗಿ ಲೋಕಶಕ್ತಿಯನ್ನು ಜಾಗ್ರತಗೊಳಿಸಬೇಕಾಗಿದೆ. 'ನಮ್ಮ ಭಾಗ್ಯ ಇನ್ನೊಬ್ಬರ ಕೈಲಿ' ಈ ವಿಷಯದ ಮೂಲಕ್ಕೆ ಪೆಟ್ಟುಕೊಡಬೇಕು.

ನನ್ನನ್ನು ಯಾರೋ ಕೇಳಿದರು "ನೀವು ಸತ್ತಾಂತರ ಮಾಡಬಯಸುತ್ತೀರಾ ?" ನಾನೆಂದೆ: "ಹೌದು. ಅವಶ್ಯವಾಗಿ ಮಾಡಬಯಸುತ್ತೇನೆ."

ಸ್ವರಾಜ್ಯಕ್ಕೆ ಮುನ್ನ ಇದ್ದ ಸತ್ತೆ ಮೇಲುಮೇಲಿನದಾಗಿತ್ತು. ಮೂರು ನಾಲ್ಕು ಲಕ್ಷ ಇಂಗ್ಲೀಷರಿದ್ದರು. ಅವರು ಅಷ್ಟೊಂದು ದೂರದಿಂದ ಬಂದು ಈ ವಿಶಾಲ ದೇಶದಲ್ಲಿ ರಾಜ್ಯ ನಡೆಸುತ್ತಿದ್ದರು. ನಾವು ಎಚ್ಚರಗೊಳ್ಳುವಷ್ಟೇ ಕಾಲ ಬೇಕಾಯಿತು. ನಾವು 'ಭಾರತ ಬಿಟ್ಟು ಹೊರಡಿ' ಎಂದು ಹೇಳಿದೆವು. ಅವರು ಹೋಗಲೇಬೇಕಾಯಿತು. ಈ ರೀತಿ ನೋಡಿದರೆ ಇದೊಂದು ನಕಾರಾತ್ಮಕ ಆಂದೋಲನವಾಗಿತ್ತು. ಇಂದಿನ ಆಂದೋಲನ ಜನಶಕ್ತಿಯನ್ನು ಜನತಂತ್ರದಲ್ಲಿ ರೂಪಾಂತರಗೊಳಿಸುವುದೇ ಆಗಿದೆ.

ಇದು ನಮ್ಮ ಮುಖ್ಯ ವಿಚಾರ. ನಿಮ್ಮ ಅದೃಷ್ಟವನ್ನು ನಿಮ್ಮ ಕೈಯಲ್ಲಿಟ್ಟುಕೊಳ್ಳಿ ಎಂದು ಜನತೆಗೆ ತಿಳಿಸಬೇಕಾಗಿದೆ. ಸರಕಾರದ ಅಧಿಕಾರವನ್ನು ಸಮಾಪ್ತಿಗೊಳಿಸಬಯಸುತ್ತೇವೆ ನಾವು. ಅದರ ಸ್ಥಳದಲ್ಲಿ ಜನರ ತಮ್ಮದೇ ಆದ ಸತ್ತೆಯನ್ನು ಸ್ಥಾಪಿಸಬಯಸುತ್ತೇವೆ. ಇದನ್ನು 'ಲೋಕನೀತಿ' ಎಂದು ನಾವು ಕರೆದಿದ್ದೇವೆ. ಈ ಧ್ಯೇಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಸತತವಾಗಿ ಕೆಲಸಮಾಡಬೇಕು. ಆಗ ಖಂಡಿತ ಪಾರಾದೇವು. ಗಾಂಧೀಜೀ ನಮಗಿತ್ತ ಸರ್ವೋದಯ ಕಾರ್ಯಕ್ರಮದ ಅಡಿಪಾಯವನ್ನು ಗ್ರಾಮದಾನ ಆಂದೋಲನದಿಂದ ಹಾಕುತ್ತಿದ್ದೇವೆ ಎಂದು ನನ್ನ ನಂಬಿಕೆ. ಈ ಬುನಾದಿಯ ಮೇಲೆ ಸರ್ವೋದಯದ ಇಡೀ ಕಟ್ಟಡ ನಿಲ್ಲಬಲ್ಲುದು. ಆದುದರಿಂದ ಗಾಂಧೀಜಿಯನ್ನು ಒಪ್ಪುವ ಜನರೆಲ್ಲಾ ಈ ಕೆಲಸದಲ್ಲಿ ಪೂರ್ಣಶಕ್ತಿಯನ್ನು ಹಾಕಬೇಕು. ಗಾಂಧಿ-ವಿಚಾರದ ಪ್ರಾಣಕಾರ್ಯ ನಡೆಯುತ್ತಿದೆ ಎಂದು ತಿಳಿಯಬೇಕು. ಅಹಿಂಸೆಯ ಆಧಾರದಮೇಲೆ ಸಮಾಜರಚನೆ ಆಗುವುದಾದರೆ ಗಾಂಧೀ ವಿಚಾರ ಉನ್ನತವಾಗಿ ಉಳಿದೀತು. ●

೨೦
ಸಂಸ್ಮರಣ

ಬಾಪೂ ತೀರಿಕೊಂಡ ಬಳಿಕ 1948ರಲ್ಲಿ ಸೇವಾಗ್ರಾಮದಲ್ಲಿ ಗಾಂಧೀ ಪರಿವಾರದ ಸಮಾವೇಶವಾದಾಗ ಅಲ್ಲಿ ಸೇರಿದ್ದವರಲ್ಲಿ ಬಹುಜನರ ಚಹರೆ ನನಗೆ ಹೊಸದಾಗಿತ್ತು. ಒಂದೇ ಪರಿವಾರದ ಸದಸ್ಯರಾಗಿದ್ದರೂ ಎಷ್ಟೋ ಜನರ ಜೊತೆ ಮೊದಲ ಬಾರಿಗೇ ಮಿಲನ ಎಂದು ಆಗ ನಾನು ಹೇಳಿದ್ದೆ. ಆದರೆ ಇದರ ದೋಷ ನಿಮ್ಮದೂ ಅಲ್ಲ ನನ್ನದೂ ಅಲ್ಲ, ಇದು ಯಾರ ಪರಿವಾರವೋ ಆ ಮನುಷ್ಯನದು. ಏಕೆಂದರೆ, ಆತನ ಪರಿವಾರವೇ ಇಷ್ಟೊಂದು ದೊಡ್ಡದು ಮತ್ತು ವಿಶಾಲ. ಬಾಪೂವಿನ ಕುಟುಂಬವೇ ಅದರಲ್ಲಿ ಎಲ್ಲರೂ ಒಬ್ಬರೊಡನೊಬ್ಬರು ಪರಿಚಯ ಇರಲಾರದಷ್ಟು ದೊಡ್ಡದು, ವಿಶಾಲ ಆಗಿತ್ತು.

ಅವರ ಸ್ನೇಹದೃಷ್ಟಿ ದೂರದೂರದ ಸೇವಕರಿಗೂ ತಂಪು ನೀಡುತ್ತಿತ್ತು. ಅವರಲ್ಲಿ ಪ್ರೇಮ ಬಹಳವಾಗಿತ್ತು. ಅದು ವ್ಯಕ್ತಿಗತ ಪರಿಚಯದಲ್ಲಿ ಪ್ರಕಟವಾಗುತ್ತಿತ್ತು. ಯಾರು ಪರಿಚಯವಾದರೂ ಅವರ ಇಡೀ ಕುಟುಂಬದ ಸ್ಥಿತಿಗತಿ ವಿಚಾರಿಸುತ್ತಿದ್ದರು. ಕುಟುಂಬದ ಎಲ್ಲ ಜನರ ಹೆಸರೂ ಅವರಿಗೆ ನೆನಪಿರುತ್ತಿತ್ತು.

ಬಾಪೂ ಸ್ಪರ್ಶಮಣಿಯಂತೆ ಇದ್ದರು. ಅವರ ಸ್ಪರ್ಶದಿಂದ ಕಬ್ಬಿಣ ಚಿನ್ನವಾಗುತ್ತಿತ್ತು. ಮಣ್ಣಿನಿಂದ ಮಹಾಪುರುಷರನ್ನು ಉತ್ಪನ್ನಮಾಡುವಷ್ಟು ಅವರ ಕೈಯಲ್ಲಿ ಚಮತ್ಕಾರವಿತ್ತು. ಒರಟು ಜನರನ್ನು ಸಭ್ಯರನ್ನಾಗಿಸುತ್ತಿದ್ದರು. ಸಣ್ಣವರನ್ನು ದೊಡ್ಡವರನ್ನಾಗಿ ಮಾಡಬಲ್ಲವರಾಗಿದ್ದರು.

ನನ್ನಂಥ ಅಸಭ್ಯ ಮನುಷ್ಯನನ್ನು ಸೇವಕನನ್ನಾಗಿಸಿದರು

ಕೆಲವು ಕಾರಣಗಳಿಂದ ನಾನು ಅವರ ಬಳಿ ತಲುಪಿದೆ. ನನ್ನಂಥ ಅಸಭ್ಯ ಮನುಷ್ಯನನ್ನು ಸಭ್ಯನನ್ನಾಗಿ ಅಲ್ಲದಿದ್ದರೂ ಸೇವಕನನ್ನಾಗಿ ಖಂಡಿತ

ಮಾಡಿದರು. ನಮ್ಮೊಳಗಿನ ಕ್ರೋಧದ ಜ್ವಾಲಾಮುಖಿಯ ಮತ್ತಿತರ ಅನೇಕ ವಾಸನೆಗಳ ಬಡಬಾಗ್ನಿಯನ್ನು ಶಮನಗೊಳಿಸುವವರು ಬಾಪೂವೇ ಆಗಿದ್ದರು. ಬಾಪೂವಿನ ಚರಣಗಳಲ್ಲಿ ಉಳಿದು ನಾನು ಬಹಳ ಬಹಳ ಕಲಿತಿದ್ದೇನೆ.

ಬಾಪೂವಿನ ಹತ್ತಿರ ಮೊಟ್ಟಮೊದಲು ನಾನು ಆಶ್ರಮದಲ್ಲಿ ಹೋಗಿ ಸೇರಿದೆ. ಆಗ ನನಗೇನೂ ಬರುತ್ತಿರಲಿಲ್ಲ. ಈ ಹುಡುಗ ಸದ್ಭಾವನೆಯಿಂದ ಬಂದಿದ್ದಾನೆ ಎಂದು ಬಾಪೂ ಸಹ ತಿಳಿದಿದ್ದರು. ಮೊದಲ ದಿನ ತರಕಾರಿಯನ್ನು ಸರಿಮಾಡುತ್ತಾ ನಮಗೆ ಕಲಿಸಿದರು. ನಾವು ತುಂಬ ಮಾತಾಡಿದೆವು. ಅಷ್ಟೆ. ಮತ್ತೆ ಯಾವ ದಿನವೂ ಕೆಲಸವಿಲ್ಲದೆ ಮಾತಾಡುವಂತೆಯೇ ಇಲ್ಲ. ಬಾಪೂ ಹೇಳುತ್ತಿದ್ದ ಮಾತನ್ನು ಕೇಳುತ್ತಿದ್ದೆ. ಮತ್ತೊಂದು ದಿನ ಒಬ್ಬ ಸೋದರ ನೊಡನೆ ಮಾತಾಡುತ್ತಾ ಬಾಪೂ ಹೇಳಿದರು: "ಇದು ಗೌಣ ಭಾಷೆ." ಆಗ ನಾನು ಹೇಳಿದೆ: "ಇಲ್ಲ, ಇದು ಭಕ್ತಿಯ ಭಾಷೆ." ಬಾಪೂ ಹೇಳಿದರು: "ಹೌದು ಈ ಮಾತು ಸರಿ. ಜ್ಞಾನದ ಭಾಷೆ ಮತ್ತು ಭಕ್ತಿಯ ಭಾಷೆ." ಆಗ ಇದೇನೋ ಇದೆ ಎಂದು ಎಲ್ಲರಿಗೂ ಅನಿಸಿತು. ಅದಕ್ಕೆ ಮುಂಚೆ ಇದು ಜಡ ಎಂದು ಎಲ್ಲರಿಗೂ ಅನಿಸಿತ್ತು.

ಇದರಲ್ಲಿ ಜನರದೇನೂ ತಪ್ಪಿಲ್ಲ. ಆಗ ನಾನು ಬಹಳ ರೂಕ್ಷಮನುಷ್ಯ ನಾಗಿದ್ದೆ. ನನ್ನ ಕೆಲಸದಲ್ಲಿ ನಾನು ಮಗ್ನನಾಗಿರುತ್ತಿದ್ದೆ. ಯಾರೊಡನೆಯೂ ಮಾತನಾಡುತ್ತಿರಲಿಲ್ಲ. ಯಾರಾದರೂ ಬಂದು ಕೇಳಿದರೆ: "ಬಂದಿದ್ದು ಹೇಗೆ?"

ಎಷ್ಟೋ ಸಾರಿ ಉತ್ತರ ಸಿಗುತ್ತಿತ್ತು—"ನಿಮ್ಮ ದರ್ಶನಕ್ಕಾಗಿ."

ಸರಿ, ಅಲ್ಲಿಗೆ ಮುಗಿಯಿತು. ಮಾತುಕತೆ ಮುಗಿದೇ ಹೋಗುತ್ತಿತ್ತು. ನಾನು ಮಾಡುತ್ತಿರುತ್ತಿದ್ದ ಕೆಲಸವನ್ನು ಮತ್ತೆ ಪ್ರಾರಂಭಿಸುತ್ತಿದ್ದೆ. ಇನ್ನು ಬಂದವರೇನು ಹೇಳಬೇಕು? ಸ್ವಲ್ಪ ಸಮಯದಲ್ಲೇ ಅವರು ಹೊರಟು ಹೋಗಬೇಕಾಗುತ್ತಿತ್ತು. ಯಾರಾದರೂ ಮಾತಾಡಲು ಬಂದರೆ ಅಥವಾ ಭೇಟಿಯಾಗಲು ಬಂದರೆ ಅವರೊಡನೆ ಸ್ವಲ್ಪ ಮಾತಾಡಬೇಕಾದರೆ ನನ್ನ ಮನಸ್ಸಿನಲ್ಲಿ ಇಂಥ ಗುಂಗು. ಯಾರಾದರೂ ದರ್ಶನಕ್ಕೆ ಬಂದೀವಿ ಎಂದು ಹೇಳಿದರೆ, ಮಾತು ಮುಗಿದೇ ಹೋಯಿತು. ದರ್ಶನ ಮಾಡಿಕೊಳ್ಳಿ, ಮತ್ತೇನು?

ಅತ್ತಕಡೆ, ಬಾಪೂ ಎಲ್ಲೆಲ್ಲೂ ನನ್ನ ಪ್ರಚಾರ ಮಾಡುತ್ತಿದ್ದರು. ಅಷ್ಟೇ ಅಲ್ಲ. ಜನರನ್ನು ನನ್ನ ಬಳಿ ಕಳುಹಿಸುತ್ತಿದ್ದರು. ಪವನಾರಿಗೆ ಬಂದು ಸೇವಾ ಗ್ರಾಮಕ್ಕೆ ಹೋದ ನಾಯಕರು ಅಥವಾ ಚಿಂತಕರನ್ನೆಲ್ಲಾ—ನೀವು ವಿನೋಬಾ ಜೊತೆ ಭೇಟಿಯಾಗಿ ಬಂದಿದ್ದೀರಲ್ಲವೇ? ಎಂದು ಬಾಪೂ ಕೇಳುತ್ತಿದ್ದರು ಭೇಟಿಯಾಗಿಲ್ಲದಿದ್ದರೆ ಖಂಡಿತ ಭೇಟಿಯಾಗಬೇಕು ಎನ್ನುತ್ತಿದ್ದರು. ಒಂದು ದಿನ ಬಾಪೂ ಒಬ್ಬ ಸಹೋದರನನ್ನು ನನ್ನ ಬಳಿ ಕಳುಹಿಸಿದರು. ಅವರು ಭಾರತದ ಒಬ್ಬ ಪ್ರಖ್ಯಾತ ಕ್ರಾಂತಿಕಾರಿ. ಬಾಪು ಹೇಳಿದರು ಎಂದು ಅವರು ಕಾಲ್ನಡಿಗೆಯಿಂದ ನನ್ನ ಆಶ್ರಮದವರೆಗೆ ಬಂದಿದ್ದರು. ಸೇವಾಗ್ರಾಮದಿಂದ ನನ್ನ ಪವನಾರ್ ಆಶ್ರಮ ಸುಮಾರು ಮೂರು ಮೈಲಿ, ನಡೆದುಕೊಂಡು ಬಂದಿದ್ದರಿಂದ ಅವರು ಸ್ವಲ್ಪ ದಣಿದಿದ್ದರು. ನಾನು ನೆಲ ಅಗೆಯುತ್ತಿದ್ದೆ. ಕತ್ತೆತ್ತಿ ನೋಡಿದೆ, ಎದುರಿಗೆ ಈ ಸಹೋದರ ನಿಂತುದು ಕಂಡುಬಂತು. ನಾ ಕೇಳಿದೆ: "ಏನು ಬಂದಿರಿ?"

"ಹೀಗೇ, ದರ್ಶನಕ್ಕಾಗಿ ಬಂದಿದ್ದೇನೆ."

ಮತ್ತೇನು? ಇನ್ನೇನು ಮಾತುಕತೆಯೇ ನಡೆಯಲಿಲ್ಲ. ಸ್ವಲ್ಪ ಹೊತ್ತಿನಲ್ಲೇ ನನ್ನ ಕೈಗಳು ಪುನಃ ಕೆಲಸಕ್ಕೆ ತೊಡಗಿದವು. ದೃಷ್ಟಿ ಕೆಲಸದತ್ತ ಹೋಗಿಬಿಟ್ಟಿತು. ಅವರು ನಿಂತೇ ಇದ್ದರು, ಏನೂ ಮಾತಾಡಲಿಲ್ಲ. ವಾಪಸ್ಸು ಹೋಗಿ ಬಾಪೂ ಬಳಿ ದೂರಿದರು. "ನೀವು ಎಂಥ ಮನುಷ್ಯನ ಹತ್ತಿರ ನನ್ನನ್ನು ಕಳುಹಿಸಿದಿರಿ? ಆತ ನನ್ನ ಹತ್ತಿರ ಒಂದು ಮಾತೂ ಸಹ ಆಡಲಿಲ್ಲ."

ಪ್ರೇಮಪೂರ್ಣ ಸವಿಮಾತಿನಿಂದ ತಿಳಿಸುತ್ತಿದ್ದರು

ಬಾಪೂ ತಿಳಿದುಕೊಂಡುಬಿಟ್ಟರು. ಹೇಳಿದರು: "ನೀವು ಹೋದಾಗ ಆತ ಏನು ಮಾಡುತ್ತಿದ್ದ?"

"ಜಮೀನು ಅಗೆಯುತ್ತಿದ್ದರು."

"ಸಿಟ್ಟು ಮಾಡಿಕೊಳ್ಳುವುದು ಇದರಲ್ಲಿ ಏನಿದೆ? ವಿನೋಬ ತನ್ನ ಕೆಲಸಮಾಡುತ್ತಿದ್ದ. ಆಗ ನಿಮ್ಮೊಡನೆ ಹೇಗೆ ಮಾತಾಡಿಯಾನು? ಅಯ್ಯಾ ಮನುಷ್ಯರೇ, ಯಾರನ್ನಾದರೂ ಕಾಣಬೇಕಿದ್ದರೆ ಅವರಿಂದ ಸಮಯ ಪಡೆದು ನೀವು ಹೋಗಿ ಭೇಟಿಯಾಗಬೇಕು ಎಂಬುದು ನಿಮಗೆ ಗೊತ್ತಿಲ್ಲವಲ್ಲ."

*

ಈ ರೀತಿ ಬಾಪೂ ಅವರಿಗಂತೂ ತಿಳಿಸಿ ಹೇಳಿದರು. ಆಮೇಲೆ ನನ್ನನ್ನು ಸಂಧಿಸಿದಾಗ, ಆ ಕ್ರಾಂತಿಕಾರಿ ಸಹೋದರನ ನೆನಪುಮಾಡಿಕೊಂಡು ನನ್ನೊಡನೆ ಜಗಳವಾಡಿದರು: "ಒಳ್ಳೆ ಮನುಷ್ಯ! ಯಾರಾದರೂ ಬಂದರೆ ಅವರೊಡನೆ ಕಲೆತು ಮಾತನಾಡುವುದೂ ಒಂದು ಬಗೆಯ ಕೆಲಸ. ಅದೂ ಕೆಲಸದ ಒಂದು ಪ್ರಕಾರ."

ಬಾಪೂದು ಅಂಥದೇ ರೀತಿ. ಪ್ರೇಮದಿಂದ ಸವಿಯಾದ ತಿಳಿ ಹೇಳುವಿಕೆ ಯಿಂದ ನಮ್ಮ ತಪ್ಪನ್ನು ತಿಳಿಸಿಕೊಡುತ್ತಿದ್ದರು. ಅವರ ಕೈಯಲ್ಲೇ ನಾನು ಮೆಲ್ಲ ಮೆಲ್ಲನೆ ಪಳಗಿದ್ದೇನೆ. ಅವರ ಚರಣಗಳಲ್ಲಿ ಕುಳಿತು ಅಸಭ್ಯ ಮನುಷ್ಯ ನಾದ ನಾನು ಸೇವಕನಾಗಿದ್ದೇನೆ.

ಸಂಯಮದಿಂದ ಮಾತಾಡುವ ಶಿಕ್ಷಣ ಸಿಕ್ಕಿತು

ಉದಾಹರಣೆಗಾಗಿ ನನ್ನ ಅದೃಷ್ಟದಲ್ಲಿ ಸತತವಾಗಿ ಮಾತಾಡುವುದೇ ಬಾಲ್ಯದಿಂದ ಇಲ್ಲಿಯವರೆಗೆ ನಡೆದುಬಂದಿದೆ. ಬಾಲ್ಯದಲ್ಲಿ ವಿದ್ಯಾರ್ಥಿಗಳ ಮತ್ತು ಮಿತ್ರಮಂಡಲಗಳ ಮುಂದೆ, ಮತ್ತೆ ಆಶ್ರಮವಾಸಿಗಳ ಎದುರು ಮತ್ತು ಜನತೆ ಎದುರು—ಹೀಗೆ ಮಾತಾಡುವ ಮತ್ತು ಚರ್ಚೆ ಮಾಡುವುದೇ ನನ್ನ ಪಾಲಿಗೆ ಬಂದಿದೆ. ಈ ರೀತಿ ಸ್ವಾಭಾವಿಕವಾಗಿ ಹೇಗೆ ಮಾತಾಡುವುದೋ ಹಾಗೆ ಮಾತಾಡುತ್ತಿದ್ದೇನೆ. ಮೊದಲು ಮಾತಾಡುವುದರ ಮೇಲೆ ಬಹಳ ಅಂಕುಶ ಇರುತ್ತಿರಲಿಲ್ಲ. ಮನಸ್ಸಿಗೆ ಸಹಜವಾಗಿ ಬಂದುದನ್ನು ಮಾತಾಡಿ ಬಿಡುತ್ತಿದ್ದೆ. ಈ ಮನುಷ್ಯನ ಒಳಗೆ ಮತ್ತು ಹೊರಗೆ ಏನೂ ವ್ಯತ್ಯಾಸವಿಲ್ಲ ಎಂದು ನನ್ನ ಸ್ನೇಹಿತರಿಗೆ ಗೊತ್ತಾಗುತ್ತಿತ್ತು. ಆದುದರಿಂದ ನಾನು ಎಷ್ಟೇ ಪೆಟ್ಟುಕೊಟ್ಟರೂ ಯಾವಾಗಲೂ ಯಾರ ಮನಸ್ಸೂ ಮುರಿದಂತೆ ಆಗಲಿಲ್ಲ.

ಆದರೆ ಬಾಪೂ ಸಂಪರ್ಕಕ್ಕೆ ಬಂದಮೇಲೆ ಮಾತಿನಮೇಲೆ ಅಂಕುಶ ವಿಟ್ಟುಕೊಳ್ಳಬೇಕು ಎಂದು ಮನವರಿಕೆಯಾಯಿತು. ಅದರಲ್ಲಿಯೂ ದಿನವೂ ಪ್ರಾರ್ಥನೆಯ ಸಮಯದಲ್ಲಿ ಗೀತೆಯ ವಿಷಯವಾಗಿ ಏನಾದರೂ ಹೇಳಬೇಕು ಎಂದು ಬಾಪೂ ಹೇಳಿದಾಗ ಸ್ಥಿತಿ ಕಠಿಣವಾಗಿಬಿಟ್ಟಿತು. ಎಷ್ಟೋ ಸಾರಿ ಬಾಪೂ ಸಮ್ಮುಖದಲ್ಲೇ ನಾನು ಮಾತಾಡಬೇಕಾಗುತ್ತಿತ್ತು. ಅವರ ಆಶ್ರಮ ದಲ್ಲಿಲ್ಲದಾಗಲಂತೂ ಮಾತಾಡುತ್ತಲೇ ಇದ್ದೆ. ಆದರೆ ಮಧ್ಯದಲ್ಲಿ ಆರೇಳು

ದಿವಸ ಬರುತ್ತಿದ್ದರು. ಒಂದೆರಡು ದಿನ ಅವರೂ ಮಾತಾಡುತ್ತಿದ್ದರು. ಮತ್ತೆ ಮಾತಾಡಲು ನನಗೆ ಹೇಳುತ್ತಿದ್ದರು. ಸ್ವತಃ ಬಾಪೂ ಶ್ರೋತೃಗಳಲ್ಲಿ ಕುಳಿತಿದ್ದಾರೆ ಎಂದಾಗ ಕೆಲವು ನಿಮಿಷಗಳಲ್ಲೇ ಮುಗಿಸಿಬಿಡಬೇಕಾಗುತ್ತಿತ್ತು. ಆದುದರಿಂದ ಆ ಕಾಲದಲ್ಲಿ ನನಗೆ ಸಂಯಮದ ಬಹಳ ಸುಂದರ ಅಭ್ಯಾಸ ವಾಯಿತು. ಎಷ್ಟೋ ವೇಳೆ ಹೆಚ್ಚು ಶಬ್ದ ಹೇಳುತ್ತಿದ್ದೆ, ಯಾರಾದರೂ ಆಶ್ರಮವಾಸಿ ಬಾಪೂ ಬಳಿ ನನ್ನಮೇಲೆ ದೂರು ಹೇಳುತ್ತಿದ್ದ. ಬಾಪೂ ನನಗೇನೂ ಹೇಳುತ್ತಿರಲಿಲ್ಲ. ಅವನೆದುರು ನನ್ನ ಸಮರ್ಥನೆ ಮಾಡುತ್ತಿದ್ದರು. ಆದರೆ ಆಮೇಲೆ ಬಾಪೂ ನನ್ನನ್ನು ಸಮರ್ಥನೆ ಮಾಡಬೇಕಾಗುತ್ತದೆ ಎಂದು ತಿಳಿದರೆ ಸರಿ ಎನಿಸುತ್ತಿರಲಿಲ್ಲ. ಹೀಗೆ ನನಗೆ ತುಂಬಾ ಸಂಯಮದ ಶಿಕ್ಷಣ ಸಿಕ್ಕಿತು. ಸಂಯಮಪೂರ್ವಕವಾಗಿ ಹೇಗೆ ಮಾತಾಡಬೇಕು ಎಂಬ ವಿಷಯ ದಲ್ಲಿ ನಾನು ಉಸ್ತಾದ್‌ನಾಗಿದ್ದೇನೆ.

ಬಾಪೂ ಬಳಿ ಹೋದಮೇಲೆ ನಿಯಮಿತವಾಗಿ ಪ್ರಾರ್ಥನೆ ಮಾಡತೊಡ ಗಿದೆ. ಇಂದಿನವರೆಗೂ ಅದು ಸತತವಾಗಿ ಉಳಿದಿದೆ. ಇದರಿಂದ ನನಗೆ ಲಾಭ ವಾಗಿದೆ. ಪ್ರಾರ್ಥನೆಯಲ್ಲಿ ತನ್ನನ್ನು ಮರೆತು ಭಗವಂತನಲ್ಲಿ ಲೀನವಾಗಿ ಹೋಗುವುದು ಮತ್ತು ಯಾರೊಡನೆ ಕುಳಿತಿರುವೆವೋ ಅವರೊಡನೆ ಏಕತೆ ಯನ್ನು ಅನುಭವಿಸುವುದು. ನಿಯಮಿತ ಪ್ರಾರ್ಥನೆಯ ಈ ಪದ್ಧತಿಯು ಬಾಪೂ ದೆಸೆಯಿಂದ ಬಿತ್ತು.

ಸೇವೆಯ ಸೆಳೆತ

ಬಾಪೂ ಜೊತೆಯಲ್ಲಿ ಇದ್ದುದರಿಂದ ನನಗೆ ಸೇವೆಯ ಸೆಳೆತ ಅಂಟಿತು. ಸೇವೆಯನ್ನು ಭಗವಂತನ ಪೂಜೆಯ ಸಾಧನ ಹಾಗೂ ಜನತೆಯನ್ನು ನನ್ನ ಒಡೆಯರು ಎಂದು ತಿಳಿಯುತ್ತೇನೆ. ಸ್ವಾಮಿಯ ಸೇವೆಗೈಯುವುದರಿಂದ ನನ್ನ ಆತ್ಮಕ್ಕೆ ತಂಪು ಸಿಗುತ್ತದೆ. ಇಂದು ಬಾಪೂ ಇದ್ದಿದ್ದರೆ ಈಗಲೂ ನಾನು ಹೊರಗೆ ಬರುತ್ತಿರಲಿಲ್ಲ. ನನ್ನ ಸೇವಾಕಾರ್ಯಗಳಲ್ಲಿ ಮುಳುಗಿರುತ್ತಿದ್ದೆ. ಕಡೆಯ ಬಾರಿ ನಾನು ಜೈಲಿನಿಂದ ಹೊರಬಿದ್ದಾಗ ೩೦ ವರ್ಷಗಳ ಕಾಲ ಭಂಗಿಯ ಕೆಲಸ ಮಾಡುವ ನಿಶ್ಚಯದಿಂದ ಹೊರಬಂದಿದ್ದೆ. ಏಕೆಂದರೆ, ೩೦ ವರ್ಷಗಳಲ್ಲಿ ಹೊಸ ಪೀಳಿಗೆ ತಯಾರಾಗಿಬಿಟ್ಟಿರುತ್ತದೆ. ಆ ಸಮಯದಲ್ಲಿ ನನ್ನ ಭಂಗಿ ಕೆಲಸ ಏಕಾಗ್ರತೆಯಿಂದ ನಡೆಯುತ್ತಿತ್ತು. ಭಂಗಿ ಕೆಲಸದ

ಜೊತೆಗೇ ಇತರ ಕೆಲ ಸಂಗತಿಗಳನ್ನೂ ಕಲಿಯುತ್ತಿದ್ದೆ. ಹುಡುಗರು ಬಂದು ಹೇಳುತ್ತಿದ್ದರು: "ಬಾಬಾ, ನಾವು ಮಲದಮೇಲೆ ಇಂದು ಮಣ್ಣು ಹಾಕಿದೇವಲ್ಲವೇ?" ನಾನು ಅದನ್ನು ನೋಡಲು ಹೋಗುತ್ತಿದ್ದೆ. ಒಂದು ಬಾರಿ ಹಳ್ಳಿಯಲ್ಲಿ ಗಣಪತಿ ಉತ್ಸವ ಇತ್ತು. ಅಂದು ಇಡೀ ಹಳ್ಳಿ ಸುಂದರ ಚಂದನದಂತೆ ಕಾಣುತ್ತಿತ್ತು. ನನಗೆ ಯಾವ ಕೆಲಸವೂ ಉಳಿದೇ ಇರಲಿಲ್ಲ. ಹಿಂದಿನ ದಿನವೇ ಹಳ್ಳಿಗರು ತೀರ್ಮಾನಿಸಿಬಿಟ್ಟಿದ್ದರು. ನಾಳೆ ಪವಿತ್ರದಿವಸ, ಆದಕಾರಣ ನಾವೇ ಭಂಗಿ ಕೆಲಸ ಮಾಡುವುದು ಎಂದು.

ಇಂಥ ಸೇವಾಕಾರ್ಯಗಳಲ್ಲಿ ನಾನು ಮಗ್ನನಾಗಿರುತ್ತಿದ್ದೆ. ಸೇವೆಯ ಈ ಸೆಳೆತವನ್ನು ನಾನು ಬಾಪೂವಿನಿಂದಲೇ ಕಲಿತೆ. ಇದನ್ನೆಲ್ಲ ನೆನಪು ಮಾಡಿಕೊಂಡರೆ ಬಾಪೂವಿನ ಮೂರ್ತಿ ಕಣ್ಣೆದುರು ಬಂದು ನಿಲ್ಲುತ್ತದೆ. ಅವರಿಂದ ನಾನು ಎಷ್ಟೊಂದು ವಾತ್ಸಲ್ಯ ಪಡೆದೆ! ಅವರು ಆಶೀರ್ವಾದವನ್ನು ನನ್ನ ಹಣೆಯಮೇಲೆ, ಒಳಗೆ, ಹೊರಗೆ, ನಾಲ್ಕೂ ಕಡೆ ಮಳೆಗರೆದಿದ್ದಾರೆ. ಅವರು ನನ್ನನ್ನು ಅತ್ಯಂತ ಪ್ರೇಮಪೂರ್ವಕ ಸಲಹಿದ್ದಾರೆ.

ಅವರ ಅಪಾರ ವಾತ್ಸಲ್ಯ ಪಡೆದೆ

1938 ರ ಮಾತು. ನನ್ನ ಶರೀರ ಅತ್ಯಂತ ಕ್ಷೀಣವಾಗಿ ಹೋಗಿತ್ತು. ತೂಕ 88 ಪೌಂಡಿನಷ್ಟು ಕೆಳಕ್ಕೆ ಬಂದುಬಿಟ್ಟಿತ್ತು. ಈಶ್ವರನ ಬಳಿಗೆ ಹೋಗುವ ಗಳಿಗೆ ಬರುತ್ತಿದೆ ಎಂದು ಅನಿಸುತ್ತಿತ್ತು. ಹಾಗೆಂದು ನನ್ನ ಮನಸ್ಸು ಬಹಳ ಪ್ರಸನ್ನವಾಗಿತ್ತು. ಆದರೆ ಗೆಳೆಯರಿಗೆ ದುಃಖ ಆಗುತ್ತಿತ್ತು. ಬಾಪೂ ಬಳಿಗೆ ದೂರು ಹೋಯಿತು. ನನಗೆ ಕರೆ ಬಂತು. ನಾ ಹೋದೆ. ಬಾಪೂ ಎಂದರು: "ನನ್ನ ಬಳಿ ಇರು, ನಾ ನಿನ್ನ ಚಾಕರಿಮಾಡುವೆ."

"ನಿಮ್ಮ ಚಾಕರಿಯಮೇಲೆ ನನಗೆ ಸ್ವಲ್ಪವೂ ನಂಬಿಕೆ ಇಲ್ಲ. ನಿಮಗೆ ಐವತ್ತು ಕೆಲಸ. ಅದರಲ್ಲೊಂದು ಚಾಕರಿಯ ಕೆಲಸ. ಅದಕ್ಕೂ ಐವತ್ತು ರೋಗಿಗಳು. ಅವರಲ್ಲಿ ನಾನೊಬ್ಬ. ಇದರಿಂದೇನು ಒಳ್ಳೆಯದಾದೀತು?

ಬಾಪೂ ನಗಲಾರಂಭಿಸಿದರು. "ಸರಿ, ಡಾಕ್ಟರ ಬಳಿ ಹೋಗು."

"ಅದಕ್ಕಿಂತ ಯಮರಾಜನ ಬಳಿ ಹೋಗುವುದು ಹೆಚ್ಚು ಸರಿ."

"ಹವಾ ಬದಲಾವಣೆಗೆ ಹೋಗು."

ಮತ್ತೆ ಬೇರೆ ಬೇರೆ ಸ್ಥಳ ಹೇಳಹತ್ತಿದರು. ಉತ್ಸಾಹದಿಂದ ಒಂದೊಂದನ್ನೂ ವರ್ಣಿಸುತ್ತಿದ್ದರು.

ಕಡೆಗೆ ನಾನು ಒಪ್ಪಿದೆ: "ಪವನಾರದಲ್ಲಿ ಜಮನಾಲಾಲಜೀಯ ಬಂಗಲೆ ಇದೆ, ಅಲ್ಲಿ ಹೋಗಿ ಇರುವೆ."

ಹೇಳತೊಡಗಿದರು: "ಹೌದು, ಸರಿ. ಬಡವರು ಹವಾ ಬದಲಾವಣೆಗೆ ಬೇರಾವ ಜಾಗಕ್ಕೆ ಹೋದಾರು?" (ಮೊದಲು ಈ ಮಾತನ್ನೇ ಮರೆತು ಬಿಟ್ಟಿದ್ದರು.) "ಆದರೆ ಪವನಾರದಲ್ಲಿ ನೀನು ನಿನ್ನ ಚಿಂತನವನ್ನೆಲ್ಲ ನಿಲ್ಲಿಸ ಬೇಕಾದೀತು. ಎಲ್ಲ ವಿಚಾರವನ್ನೂ ಬಿಡಬೇಕಾದೀತು. ಆಶ್ರಮ, ಕೆಲಸ ಅಥವಾ ಇನ್ನಾವುದೇ ವಿಚಾರವನ್ನೂ ಮಾಡುವಂತಿಲ್ಲ."

"ಆಗಲಿ, ಹಾಗೇ ಮಾಡುವೆ."

ಕಾಲುನಡಿಗೆಯಿಂದ ಹೋಗುವುದೂ ಕಷ್ಟವಾಗುವಷ್ಟು ನನ್ನ ಆರೋಗ್ಯ ಬಹಳ ದುರ್ಬಲವಾಗಿತ್ತು. ಆದುದರಿಂದ ನಾನು ಮೋಟರಿನಲ್ಲಿ ಬಂದೆ. ಬಾಪೂ ಬಳಿ ಒಪ್ಪಿಕೊಂಡಿದ್ದೆ, ಪವನಾರಿಗೆ ಹೋಗುವಾಗ ನದಿಯನ್ನು ದಾಟುತ್ತ '**ಸಂನ್ಯಸ್ತಂ ಮಯಾ, ಸಂನ್ಯಸ್ತಂ ಮಯಾ, ಸಂನ್ಯಸ್ತಂ ಮಯಾ**' (ನಾನು ಬಿಟ್ಟೆ, ನಾನು ಬಿಟ್ಟೆ, ನಾನು ಬಿಟ್ಟೆ) ಈ ರೀತಿ ಮೂರು ಬಾರಿ ಹೇಳಿದೆ. ಆಗ ನಾನು ಶೂನ್ಯದ ಅಭ್ಯಾಸ ಮಾಡಿದೆ. ಗಂಟೆಗಟ್ಟಲೆ ಶೂನ್ಯಾವಸ್ಥೆಯಲ್ಲಿರುತ್ತಿದ್ದೆ. ಪೌಷ್ಟಿಕ ಆಹಾರ ತೆಗೆದುಕೊಳ್ಳುತ್ತಿದ್ದೆ. ಹಾಲಿನ ಪ್ರಮಾಣ ಹೆಚ್ಚಿಸಿದೆ. ಮನಸ್ಸಿನಲ್ಲಿ ಯಾವುದೇ ಪ್ರಕಾರದ ಚಿಂತನವೇ ಇರಲಿಲ್ಲ. ಯಾವುದೇ ವಿಚಾರವೂ ಇರಲಿಲ್ಲ. ಇಂಥ ಶೂನ್ಯ ಸ್ಥಿತಿಯಲ್ಲಿ ಶಾಂತ-ಪ್ರಸನ್ನ ಚಿತ್ತದಿಂದ ಇಡೀ ಸಮಯ ಕಳೆದೆ. ಪರಿಣಾಮ ಸ್ವರೂಪವಾಗಿ ಹತ್ತು ತಿಂಗಳಲ್ಲಿ ನನ್ನ ತೂಕ 88 ರಿಂದ 128 ಪೌಂಡ್ ಆಯಿತು. ಇದರ ಮೂಲದಲ್ಲಿ ಬಾಪೂವಿನ ವಾತ್ಸಲ್ಯ ತುಂಬಿದ ಆಜ್ಞೆ ಇತ್ತು.

ಅವರ ಆಜ್ಞೆ ನನಗೆ ಸದಾ ಶಿರೋಧಾರ್ಯ ಆಗಿತ್ತು

ಬಾಪೂಗೆ ಸಂಬಂಧಿಸಿದ ಅಂಥ ಅನೇಕ ಸ್ಮೃತಿಗಳು ನೆನಪಾಗುತ್ತವೆ. ಅವರ ಬಳಿ ಸೇರಿದಂದಿನಿಂದ ಕೊನೆಯತನಕ ಅವರ ಚರಣಸನ್ನಿಧಾನದಲ್ಲಿದ್ದು

ಸೇವೆ ಸಲ್ಲಿಸುವ ಬುದ್ಧಿಯನ್ನು ಭಗವಂತ ನನಗೆ ಕೊಟ್ಟ. ಇಂದು ಅವರು ಹೊರಟುಹೋದಮೇಲೆ ನನಗೆ ಮತ್ತಾವುದೂ ಹೊಳೆಯದು. ನನ್ನ ಇಡೀ ಜೀವನವನ್ನು ಅವರ ಚರಣಗಳಲ್ಲಿ ಸಮರ್ಪಿಸಿದ್ದೇನೆ. ಅವರ ಆಜ್ಞೆ ಯಾವ ವರ್ಷದಲ್ಲೂ ನನಗೆ ಶಿರೋಧಾರ್ಯ ಆಗಿತ್ತು.

1940ರಲ್ಲಿ ಒಂದು ಸುಂದರ ಮುಂಜಾನೆ ಬಾಪೂ ಕಡೆಯಿಂದ 'ಬಂದು ಕಾಣು' ಎಂಬ ಕರೆ ಬಂತು. ಅವರ ಸೇವೆಯಲ್ಲಿ ಹಾಜರಾದೆ. ಬಾಪೂ ಹೇಳತೊಡಗಿದರು: "ಈಗ ನಿನ್ನ ಸೇವೆ ನನಗೆ ಬೇಕಾಗಿದೆ. ನೀನು ಬಿಡುವಾಗಿರುವೆಯೋ ಇಲ್ಲವೋ ಗೊತ್ತಿಲ್ಲ. ಏಕೆಂದರೆ, ನೀನು ನಿರಂತರವಾಗಿ ಯಾವುದಾದರೂ ಕೆಲಸದಲ್ಲೇ ತೊಡಗಿರುತ್ತೀಯೆ. ಆದರೆ ನಾವು ವ್ಯಕ್ತಿಗತ ಸತ್ಯಾಗ್ರಹ ಹೂಡಬೇಕಾಗಿದೆ. ವಿಶೇಷ ಕಷ್ಟವಿಲ್ಲದೆ ನೀನು ನಿನ್ನ ಕೆಲಸ ದಿಂದ ಬಿಡುವು ಪಡೆದರೆ ಪ್ರಥಮ ವ್ಯಕ್ತಿಗತ ಸತ್ಯಾಗ್ರಹಿಯಾಗಲು ಸಿದ್ಧ ವಾಗಿಬಿಡು."

ನಾ ಹೇಳಿದೆ; "ನಿಮ್ಮ ಆದೇಶ ಹಾಗೂ ಯಮರಾಜನ ಆದೇಶ ಇವೆರಡೂ ನನ್ನ ಪಾಲಿಗೆ ಸಮಾನ. ಈಗ ನಾನು ಇಲ್ಲಿ ಪವನಾರಿಗೆ ಹಿಂತಿರುಗುವ ಅಗತ್ಯವೇ ಇಲ್ಲ. ನೇರಾಗಿ ಇಲ್ಲಿಂದಲೇ ಈ ಕೆಲಸಕ್ಕೆ ಹೊರಡಬಲ್ಲೆ."

ನಾನು ಹಾಗೆ ಹೇಳಿದ್ದು ಬಾಪೂಗೆ ಬಹಳ ಒಳ್ಳೆಯದೆನಿಸಿತು. ಮತ್ತೆ ನಾನು ವ್ಯಕ್ತಿಗತ ಸತ್ಯಾಗ್ರಹಿಯಾಗಿ ಹೊರಬಿದ್ದೆ, ಸೆರೆಮನೆಗೆ ಹೋದೆ.

ಅವರೇ ಎಲ್ಲರಿಗೂ ನನ್ನ ವಿಷಯ ತಿಳಿಸಿದರು

ನನಗೆ ನೆನಪಿದೆ, ನಾನು ಆಗ ಸೆರೆಮನೆಯಿಂದ ಬಿಡುಗಡೆ ಹೊಂದಿ ಬಂದೆ, ಬಾಪೂನ ಭೆಟ್ಟಿಯಾದೆ. ಆಗ ಅವರೆಂದರು: 'ವಿನೋಬಾ, ಇದು ಅಂತಿಮ ಸಲದ ಜೇಲುಯಾತ್ರೆಯಲ್ಲ! ಮತ್ತೆ ಹೋಗಬೇಕಾದೀತು."

ನಾ ಹೇಳಿದೆ: "ಸರಿ, ಸಿದ್ಧ."

ಮತ್ತೆ ಮಾತು ಸಾಗಿತು. ನನ್ನನ್ನು ಕೇಳುತ್ತಾರೆ: "ಸೆರೆಮನೆಯಿಂದ ಏನಾದರೂ ಹೊಸದನ್ನು ಯೋಚಿಸಿ ತಂದಿದ್ದೀಯಾ?" "ಹೌದು, ಯೋಚಿಸಿ ತಂದಿದ್ದೇನೆ. ಎಲ್ಲ ಸಂಸ್ಥೆಗಳಿಂದ ನಾನು ಮುಕ್ತನಾಗಬೇಕು ಅದರ ಹೊರತಾಗಿ ಅಹಿಂಸೆಯಲ್ಲ, ಮುಂದೆ ನನಗೆ ವೇಗ ಸಿಗದು."

ಕೂಡಲೇ ಹೇಳಿದರು: "ಬಹಳ ಸರಿಯಾಗಿ ಹೇಳಿದೆ." ಆಮೇಲೆ ತಮ್ಮ ಮೌಲಿಕ ಭಾಷೆಯಲ್ಲಿ ನನ್ನ ಮಾತನ್ನು ತರ್ಜುಮೆ ಮಾಡಿದರು: "ಎಂದರೆ ನೀನು ಎಲ್ಲ ಸಂಸ್ಥೆಗಳ ಸೇವೆ ಸಲ್ಲಿಸುವೆ, ಆದರೆ ಸ್ಥಾನ ಸ್ವೀಕರಿಸುವುದಿಲ್ಲ." ಮತ್ತೆ ಬಾಪೂ ಆಶಾದೇವಿಯವರಿಗೆ ಹೇಳಿದರು: "ಒಳ್ಳೆಯದು, ವಿನೋಬಾ ಮುಕ್ತ ಆಗಲಿ. ಎಲ್ಲ ಉಪಾಧಿಗಳಿಂದ ಮುಕ್ತವಾಗಿ ಚಿಂತನ ನಡೆಸಿದರೆ ಪರಿಣಾಮ ಒಳ್ಳೆಯದೇ ಆಗುತ್ತದೆ. ಉಪಾಧಿಗಳನ್ನು ತಲೆಮೇಲೆ ಹೊದ್ದುಕೊಂಡು ಚಿಂತನ ಮಾಡಿದರೆ ಅದು ಮುಕ್ತಚಿಂತನ ಆಗುವುದಿಲ್ಲ. ಪರಿಣಾಮದಲ್ಲಿ ಈ ರೀತಿ ಯಾವ ಹೊಸ ಸಂಗತಿಯ ಶೋಧನೆಯೂ ಆಗುವುದಿಲ್ಲ."

ಬಾಪೂವಿನ ಮುದ್ರೆ ಬಿತ್ತು. ಆಮೇಲೆ ಯಾರದೂ ಏನೂ ಬಹಳ ನಡೆಯಲಿಲ್ಲ. ಬಾಪೂವೇ ಎಲ್ಲ ಸಂಸ್ಥೆಗಳವರಿಗೂ ನನ್ನ ಪರವಾಗಿ ತಿಳಿಸಿಬಿಟ್ಟರು.

ಬಾಲಕನಿಂದಲೂ ಅವರು ಕಲಿಯಲು ಸಿದ್ಧವಿದ್ದರು

ಬಾಪೂವಿನಲ್ಲಿ ಅನೇಕ ಗುಣಗಳಿದ್ದುವು. ಆದರೆ ಮುಖ್ಯ ಗುಣ—ಎಲ್ಲಕ್ಕಿಂತ ಶಿರೋಮಣಿ ಗುಣ—ಅವರು ಸತ್ಯಾಗ್ರಹಿ ಆಗಿದ್ದುದನ್ನು ನಾ ನೋಡಿದೆ. ಅವರು ಸದಾ ಪ್ರಗತಿಶೀಲರಾಗಿದ್ದರು. ಗತಿವಂತರಾಗಿದ್ದರು. ನಿತ್ಯವೂ ಹೊಸದನ್ನು ಕಲಿಯುವ ಸಿದ್ಧತೆ ಅವರಲ್ಲಿ ಇತ್ತು. ಅವರನ್ನು ಮಾರ್ಗದರ್ಶಕ ನಾಯಕರೆಂದು ತಿಳಿಯಲಾಗಿತ್ತು, ಆದರೂ ಅವರು ತಮ್ಮ ತಲೆಯನ್ನು ಸದಾ ತೆರೆದೇ ಇಟ್ಟಿರುತ್ತಿದ್ದರು. ಸತ್ಯಾಗ್ರಹಿಯಂತೂ ಅವರು ಆಗಿಯೇ ಇದ್ದರು. ಆದರೆ ಸತ್ಯಗ್ರಾಹಿಯೂ ಆಗಿದ್ದರು. ಮನು ಹೇಳಿದ್ದಾನೆ: **ಸುಭಾಷಿತಂ ಬಾಲಾದಪಿ ಗ್ರಾಹ್ಯಂ**—ಒಳ್ಳೆಯ ಮಾತನ್ನು ಬಾಲಕನಿಂದಲೂ ಗ್ರಹಿಸಬೇಕು. ನಾನು ಇದನ್ನು ಅವರಲ್ಲಿ ನೋಡಿದೆ.

ಹಿಂದಿನ ಮಾತು, ಸಾವಲೀಯಲ್ಲಿ ಗಾಂಧೀ ಸೇವಾ ಸಂಘದ ಅಧಿವೇಶನ ಸೇರಿತ್ತು. ಸಂತತಿ ನಿಯಮನ ಕುರಿತು ಬಾಪೂ ಯಾರೊಡನೆಯೋ ಚರ್ಚೆ ಮಾಡಿದ್ದರು. ಅದರಲ್ಲಿ 'ರಿಧಂ ಸಿಸ್ಟಂ' (ಕುಟುಂಬ ಯೋಜನೆಯ ಒಂದು ಪದ್ಧತಿ)ಗೆ ಅವರು ಸ್ವಲ್ಪ ಮಾನ್ಯತೆ ಕೊಟ್ಟಿದ್ದರು ಎಂದು ಪತ್ರಿಕೆಯಲ್ಲಿ

ಓದಿದೆ. ನನಗೆ ಅದು ಸರಿ ಎನಿಸಲಿಲ್ಲ. ಅದಕ್ಕಾಗಿ ಸಾವಲೀಯಲ್ಲಿ ಬಾಪೂ ಸಂಗಡ ಚರ್ಚೆ ಮಾಡಿದೆ. ಗಂಟೆ ಒಂದೂಕಾಲು ಗಂಟೆ ಚರ್ಚೆ ನೆಡೆಯಿತು. ನನ್ನ ವಿಚಾರವನ್ನು ಬಾಪೂ ಸಮಕ್ಷಮ ಇಟ್ಟೆ. ಕೊನೆಯಲ್ಲಿ ಅಂದಿನ ಸಭೆಯಲ್ಲಿ ನಾನು ನನ್ನ ವಿಚಾರವನ್ನು ಮಂಡಿಸಬೇಕೆಂದು ಅವರು ಮಾನ್ಯ ಮಾಡಿದರು. ನಾನು ಇಡುವುದಿಲ್ಲ, ನೀವೇ ಇದನ್ನು ಪ್ರತಿಪಾದಿಸಬೇಕು ಎಂದು ಹೇಳಿದೆ. ಅನಂತರ ಅವರೇ ಈ ವಿಚಾರವನ್ನು ಇಟ್ಟರು. 'ರಿಥಂ ಸಿಸ್ಟಂ'ಗೆ ಅವರು ನೀಡಿದ್ದ ಅಲ್ಪಸ್ವಲ್ಪ ಅಂಗೀಕಾರವನ್ನೂ ಹಿಂತೆಗೆದು ಕೊಂಡುಬಿಟ್ಟರು. ಒಬ್ಬ ತುಚ್ಛ ಮನುಷ್ಯ ಮುಖದಿಂದ ಹೊರಟ ವಿಚಾರ ವನ್ನೂ ಗ್ರಹಿಸಲು ಅವರು ಸಿದ್ಧವಿರುತ್ತಿದ್ದರು ಎಂದು ಹೇಳಲು ಈ ದೃಷ್ಟಾಂತವಿತ್ತೆ.

ಬಾಪೂ ಮೇಲೆ ನಡೆದ ಪ್ರಹಾರ ನನ್ನ ಮೇಲೆ ಆಗಿದ್ದರೆ....

ಈ ರೀತಿ ಬಾಪೂವಿನ ಪ್ರೇಮ ಮತ್ತು ವಿಶ್ವಾಸವನ್ನು ನಾನು ಬಹಳ ಪಡೆದೆ. ನಾನೂ ನನ್ನ ಸರ್ವಸ್ವವನ್ನೂ ಅವರ ಚರಣಗಳಲ್ಲಿ ಸಮರ್ಪಿಸಿದೆ. ಬಾಪೂ ಇರುವವರೆಗೆ ನಾನು ನಿಶ್ಚಿಂತನಾಗಿ ನನ್ನ ಪ್ರಯೋಗ ನಡೆಸುತ್ತಿದ್ದೆ. ಆದರೆ ಈಗ ಯೋಚಿಸುತ್ತೇನೆ. ಕೆಲವು ವರ್ಷ ಮುಂಚೆ ಹೊರಬಿದ್ದಿದ್ದರೆ, ಬಾಪೂವಿನ ಬಾಳು ಅಗ್ನಿಯಲ್ಲಿ ಹೋಮವಾದ ಹಾಗೆ ಆ ಸಂದರ್ಭವನ್ನು ಎದುರಿಸುವ ಸಂಭವವೇ ಅವರಿಗೆ ಬಾರದಿದ್ದರೆ ಎಂದು. ಆದರೆ ಬಾಪೂಗಿಂತ ಮುಂದೆ ಹೋಮವಾಗುವ ಸಂತೋಷ ನನಗೆ ಸಿಕ್ಕಿದ್ದಿದ್ದರೆ ಎಂದು ಯೋಚಿಸು ತ್ತೇನೆ. ಬಾಪೂಮೇಲೆ ಗುಂಡು ಹಾರಿದಮೇಲೆ, ನಾನು ಐದು-ಹತ್ತು ವರ್ಷ ಮುಂಚೆಯೇ ಮುಂದೆ ಬಂದಿದ್ದರೆ ಏನಾದರೂ ಸ್ವಲ್ಪ ಸಹಾಯವಾಗುತ್ತಿತ್ತು ಎಂದು ನನಗೆ ಭಾಸವಾಗುತ್ತಿದೆ. ಏನಿಲ್ಲದಿದ್ದರೂ 1945ರಲ್ಲಿ ಜೇಲಿನಿಂದ ಹೊರಬಂದಮೇಲೆ ನಾನು ಬಾಪೂ ಬಳಿ ವ್ಯಾಪಕ ಕೆಲಸಕ್ಕೆ ಬಂದಿದ್ದರೆ ಬಾಪೂ ಮೇಲೆ ನಡೆದ ಪ್ರಹಾರವನ್ನು ನನ್ನಮೇಲೆ ತೆಗೆದುಕೊಳ್ಳುತ್ತಿದ್ದೆನೇನೋ ಎಂದನಿಸುತ್ತದೆ.

ಬಾಪೂ ಇದ್ದವರೆಗೆ ನಾನು ನನ್ನ ಕೆಲಸಗಳಲ್ಲೇ ತೊಡಗಿಕೊಂಡಿರುತ್ತಿದ್ದೆ. ಏಕೆಂದರೆ, ಬಾಪೂ ಮತ್ತು ಅವರ ಸಂಗಡಿಗರು ಸರಿಯಾದುದನ್ನೇ ಮಾಡು

ತ್ತಾರೆ ಎಂದು ನನ್ನ ನಂಬಿಕೆ ಆಗಿತ್ತು. ಕೊನೆಯಲ್ಲಿ ಬಾಪೂ ಮತ್ತು ಅವರ ಸಂಗಾತಿಗಳಲ್ಲಿ ಮತಭೇದ ಉಂಟಾಯಿತು. ಅಂತಿಮ ಗಳಿಗೆಯವರೆಗೂ ಭಾರತ ಎರಡು ಹೋಳಾಗತಕ್ಕದಲ್ಲ ಎಂದು ಹೇಳುತ್ತಿದ್ದರು ಬಾಪೂ. ಆದರೆ ಎರಡು ಹೋಳು ಇಲ್ಲಂತೂ ಆಗಿಯೇಬಿಟ್ಟಿತು. ದಿಲ್ಲಿಯಲ್ಲಿ ನಿರ್ಣಯ ಆಗಿಬಿಟ್ಟಿತ್ತು. ಆವರೂ ಬಾಪೂ ತಮ್ಮ ಭಾಷಣದಲ್ಲಿ ಇದನ್ನೇ ಹೇಳುತ್ತಿದ್ದರು. ಅನಂತರ ಈ ಮಾತು ಕೈತಪ್ಪಿಹೋಯಿತು ಎಂಬ ದೌರ್ಬಲ್ಯವನ್ನು ಬಾಪೂ ಅನುಭವಿಸಹತ್ತಿದರು. ಕೆಟ್ಟುಹೋದ ಪರಿಸ್ಥಿತಿಯನ್ನು ಎಷ್ಟು ಸುಧಾರಿಸ ಬಹುದೋ ಅಷ್ಟು ಸುಧಾರಿಸಲು ಪ್ರಯತ್ನಮಾಡಿದರು. ಆಗ ಮಹಾರಾಷ್ಟ್ರ, ಪಂಜಾಬ್, ಬಂಗಾಲ ಹಾಗೂ ಇತರ ಪ್ರಾಂತಗಳಲ್ಲಿ ನಡೆದ ಘಟನೆಗಳನ್ನು ನೋಡಿದಮೇಲೆ ಆ ಸಮಯದಲ್ಲಿ ನಾನೇ ಮುಂದೆ ಬಂದಿದ್ದರೆ—ನಾನು ಮುಂದೆ ಬರುವುದರ ಪರಿಣಾಮ ಆಗುತ್ತಿತ್ತೋ ಇಲ್ಲವೋ ದೇವರಿಗೇ ಗೊತ್ತಿತ್ತು—ನಾನು ನನ್ನ ಕರ್ತವ್ಯ ಪೂರ್ಣಮಾಡಿದಂತೆ ಆಗುತ್ತಿತ್ತೆಂದು ನನಗನಿಸಿತು. ನಾನು ನಡುವೆ ಬಂದಿದ್ದರೆ ನಾನು ವಿಶೇಷವೇನೂ ಮಾಡು ವುದಕ್ಕೆ ಆಗುತ್ತಿರಲಿಲ್ಲ; ಆದರೂ ಬಾಪೂವಿನ ಮೃತ್ಯುವಿಗಿಂತ ಮುನ್ನ ನನ್ನ ಸಾವು ಆಗುತ್ತಿತ್ತು. ಹಾಗಾಗಿದ್ದರೆ ನನಗೆ ಹೆಚ್ಚು ಸಮಾಧಾನ ಆಗುತ್ತಿತ್ತು. ಬಾಪೂ ಹೋದಂಥ ರೀತಿಯೇ ನನಗೂ ಒದಗುತ್ತಿತ್ತು.

ವಿನೋಬಾ ಅತ್ತರೇ ?

ಏನೇನು ಆಗುವುದೋ ಅದೆಲ್ಲ ಭಗವಂತನ ಯೋಜನೆಗೆ ಅನುಸಾರವೇ ಆಗುತ್ತದೆ. ಒಬ್ಬ ತಲೆತಿರುಕ ಅವರನ್ನು ಕೊಂದ, ದುರ್ಭಾಗ್ಯದ ಸಂಗತಿ. ಈ ಘಟನೆಯಾದ ಎರಡು ಗಂಟೆಯ ಬಳಿಕ ಪವನಾರಿನಲ್ಲಿ ನನಗೆ ಸುದ್ದಿ ತಿಳಿಯಿತು. ಎರಡು-ಮೂರು ದಿನಗಳವರೆಗೆ ನನ್ನ ಚಿತ್ತ ಶಾಂತವಾಗಿತ್ತು. ಯಾವುದೇ ಸಂಗತಿ ನನ್ನಮೇಲೆ ಇದ್ದಕ್ಕಿದ್ದಂತೆ ಪರಿಣಾಮ ಮಾಡುವುದಿಲ್ಲ, ಇದು ನನ್ನ ಅಭ್ಯಾಸ. ಈ ಘಟನೆಯದೂ ಹೀಗೇ ಆಯಿತು. ಆದರೆ ಎರಡು ಮೂರು ದಿನಗಳಾದಮೇಲೆ ಪರಿಣಾಮವಾಗತೊಡಗಿತು. ಆಗ ಪ್ರಾರ್ಥನೆ ಯಲ್ಲಿ ನಾನು ದಿನವೂ ಮಾತಾಡಬೇಕಿತ್ತು. ಸೇವಾಗ್ರಾಮ ಆಶ್ರಮದಲ್ಲಿ ಒಂದು ದಿನ ಪ್ರಾರ್ಥನಾ ಸ್ಥಳದಲ್ಲಿ ನಾನು ಮಾತಾಡಲಾರಂಭಿಸಿದಾಗ

ಕಣ್ಣಿಂದ ನೀರು ಹರಿಯತೊಡಗಿತು. ಇದನ್ನು ನೋಡಿ ಒಬ್ಬ ಸೋದರ ಕೇಳಿದ: "ಏನು ವಿನೋಬಾ ಅತ್ತರೇ?" ನಾನೆಂದೆ: "ಹೌದು ತಮ್ಮ, ನನಗೂ ಭಗವಂತ ಹೃದಯ ಕೊಟ್ಟಿದ್ದಾನೆ. ಅದನ್ನು ಭಗವಂತನ ಉಪಕಾರ ಎಂದು ತಿಳಿಯುತ್ತೇನೆ."

ಆದರೆ ನನ್ನ ಕಣ್ಣಿಂದ ಮಿಡಿದ ಕಂಬನಿ ಬಾಪೂ ಮೃತ್ಯುವಿಗಾಗಿ ಬರಲಿಲ್ಲ. ಯಾವನೇ ಮಹಾಪುರುಷನ ಮೃತ್ಯು ಆಗಬೇಕಾದ ರೀತಿಯಲ್ಲೇ ಅವರ ಸಾವು ಬಂತು ಎಂದು ನಾನು ತಿಳಿಯುತ್ತೇನೆ. ಅವರಿಗೆ ಮೃತ್ಯುವಿನ ಅಪೇಕ್ಷೆ ಹೇಗೆ ಇತ್ತೋ ಹಾಗೆಯೇ ಅದು ಅವರಿಗೆ ಸಿಕ್ಕಿತು. ನನ್ನ ಸೋದರರ ಈ ಹತ್ಯಾಕಾರಿ ವೃತ್ತಿಯನ್ನು ನಾನು ತಡೆಯಲಾರೆನಾದೆನಲ್ಲಾ ಎಂದು ನನಗೆ ದುಃಖ ಬಂತು. ಪವನಾರ ಗ್ರಾಮದಲ್ಲೂ ಕೆಲವು ಆರ್.ಎಸ್.ಎಸ್. ನವರು ಬಂಧಿತರಾಗಬೇಕಾದ ಸಂದರ್ಭ ಬಂದುದಕ್ಕೆ ನನಗೆ ದುಃಖವಾಯಿತು. ಅವರು ಅಪರಾಧಿಗಳೇ ಎಂದು ನಾನು ನಂಬುವುದಿಲ್ಲ. ಯಾವ ಹಳ್ಳಿಯಲ್ಲಿ ಹತ್ತು ವರ್ಷಗಳಿಂದ ನಾನು ಇದ್ದೇನೆಯೋ ಅಲ್ಲಿನ ಜನರ ಹೃದಯದ ತನಕ ನಾನು ಮುಟ್ಟಲಿಲ್ಲ ಎಂಬುದಕ್ಕಾಗಿ ನನಗೆ ಬಹು ದುಃಖವಾಯಿತು; ಇದೇ ಭಾವಾರ್ಥ.

ಕಣ್ಣುಮುಚ್ಚಿದರೆ ಬಾಪೂ ಸಿಕ್ಕಿದರೆಂದೇ ತಿಳಿಯಿರಿ

ಬಾಪೂವಿನ ಮೃತ್ಯುವಿನ ಸುದ್ದಿ ಕೇಳುತ್ತಲೇ ನನ್ನ ಮನಸ್ಸಿನಲ್ಲಿ ಅವರು ಅಮರರಾದರೆಂದೆನಿಸಿತು. ಅಂದಿನಿಂದ ಈ ಗಂಟೆಯವರೆಗೂ ಅದೇ ಭಾವನೆ ಸತತವಾಗಿ ನನ್ನಲ್ಲಿದೆ. ಬಾಪೂ ದೇಹಧರಿಸಿದ್ದಾಗ ಅವರನ್ನು ಕಾಣ ಹೋಗಲು ಸ್ವಲ್ಪ ಸಮಯವಾದರೂ ಹಿಡಿಸುತ್ತಿತ್ತು. ಆದರೆ ಈಗ ಅವರನ್ನು ಸಂಧಿಸಲು ಒಂದು ಕ್ಷಣವೂ ಬೇಕಿಲ್ಲ. ಕಣ್ಣುಮುಚ್ಚಿದನೆಂದರೆ ಭೇಟಿ ಆಯಿತೆಂದೇ ತಿಳಿಯಿರಿ. ಬಾಪೂ ಜೀವಿತರಿದ್ದಾಗ ಅವರ ಕೆಲಸಗಳಲ್ಲಿ ನಾನು ತೊಡಗಿಕೊಂಡಿದ್ದೆ; ಯಾವಾಗಲೋ ಒಮ್ಮೊಮ್ಮೆ ಅವರೊಡನೆ ಮಾತಾಡುತ್ತಿದೆ. ಈಗಲಾದರೋ ಬಾರಿ ಬಾರಿಗೂ ಅವರೊಡನೆ ಮಾತನಾಡುತ್ತೇನೆ. ಅವರು ನನ್ನ ಬದಿಯಲ್ಲೇ ಇದ್ದಾರೆಂದು ನನಗೆ ಅನುಭವವಾಗುತ್ತದೆ.

ಬಾಪೂ ಇದ್ದಾಗ ನನ್ನಲ್ಲಿದ್ದ ಪ್ರೇರಣೆ ಇಂದು ಇಳಿದುಹೋಗಿದೆ ಎಂದು

ಅನಿಸುವುದಿಲ್ಲ. ಉತ್ಸಾಹ ಕಡಿಮೆ ಆಗಿದೆ, ನಿರಾಶೆ ಬಂದುಬಿಟ್ಟಿದೆ, ಸಡಿಲತೆ ಕಡಿಮೆಯಾಗಿದೆ ಎಂಬ ರೀತಿ ಯಾವ ಭಾವನೆಯೂ ಆಗುವುದಿಲ್ಲ. ಬಾಪೂ ಇದ್ದಾಗ ನನ್ನ ಕ್ಷೇತ್ರ ಸೀಮಿತವಾಗಿತ್ತು, ಕಾರ್ಯ ತೀವ್ರವಾಗಿತ್ತು. ಇಂದು ಕ್ಷೇತ್ರ ವ್ಯಾಪಕವಾಗಿಹೋಗಿದೆ; ಆದರೂ ಮಾನಸಿಕ ತೀವ್ರತೆಯಾದರೋ ಅಷ್ಟೇ ಇದೆಯೆನಿಸುತ್ತದೆ, ಬಹುಶಃ ಹೆಚ್ಚಾಗಿದ್ದೀತು.

ಬಾಪೂ ಆತ್ಮ ನಮ್ಮನ್ನು ವೀಕ್ಷಿಸುತ್ತಲಿರಬಹುದು

ಬಾಪೂವಿನ ಆತ್ಮ ಮುಕ್ತವಾಗಿಹೋಗಿದೆಯೋ ಅಥವಾ ವಾಸನಾ ಶೇಷವಾಗಿದೆಯೋ ಗೊತ್ತಿಲ್ಲ. ಇದು ನನ್ನ ಕಲ್ಪನಾಶಕ್ತಿಗೆ ಮೀರಿದ್ದು. ಅಂತಿಮ ಗಳಿಗೆಯಲ್ಲಿ ರಾಮನಾಮ ಸ್ಮರಿಸಿದುದರಿಂದ ಅವರು ತಮ್ಮ ಎಲ್ಲ ಆಸೆಗಳಿಂದ ಮುಕ್ತರಾಗಿಹೋಗಿರುವುದೇ ಬಹಳ ಸಂಭವ. ಹಾಗಾಗಿಲ್ಲದಿದ್ದಲ್ಲಿ ಅವರ ಆತ್ಮ ನಮ್ಮನ್ನು ವೀಕ್ಷಿಸುತ್ತಿದ್ದೀತು. ವಿಶ್ವದ ಯಾವುದೇ ಮೂಲೆಯಲ್ಲಿ ಎಲ್ಲೆಲ್ಲಿ ಅಹಿಂಸೆಯ ವಿಷಯದಲ್ಲಿ ಸ್ವಲ್ಪವಾದರೂ ವಿಚಾರ ನಡೆಯುವುದೋ ಮತ್ತು ಅಹಿಂಸೆಯ ಪ್ರಯೋಗ ನಡೆಯುವುದೋ ಅಲ್ಲೆಲ್ಲ ಬಾಪೂ ಉಪಸ್ಥಿತರಿದ್ದು ವೀಕ್ಷಿಸುತ್ತಲಿರಬಹುದು.

ನಾವು ಶ್ರಾದ್ಧ ಮಾಡುತ್ತೇವೆ, ತರ್ಪಣ ನೀಡುತ್ತೇವೆ. ಒಂದು ಪಿತೃ ತರ್ಪಣ, ಮತ್ತೊಂದು ಋಷಿ ತರ್ಪಣ. ಯಾರಿಂದ ನಮಗೆ ಶರೀರ ದೊರೆಯಿತೋ ಅವರಿಗೂ ಶ್ರಾದ್ಧ ಮಾಡುತ್ತೇವೆ. ಯಾರಿಂದ ವಿಚಾರ ಸಿಕ್ಕಿತೋ ಅವರಿಗೂ ಶ್ರಾದ್ಧ ಮಾಡುತ್ತೇವೆ. ಬಾಪೂ ನಮಗೆ ತಂದೆಯೂ ಆಗಿದ್ದರು, ಋಷಿಯೂ ಆಗಿದ್ದರು. ನಾವು ಅವರನ್ನು ರಾಷ್ಟ್ರಪಿತ ಎನ್ನುತ್ತೇವೆ. ಅವರು ನಮಗೆ ಸತ್ಯಾಗ್ರಹ ಧರ್ಮ, ಸರ್ವೋದಯ ಧರ್ಮ ಕಲಿಸಿದರು. ಆದುದರಿಂದ ಅವರು ನನಗೆ ಋಷಿಸ್ಥಾನದಲ್ಲಿ, ಗುರುಸ್ಥಾನದಲ್ಲಿ ಇದ್ದರು. ಮಕ್ಕಳನ್ನು ಮುಂದುವರಿಸುವುದು ತಂದೆಯ ಕೆಲಸ. ಗುರುವಿನದು ಶಿಕ್ಷಣ ವನ್ನು ಮುಂದೆ ಸಾಗಿಸುವ ಕೆಲಸ. ಅವರಂತೂ ವಿಶ್ವವ್ಯಾಪಕ ಕೆಲಸ ಮಾಡಿ ದರು, ಅದನ್ನು ನಿರಂತರ ಮುಂದುವರಿಸುವುದು ಪಿತೃ ತರ್ಪಣವಾದೀತು. ಅವರ ವಿಚಾರಧಾರೆಯ ಚಿಂತನ-ಮನನ ನಡೆಸುತ್ತಿದ್ದರೆ ಅದು ಋಷಿ ತರ್ಪಣ ವಾದೀತು.

ನನ್ನ ಅಂತರಾತ್ಮ ಸಾಕ್ಷಿ

ಬಾಪೂ ತೋರಿದ ಅಹಿಂಸೆಯ, ಪ್ರೇಮದ ಮಾರ್ಗದಲ್ಲಿ ನಡೆಯಲು ನಾನು ಪೂರಾ ಪೂರಾ ಪ್ರಯತ್ನ ಮಾಡಿದೇನೆಂದು ನನ್ನ ಅಂತರಾತ್ಮ ಸಾಕ್ಷ್ಯ ನುಡಿಯುತ್ತದೆ. ನಾನು ಪ್ರಯತ್ನದ ಪರಾಕಾಷ್ಠೆ ಮಾಡಿಬಿಟ್ಟದ್ದೇನೆ. ನಾನು ಎಚ್ಚರವಾಗಿಲ್ಲದ ಒಂದು ಕ್ಷಣವೂ ನನಗೆ ನೆನಪಿಲ್ಲ. ಬಾಪೂ ಹೋದಮೇಲೆ ಬಾಪೂ ಕೆಲಸವನ್ನೇ ಮಾಡುತ್ತಿದ್ದೇನೆ ಎಂಬುದರಲ್ಲಿ ನನಗೆ ಎಳ್ಳಷ್ಟೂ ಸಂದೇಹವಿಲ್ಲ. ಈ ಕೆಲಸದಿಂದ ನನ್ನ ಹೃದಯಕ್ಕೆ ಅಪಾರ ಆನಂದ ವಾಗುತ್ತದೆ. ಅದರಲ್ಲಿ ನಾನು ಬಾಪೂವನ್ನು ನಿರಂತರ ಜೊತೆಯಲ್ಲೇ ನೋಡುತ್ತೇನೆ. ನನ್ನ ಚಿಂತನದಲ್ಲಿ ಬಾಪೂ ಸಾರರೂಪ ಅಂಶವಾಗಿದ್ದಾರೆಂದು ನನ್ನ ಭಾವನೆ. ಬಾಪೂ ಕಾಲಕ್ಕಿಂತ ಬಹು ಹೆಚ್ಚಾಗಿ ಇಂದು ಅವರ ಸಾನ್ನಿಧ್ಯದಲ್ಲಿದ್ದೇನೆ. ಅವರು ಹೇಳಿದ್ದುದರ ಸಂಬಂಧದಲ್ಲಿ ಚಿಂತನ ಮಾಡುವುದರಲ್ಲಿ ಅವರಿಂದ ನನಗೆ ಎಷ್ಟು ನೆರವು ಸಿಕ್ಕುತ್ತದೆಯೋ ಅಷ್ಟು ಮತ್ತಾರಿಂದಲೂ ಸಿಕ್ಕುವುದಿಲ್ಲ.

ಬಾಪೂ ನಮ್ಮೆಲ್ಲರ ಹೃದಯದಲ್ಲಿ ವಿರಾಜಮಾನರಾಗಿದ್ದಾರೆ. ಅವರು ನಮ್ಮ ಹೃದಯದಲ್ಲಿ ಭಗವಂತನ ಸ್ಥಾನ ತೆಗೆದುಕೊಂಡುಬಿಟ್ಟಿದ್ದಾರೆ. ಭಕ್ತ ಮತ್ತು ಭಗವಂತ ಒಂದಾಗಿಬಿಟ್ಟಿದ್ದಾರೆ. ಅವರು ಜೀವಂತವಿದ್ದಾಗ ಭಗವಂತನಿಂದ ಬೇರೆ ಉಳಿದು ಸೇವಾಕಾರ್ಯ ಮಾಡುತ್ತಿದ್ದೆವು. ಇಲ್ಲಿಂದ ಪಯಣಿಸಿದ ಬಳಿಕ ಅವರು ಭಗವಂತನಲ್ಲಿ ಸೇರಿಹೋದರು ಮತ್ತು ನಮ್ಮ ಕೆಲಸಕ್ಕೆ ಆಶೀರ್ವಾದ ಕೊಡುತ್ತಿದಾರೆ.

ಸಂತರ ತಲೆ ಸದಾ ಮೇಲೆ

ಇದಾದರೋ ಪರಮೇಶ್ವರನ ಅಸ್ತಿತ್ವದ ಸಂಗತಿಯಲ್ಲದೆ ಮತ್ತಾವುದೂ ಅಲ್ಲ. ಪರಮೇಶ್ವರನೊಬ್ಬನ ಹೆಸರೆತ್ತಿಕೊಂಡರೆ ಸಾಕು, ಮತ್ತಾವ ಹೆಸರನ್ನೂ ಎತ್ತಿಕೊಳ್ಳಬೇಕಾಗಿಲ್ಲ. ಪರಮೇಶ್ವರ ಇಷ್ಟೊಂದು ವ್ಯಾಪಕ ಸ್ವರೂಪ ಧರಿಸಿಬಿಟ್ಟಿದ್ದಾನೆ. ಅವನಲ್ಲಿ ಅಸಂಖ್ಯ ಸತ್ಪುರುಷರು ಸಮಾವೇಶಗೊಂಡಿದ್ದಾರೆ—ದಾಳಿಂಬೆಯಲ್ಲಿ ಇರುವ ಅಸಂಖ್ಯ ಕಾಳುಗಳಂತೆ. ಸಂತರಿಗೆ

ತಮ್ಮದೇ ಆದ ವಿಶಿಷ್ಟ ಸ್ಥಾನ ಉಂಟೆಂದು ನಮ್ಮ ಭಕ್ತಿಪೂರ್ಣ ಹೃದಯಕ್ಕೆ ಭಾಸವಾಗುತ್ತದೆ.

ಮಾರಗ ಮೇ ತಾರಣ ಮಿಲೇ, ಸಂತ ರಾಮು ದೋಯೀ |
ಸಂತ ಸದಾ ಶೀಶ, ಊಪರ್, ರಾಮು ಹೃದಯು ಹೋಯೀ |

ಇಂಥ ಒಬ್ಬ ಸಂತ ಪುರುಷನನ್ನು ನಾವು ನೋಡಿದೆವು, ಅವರೊಡನೆ ಕೆಲಸಮಾಡುವ ಅವಕಾಶ ನಮಗೆ ಸಿಕ್ಕಿತು, ಇದು ನಮ್ಮ ದೊಡ್ಡ ಭಾಗ್ಯ. ಎಷ್ಟು ಸಾಧ್ಯವೋ ಅಷ್ಟು ಅನುಸರಿಸಲು ಪ್ರಯತ್ನ ಮಾಡೋಣ. ಆತ್ಮ ನಿರೀಕ್ಷಣ, ಪರೀಕ್ಷೆ ಮಾಡಿಕೊಂಡು ಚಿತ್ತಶುದ್ಧಿಯಿಂದ ಭಗವಂತನ ಶರಣು ಹೋಗೋಣ. ●

೨೧

‘ಹೇ ರಾಮ!’

ಬಹಳ ಹಿಂದಿನ ಮಾತು. ಜಮನಾಲಾಲಜೀಯ ಮಗಳು ಮದಾಲಸಾ ಆಗ ಚಿಕ್ಕವಳಿದ್ದಳು. ಒಮ್ಮೆ ನನ್ನ ಬಳಿ ಬಂದು ಜಗಳವಾಡತೊಡಗಿದಳು: “ನೀವು ಗಾಂಧೀಜಿಯ ಚಿತ್ರ ರಚಿಸಿದ್ದಿರಿ, ಅದನ್ನೇಕೆ ಹಾಳುಮಾಡಿಬಿಟ್ಟಿರಿ?” ಎಂದು.

ನಾ ಹೇಳಿದೆ: “ಏ, ಇದು ಹಲಗೆಯಮೇಲೆ ಬರೆದ ಅಥವಾ ರಚಿಸಿದ ಚಿತ್ರ. ಗಾಂಧೀಜಿಯ ಚಿತ್ರ ರಚಿಸಲಿಕ್ಕಾಗಿ ಆದುದಲ್ಲ. ಸಣ್ಣ ಹುಡುಗ ಹಟ ಹಿಡಿದಿದ್ದ ಮನುಷ್ಯನ ಚಿತ್ರ ಬರಿ ಎಂದು. ಮನುಷ್ಯ ಎಂದೊಡನೆ ನನ್ನ ಎದುರು ಗಾಂಧೀಜೀ ನಿಂತುಬಿಡುತ್ತಾರೆ. ನಾನು ಬರೆದಿದ್ದು ಮನುಷ್ಯನ ಚಿತ್ರ.”

ನರಸೀ ಮೆಹತಾನ “ವೈಷ್ಣವ ಜನ” ಭಜನೆಯಲ್ಲಿ ಆದರ್ಶ ಮನುಷ್ಯನ ವ್ಯಾಖ್ಯೆ ಕೊಟ್ಟಿದೆ. ಈ ಭಜನೆ ಗಾಂಧೀಜಿಗೆ ತುಂಬ ಪ್ರಿಯವಾಗಿತ್ತು. ಈ ಭಜನೆಯನ್ನು ಅವರು ಜೀವನದಲ್ಲಿ ಆಚರಿಸಿ ತೋರಿಸಿದರು. ತಮ್ಮ ಬಾಳಿನ ಮೂಲಕವೇ ಈ ಭಜನೆಯ ಭಾಷ್ಯ ರಚಿಸಿದರು.

ಈ ಭಜನೆಯಲ್ಲಿ ಮಾಡಿರುವ ವೈಷ್ಣವ ಜನ ವ್ಯಾಖ್ಯೆ ಶೈವನದೂ ಹೌದು, ಈಸಾಯಿಯದೂ ಸಹ, ಮುಸ್ಲಿಂ ಮತ್ತು ಬೌದ್ಧನದೂ ಕೂಡ. ಪರರ ದುಃಖವನ್ನು ಆತ ಸಹಿಸಲಾರ. ಆತ ನಿರಂತರ ಉಪಕಾರ ಮಾಡುವವ. ಈ ‘ಉಪಕಾರ’ ಶಬ್ದ ಬಹು ಸುಂದರ. ಇಂದು ಅದರಲ್ಲಿ ಅಹಂಕಾರದ ಸ್ವಲ್ಪ ಮಿಶ್ರಣವುಂಟಾಗಿದೆ, ಆದರೆ ಮೂಲದಲ್ಲಿ ಅದು ಬಹಳ ನಮ್ರ ಶಬ್ದ. ಕಾಯೇನ ವಾಚಾ ಮನಸಾ ಇತರರಿಗೆ ನೆರವಾಗುವುದು, ಅವರ ಸಂಕಟ ನಿವಾರಣೆ ಮಾಡುವುದು ಎಂದು ಅದರ ಅರ್ಥ. ಸ್ವಲ್ಪವಾದರೂ ಉಪಕಾರ ಮಾಡೋಣ ಇಲ್ಲವೆ ಮಡಿಯೋಣ. ಆದರೂ ನೆರವು ಗೌಣ. ಮುಖ್ಯ ಕೆಲಸ

ಭಗವಂತನೇ ಮಾಡುತ್ತಾನೆ. ನಾವು ಸ್ವಲ್ಪ ಸೇವೆ ಮಾಡುತ್ತೇವೆ. ‘ಉಪ’ ಎಂದರೆ ಅಲ್ಪ, ‘ಕಾರ’ ಎಂದರೆ ಸಹಾಯ. ಸ್ವಲ್ಪ ಸಹಾಯ ಸಲ್ಲಿಸೋಣ ಎಂದಾಗಲೂ ಅವನ ಚಿತ್ತದಲ್ಲಿ ಅಹಂಕಾರ ಏರಬಹುದು. ಮನಸ್ಸು ಅಭಿಮಾನ ಎಣಿಸತಕ್ಕದ್ದಲ್ಲ ಎಂದು ನರಸೀ ಮೆಹತಾ ಗುರಿಯನ್ನು ತೋರಿ ಬಿಟ್ಟಿದ್ದಾರೆ.

ಉತ್ತಮ ಪೂರ್ಣಾಹುತಿ

ಗಾಂಧೀಜಿಯ ಜೀವನದಲ್ಲಿ ಈ ಭಜನೆ ಮೂರ್ತಿಮಂತವಾದುದನ್ನು ನಾವು ನೋಡಬಹುದು. ಈ ಪವಿತ್ರ ಜೀವನವನ್ನು ನೆನಸಿಕೊಂಡರೆ ಕಣ್ಣುಗಳು ತೇವವಾಗುತ್ತವೆ. ಅವರೊಡನೆ ಕೆಲಸ ಮಾಡುವ ಅವಕಾಶ ಸಿಕ್ಕ ಆ ಜನರೆಲ್ಲ ಧನ್ಯರು. ಅವರ ಮೃತ್ಯುವಾದರೂ ಎಂಥ ಪರಿಸ್ಥಿತಿಯಲ್ಲಿ ಸಂಭವಿಸಿತು ? ಪ್ರಾರ್ಥನೆಯ ಸಿದ್ಧತೆಯಲ್ಲಿದ್ದರು. ಆಗ ಅವರ ಮನಸ್ಸಿನಲ್ಲಿ ಈಶ್ವರನ ಹೊರತಾಗಿ ಮತ್ತಾವ ವಿಚಾರವೂ ಇರಲಿಲ್ಲ. ಅವರ ಸಂಪೂರ್ಣ ಜೀವನ ಸೇವಾಮಯ ಹಾಗೂ ಪರೋಪಕಾರಿ ಆಗಿತ್ತು ಎಂಬುದನ್ನು ನಾವು ನೋಡಿದ್ದೇವೆ. ಆದರೆ ಇದರಲ್ಲಿಯೂ ಪ್ರಾರ್ಥನೆಯ ಭಾವನೆ ಮತು ಪ್ರಾರ್ಥನೆಯ ಸಮಯ ಅಧಿಕ ಪವಿತ್ರ ಎಂದು ತಿಳಿಯಬೇಕು. ಅಂಥ ಪ್ರಾರ್ಥನೆಯ ಸಮಯದಲ್ಲಿ ಅವರನ್ನು ಮುಕ್ತಗೊಳಿಸಲು ಆ ಕೊಲೆಗಡುಕನನ್ನು ಪರಮೇಶ್ವರನೇ ಕಳುಹಿಸಿದ ಎಂದು ತಿಳಿಯಿರಿ. ಮರಣಸಮಯದಲ್ಲಿ ತಮ್ಮ ಕೆಲಸ ಮಾಡುತ್ತ ಮೃತ್ಯು ಬಂತು ಎಂಬ ಆಂತರಿಕ ಆನಂದ, ನಿಮಿತ್ತನಾದ ಅಪರಾಧಿಯ ಬಗೆಗೆ ದಯೆ ಹಾಗೂ ಕ್ಷಮೆ—ಹೀಗೆ ಎರಡೂ ಭಾವ ಗಾಂಧೀಜಿಯ ಚಹರೆಯಲ್ಲಿ ಕಂಡುಬರುತ್ತಿತ್ತೆಂದು ಸರದಾರ್ ವಲ್ಲಭಭಾಯಿ ಹೇಳಿದ್ದರು.

ಇದು ಗಾಂಧೀಜಿಯ ಜೀವನದ ಉತ್ತಮ ಪೂರ್ಣಾಹುತಿ ಎಂದು ನನಗನಿಸುತ್ತದೆ. ಸರ್ವೋತ್ತಮ ವಿಚಾರ ಮಾಡುತ್ತ ಮಾಡುತ್ತ ದೇಹ ತ್ಯಜಿಸುವುದು ಎಲ್ಲಕ್ಕಿಂತ ದೊಡ್ಡ ಪುಣ್ಯ. ಜೀವನವಿಡೀ ಧರ್ಮಪಾಲನೆಯ ಪ್ರಯತ್ನ ಮಾಡಿದವರು ದಿನದ ಕೆಲಸವನ್ನೆಲ್ಲಾ ಮುಗಿಸಿ ಪ್ರಾರ್ಥನೆಗೆ ಹೋಗುತ್ತಾರೆ, ಸಂಗಡ ಸ್ನೇಹಿತರಿದ್ದಾರೆ, ಎಲ್ಲರನ್ನೂ ಪ್ರಾರ್ಥನೆಗೆ ಕರೆಯು

ತ್ತಾರೆ, ಅದೇ ಲಕ್ಷಣದಲ್ಲಿ ಅವರ ಅಂತ್ಯವಾಗುತ್ತದೆ—ಇಂಥ ಮರಣ ಅತ್ಯಂತ ಪವಿತ್ರ.

ಕೊಲೆಗಡುಕನ ಕೈ ಹೇಗೆ ಎದ್ದಿತು?

ಒಬ್ಬ ಸಹೋದರ ನನ್ನನ್ನು ಕೇಳಿದ: "ಗಾಂಧೀಜಿಯಂಥ ಪವಿತ್ರ ಪುರುಷರಮೇಲೆ ಕೊಲೆಗಡುಕ ಹೇಗೆ ಕೈಯೆತ್ತಿರಬಹುದು?" ಇದೊಂದು ಯೋಚಿಸತಕ್ಕ ಮಾತು. ನಾನು ಹೇಳಿದೆ: "ಗಾಂಧೀಜೀ ಒಬ್ಬ ವ್ಯಕ್ತಿಯಾಗಿ ಎಲ್ಲಿ ಉಳಿದಿದ್ದರು? ಅವರು ನಮ್ಮೆಲ್ಲರ ಭಾರವನ್ನೂ ಹೊರುತ್ತಿದ್ದರು. ನಮ್ಮೆಲ್ಲರ ಜೀವನವೂ ಮಲಿನವಾಗಿತ್ತು, ಅದಕ್ಕಾಗಿಯೇ ಅವರ ಕೊಲೆ ಯಾಯಿತು. ಅವರು ಒಬ್ಬ ವ್ಯಕ್ತಿಯಾಗಿದ್ದಿದ್ದರೆ, ಅವರು ನಮ್ಮ ಹೊಣೆಯನ್ನು ಹೊರದಿದ್ದಿದ್ದರೆ ಮಾತು ಬೇರೆಯಾಗುತ್ತಿತ್ತು. ಆದರೆ ಅವರು ನಮ್ಮೆಲ್ಲರ ಹೊಣೆಯನ್ನು ಹೊತ್ತು, ಕಡೆತನಕ ಅದನ್ನು ನಿರ್ವಹಿಸುತ್ತಲಿದ್ದರು. ಹಾಗೆಂದೇ ಅವರ ಕೊಲೆಯ ಹೊಣೆ ನಮ್ಮದು"

ಮತ್ತೊಬ್ಬ ಸಹೋದರ ನನ್ನನ್ನು ಕೇಳಿದ: ಗೀತೆಯಲ್ಲಿ ಬರುವ ಭಕ್ತನ ಲಕ್ಷಣಗಳಲ್ಲಿ **"ಯಸ್ಮಾನ್ ನೋ ದ್ವಿಜತೇ ಲೋಕೋ ಲೋಕಾನ್ ನೋ ದ್ವಿಜತೇ ಚ ಯಃ"** ಎಂದರೆ, ಯಾರಿಂದ ಜನರಿಗೆ ಉದ್ವೇಗವಿರದೋ ಮತ್ತು ಯಾರು ಜನರಿಂದ ಉದ್ವಿಗ್ನರಾಗರೋ ಎಂಬ ಎರಡು ಬಗೆಯ ಲಕ್ಷಣ ಹೇಳಲಾಗಿದೆ. ಈ ಮಾತು ಗಾಂಧೀಜಿಗೆ ಹೇಗೆ ಅನ್ವಯಿಸುತ್ತದೆ?

ನಾನು ಆ ಸಹೋದರನಿಗೆ ಹೇಳಿದೆ: ಗಾಂಧೀಜೀ ಕೇವಲ ಭಕ್ತ ರಾಗಿದ್ದಿದ್ದರೆ ಈ ಪ್ರಶ್ನೆ ಏಳುತ್ತಿರಲಿಲ್ಲ. ಉದಾಹರಣಾರ್ಥ ನರಸೀ ಮೆಹತಾ ಪರಮೇಶ್ವರನ ಭಕ್ತನಾಗಿದ್ದರು; ಆದರೆ ಜನತೆಯ ಪ್ರತಿನಿಧಿಯಾಗಿರಲಿಲ್ಲ. ಅವರು ಜನರ ಪಾಪಪುಣ್ಯಗಳ ಯಾವ ಭಾರವನ್ನೂ ಹೊತ್ತುಕೊಳ್ಳುತ್ತಿರಲಿಲ್ಲ. ಜನರ ಪಾಪದಿಂದ ಪಾಪಿ ಮತ್ತು ಪುಣ್ಯದಿಂದ ಪುಣ್ಯವಂತ ಹಾಗೂ ಜನರ ದುಃಖದಿಂದ ದುಃಖಿ ಮತ್ತು ಸುಖದಿಂದ ಸುಖಿ ಆಗುವ ಉದಾಹರಣೆ ಯೇಸುವಿನಲ್ಲಿ ಸಿಕ್ಕುತ್ತದೆ. ಸ್ವಯಂ ಭೂಲೋಕ ಪ್ರತಿನಿಧಿಯಾಗಿ, ತನ್ನ ಸ್ವಂತ ಅಸ್ತಿತ್ವ-ಯಾವುದೂ ಇಲ್ಲದ ಮನುಷ್ಯರಾಗಿದ್ದರು ಅವರು. ಆದುದ

ರಿಂದ ನಮ್ಮೆಲ್ಲರ ಒಟ್ಟುಗೂಡಿಸಿದ ಪಾಪ-ಪುಣ್ಯ ಎಲ್ಲವೂ ಗಾಂಧೀಜಿಯು ದಾಗಿತ್ತು. ಜನರು ಇಂದೂ ಅವರನ್ನು ನೆನಪುಮಾಡಿಕೊಳ್ಳುತ್ತಾರೆ. ಏಕೆಂದರೆ, ಅವರು ಒಬ್ಬ ವ್ಯಕ್ತಿಯಾಗಿರಲಿಲ್ಲ. ಸಮಸ್ತ ರಾಷ್ಟ್ರದ ಭಾವನೆಯ ಪ್ರತಿನಿಧಿ ಆಗಿಬಿಟ್ಟಿದ್ದರು. ಅವರ ವಾಣಿಯಲ್ಲಿ ಮತ್ತು ಅವರ ಚಿಂತನದಲ್ಲಿ ಲೋಕವಾಣಿ ಮತ್ತು ಲೋಕಚಿಂತನ ಪ್ರಕಟವಾಗಿತ್ತು. ಆದುದರಿಂದ ಅವರನ್ನು ದ್ವೇಷಿಸುವ ಒಬ್ಬ ಹೇಗೆ ಹೊರಟ ಎಂಬುದರ ಉತ್ತರವನ್ನು ಅವರು ಕೊಡಬೇಕಾಗಿಲ್ಲ, ಅದನ್ನು ನಾವು ಕೊಡಬೇಕು. ಅವರಿಗಾದರೋ ಜೀವನ ಪರಿಪೂರ್ಣ ಸಾರ್ಥಕವಾಗಿಹೋಯಿತು.

ಅಂತಿಮ ದಿನಗಳಲ್ಲಿ ಕೃಷ್ಣಲೀಲೆಯೇ

ಅಂತಿಮ ದಿನಗಳಲ್ಲಿ ಗಾಂಧೀಜಿಯ ಹೃದಯದಲ್ಲಿ ತುಂಬ ವೇದನೆ ಯಿತ್ತು ಎಂದು ಅನೇಕರ ಅಭಿಪ್ರಾಯ. ಆದರೆ ಅದು ಒಳಗೆ ಇರಲಿಲ್ಲ. ಅದು ನಮಗಾಗಿ ಇತ್ತು ಮತ್ತು ನಮ್ಮ ಕಾರಣದಿಂದಾಗಿ. ಅಂತ್ಯದಲ್ಲಿ ಅವರು ಸಹಿಸಬೇಕಾದುದನ್ನೆಲ್ಲಾ ಸಹಿಸಿದರು. ಅವರಲ್ಲಿ ವಾಸನೆಯೇನಾದರೂ ಉಳಿದಿತ್ತು ಎಂದು ತಿಳಿಯುವುದು ತೀರಾ ತಪ್ಪು ತಿಳಿವಳಿಕೆ. ವಾಸನೆ ಗಳನ್ನೆಲ್ಲಾ ದಾಟಿಬಿಟ್ಟಿದ್ದರು. ಕೊನೆಯಲ್ಲಿ ಅವರ ಲೀಲೆ ನಡೆಯುತ್ತಿತ್ತು. ಕಡೆಯ ದಿನಗಳಲ್ಲಿ ಕೃಷ್ಣಲೀಲೆಯೇ ಆಗಿತ್ತೆಂದು ತಿಳಿಯಿರಿ. ಆ ದಿನಗಳ ರಹಸ್ಯವನ್ನು ತಿಳಿಸಲು ಗಾಂಧೀಜಿಯೇ ಸ್ವತಃ ಬರಬೇಕಾಗಿತ್ತು. ಕೃಷ್ಣನ ಜೀವನದಲ್ಲಿಯೂ, ಆದರೆ ಕಡೆಯಲ್ಲಿ, ಬಾಹ್ಯಜೀವನದ ವೇದನೆ ಇತ್ತು. ಯಾದವ ಕುಲದಲ್ಲಿ ಪರಸ್ಪರ ನಡೆಯುತ್ತಿದ್ದ ಕಲಹಗಳ ಕಾರಣದಿಂದ ಈ ವೇದನೆ ಇತ್ತು. ಶ್ರೀಕೃಷ್ಣನ ಪ್ರಯಾಣ ಸಮಯದಲ್ಲಿ ಯಾದವ ಕುಲದ ದೆಸೆ ಇದ್ದಂತೆಯೇ ಗಾಂಧೀಜಿಯ ಪ್ರಯಾಣ ಸಮಯದಲ್ಲಿಯೂ ಭಾರತದ ದೆಸೆಯೂ ಆಗಿತ್ತು. ಇದರಲ್ಲಿ ಭಗವಂತನ ಗತಿ ಇದ್ದಂತೆಯೇ ಗಾಂಧೀಜಿಯದೂ ಇತ್ತು.

'ಅಂತ್ ರಾಮ್ ಕಹುಂ ಆವತ್ ನಾಹೀ'

ಕೊನೆಯ ಗಳಿಗೆಯಲ್ಲಿ ಅವರು ಏನು ಮಾಡಿದರು? ಅವರ ಮೇಲೆ ಗುಂಡು ಹಾರಿಸಿದಾಗ ಅವರು ಮೊದಲು ಮಾಡಿದ ಕೆಲಸ ಎರಡು ಕೈಯನ್ನೂ

ಜೋಡಿಸಿ ಮಾಡಿದ ಪ್ರಣಾಮ. ಅತ್ಯಂತ ಸಹಜ ಭಾವದಿಂದ ಅವರು ಭಗವಂತನ ಹೆಸರೆತ್ತಿಕೊಂಡರು: 'ಹೇ ರಾಮ! ಸರಿ, ಸಮಾಪ್ತಿ!' ತುಲಸೀದಾಸರು ಹಾಡಿದ್ದಾರೆ, **'ಜನಮ-ಜನಮ ಮುನಿ ಜತನ ಕರಾಹೀ, ಅಂತರಾಮ ಕಹುಂ ಆವತ ನಾಹೀ'** ಅನೇಕ ಜನ್ಮಗಳವರೆಗೆ ಪ್ರಯತ್ನ ಮಾಡುತ್ತಾ ಇರುತ್ತಾರೆ. ಆದರೂ ಅಂತ್ಯಕಾಲದಲ್ಲಿ ರಾಮನಾಮ ಮುಖದಿಂದ ಹೊರಡುವುದಿಲ್ಲ. ಜನ್ಮಜನ್ಮದವರೆಗೂ ಮಂಥನ ಮಾಡುತ್ತಿದ್ದರೂ ಅಂತಿಮ ಗಳಿಗೆಯಲ್ಲಿ ರಾಮನ ಸ್ಮರಣೆ ಆಗುವುದಿಲ್ಲ. ಗಾಂಧೀಜಿಯ ನಾಲಗೆಯಿಂದ ಹೊರಬಿದ್ದ ಕಟ್ಟಕಡೆಯ ಮಾತು: 'ಹೇ ರಾಮ!' ಸಾಕು, ಅಂತ್ಯದಲ್ಲಿ 'ಹೇ ರಾಮ!' ಎಂದು ಹೇಳಿ ಅವರು ಹೊರಟುಹೋದರು. ಯಾವ ಭಕ್ತನೇ ಆಗಲಿ, ಇದಕ್ಕಿಂತ ಹೆಚ್ಚು ಏನು ಮಾಡಬಲ್ಲ?

ಗಾಂಧೀಜೀ ಸ್ಮರಿಸಿದ ಈ ರಾಮ ಯಾರು? ದಶರಥ ತನ್ನ ಮಗನಿಗೆ ಇಟ್ಟ ಹೆಸರು ಈ ರಾಮ. ಪರಶುರಾಮ, ಬಲರಾಮ, ರಾಮಭಾವೂ ಪಿತೃಗಳು ತಮ್ಮ ಮಕ್ಕಳಿಗೆ ಅದೇ ಹೆಸರಿಟ್ಟರು. ದಶರಥನ ರಾಮ ದೊಡ್ಡ ಅವತಾರಪುರುಷನಾಗಿದ್ದ. ಆದರೆ ಈ ರಾಮನಾಮ ದಶರಥನ ರಾಮನಿಗಿಂತಲೂ ಪ್ರಾಚೀನ. ಈ ರಾಮನಾಮದ 'ರಾಮ' ಎಲ್ಲರ ಹೃದಯದಲ್ಲಿಯೂ ರಮಿಸುತ್ತಿರುವ ಪರಮೇಶ್ವರ, ಈ ರಾಮನ ಹೆಸರನ್ನೇ ಗಾಂಧೀಜೀ ಎತ್ತಿಕೊಂಡರು.

ಕಡೆಯ ಅಂತರ ಕ್ಷಣದಲ್ಲಿ ಮುರಿದುಹೋಗುತ್ತದೆ

ಅಂತ್ಯಕಾಲದಲ್ಲಿ ಯಾವುದಾದರೂ ಅಡ್ಡಿಯಾಗಿ ಬಂದುಬಿಡುತ್ತದೆ. ಆದರೆ ಗಾಂಧೀಜೀ ಮತ್ತು ಪರಮೇಶ್ವರನ ನಡುವೆ ಅಡ್ಡಿ ಬರಲಿಲ್ಲ. ಅವರು ಕಡೆಯತನಕ ಹೇಳುತ್ತಿದ್ದರು: "ನಾನು ಸತ್ಯದಿಂದ ಇನ್ನೂ ದೂರವಿದ್ದೇನೆ." ಮನುಷ್ಯ ತನ್ನ ಪ್ರಯತ್ನದಲ್ಲಿ ಸದಾ ಮುಂದುವರಿಯುತ್ತಾ ಹೋಗುತ್ತಾನೆ. ಆದರೂ ತನ್ನ ಧ್ಯೇಯದಿಂದ ದೂರ ಉಳಿಯುತ್ತಾನೆ. ಆದರೆ ಭಗವಂತ ಇದ್ದಕ್ಕಿದ್ದಂತೆ ಮೇಲಕ್ಕೆ ಎತ್ತಿಕೊಳ್ಳುವ ಕ್ಷಣ ಬರುತ್ತದೆ. ಮನುಷ್ಯ ಎಲ್ಲಿಗೆ ಮುಟ್ಟಿದ್ದಾನೆ ಮತ್ತು ಎಲ್ಲಿ ಮುಟ್ಟಬೇಕು—ಇವೆರಡರ ನಡುವಣ ಅಂತರವನ್ನು ಕತ್ತರಿಸುವ ಕೆಲಸವನ್ನು ಆ ಕ್ಷಣ ಬಂದಾಗ ಭಗವಂತ ಮಾಡುತ್ತಾನೆ.

ಇನ್ನೂ ಹೋಗಬೇಕು, ಮುಂದೆ ಹೋಗಬೇಕು. ಅದು ಇನ್ನೂ ದೂರವಿದೆ ಎಂದು ಗಾಂಧೀಜಿಗೆ ಸತತವಾಗಿ ಭಾಸವಾಗುತ್ತಿತ್ತು. ಆದರೆ ಆ ಅಂತರವನ್ನು ಭಗವಂತ ಅಂತ್ಯದಲ್ಲಿ ಕತ್ತರಿಸಿಹಾಕಿಬಿಟ್ಟ. ಅಂತರಂಗದಲ್ಲಿ ಭಗವದ್ಭಕ್ತಿ ಇದ್ದರೆ ಅಂತಿಮ ಕ್ಷಣದಲ್ಲಿ ಈ ಅಂತರ ಭಗವಂತನ ಕೈಯಿಂದ ಕತ್ತರಿಸಲ್ಪಡುತ್ತದೆ. ಗಾಂಧೀಜಿಯ ಈ ಅಂತರವೂ ಅಂತಿಮ ಕ್ಷಣದಲ್ಲಿ ಮುರಿದುಹೋಯಿತು.

ಇಂಥ ಜನರು ಹೊರಗಿನಿಂದ ಬಂದು ಕೆಲಸಮಾಡುತ್ತಾರೆ, ಒಳಗೆ ಮತ್ತೊಂದು ಧಾರೆ ಹರಿಯುತ್ತಿರುತ್ತದೆ. ಗಾಂಧೀಜಿಯ ಅಂತರಂಗದ ಧಾರೆಯೂ ಈಶ್ವರನೊಡನೆ ಸೇರಿಕೊಂಡಿತ್ತು. ಹಾಗೆ ಅವರು ನಿರಂತರ ಸೇವಾ ನಿರತರಾಗಿದ್ದರು, 'ಸೇವೆ ಮಾಡುತ್ತಲೇ ನಮಗೆ ಬಿಡುಗಡೆ' ಎಂದು ಯಾವಾಗಲೂ ಹೇಳುತ್ತಿದ್ದರು. ಈ 'ಬಿಡುಗಡೆ' ಎಂಬ ಶಬ್ದವೇ ಗಾಂಧೀಜೀ. ಅವರ ಮತ್ತೊಂದು ಶಬ್ದ 'ಮಗ್ನತೆ'. ಒಳಗಿನಿಂದ ಮಗ್ನತೆ ಅಂಟಬೇಕು. ಆ ಮಗ್ನತೆ ಅವರಲ್ಲಿತ್ತು. ಆದ್ದರಿಂದಲೇ ಕೊನೆಯಲ್ಲಿ ಆ ಅಂತರ ಭಗವಂತನ ಕೈಯಿಂದ ಕತ್ತರಿಸಿ ಹೋಯಿತು.

ಇದನ್ನೇ 'ಕ್ರಾಂತಿ' ಎನ್ನುತ್ತಾರೆ. ವಿಕಾಸ ಆಗುತ್ತಾ-ಆಗುತ್ತಾ ಒಂದು ಕ್ಷಣ ಬರುತ್ತದೆ, ಆಗ ಕ್ರಾಂತಿಯಾಗಿಬಿಡುತ್ತದೆ. ಆ ಕ್ಷಣ ಬಾರದಿರುವವರೆಗೆ ಭಗವಂತ ದೂರ ದೂರ ಇದ್ದಾನು, ಅಂತರ ಸ್ಥಿರವಾಗಿ ಉಳಿದೀತು. ಪ್ರಯತ್ನವನ್ನು ಸದಾ ಸಾಗಿಸುತ್ತಲೇ ಇರಬೇಕು; ಅದರ ಹೊರತಾಗಿ ಪ್ರಯತ್ನವಾದ ಮತ್ತು ಭಕ್ತಿ ಮುಕ್ಕಾಗಿಹೋಗುತ್ತದೆ. ಇನ್ನೂ ಅಂತರ ಉಳಿದಿದೆ ಎಂಬ ಪರಿವೆ ಸ್ಥಿರವಾಗಿದ್ದು ಪರಮಾತ್ಮ ಪುಂಜ ಪೂರಾ-ಪೂರಾ ಪ್ರಕಟವಾದಾಗ ಈ ಅಂತರ ಒಂದು ಕ್ಷಣದಲ್ಲಿ ಮುರಿದುಹೋಗುತ್ತದೆ. ಹೀಗೆ ಗಾಂಧೀಜೀ ಅಂತ್ಯಸಮಯದಲ್ಲಿ ಭಗವಂತನನ್ನು ಸ್ಮರಿಸುತ್ತಾ ಹೋದರು, ಅವರ ಜ್ಯೋತಿ ಪರಮಾತ್ಮನಲ್ಲಿ ಸೇರಿಹೋಯಿತು. ಒಂದು ಪವಿತ್ರ ಆತ್ಮ ಪರಮಾತ್ಮನಲ್ಲಿ ಲೀನವಾಗಿಹೋಯಿತು.

ವ್ಯಾಪಕ ಅವಸ್ಥೆಯಲ್ಲಿಂದ ವಿಶಿಷ್ಟ ಮನುಷ್ಯನಿಗೆ ಪ್ರೇರಣೆ

ಅಂದು ಗಾಂಧೀಜಿಯ ಮೃತ್ಯುವಿನ ಸಮಾಚಾರವನ್ನು ಕೇಳುತ್ತಲೇ

ನನಗೆ ಪರಮಾತ್ಮನ ಸ್ಮರಣೆಯಾಯಿತು. ಈ ಸ್ಮರಣೆಯಲ್ಲೇ ನಾನು ಆ ದಿನ ಮುಳುಗಿದ್ದೆ. ಮಾರನೆಯ ದಿನ ಮೆಲ್ಲಮೆಲ್ಲನೆ, ಈ ವಿರಾಟ್ ಸೃಷ್ಟಿಯಲ್ಲಿ ಅಸಂಖ್ಯ ಘಟನೆಗಳು ಘಟಿಸುತ್ತವೆ, ಅದರಲ್ಲಿ ಮಾನವ ಸಮಾಜದ ಮೇಲೆ ಒಂದೆರಡು ಘಟನೆಗಳು ಏನೂ ವಿಶೇಷ ಪರಿಣಾಮ ಮಾಡುವುದಿಲ್ಲ ಎಂದು ತಿಳಿಯಹತ್ತಿತು. ಆದರೆ ಮನುಷ್ಯನಿಗೆ ತನ್ನದೇ ಆದ ಮೌಲಿಕ ದೃಷ್ಟಿ ಇರುತ್ತದೆ. ತನ್ನ ವಿಷಯದಲ್ಲಿ ಒಂದು ಅಭಿಪ್ರಾಯವಿರುತ್ತದೆ.

ಗಾಂಧೀಜೀ ಹೊರಟುಹೋದರು. ನಮ್ಮಮೇಲೆ ಅವರ ಜೀವನದ್ದು ಏನು ಪ್ರಭಾವ ಬೀರುತ್ತದೆ ಎಂದು ನಾನು ಯೋಚಿಸತೊಡಗಿದೆ. ಮಹಾ ಪುರುಷರು ಸಶರೀರಿಗಳಾಗಿರುವಾಗ ಶರೀರದಿಂದ ಮುಕ್ತವಾಗಿ ಎಲ್ಲರೊಡನೆ ಏಕರಸವಾಗಲು ಅವರು ನಿರಂತರ ಪ್ರಯತ್ನಿಸುತ್ತಿರುತ್ತಾರೆ. ಹಾಲಿನಲ್ಲಿ ಸಕ್ಕರೆ ಬೆರೆತು ಅದರ ರುಚಿಯನ್ನು ಹೆಚ್ಚಿಸುವಂತೆ ಸಮಾಜ ಜೀವನದ ರುಚಿಯನ್ನು ಹೆಚ್ಚಿಸಲು ಮಹಾಪುರುಷರು ಅದರಲ್ಲಿ ಲೀನವಾಗುವ ಪ್ರಯತ್ನ ನಡೆಸಿರುತ್ತಾರೆ. ಶರೀರದಿಂದಿರುವಾಗಲೂ ಅವರು ವಿಶಿಷ್ಟರಾಗಿಯೇ ಇರುತ್ತಾರೆ ಮತ್ತು ವ್ಯಾಪಕಗೊಳ್ಳಲು ಪ್ರಯತ್ನಿಸುತ್ತಿರುತ್ತಾರೆ. ಶರೀರ ತೊರೆದ ಮೇಲಂತೂ ವ್ಯಾಪಕರಾಗಿಯೇ ಬಿಡುತ್ತಾರೆ. ಅನಂತರ ವಿಶಿಷ್ಟ ರಾಗುವ ಪ್ರಯತ್ನ ನಡೆದಿರುತ್ತದೆ, ತಮ್ಮ ವ್ಯಾಪಕ ಅವಸ್ಥೆಯಿಂದ ವಿಶಿಷ್ಟ ಮನುಷ್ಯನನ್ನೂ ಪ್ರೇರಿತಗೊಳಿಸಿ, ಅವನ ಹಿಂದೆ ತಮ್ಮ ಬಲ ಹಾಕಿ ಮಹಾನ್ ಸಂಕಲ್ಪವನ್ನು ಪೂರ್ಣಗೊಳಿಸಬಯಸುತ್ತಾರೆ. ನನಗೆ ಹೀಗೆ ಅನುಭವವಾಗಿದೆ.

ಆತ್ಮನ ವ್ಯಾಪಕತೆಯ ಸಾಕ್ಷಾತ್ಕಾರ

ಗಾಂಧೀಜಿಯ ಶ್ರಾದ್ಧದಿನದಂದು ಪವನಾರದಲ್ಲಿ ಧಾಂ ನದಿಯಲ್ಲಿ ಅವರ ಅಸ್ಥಿವಿಸರ್ಜನೆ ನಡೆಯಿತು. ಅಂದು ಧಾಂ ನದಿಯ ದಡದಲ್ಲಿ ನಾನು ಕಂಡ ದೃಶ್ಯ ಯಾವುದೋ ಹೊಸಜನ್ಮದ ದೃಶ್ಯವೇ ಆಗಿತ್ತು. ಈಶಾವಾಸ್ಯ ಉಪನಿಷತ್ತನ್ನು, ನನಗೆ ಆದ ಅನುಭವವನ್ನು ಶಬ್ದಗಳಲ್ಲಿ ವರ್ಣಿಸಲು ನಾನು ಅಸಮರ್ಥ. ಜ್ಞಾನಿಗಳು ನಮಗೆ ಆತ್ಮದ ವ್ಯಾಪಕತೆಯನ್ನು ಬೋಧಿಸಿದ್ದಾರೆ. ಅದರಲ್ಲಿ ನಮ್ಮ ಶ್ರದ್ಧೆ ಇರುತ್ತದೆ ನಿಜವೇ, ಆದರೆ ಅಂದು ಅದರ ಸಾಕ್ಷಾತ್ಕಾರವಾಯಿತು. ಮಹಾಪುರುಷರು ದೇಹ ಧರಿಸಿರುವಾಗ ಅವರ

ಶಕ್ತಿ ಸೀಮಿತವಾಗಿರುತ್ತದೆ, ಅವರು ದೇಹಮುಕ್ತರಾಗಿಹೋದಾಗ ಅವರ ಶಕ್ತಿ ಅಸೀಮವಾಗಿಬಿಡುತ್ತದೆ. ಇದು ತಿಳಿಯತಕ್ಕ ಮಾತು. ಗಾಂಧೀಜಿಯ ದೇಹಮುಕ್ತಿಯೂ ನಮ್ಮಲ್ಲಿ ಶಕ್ತಿಸಂಚಾರವನ್ನುಂಟುಮಾಡಿದೆ. ಗಾಂಧೀಜಿಯ ಹೃದಯದಲ್ಲಿದ್ದ ವಿಚಾರದ ಪ್ರಸಾರ ದೇಹಬಂಧನದ ದೆಸೆಯಿಂದಾಗಿ ಮರ್ಯಾದಿತವಾಗಿತ್ತು. ಆ ವಿಚಾರ ಈಗ ನಿಮ್ಮ ಮತ್ತು ನನ್ನ ಹೃದಯದಲ್ಲಿ ಪ್ರವೇಶಿಸುತ್ತದೆ.

ನಾನು ಶಾಂತನಾಗುವವನಲ್ಲ

ನರಹರಿ ಭಾಯಿ ಗಾಂಧೀಜಿಯ 'ಗೀತಾ ಶಿಕ್ಷಣ'ವನ್ನು ಸಿದ್ಧಪಡಿಸಿದ್ದಾರೆ. ಅದನ್ನು ನಾನು ಎರಡು ಬಾರಿ ಓದಿದ್ದೆ. ಅದರಲ್ಲಿ ಒಂದು ವಾಕ್ಯವನ್ನು ನನ್ನ ಗೀತಾಪುಸ್ತಕದಲ್ಲಿ ಬರೆದಿಟ್ಟುಕೊಂಡಿದ್ದೇನೆ. ಸ್ವಪ್ರಯತ್ನದಿಂದ ಮನುಷ್ಯ ತನ್ನ ಉದ್ಧಾರಕ್ಕಾಗಿ ಮಂಥನ ಮಾಡುವಾಗ ಆತ ತುಂಬಾ ಪರಿಶ್ರಮ ಪಡಬೇಕಾದೀತು ಎಂಬುದು ಈ ವಿಷಯ. ಅದರ ಕೊನೆಯಲ್ಲಿ ಅವನು ಯೋಗಾರೂಢನಾಗುತ್ತಾನೆ. ಯೋಗದಮೇಲೆ ಅವನಿಗೆ ಹತೋಟಿ ಬಂದು ಬಿಡುತ್ತದೆ; ಆಗ ಅವನು ಶಾಂತನಾಗಿ ಹೋಗುತ್ತಾನೆ. ಆದರೆ ಆವನು ಶಾಂತನಾದರೂ ನಿಷ್ಕ್ರಿಯನಾಗುವುದಿಲ್ಲ, ಅವನ ಪ್ರಭಾವ ಹೊರಟು ಹೋಗುತ್ತಿರುವುದಿಲ್ಲ. ಬದಲಾಗಿ ಅವನ ಅಶಾಂತಿ ಯಾವುದೇ ಕರ್ಮಕ್ಕಿಂತಲೂ ಹೆಚ್ಚು ಬಲಶಾಲಿಯಾಗುತ್ತದೆ. ಗೀತೆಯ ಆರನೆಯ ಅಧ್ಯಾಯದ ಆರಂಭದಲ್ಲಿಯೇ ಅದನ್ನು ಕುರಿತು ಗಾಂಧೀಜೀ ಹೇಳಿದುದನ್ನು ನಾನು ನನ್ನ ಗೀತೆಯಲ್ಲಿ ಬರೆದಿಟ್ಟದ್ದೇನೆ. ಗಾಂಧೀಜೀ ಹೇಳಿದ್ದಾರೆ:

"ಪ್ರಾತಃಕಾಲದಲ್ಲಿ ಸೂರ್ಯನಾರಾಯಣ ನನ್ನ ಉದ್ಧಾರ ಮಾಡುತ್ತಾನೆ, ಯೋಗಾರೂಢನಾಗಿ ಬರುತ್ತಾನೆ, ಮತ್ತು ಸಂಧ್ಯಾಕಾಲದಲ್ಲಿ ಶಾಂತನಾಗುತ್ತಾನೆ."

"ಸೂರ್ಯ ನಿಜಕ್ಕೂ ಶಾಂತನಾಗುವನೇ?"

"ನಾ ಸಾಯುವೆ, ಆಗ ನಾನು ಶಾಂತನಾಗುವವನೇ?"

"ನಾ ಸಾಯುವೆ, ಆಗಲೂ ನಾ ಶಾಂತನಾಗುವವನೇ?"—ಬಹಳ ಆಳವಾದ ವಾಕ್ಯ.

ಆಚಾರ್ಯ ವಿನೋಬಾ ಅವರ ಕೃತಿಗಳು

			ರೂ. ಪೈ.
1	ಗೀತಾ ಪ್ರವಚನ—ಸಾದಾ ಪ್ರತಿ	...	3–00
2	ಗೀತಾ ಪ್ರವಚನ—ಲೈಬ್ರರಿ ಪ್ರತಿ	...	6–00
3	ಉಪನಿಷತ್ತುಗಳ ಅಧ್ಯಯನ	...	1–25
4	ಈಶಾವಾಸ್ಯ ವೃತ್ತಿ	...	0–80
5	ಸಾಮ್ಯ ಸೂತ್ರಗಳು	....	0–80
6	ವಿಚಾರ ಮಂಜರಿ	...	1–00
7	ಸ್ವರಾಜ್ಯ ಶಾಸ್ತ್ರ	....	0–75
8	ನಾಮಮಾಲಾ	...	0–60
9	ಮೂರನೆಯ ಶಕ್ತಿ—ಲೋಕ ಶಕ್ತಿ	...	3–00
10	**Talks on the Gita**	...	4–50
11	**Thoughts on Education**	...	3–50
12	**Democratic Values**	....	2–50
13	**The Essence of Christian Teachings**	....	2–50
14	**The Essence of Quran**	...	3–00

ಕರ್ನಾಟಕ ಸರ್ವೋದಯ ಸಾಹಿತ್ಯ ಸಮಿತಿ
ವಲ್ಲಭ ನಿಕೇತನ, ಕುಮಾರ ಪಾರ್ಕ್ (ಪೂರ್ವ)
ಬೆಂಗಳೂರು-೧

“ಸತ್ಯವಾದೀ ಮನುಷ್ಯನ ಮಾತಿನಲ್ಲಿ ಜಗತ್ತಿಗೂ ಮತ್ತು ಶತ್ರುವಿಗೂ ನಂಬಿಕೆ ಇರುತ್ತದೆ. ಗಾಂಧೀಜಿಯು ಕಾಲದಲ್ಲಿ, ಗಾಂಧೀಜಿಯ ವಿಚಾರವನ್ನು ಸ್ವೀಕಾರ ಯೋಗ್ಯವೆನ್ನಲಿ ಬಿಡಲಿ ಅವರು ಹೇಳುವುದನ್ನು ಹಾರ್ದಿಕವಾಗಿ ಹೇಳುವರೆಂಬ ವಿಶ್ವಾಸ ಗಾಂಧೀಜಿಯ ಮಾತುಗಳಲ್ಲಿ ಜನರಿಗೆ ಕುಳಿತುಬಿಟ್ಟಿತ್ತು. ಅವರ ಮಾತಿನಲ್ಲಿ ದ್ವಂದ್ವಾರ್ಥ ಇರುತ್ತಿರಲಿಲ್ಲ. ಯಾವುದು ಪ್ರಕಟವಾಗುತ್ತಿತ್ತೋ ಅವರ ಮನಸ್ಸಿನಲ್ಲೂ ಅದೇ ಇರುತ್ತಿತ್ತು. ಅಂಥ ಶ್ರದ್ಧೆ ಭಾರತದ ಜನತೆಗೆ ಗಾಂಧೀಜಿಯ ವಿಷಯದಲ್ಲಿ ಹುಟ್ಟಿತ್ತು, ಆ ಶ್ರದ್ಧೆ ಯಿಂದಲೇ ಭಾರತ ಮುಂದೆ ಸಾಗಿತು.”

—ವಿನೋಬಾ